
ಮನೋಲೀನ್ಮಣಿ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ಕಡಿದಾಳ್ ನಿಲಯ, 359, 14ನೇ ಅಡ್ಡರಸ್ತೆ
ಸದಾಶಿವನಗರ, ಬೆಂಗಳೂರು-560 080

ಮನೋನ್ಮಣಿ



ಸತ್ಸಂಗತ್ವೇ ನಿಸ್ಸಂಗತ್ವಂ
ನಿಸ್ಸಂಗತ್ವೇ ನಿರ್ಮೋಹತ್ವಂ ।
ನಿರ್ಮೋಹತ್ವೇ ನಿಶ್ಚಲ ತತ್ತ್ವಂ
ನಿಶ್ಚಲತತ್ವೇ ಜೀವನ್ಮುಕ್ತಿಃ ॥

MANONMANI in Kannada by "Mallika"
Published by Lakshmi Prakashana
Kadidal Nilaya, 14th Cross, Sadashivanagara
Bangalore-560 025

ಪ್ರಕಟಣಾ ವರ್ಷ
1998

ಬೆಲೆ : ನಲವತ್ತು ರೂಪಾಯಿ

ಮುದ್ರಕರು
ನ್ಯೂ ಐಡಿಯಾಸ್
351, 10ನೇ 'ಬಿ' ಮುಖ್ಯರಸ್ತೆ
ಜಯನಗರ
ಬೆಂಗಳೂರು-560 011

॥ ಶ್ರೀ ಬುದ್ಧದೇವ ಪಾದಾರ್ಪಣಮಸ್ತು ॥

ಮನೋನ್ಮಣಿ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ಕಡಿದಾಳ್ ನಿಲಯ
14ನೇ ಅಡ್ಡರಸ್ತೆ, ಸದಾಶಿವನಗರ
ಬೆಂಗಳೂರು-560 0080

ನಿವೇದನೆ

ನನ್ನ ಕಾದಂಬರಿಗಳಲ್ಲೆಲ್ಲಾ "ಮನೋನ್ಮಣಿ" ಪುಟ್ಟ ಕಾದಂಬರಿ. ಇದರಲ್ಲಿ ಈ ರಾಷ್ಟ್ರೀಯರ ಬೌದ್ಧಿಕ ಬಡತನಕ್ಕಾಗಿ ಮರುಗಿ ಸತ್ಸೇವೆಗೆ ಮುಂದಾದ ವಿದೇಶೀ ಮಾನಿನಿಯರ ತುಂಬು ಹೃದಯದ ಚಿತ್ರವನ್ನು ಮುಂದಿಡಲು ಪ್ರಯತ್ನಿಸಿರುವೆ. ಅವರ ಸೇವಾವಾರ್ಧಿಯಲ್ಲಿ ಒಂದು ಕಣ-ಒಂದೇ ಒಂದು ಕಣ ಮಾತ್ರ ಇಲ್ಲಿನ ಚಿತ್ರ.

ಈ ಕಾದಂಬರಿಯಿಂದ ಓದುಗರ ಹೃನ್ಮನಗಳು ಕಿಂಚಿತ್ ತಣಿದರೆ ಈ ಲೇಖನಿಯ ಶ್ರಮ ಸಾರ್ಥಕ.

ಮಲ್ಲಿಕಾ

ಮನೋನ್ಮಣಿ

೧

ಸ್ವಾತಂತ್ರ್ಯಾಂದೋಲನದ ತುತ್ತ ತುದಿ.

ಭಾರತದಾದ್ಯಂತ 'ಮಾಡಿ-ಮಡಿ' ಕೈಂಕರ್ಯದಲ್ಲಿ ತೊಡಗಿದವರು ಸೋತು ಬಳಲಿದ್ದರೂ ಕುಗ್ಗದ ಸ್ಫೂರ್ತಿ-ತಗ್ಗದ ಹುಮ್ಮಸ್ಸುಗಳ ಆಗರವಾದ ಕಾಲಮಾನ.

ಹಿಂದೂ-ಮುಸ್ಲಿಂ ಬಾಂಧವ್ಯ ಒಳಗಿಂದೊಳಗೇ ಹದಗೆಡುತಿತ್ತು. ಜಿನ್ನಾ ಹಿಡಿದ ಪಟ್ಟಿನಿಂದ. ಆದರೂ ಅದಕ್ಕೆ ಅವಕಾಶ ನೀಡಬಾರದೆಂಬುದು ಹಿರಿಯ ನಾಯಕರ ಆಶಯ; ಗಾಂಧೀಜಿಯ ಗಾಢ ವಿಶ್ವಾಸ ಅಖಂಡ ಭಾರತದಲ್ಲಿ. ಜಿಹಾಸೆ.... ಜಿಹಾಸೆ.

ಆದರೇನು?

ಜಿನ್ನಾ ಹಿಡಿದ ಪಟ್ಟು ಬಿಡುವುದುಂಟೇ?

ದುಂಡುಮೇಜಿನ ಪರಿಷತ್ತು ಒಂದೆಡೆ ಕೂಡಿದರೆ ಇನ್ನೊಂದೆಡೆ ಅಲ್ಲಲ್ಲಿ ವಾದವಿವಾದ-ಅಸಮಾಧಾನ-ಅಸಹಕಾರ. ಘರ್ಷಣೆ ಕೊಲೆ ಸುಲಿಗೆಗಳ ವಿಕರಾಳ ರೂಪ.

ಎರಡೂ ಬಣಗಳ ತದ್ವಿರುದ್ಧ ಹೇಳಿಕೆಗಳ ಪತ್ರಿಕಾ ಪ್ರಕಟಣೆ. ಜನಮನಕ್ಕೆ, ಅಲ್ಲವೇ ಅಲ್ಲ. ಬುದ್ಧಿಶಕ್ತಿಗೆ ಅತ್ಯಂತ ವಿಚಾರಾತ್ಮಕ ವಿಮರ್ಶೆಯ ಕಾಯಕ. ಬೇಕು ಬೇಡಗಳ ತಿಕ್ಕಾಟದ ಅಕಾಂಡ ತಾಂಡವ ರುದ್ರನರ್ತನದ ಪ್ರದರ್ಶನ.

ಮುಂದೇನು?

ಮನ ಮನದಲ್ಲೂ ನಿಮಿರಿ ನಿಂತ ಪ್ರಶ್ನೆ ಇನ್ನೂ ಅನಿರ್ಣೀತ. ಎಲ್ಲೆಲ್ಲೂ ಪ್ರಕ್ಷುಬ್ಧ ಪರಿಸ್ಥಿತಿ. ಅಸ್ಥಿರ ಸರಕಾರ. ಕೋವಿ ಲಾಠಿಗಳ ಸಹಿತ ಗಸ್ತು ತಿರುಗುವ ದೇಶೀ ಪೋಲೀಸರು; ವಿದೇಶೀ ಸಾರ್ಜೆಂಟ್‌ಗಳು. ಎಲ್ಲೆಲ್ಲೂ ವಿಕಟ ವಿಶೇಷ ಜನಜೀವನದಲ್ಲಿ.

ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳು; ಕಮ್ಯೂನಿಷ್ಟರ ಆಶ್ವಾಸನೆಗಳು; ಇತರ ಪಕ್ಷಗಳ ನಿಯಮಾವಳಿಗಳು; ಒಂದೊಂದರ ಪ್ರಣಾಳಿಕೆಯೂ ಸ್ವಾತಂತ್ರ್ಯ ಭಾವನೆಗೆ ಮತ್ತು ಬ್ರಿಟಿಷರ ಉಚ್ಚಾಟನೆಗೆ ಪೂರಕ, ಪರಸ್ಪರ ನೀತಿ ಭೇದವಿದ್ದರೂ.

ಸಧ್ಯ ಚಳವಳಿಯ ಅಧ್ಯಾಯ ಮುಗಿದಂತೆಯೇ, ಹೇಳಿಕೆ-ಕೇಳಿಕೆ-ಬೇಡಿಕೆಗಳ ವಿಚಿತ್ರ ಪರಿಮಳದ ವ್ಯಾಪಕತೆ ರಾಷ್ಟ್ರದಲ್ಲಿ. ಇಂತಹ ಮಹತ್ತರವಾದ ಸನ್ನಿವೇಶದಲ್ಲೂ ಗಾಂಧೀಜಿಯವರ ಹೆಸರನ್ನು ಅರಿಯದವರು ಇನ್ನೆಷ್ಟು ಮಂದಿಯೋ ಈ ಮುಗ್ಧ ದುಗ್ಧ ಜನಸಮುದಾಯದಲ್ಲಿ.

* * *

ಗಿರ್‌ಗಾಂವ್ ಪ್ರದೇಶ ಕಾಶ್ಮೀರಕ್ಕೆ ಕೇವಲ ಐವತ್ತು ಮೈಲಿ ಮಾತ್ರ.

ಶಾಂತ ಶೀತಲ ವಾತಾವರಣ. ಕಣ್ಮನ ತಣಿಸುವ ಹಸುರು ಹೊತ್ತ ಗುಡ್ಡ ಬೆಟ್ಟಗಳ ನಿಮ್ನೋನ್ನತ ಧಾತ್ರಿ. ಅಮಾಯಕ-ಅವಾಗತ ರೂಪು ರೇಷೆಯ ಸಾಮಾಜಿಕ ವಲಯ.

ಪರಿಸ್ಥಿತಿಯ ಗಂಭೀರ ಅವಲೋಕನದಿಂದ ಸುಂದರವಾದ ತಾಣದಲ್ಲಿ ಕಾನ್ವೆಂಟ್ ಸಂಜನಿಸಿ ತಳವೂರಿತು ಸ್ವರ್ಗಲಕ್ಷ್ಮಿ ಧರೆಗಿಳಿದು ಬಂದಂತೆ. ಮೊದಲು ಪುಟ್ಟದಾಗಿ ಆರಂಭವಾದ ಅದು ದಿನೇದಿನೇ ಹರೆಗೈ ಚಾಚುತ್ತ ಬೆಳೆಯತೊಡಗಿತು ಕೀರ್ತಿಶಿಖರವನ್ನು ಹೊತ್ತು.

ಕಾಂಗ್ರೆಸ್ಸಿನ ಅಸಹಕಾರ ಚಳವಳಿಯಾಗಲೀ ಬ್ರಿಟಿಷರ ಧೋರಣೆಯಾಗಲೀ ಜ್ಞಾನದೇಗುಲದ ಸುತ್ತಮುತ್ತ ಸುಳಿಯುವ ಪ್ರಶ್ನೆಯೇ ಇಲ್ಲ. ವಿದ್ಯಾದಾನದ ಹೊರತು ಮತ್ತೊಂದು ಧ್ಯೇಯವಿರಲಿಲ್ಲ ಸೇಂಟ್ಮೇರಿ ಕಾಲೇಜಿನ ಮದರ್ ಸಿಲ್ವಿಯಾಗೆ. ಅಂದಮೇಲೆ, ಉದ್ದೇಶ ಪರಿಸ್ಫುಟವಾದ್ದರಿಂದ ರಾಜಕೀಯ ದೂರ. ಬಿಳಿಯರ ಸ್ವಲಾಭ-ಸ್ವಾರ್ಥಗಳ ಉಪಟಳದಲ್ಲಿ ಬಿಳಿಯ ಅಂಗನೆಯರ ಹೃತ್ಪೂರ್ವಕ ಸೇವಾ ಮನೋಭಾವ ಮಹಾವಿಶೇಷವೇ; ಆನಂದವನ್ನು ಪರಮಾನಂದಗೊಳಿಸುವ ವಿಚಾರಸ್ಫೂರ್ತಿ.... ಕಾನ್ವೆಂಟಿನ ಅಂಕುರ.

ಗಿರ್‌ಗಾಂವ್ ಬೆಟ್ಟಗುಡ್ಡ ಪ್ರದೇಶವಾದುದರಿಂದ ಜನಸಂಖ್ಯೆ ವಿರಳ. ಟಾರು ಬಳಿದ ರಸ್ತೆಗಳು ಇಲ್ಲವೇ ಇಲ್ಲ. ಸರಕಾರಿ ಅಸ್ಪತ್ರೆ ಶಾಲೆ ಮುಂತಾದ ಸೌಕರ್ಯಗಳೂ ಗಾವುದ ದೂರ. ಪ್ರಕೃತಿದತ್ತವಾದ ಕೆರೆ-ತೊರೆಗಳೇ ಜೀವನಾಧಾರ ಜೀವಿಗಳಿಗೆ.

ವ್ಯಾಪಾರದಲ್ಲಿ ಮುಸಲರೇ ಮುಂದೆ. ಇತರೆ ಜನಾಂಗಕ್ಕೆ ವ್ಯವಸಾಯವೇ ಗತಿ. ಎಲ್ಲೋ ಕೆಲವು ಮಂದಿ ವ್ಯಾಪಾರದಲ್ಲಿ ತೊಡಗಿದ್ದುಂಟು. ಅಂತಹವರಲ್ಲಿ ಖುದೀರಾಂ

ಒಬ್ಬ, ಇಬ್ಬರು ತಮ್ಮಂದಿರೊಡನೆ ವಾಸದ ಮನೆಯ ಮುಂಭಾಗದ ಹಜಾರವನ್ನೇ ಅಂಗಡಿಯನ್ನಾಗಿ ಮಾರ್ಪಡಿಸಿ ವ್ಯಾಪಾರ ಹೂಡಿದ್ದ. ಮೂವರ ಸಂಸಾರ ತುಂಬಿದ ಮನೆ. ಹಿಂಭಾಗದಲ್ಲಿಹತ್ತಾರು ಭಿಗ ಜಮೀನು ಅನ್ನಕ್ಕೆ ಆಧಾರ. ಇದ್ದುದರಲ್ಲಿ ಸಂತೃಪ್ತ ಜೀವನ. ಖುದೀರಾಂ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳ ಹೊಣೆ ಹೊತ್ತು ಹೊರಗಡೆ ಕಾಲಹರಣ ಮಾಡಿದರೂ ವ್ಯಾಪಾರಕ್ಕೆ ತಮ್ಮಂದಿರಾದ ಬಲ್ಲೂರಾಂ-ಜಗತ್‌ರಾಂ ಭುಜ ಕೊಡುತ್ತಿದ್ದುದರಿಂದ ನಷ್ಟವಿಲ್ಲ; ಚಿಂತೆಗೂ ಅವಕಾಶವಿಲ್ಲ. ಬಾಂಕೀವಾಡಿ ವ್ಯಾಪಾರ ಪ್ರಸಿದ್ಧ.

* * *

"ಮನೋನ್ಮಣೀ!"

ಆ ಕರೆಯಲ್ಲಿ ಹೊಮ್ಮಿದ ದನಿಯ ಮೃದು ಮಾಧುರ್ಯ ಕರ್ಣಪಟಲವನ್ನು ತಾಗಿತು. ಮನೋನ್ಮಣಿಯ ತಾಯಿ ಇತ್ತ ಕತ್ತು ಹೊರಳಿಸುವುದರೊಳಗಾಗಿ ಪುನಃ ಅದೇ ವಾಣಿ ಮೊಳಗಿತು. 'ಮನೋ!'

ತಾಯಿ ಚಂಪಾ ಹೊರಬಂದಳು.

"ಏನಮ್ಮಾ, ಶುಶೀ! ಬಹಳ ಅಪರೂಪ!"

"ಶಾಲೆಗೆ ಹೋಗಿ ಬರುವಾಗ ನಾನು ದಿನವೂ ಬರುವುದಿಲ್ಲವೇ?"

"ಅದೇನಿದ್ದರೂ ರಸ್ತೆಯಿಂದ ಹಾಗೇ ಹೋಗುವುದಷ್ಟೆ?"

"ಮನೋನ್ಮಣಿ ಅಷ್ಟೂ ಬರುವುದಿಲ್ಲವಲ್ಲಾ, ಅವಳನ್ನು ಕರೆದೊಯ್ಯುವುದಕ್ಕೇ ಈಗ ನಾನು ಬಂದದ್ದು. ಕಾನ್ವೆಂಟಿಗೆ ಮೂರು ದಿನ ರಜೆಯಿದೆ. ಅಲ್ಲಿಯವರೆಗೆ ಅವಳು ನಮ್ಮಲ್ಲೇ". ಹುಬ್ಬೇರಿಸಿದಳು ಹುಡುಗಿ.

ಚಂಪಾ ನಕ್ಕುಬಿಟ್ಟಳು.

ಮನೋನ್ಮಣಿ ಹೊರಬಂದು "ಸುಶೀ! ಈಗ ಒಳಬಾ. ನಮ್ಮ ಅಂಗಡಿ ನೋಡು! ಎಷ್ಟು ದೊಡ್ಡದಾಗಿದೆ! ಈಚೆಗೆ ನೀನು ನೋಡಲಿಲ್ಲ" ಎಂದಳು ಮುಗ್ಧ ಮನೋಹರ ಶೈಲಿಯಲ್ಲಿ.

"ಓ, ನಿಜವಾಗಿ ?"

"ದೊಡ್ಡಪ್ಪ ಎರಡು ಕೊಠಡಿ ಬಿಟ್ಟುಕೊಟ್ಟಿದ್ದಾರೆ. ಅವೀಗ ಒಳಮಳಿಗೆಗಳು! ಈಗ ನಮ್ಮಲ್ಲಿ ಏನು ಬೇಕಾದರೂ ದೊರೆಯುತ್ತೆ..ಕಣ್ಣರಳಿಸಿದಳು ಮನೋನ್ಮಣಿ.

"ಅವರಿಗೆ ಮಕ್ಕಳಿಲ್ಲ. ಒಂದೆರಡು ಕೊಠಡಿ ಸಾಕಲ್ಲವೇ?"

"ನಿಜ."

ಇಬ್ಬರೂ ಅಂಗಡಿಯ ಒಳಗೆಲ್ಲಾ ಒಂದು ಸುತ್ತು ಹಾಕಿ ಬಂದರು. ''ಓಹೋ! ಏನೆಲ್ಲಾ ಉಂಟು!'' ಉದ್ಗಾರ ತೆಗೆದಳು ಸುಶೀ.

ಮನೋನ್ಮಣಿ ತಾಯಿಯ ಅಪ್ಪಣೆ ಪಡೆದುಕೊಂಡು ಗೆಳತಿಯೊಂದಿಗೆ ಹೊರಟಳು. ಕಳೆದ ಒಂದು ವರ್ಷದಿಂದ ಅವಳ ಮನೆಗೆ ಹೋಗಿರಲಿಲ್ಲವಾದ್ದರಿಂದ ಉತ್ಸಾಹವೋ ಉಲ್ಲಾಸವೋ ಯಾವುದೋ ಅದಮ್ಯ ಶಕ್ತಿ ತನ್ನ ಪ್ರಭಾವ ಭೀರಿ ಅಭಿಶಸ್ತ ಹೆಜ್ಜೆಗಳನ್ನು ಎಳೆದುಕೊಂಡು ಹೋಯಿತು. ದೂರ ದೂರವಾಗಿ.

* * *

ಅದೇ ಅಂಕುಡೊಂಕಿನ ಕಾಲುಹಾದಿ ಗುಡ್ಡಬೆಟ್ಟ ಪ್ರದೇಶದಲ್ಲಿ.

ಪರಾಧೀನ ರಾಷ್ಟ್ರಕ್ಕೆ ನವೀಕೃತ ಸುಖ ಸೌಲಭ್ಯಗಳಾದರೂ ಎಲ್ಲಿಂದ ಬರಬೇಕು? ರಾಷ್ಟ್ರದ ಅಮೂಲ್ಯ ಉತ್ಪನ್ನ ಬ್ರಿಟಿಷರ ಪಾಲಿಗೆ. ತಮ್ಮ ಐಷಾರಾಮದ ಬದುಕಿಗಾಗಿ ಕಾನೂನು ಕಾಯಿದೆಗಳು ಬಲಪಟ್ಟುವೇ ಹೊರತು ದಾರಿದ್ರ್ಯ ನೀಗಲಿಕ್ಕಲ್ಲ. ಅತೀವ ಉಪಟಳದಿಂದ ದೇಶೀಯರ ಬಾಳು ಬದುಕು ದುರ್ಭರ. ಬಡತನದ ಬೇಗೆಯೊಂದಿಗೆ ರಾಜಕೀಯ ತಾತ್ಸಾರ.

ಸಾರಿಗೆ ಸೌಕರ್ಯವಿರಲಿಲ್ಲವಾದ್ದರಿಂದ ಧಾನ್ಯ, ಹುಲ್ಲು ಸೌದೆ ಮುಂತಾದ ಜೀವನೋಪಯುಕ್ತ ವಸ್ತುಗಳನ್ನು ಸದಾ ತಲೆಯ ಮೇಲೆಯೇ ಹೊತ್ತು ಸಾಗಿಸುವ ಕಷ್ಟ ದೇಶಿಗರಿಗೆ. ಎತ್ತು, ಕತ್ತೆ ಉಳ್ಳವರು ಅವುಗಳ ಮೇಲೆ ಸಾಗಿಸುವುದುಂಟು. ಆದರೂ ತಲೆ ಹೊರೆಯೆ ಹೆಚ್ಚು.

ಸುಶೀಯೊಂದಿಗೆ ನಡೆಯುತ್ತಿದ್ದ ಮನೋನ್ಮಣಿಗೆ ಪಥಿಕರಲ್ಲಿ ಬಹು ಮಂದಿಯ ಪರಿಚಯವಿತ್ತು-ಅಂಗಡಿಯ ಗಿರಾಕಿಗಳಾದುದರಿಂದ.

''ಏನಮ್ಮಾ? ಎಲ್ಲಿಗೆ ಹೋಗುತ್ತಿದ್ದಿ? ಬಾಂಕೇವಾಡಿಯಲ್ಲಿ ಎಲ್ಲರೂ ಕ್ಷೇಮವೇ?'' ಯಾರದೋ ಪ್ರಶ್ನೆ.

''ಶಾಲೆಗೆ ರಜೆಯಿದೆ. ಗೆಳತಿಯ ಮನೆಗೆ ಹೋಗುತ್ತಿರುವೆ.''

''ಬಾಂಕೇವಾಡಿಗೆ ಯಾವಾಗ ಹಿಂದಿರುಗುತ್ತಿ?''

''ನಾಳೆ''

ಸುಶೀ ಅವಳ ಭುಜಕ್ಕೆ ತಿವಿದು ನುಡಿದಳು ''ನಾಳೆಯಲ್ಲ, ನಾಡಿದ್ದು.''

''ನಿಮ್ಮ ಮನೆ ಇರುವುದೆಲ್ಲಿ?'' ಅದೇ ಧ್ವನಿ ಕೇಳಿತು.

''ಬಾಂಕೇ ಎಸ್ಟೇಟ್!''

''ಎಸ್ಟೇಟಿನ ಒಡೆಯ ಚಂದಾನಿ ನಿಮ್ಮ ತಂದೆಯೇ?''

"ಹೌದು"

"ಬಲು ಸುಂದರವಾದ ತಾಣ. ನೀವು ಪುಣ್ಯವಂತರು."

ಸುಶೀ ನಕ್ಕು ವಿಷಯವನ್ನು ಸ್ವಾಗತಿಸಿದಳು.

ಮುಂಪಯಣ ಸಾಗಿತು. ಬಾಂಕೇವಾಡಿಯಿಂದ ಬಾಂಕೇ ಎಸ್ಟೇಟ್‌ಗೆ ಮೂರು ಮೈಲಿಯ ಅಂತರ. ಬಾಂಕೇ ಎಸ್ಟೇಟಿಂದ ಕಾನ್ವೆಂಟಿಗೆ ಮೂರೂವರೆ ಮೈಲಿಯಾದರೂ ಆದೀತೇನೋ. ಹಸುರುಕ್ಕುವ ನಿಮ್ನೋನ್ನತ ಪ್ರದೇಶದಲ್ಲಿ ನಿತ್ಯವೂ ಶಾಲಾ ಮಕ್ಕಳು ದಾರಿಯಲ್ಲಿ ಹುರುಪಿನಿಂದಲೇ ಕ್ರಮಿಸುತ್ತಾರಾದರೂ ಮಳೆಗಾಲದಲ್ಲಿ ಕಷ್ಟ. ಬಹುಶಃ ಸರಕಾರಕ್ಕೆ ಇವರ ಬವಣೆಯ ಅರಿವಿರಲಿಲ್ಲ; ಅಥವಾ ಇವರಿಗೆ ಸರಕಾರದ ಅರಿವಿರ ಲಿಲ್ಲ. ಕಾಲಮಾನ ಕಷ್ಟಸುಖಗಳ ಪರಿಧಿಯಲ್ಲಿ ಯಥೋಚಿತವಾಗಿ ಉರುಳಿದಂತೆ ಆಯಸ್ಸು ಕರಗಿ ಮಸಣದತ್ತ ಹೆಜ್ಜೆ ಹಾಕುತ್ತಾರೆ ಜನ.

ಎದುರುಗಡೆಯಿಂದ ಬರುತ್ತಿದ್ದ ಮಹಮದ್ ಪಾಶ ಹುಡುಗಿಯರನ್ನು ಕಣ್ಣಿಟ್ಟು ನೋಡಿ "ಎಲ್ಲಿಗೆ ಪಯಣ" ಎಂದ. ಅವನ ಹಿಂದೆ ತಮ್ಮ ಮತ್ತು ಆಳು ಮಕ್ಕಳಾದ ಪೀರ್‌ಸಾಬಿ ಮತ್ತು ಅಬ್ದುಲ್‌ಸಾಬಿ ಸಹ ಇದ್ದರು.

ಮನೋನ್ಮಣಿ ಒಂದು ಕ್ಷಣ ಹುಬ್ಬೆತ್ತಿ ನೋಡಿದಳು. ಉತ್ತರಿಸಲು ನಾಲಿಗೆ ಹಿಂಜರಿಯಿತು. ಮಹಮದ್ ಪಾಶ ಪುನಃ ಅದೇ ಪ್ರಶ್ನೆ ಹಾಕಿದ.

"ಬಾಂಕೆ ಎಸ್ಟೇಟಿಗೆ."

"ನಿಮ್ಮ ಅಂಗಡಿಯಲ್ಲಿ ಖುದಿರಾಂ ಇದ್ದಾರೆಯೇ?"

"ಇದ್ದಾರೆ."

"ಬಲ್ಲೂರಾಂ, ಜಗತ್‌ರಾಂ?"

"ಇದ್ದಾರೆ" ಎನ್ನುವಾಗ ನಾಲಿಗೆ ಹಿಡಿಯಿತು. ಇವನಿಗೇಕೆ ಇವೆಲ್ಲಾ ಅನ್ನಿಸದಿರಲಿಲ್ಲ. ಹಿರಿಯ ವ್ಯಕ್ತಿ ಕೇಳಿದಾಗ ಉದ್ಧಟತನ ತೋರುವುದು ಕಷ್ಟವೆ. ಅಲ್ಲಿ ನಿಲ್ಲದೆ ಮುನ್ನಡೆದಳು ಮನೋನ್ಮಣಿ.

"ಯಾರೇ ಅದು?"

"ಹರೆ! ರಾಂ! ಬೆಟ್ಕಲ್‌ನಲ್ಲಿ ಅಂಗಡಿಯಿಟ್ಟಿದ್ದಾನೆ. ನಿನಗೆ ಗೊತ್ತಿಲ್ಲವೇ? ಮಹಾಧೂರ್ತ! ನಮ್ಮ ದೊಡ್ಡಪ್ಪನಿಗೆ ಐವತ್ತು ಸಾವಿರ ರೂಪಾಯಿಗೆ ಮೋಸ ಮಾಡಿದ ಕಳ್ಳ!" ಒಣಗಿದ ತುಟಿಗಳನ್ನು ನಾಲಿಗೆಯಿಂದ ಒರಿಸಿಕೊಳ್ಳುತ್ತ ಪುನಃ "ಅವನ ತಮ್ಮ, ಆಳುಮಕ್ಕಳು ಎಲ್ಲರೂ ಹಾಗೆಯೇ. ಕಳೆದ ವರ್ಷ ಆಳುಗಳು ನಮ್ಮ ಜಮೀನಲ್ಲಿ ಕೆಲಸ ಮಾಡುತ್ತಿದ್ದರು. ಬಹುಶಃ ಎರಡು ಮೂರು ವರ್ಷ ಮಾಡಿದ್ದಾರೆ. ಕೆಲಸದಲ್ಲೂ

ಮೋಸ, ಬೆಳೆಯಲ್ಲೂ ಮೋಸ. ಕೊನೆಗೆ ಕೆಲಸ ಬಿಡಿಸಿದ್ದಾಯ್ತು. ಅಷ್ಟಕ್ಕೆ ಕುಪಿತರಾದ ಅವರು ನಾನಾ ಕಿರುಕುಳ ಕೊಡುತ್ತಿದ್ದಾರೆ. ಜಮೀನಿಗೆ ದನ ನುಗ್ಗಿಸುವುದು, ಮನೆಗೆ ಕಲ್ಲು ತೂರುವುದು ಇತ್ಯಾದಿ...ಇತ್ಯಾದಿ.. ಬಹಳ ಕೆಟ್ಟ ಜನ. ನೋಡು, ಅವನು ಎಲ್ಲರೂ ಮನೆಯಲ್ಲಿದ್ದಾರೆಯೇ ಎಂದು ಕೇಳಿದನಲ್ಲಾ ಏಕೆ?''

''ಬಹುಶಃ ಭೇಟಿಯಾಗುತ್ತಾನೇನೋ!''

''ಹರೇ ರಾಂ! ಎಲ್ಲಿಯ ಭೇಟಿ? ನಮಗೂ ಅವರಿಗೂ ಎಣ್ಣೆ ಸೀಗೆಕಾಯಿ! ಪೋಲೀಸಿಗೇನಾದರೂ ಕಂಪ್ಲೇಂಟ್ ಕೊಟ್ಟರೆ ನಿನ್ನ ಸುಟ್ಟು ಬಿಡುವೆ! ಎಂದು ಹೆದರಿಸಿದ್ದಾನೆ!''

''ಹಾಗಾದರೆ ಪೋಲೀಸಿಗೆ ವರದಿ ಮಾಡಿಲ್ಲವೇ?''

''ಅದು ಗೊತ್ತಿಲ್ಲ. ಮಾಡಿದಾರೇನೋ....?''

ಇಬ್ಬರೂ ಹಿಂತಿರುಗಿ ನೋಡಿದರು. ಅವರು ದೂರದ ತಿರುವಿನಲ್ಲಿ ಕಡ್ಡಿಗಳಂತೆ ಕಣ್ಮರೆಯಾಗುತ್ತಿದ್ದರು. ಬಾಲರವಿ ಮುಗಿಲು ದಿಣ್ಣೆಯನ್ನೇರಿದ್ದ. ಕಲಹಂಸೆಗಳು ಹಿಂಡಾಗಿ ಹಾರುತ್ತಿದ್ದವು ಗಗನದಲ್ಲಿ.

೨

ಬಾಂಕೇ ಎಸ್ಟೇಟಿನ ವಿಸ್ತೀರ್ಣ ಕೇವಲ ಹತ್ತಾರು ಎಕರೆಗಳಿಗೆ ಸೀಮಿತ.

ಅತ್ಯಂತ ಫಲವತ್ತಾದ ಭೂಮಿ ಮತ್ತು ಸಮೃದ್ಧಿಯಾಗಿ ಹಾಲು ಕರೆಯುವ ಹಸುಗಳು ಜೀವನೋತ್ಕರ್ಷಕ್ಕೆ ಪೂರಕ. ಸ್ವಾಮಿನಿ ಎಲ್ಲಾ ಉಸ್ತುವಾರಿ ನೋಡಿ ಕೊಳ್ಳುವುದರಿಂದ ರವಿಚಂದ್ರಾನಿಗೆ ಆರ್ಥಿಕ ವ್ಯವಹಾರ ನೋಡಿಕೊಳ್ಳುವುದೊಂದೇ ಕಾಯಕ. ಸುಂದರವಾದ ಪ್ರಕೃತಿಯ ಉಡಿಯಲ್ಲಿನ ಜೀವನ ಸುಖ ಸಂತೋಷಗಳ ಆಗರ. ಯಾವತ್ತೂ ಹಸುರು ಸೂಸುವ ವಲಯ. ಹೊರಗಡೆ ಅಡ್ಡಾಡುತ್ತಿದ್ದರೆ ಒಳಹೋಗುವ ಮನಸ್ಸೇ ಮೂಡದಂತಹ ಭೂರಮೆ.

ಮನೋನ್ಮಣಿ ಸುಶೀಯೊಂದಿಗೆ ಅದೆಷ್ಟು ಹೊತ್ತು ಅಡ್ಡಾಡಿದಳೋ, ನಡುನೆತ್ತಿ ಬಿಸಿಲಟ್ಟಿ ಚುರು ಚುರು ಎಂದಾಗಲೇ ಹೊತ್ತೇರಿದುದರ ಅರಿವು. ವಿವಿಧ ವರ್ಣದ ಪುಷ್ಪಿತ ಪುಷ್ಪಲೋಕ. ಉದ್ಯಾನದ ಸುಂದರ ಹಾದಿ. ತೋಟದ ಗರಿಕೆಯ ಹಾಸಿನ

ಕಾಲ್ದಾರಿ. ವಾಮಾಂಗದಲ್ಲೊಂದು ಸಣ್ಣ ಕೆರೆ. ಕೊಕ್ಕರೆ ಮತ್ತು ಬೆಳ್ಳಕ್ಕಿಗಳ ಗಜಿಬಿಜಿ ಮತ್ತು ಕಲಕಲ ರವ. ತೀರದಲ್ಲಿನ ಶ್ರೀಹೊನ್ನೆ ಮರದಡಿಯಲ್ಲಿ ಹರವಾದ ತಣ್ಣೆಳಲು. ಇಬ್ಬರೂ ಕೈಕೈತೆಕ್ಕೆ ಹಾಕಿಕೊಂಡು ಕುಳಿತುಕೊಂಡರು. ಮನಃಪ್ರಾಣಗಳಿಗೆ ಸ್ವರ್ಗಲೋಕ ವಿಹಾರದಷ್ಟು ಹಿತ. ಆತ್ಮೀಯ ಗೆಳೆತನಕ್ಕೆ ಅಮೃತ ಸೇಚನ.

ಮಕ್ಕಳನ್ನು ಕರೆಯ ಬಂದ ಅಲಕ ಅಲ್ಲಿಂದಲೇ ಕೂಗಿ ಹೇಳಿದಳು. ''ಗಂಟೆ ಎರಡಾಯಿತು. ನಿಮಗೆ ಊಟದ ನೆನಪೇ ಇಲ್ಲವೇ?''

''ಹರೇ ರಾಂ! ಆಗಲೇ ಎರಡು ಗಂಟೆ!''

ನೋಟ ಗಗನದತ್ತ ಹರಿಯಿತು. ಸೂರ್ಯ ಕೇಂದ್ರ ರೇಖೆಯಿಂದ ಸ್ವಲ್ಪ ಸರಿದಿದ್ದ. ಸ್ವಾಮಿನಿ ಅವಸರಿಸಿದಳು. ..ಬೇಗನೆ ಬನ್ನಿ!..

ಇಬ್ಬರೂ ಎದ್ದು ಹಿಂದೆಯೇ ಹೊರಟರು. ಊಟದಲ್ಲಿ ವಿಶೇಷವೇನೂ ಇರದಿದ್ದರೂ ರುಚಿಕಟ್ಟಾದ ಸಿಹಿ ಇತ್ತು. ರವಿಚಂದಾನಿಯ ಊಟ ಅರ್ಧ ಮುಗಿದಿತ್ತು; ಮುಗುಳು ನಗೆಯ ಸ್ವಾಗತ ನೀಡಿ..ಬಹಳ ಅಪರೂಪ ಬಹುಶಃ ಗೆಳತಿಯ ಕಟ್ಟೊತ್ತಾಯಕ್ಕೆ ಮಣಿದಿರಬಹುದು ಮನೋ...!

''ಹೌದು, ಅಪ್ಪಾ! ಕಳೆದ ಎರಡು ವಾರದಿಂದ ಒತ್ತಾಯಪಡಿಸುತ್ತಿದ್ದೆ!''

ಮಗಳ ಉತ್ತರಕ್ಕೆ ತಲೆದೂಗಿ ಮುಗುಳು ನಕ್ಕ ರವಿಚಂದಾನಿ.

''ಮನೆ ಬಿಟ್ಟು ಬರುವುದು ಕಷ್ಟ ಅಂಕಲ್! ದೊಡ್ಡಪ್ಪ ಮನೆಯಲ್ಲಿದ್ದರೆ ಕರೆಯುತ್ತಲೇ ಇರುತ್ತಾರೆ. ಗಿರಾಕಿಗಳು ತುಂಬಿದಾಗ ಎಷ್ಟು ಜನ ಇದ್ದರೂ ಸಾಲದು. ನಾನು ಓದುವುದು ರಾತ್ರಿ. ಹಗಲೆಲ್ಲಾ ಒಂದಲ್ಲ ಒಂದು ಕೆಲಸ ಇದ್ದೇ ಇರುತ್ತೆ!''

''ಮಾಡು, ಮಾಡು! ದೊಡ್ಡಪ್ಪನ ಮುದ್ದಿನ ಮಗಳು! ಅವನ ಪಾಲೆಲ್ಲಾ ನಿನಗೆ! ನಿನ್ನನ್ನು ದತ್ತು ತೆಗೆದುಕೊಳ್ಳುತ್ತಾನಂತೆ ಖುದಿರಾಂ!''

''ನಿಜ ಅಂಕಲ್!''

''ಅವಳ ದೊಡ್ಡಮ್ಮನಿಗೂ ಈ ಮಗಳನ್ನು ಕಂಡರೆ ಎಲ್ಲಿಲ್ಲದ ಪ್ರೀತಿ.''

ಸ್ವಾಮಿನಿ ಹುಬ್ಬೇರಿಸಿ ಮೆಚ್ಚುಗೆಯಿಂದ ನುಡಿದಾಗ ಹುಡುಗಿಯರ ಮುಖಬಿಂಬ ಅರಳು ಮಲ್ಲಿಗೆಗಳಾದುವು.

* * *

ಹಗಲು ಉರುಳಿತು. ಸಂಜೆ ಅಡರುತ್ತಿದೆ.

ಪಶ್ಚಿಮ ದಿಗ್ದೇಶದಲ್ಲಿ ಹಿರಣ್ಮಯನಾದ ಉಜ್ವಲ ಶಾಂತ ಸೂರ್ಯ!

ಲೋಕಲೋಕಾಂತರಗಳ ಮದ-ಮಾತ್ಸರ್ಯವೆಲ್ಲಾ ಅರುಣ ಕಿರಣಗಳ ಕಾಂತಿಯಲ್ಲಿ ಕರಗಿ ಹೋಗುವುದೋ ಎಂಬಷ್ಟು ಶಾಂತಶೀತಲತೆ.

ಮನೆಯ ಮುಂದಿನ ವರಾಂಡದಲ್ಲಿದ್ದು ಸ್ವಾಮಿನಿ ಮಕ್ಕಳನ್ನು ಅರಸುತ್ತ ತೋಟದಂಚಿಗೆ ಬಂದಾಗ ಶಿಲಾಪೀಠದ ಮೇಲೆ ಮಂಡಿಸಿದ್ದ ಬಾಲಿಕೆಯರು ದೃಷ್ಟಿಗೆ ಬಿದ್ದರು.

''ಸೂರ್ಯ ಮುಳುಗಿದ ನಂತರ ಹಿಮಗಾಳಿ ಬೀಸುತ್ತದೆ. ಈಗಲೇ ಒಳಸೇರಿಕೊಳ್ಳಿ ಮಕ್ಕಳೇ!''

''ಇನ್ನೂ ಅರ್ಧ ಗಂಟೆ ಉಂಟಷ್ಟೆ?''

''ಆಂಟೀ! ಸೂರ್ಯಾಸ್ತಮಾನ ನೋಡಿಯೇ ಒಳಬರುತ್ತೇವೆ.''

''ಮೈಮೇಲೆ ಶಾಲಿಲ್ಲ. ಚಳಿಯಾಗದೇ?''

''ಪರವಾಯಿಲ್ಲ....'' ತಲೆಯಾಡಿಸಿದರು ಇಬ್ಬರೂ.

ಅರೆತಾಸು ಉರುಳಿತು. ಸಾಯಂಸೂರ್ಯ ಮೋಡಮಾಲೆಯಲ್ಲಿ ತಂಗಿದ.

ಹಿಮಗಾಳಿ ಸುಯ್ ಸುಯ್ಯನೆ ಬೀಸತೊಡಗುತ್ತಲೂ ಇಬ್ಬರೂ ಎದ್ದು ಮನೆಯ ಕಡೆ ಹೊರಟರು. ಮೈ ಕೋರೈಸುವಷ್ಟು ಹಿಮಗಾಳಿಯ ತೀಕ್ಷ್ಣತೆ. ಉಟ್ಟ ಬಟ್ಟೆ ಗಾಳಿಯ ಪಟದಂತೆ ದಿಕ್ಕು ದೆಶೆಯಿಲ್ಲದೆ ಪಟ ಪಟಿಸುತ್ತಿದ್ದರೆ ಹಿಡಿದು ನೇರ್ಪಡಿಸುವುದೇ ಕಷ್ಟ.

ಇಬ್ಬರೂ ಮನೆಯ ಮೆಟ್ಟಿಲೇರಿದಾಗ ಟೀಪಾಯ್ ಮೇಲಿದ್ದ ದೈನಿಕಗಳು ದೃಷ್ಟಿಗೆ ಬಿದ್ದುವು. ಅದರಲ್ಲಿ ದಪ್ಪಕ್ಷರಗಳಲ್ಲಿ ಅಚ್ಚಾದ ಸುದ್ದಿ ಸುಭಾಸ್ ಚಂದ್ರಬೋಸರು ಸೆರೆಮನೆಯ ದಿಗ್ಬಂಧನದಿಂದ ಪಾರಾದ ಬಗೆ. ಬ್ರಿಟಿಷರ ದೃಷ್ಟಿಗೆ ಮಣ್ಣೆರಚಿದ್ದು ಸಾಮಾನ್ಯ ವಿಷಯವಲ್ಲ. ವಿಷಯ ರಂಗುರಂಗಾಗಿ ಹೊರಬಿದ್ದಿತ್ತು.

''ನೋಡಿದೆಯಾ?''

ಆ ಪ್ರಶ್ನೆಯೊಂದಿಗೆ ಹೊಮ್ಮಿದ ಭಾವವನ್ನು ಗಮನಿಸಿ ಹುಬ್ಬೇರಿಸಿದ ಸುಶೀ ತಾಯಿಯ ಕಡೆಗೆ ಕಣ್ಣೋಟವನ್ನು ಚೆಲ್ಲಿಕೊಟ್ಟು ''ಇದೀಗ ಸರಿ! ಇನ್ನು ಸುಭಾಸ್ ಸುಮ್ಮನೆ ಕೂಡುವವರಲ್ಲ!''

''ಸಥ್ಯ! ಅವರು ಏನು ಮಾಡಿದರೂ ಉಪಕಾರವೇ! ಗಾಂಧೀಜಿಗೆ ವಿರೋಧವೆನಿಸುವುದೇನೋ! ಏನೇ ಇರಲಿ, ಈ ಅನ್ಯಾಯದಂಕ ಶೀಘ್ರವಾಗಿ ಕೊನೆಗೊಂಡರೆ ಸಾಕು.''

"ಜಿನ್ನಾ ಪಾಲಿಗಾಗಿ ಪಟ್ಟು ಹಿಡಿಯದಿದ್ದರೆ ಎಂದೋ ಸಮಸ್ಯೆ ಬಗೆಹರಿಯುತ್ತಿತ್ತು. ದೇಶ ವಿಭಜನೆಯ ಹೋರಾಟದಿಂದಾಗಿ ಹಿಂದೂ-ಮುಸ್ಲಿಂ ದ್ವೇಷ ಎಲ್ಲೆಡೆಯೂ ತಲೆದೋರುತ್ತಿದೆ."

"ಇವರು ಪಾಲು ಕೇಳುವುದರಲ್ಲಿ ಅರ್ಥವೇ ಇಲ್ಲ. ಒಂದು ವೇಳೆ ಪಾಲು ತೆಗೆದುಕೊಂಡರೆ ಈ ದೇಶದ ತುಂಬೆಲ್ಲಾ ಇರುವ ಮುಸ್ಲಿಮರು ಅಲ್ಲಿಗೆ ಹೋಗಿಬಿಡುತ್ತಾರೆಯೇ ತಮ್ಮ ತಮ್ಮ ಮನೆ ಮಠ ಬಿಟ್ಟು? ಇದೆಲ್ಲಾ ಸುಳ್ಳು ಸುಳ್ಳು! ಪಾಲು ಕೇಳುವುದು ಅಧಿಕಾರಕ್ಕಾಗಿ!"

"ಇಲ್ಲಿರುವ ಮುಸ್ಲಿಮರೆಲ್ಲಾ ಅಲ್ಲಿಗೆ ಹೋಗುವುದಾದರೆ ಪಾಲು ಕೊಡುವುದು ಬಹಳ ಮೇಲು. ನಮ್ಮವರೆಲ್ಲಾ ಹಾಗೆಂದು ಪಟ್ಟು ಹಿಡಿಯಬೇಕು!"

"ಅದೆಲ್ಲಾ ಎಲ್ಲಿ ಸಾಧ್ಯ? ಇವೆಲ್ಲಾ ಕೆಲವೇ ಕೆಲವರಿಗಾಗಿ!"

"ಬಿಡು ಶುಶೀ, ನಾವಿನ್ನೂ ಕಣ್ತೆರೆಯುವುದರಲ್ಲಿದ್ದೇವೆ! ನಮಗೇಕೆ ಹಿರಿಯರ ಮಾತು!"

ಸೂರ್ಯ ನೀಲ ಬೆಟ್ಟದಾಚೆ ತಂಗಿದ. ಮುಸ್ಸಂಜೆ ಕವಿಯ ತೊಡಗಿತು.

ಹೆಮ್ಮರದ ಹಸುರು ಎಲೆಗೊಂಚಲುಗಳ ಮಧ್ಯೆ ಹುದುಗಿ ಕುಳಿತ ಕೋಗಿಲೆ ಮಧುರ ಕಂಠದಿಂದ ಹಾಡಿತು. ಕುಹು ಕುಹೂ ಕುಹೂ ಕುಹೂ!

ಮನೋನ್ಮಣಿ ತಲೆಯೆತ್ತಿ ನೋಡಿದಳು. ಸ್ವರ ಮತ್ತೆ ಮತ್ತೆ ಪುನಃ ಪುನಃ ಮೊಳಗಿದರೂ ಕೋಗಿಲೆ ದೃಷ್ಟಿಗೆ ಬೀಳದು. ಕತ್ತೆತ್ತಿ ನೋಡಿ ಕತ್ತು ನೋವು ಮೂಡಿದರೂ ಪಕ್ಷಿ ದೃಷ್ಟಿಗೆ ಬೀಳಲಿಲ್ಲ. ಅದೊಂದಿಷ್ಟು ಅಲುಗಾಡಿದರೆ ಗೊತ್ತು ಹಚ್ಚಬಹುದು. ಆದರೆ ಅದೂ ಇಲ್ಲವಲ್ಲಾ....

"ಹರೆ! ರಾಂ! ಇದಂತೂ ಬಹಳ ವಿಶೇಷ!"

"ಎಲೆಗೊಂಚಲು ದಟ್ಟವಾಗಿರುವುದರಿಂದ ಕಾಣಿಸದು ಅಷ್ಟೆ."

"ಅಷ್ಟು ಮಧುರ ಕಂಠವಿದ್ದರೂ ಎಷ್ಟು ನಾಚಿಕೆ? ಕೋಗಿಲೆಯ ವಂಶವೆಲ್ಲಾ ಹೀಗೆಯೇ.... ಅದೇ ಆಶ್ಚರ್ಯ ಸುಶೀ....!"

"ನೋಡು, ವಂಶಪಾರಂಪರ್ಯವಾಗಿ ಬಂದ ಗುಣ."

ತಲೆದೂಗಿದಳು ಮನೋನ್ಮಣಿ. ಮನಃಗತ್ತರಿಯಲ್ಲಿ ವಿಚಾರತರಂಗ ಚರ್ವಣ ಚರ್ವಿತವಾಯಿತೇನೋ ಹೌದು. ಆ ವಂಶಪಾರಂಪರ್ಯ ಸಂಸ್ಕೃತಿ ಮನುಷ್ಯರಲ್ಲೇಕಿಲ್ಲ ಎಂಬುದು ಮತ್ತೊಂದು ಪ್ರಶ್ನೆ. ಯೋಜನೆಯ ಭಾರದಿಂದ ಹೃನ್ಮನಗಳು ಸ್ತಬ್ಧವಾದುವು.

ರವಿಚಂದಾನಿ ಸಾಲು ಮೆಟ್ಟಿಲುಗಳನ್ನು ಹತ್ತಿ ಮೇಲೆ ಬಂದಾಗ ಸಂಧ್ಯಾದೀಪಗಳು ಉರಿಯುತ್ತಿದ್ದವು. ವರಾಂಡದಲ್ಲಿದ್ದ ಹುಡುಗಿಯರತ್ತ ದೃಷ್ಟಿ ಹಾಯಿಸಿ ''ಇಂದಿನ ಸುದ್ದಿ ಗೊತ್ತೇ?'' ಎಂದ.

''ಸುಭಾಸರನ್ನು ಬೆನ್ನುಹತ್ತಿದೆ ಬ್ರಿಟಿಷ್ ಸರಕಾರ. ದೇಶೀಯ ಸರಕಾರಕ್ಕೂ ಅದೇ ಕಾಯಕ. ಬ್ರಿಟಿಷರ ಕತೆ ಒತ್ತಟ್ಟಿಗಿರಲಿ. ನಮ್ಮವರೇಕೆ ಹೀಗೆ? ಅದೇ ಆಶ್ಚರ್ಯಕರವಾದ ಸಂಗತಿ!''

''ಏನು ಹೇಳಿ?''

''ನಮ್ಮವರು ದೇಶೀಯರ ಕಡೆ ತಿರುಗಿಸಿದ ಕೋವಿಗಳನ್ನು ವಿದೇಶೀಯರ ಕಡೆಗೆ ಹಿಡಿದಿದ್ದರೆ ನಾವು ಎಂದೋ ಸ್ವತಂತ್ರರಾಗಿರುತ್ತಿದ್ದೆವು.... ತೀರಾ ದುರದೃಷ್ಟಕರ! ಇಂದಿನ ಯುವಕರಿಗೆ ಬ್ರಿಟಿಷ್ ಸರಕಾರದ ಆಶ್ರಯದಲ್ಲಿ ಡೆಪ್ಯುಟಿ ಕಲೆಕ್ಟರ್ ಆಗುವುದರಲ್ಲೇ ರಾಷ್ಟ್ರದ ಹಿತ ಅಡಗಿದೆ ಎಂಬ ಭಾವನೆ. ಅವರನ್ನು ನಿಮ್ಮ ಮಾರ್ಗ ಬದಲಿಸಿ, ರಾಷ್ಟ್ರದ ಹಿತಕ್ಕಾಗಿ ತ್ಯಾಗ ಮಾಡಿ ಎನ್ನುವುದು ಎಷ್ಟು ತಪ್ಪು! ಎಂತಹ ಪ್ರಮಾದ!''

ಕೇವಲ ಎಂಟ್ರೆನ್ಸ್ ಪರೀಕ್ಷೆ ಅಥವಾ ಬಿ.ಎ. ಮಾಡಿ ಅಧಿಕಾರಕ್ಕಾಗಿ ಬಾಯಿ ಬಿಡುವ ಯುವಕರನ್ನು ನೋಡಿದರೆ ನಗುವುದೋ ಬಿಡುವುದೋ ತಿಳಿಯುವುದಿಲ್ಲ. ಪಗಾರಕ್ಕಿಂತ ಅಧಿಕಾರ ಮುಖ್ಯ. ಅಧಿಕಾರದಲ್ಲಿ ಏನಿದೆ? ಅದೇ ಅರ್ಥವಾಗದ ವಿಷಯ....

ರವಿಚಂದಾನಿ ನಕ್ಕುಬಿಟ್ಟ.

''ಅಂಕಲ್! ಇಲ್ಲಿಕೇಳಿ, ಪುರುಷವರ್ಗಕ್ಕೆ ಅಧಿಕಾರ ಎಂಬುದು ಭಂಗಿ ಕುಡಿದಷ್ಟು ಮೋಜು. ಅದರಲ್ಲೇನೋ ಒಂದು ಬಗೆಯ ಆಮೋದಕತೆ, ಇನ್ನೇನೋ ಒಂದು ಬಗೆಯ ಮದ ಲಾಲಸೆ, ಮತ್ತೇನೋ ಒಂದು ಬಗೆಯ ಫ್ಯಾಶನ್, ಆಂಗ್ಲ ಪೋಷಾಕುಗಳ ಟೀಕು ಟಾಕಿನ ಪ್ರದರ್ಶನ ಇವುಗಳಲ್ಲೇ ಸಂತೃಪ್ತಿ ಎಂದರೆ ತಪ್ಪಲ್ಲ. ಇದು ನಿಜಕ್ಕೂ ಪ್ರಚಲಿತ ವಿಷಯ. ಬಹುಶಃ ನಿಮಗೆ ಒಪ್ಪಿಕೊಳ್ಳಲಿಕ್ಕೆ ನಾಚಿಕೆಯೇನೋ...."

''ನನಗೇಕೆ ನಾಚಿಕೆ?''

''ಹರೇ ರಾಂ! ನೀವು ಪುರುಷವರ್ಗಕ್ಕೆ ಸೇರಿದವರಲ್ಲವೇ?''

''ಓ ಹಾಗೋ? ನಾನು ಪುರುಷವರ್ಗಕ್ಕೆ ಸೇರಿದ್ದು ಸರಿ; ಅಧಿಕಾರಿಗಳ ವರ್ಗಕ್ಕೆ ಸೇರಿದವನಲ್ಲ. ಇದಕ್ಕೇನು ಹೇಳುತ್ತಿ?''

''ನಿಜ ಅನ್ನೋಣ. ಆದರೂ ಇಂದಿನ ಯುವಕರಲ್ಲಿ ಅಧಿಕಾರ ಮೋಹ ಕಂಡು ಬರುವುದು ದಿಟ.''

ಚಂದಾನಿ ತಲೆದೂಗಿ ಸಮ್ಮತಿ ಸೂಚಿಸಿದ.

೩

ಭುವಿಯ ಮೇಲೆ ಹಾಲು ಹೊಯ್ದಂತೆ ಹರಿದ ಬೆಳದಿಂಗಳು.

ಶಾಂತ ಶೀತಲ ವಾತಾವರಣ. ಸುತ್ತಮುತ್ತಣ ಪರಿಸರದಲ್ಲೆಲ್ಲಾ ನಿಶ್ಯಬ್ದ-ನೀರವ.

ಒಮ್ಮೊಮ್ಮೆ ಕರ್ಕಿ ನಾಯಿ ಬೊಗಳುವುದನ್ನು ಬಿಟ್ಟರೆ ಶಬ್ದದ ಸೊಲ್ಲೆ ಇಲ್ಲ. ಮನೆಯ ದೀಪಗಳೆಲ್ಲಾ ಆಗಲೇ ನಂದಿವೆ. ಸುಶೀ ಮತ್ತು ಮನೋನ್ಮಣಿ ಇಬ್ಬರೇ ಕೊಠಡಿಯಲ್ಲಿ. ರೇಡಿಯೋ ಸುದ್ದಿಯಲ್ಲಿ ಮಾಕಲೀಪುರದಲ್ಲಿ ಗುಂಪು ಘರ್ಷಣೆಯ ಬಗ್ಗೆ ವರದಿ ಬಂದಿತ್ತು. ಕೆಲವರು ಸ್ಥಳದಲ್ಲೆ ಹತರಾಗಿದ್ದು ಅನೇಕರನ್ನು ಆಸ್ಪತ್ರೆಗೆ ಒಳರೋಗಿಗಳಾಗಿ ಸೇರಿಸಲಾಗಿತ್ತು.

''ಈ ಹಿಂದೆ ಮಾಕಲೀಪುರದಲ್ಲಿ ಹಿಂದೂ-ಮುಸ್ಲಿಂ ಮಾರಾಮಾರಿಯಾದುದು ನೆನಪುಂಟೇ? ಆಗ ಮೃತರಲ್ಲಿ ಹಿಂದೂಗಳೇ ಹೆಚ್ಚು. ಆಗಣ ಕಿಚ್ಚು ಇನ್ನೂ ಆರಿರಲಿಲ್ಲವೇನೋ.... ಆ ರೋಷವೇ ಈಗ ಭುಗಿಲೆದ್ದಿರಬೇಕು.''

''ಈ ಜದ್ದಾಜದ್ದು ಅರ್ಥವೇ ಆಗುವುದಿಲ್ಲ. ಸ್ಥಳೀಕರು ನಾವು. ನಮ್ಮ ಮೇಲೆಯೇ ಇವರ ಯುದ್ಧ!''

''ಲೋಕ ಜ್ಞಾನವಿಲ್ಲದವರ ರೀತಿ-ನೀತಿ.''

''ಅರಾಜಕತೆಯಿಂದ ರಕ್ಷಣೆಯೇ ಇಲ್ಲವಾಗಿದೆ,'' ಒಂದು ಗಳಿಗೆ ಯೋಚಿಸಿ ಪುನಃ ''ಪ್ರಾಣಹಾನಿಗೆ ಲೆಕ್ಕವೇ ಇಲ್ಲ. ಕ್ರಿಮಿಕೀಟಗಳಿಗಿಂತಲೂ ಕಡೆಯಾಗಿದೆ ಜನವರ್ಗ.''

ಕಳಕಳಿಯ ದನಿ ಎದೆಯಾಳದಿಂದ ಹರಿದು ಬಂತು. ಕಳಾಹೀನಳಾದಳು ಮನೋನ್ಮಣಿ.

'' ಅಷ್ಟೇಕೆ ಕಳಕಳಿ? ಅನಾಥೋ ದೈವರಕ್ಷಕಃ''

''ಇಷ್ಟೊಂದು ಸಾವು-ನೋವುಗಳು ಆಗುತ್ತಿವೆಯಲ್ಲಾ, ಎಲ್ಲಿದ್ದಾನೆ ದೇವರು?''

''ಪ್ರಕೃತಿ ನಿಯಂತ್ರಣ ಈ ರೀತಿಯಲ್ಲಿ ಆಗಬೇಕಿತ್ತೇನೋ ಯಾರಿಗೆ ಗೊತ್ತು? ನಾವು ಚಿಂತಿಸುವುದೆಲ್ಲಾ ನಮ್ಮ ನೇರಕ್ಕೆ. ನಾವು ನಮ್ಮ ಪರಿಸರ ವಿನಾ ನಮಗಿನ್ನೇನು ಗೊತ್ತು? ಜಗನ್ನಿಯಂತ್ರಣ ಸಾಮಾನ್ಯ ಪ್ರಶ್ನೆಯಲ್ಲ ಬಿಡು. ಭಗವದಿಚ್ಛೆಯನ್ನು ಪ್ರಶ್ನಿಸಲು ನಮಗಿರುವ ಜ್ಞಾನವಾದರೂ ಎಷ್ಟು? ಇದನ್ನೆಲ್ಲಾ ನಾವು ಯೋಚಿಸಬೇಡವೇ?''

''ನೀನು ಪರವಾಯಿಲ್ಲ, ಬಹಳ ಯೋಚನಾಶೀಲೆ. ನಿನ್ನ ವಿಚಾರವನ್ನು ಮೆಚ್ಚಲೇಬೇಕು. ಆದರೆ, ಭಗವಂತ ಮನುವರ್ಗಕ್ಕೆ ಹೃನ್ಮನಗಳನ್ನು ಕೊಟ್ಟು ತಪ್ಪು ಮಾಡಿದನೇನೋ ಎನಿಸುತ್ತೆ. ಅಂದರೆ ನಮ್ಮನ್ನು ನಾವು ಗೆಲ್ಲಲು ಇದೊಂದು ಪರೀಕ್ಷೆ ಎನ್ನೋಣ; ಆ ಶಕ್ತಿ ನಮಗಿಲ್ಲ ಅದೇ ಕಷ್ಟ! ನಾವು ಸರ್ವೇ ಸಾಮಾನ್ಯ ಲೌ:ಕರು.....''

ಗೋಡೆಯ ಮೇಲಿನ ಗಡಿಯಾರ ಗಂಟೆ ಬಾರಿಸಿತು. ಒಂದು. ಎರಡು, ಮೂರು. ನಾಲ್ಕು. ಐದು. ಆರು. ಏಳು. ಎಂಟು. ಒಂಭತ್ತು. ಹತ್ತು. ಹನ್ನೊಂದು.

''ಓ, ನಾವು ಎಷ್ಟು ಹೊತ್ತು ಮಾತಾನಾಡಿದ್ದೇವೆ!''

ಇಬ್ಬರೂ ಮುಸುಗಿಟ್ಟು ಮಲಗಿದರು. ಮನೋನ್ಮಣಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ. ಅತ್ತಿತ್ತ ಹೊರಳಿ ಹೊರಳಿ ಬೇಸತ್ತಳು. ಒಡಲೆಲ್ಲಾ ಉರಿ. ಏನೋ ಒಂದು ರೀತಿಯ ಸಂಕಟ. ಸೆಕೆಯಿಲ್ಲದಿದ್ದರೂ ಮೈ ಸಣ್ಣಗೆ ಬೆವರಿತು. ಹೃದಯ ಮೃದಂಗ ಇದ್ದಕ್ಕಿದ್ದಂತೆಯೇ ವ್ಯಾಪ್ತಿಗೆ ಮೀರಿ ಮಿಡಿಯಹತ್ತಿತು. ಮೆಲ್ಲನೆ ಎದ್ದು ಕುಳಿತಳು. ಮನದ ತುಂಬೆಲ್ಲಾ ಏನೋ ಒಂದು ಬಗೆಯ ಕಳವಳ. ಏನೆಂಬುದೇ ಅರ್ಥವಾಗುತ್ತಿಲ್ಲ. ಎದ್ದು ಅಲ್ಲಲ್ಲೇ ಶತಪತ ತಿರುಗಿದಳು. ಸ್ವಲ್ಪ ಹೊತ್ತು ಮಾತ್ರ. ಅದೂ ತನ್ನಿಂದ ಸಾಧ್ಯವಾಗಲಿಲ್ಲ. ಪುನಃ ಹಾಸಿಗೆ ಸೇರಿದಳು. ಅತ್ತಿತ್ತೊರಳುವುದು ಎದ್ದು ಕೂಡುವುದು ಹೀಗೆ ಅದೆಷ್ಟು ಹೊತ್ತು ಕಳೆಯಿತೋ, ಪಕ್ಕದಲ್ಲಿ ಮಲಗಿದ್ದ ಸುಶೀ ಎಚ್ಚತ್ತು ''ಏನು, ಮನೋ? ಏಕೆ ಹೀಗಿದ್ದೀ? ನಿದ್ದೆ ಬರಲಿಲ್ಲವೇ?''

''ಇಲ್ಲ ಸುಶೀ! ನಿದ್ದೆ ಬರದಿದ್ದರೆ ಹೋಗಲಿ, ಒಡಲೆಲ್ಲಾ ಸಂಕಟ! ಮನಸ್ಸಿಗೆ ಕಿನಿಸಿಗೆ...ಏನೆಂಬುದೇ ಅರ್ಥವಾಗುತ್ತಿಲ್ಲ....''

''ರಾತ್ರಿ ಊಟ ಸರಿಹೋಗದೆ ಅಜೀರ್ಣವಾಗಿದೆಯೇ?''

''ಅಂತಹದೇನೂ ಇಲ್ಲ. ದೈಹಿಕ ಅನಾರೋಗ್ಯವಲ್ಲ. ಮಾನಸಿಕವಾದ ಅನಾರೋಗ್ಯ.''

''ನೀನು ಈವರೆಗೆ ತಾಯಿ ಬಿಟ್ಟು ಮಲಗಿರಲಿಲ್ಲವೇನೋ, ಅದೇನಾದರೂ ಮನಸ್ಸಿನ ಮೇಲೆ ಪರಿಣಾಮವಾಗಿದೆಯೇ?''

ಸುಶೀ ಎದ್ದು ಕುಳಿತು ಅವಳ ಬೆನ್ನನ್ನು ನೇವರಿಸಿ ನಲ್ಮೆಯಿಂದ ಸಂತೈಸುತ್ತ ಕೇಳಿದಳು.

"ಏನಾಗಿದೆಯೋ ದೇವರಿಗೆ ಗೊತ್ತು. ಅಂತೂ ತುಂಬಾ ಸಂಕಟ ಕಣೆ!"

"ಹೇಳು, ಏನಾದರೂ ಔಷಧ ಬೇಕೆ? ಅಮ್ಮನನ್ನು ಎಬ್ಬಿಸಲೇ?"

"ಚಿಃ ? ಚಿಃ! ಬೇಡವೇ ಬೇಡ. ಆಗಲೇ ಹೇಳಿದೆನಲ್ಲಾ, ದೈಹಿಕವಾಗಿ ಏನೂ ಆಗಿಲ್ಲ. ಆತ್ಮಿಕವಾದ ಸಂಕಟ...ಇದಕ್ಕೆಲ್ಲಿಯ ಮದ್ದು?"

"ಏಕೆ? ಏನು ಕಾರಣ, ಊಹಿಸಲಾರೆಯಾ ಮನೋ?"

ಅಮಾಯಕ ದನಿ ಕಾರುಣ್ಯಪೂರ್ವಕವಾಗಿ ಹರಿಯಿತು.

"ಏನೋ ತಿಳಿಯುತ್ತಿಲ್ಲ....ಮೆಲ್ಲಗೆ ತಲೆಯಾಡಿಸಿದಳು ಅವಳು; ಕಳಾಹೀನವಾದ ಮುಖದಿಂದ ಬಿಸಿಯುಸಿರೊಂದು ತಾನೇ ತಾನಾಗಿ ಹರಿಯಿತು.

"ಸ್ವಲ್ಪ ನೀರು ಅಥವಾ ಹಾಲು ಏನಾದರೂ ಕುಡಿ. ಅದರಿಂದ ಒಡಲ ಸಂಕಟ ತಣಿಯಬಹುದು."

"ಈಗ ಏನೂ ಬೇಡ. ನಾನು ಮನೆಯಿಂದ ಬರಬಾರದಿತ್ತು...ನನ್ನಿಂದ ನಿನಗೂ ತೊಂದರೆ. ಸುಶೀ, ನೀನು ಮಲಗಿ ನಿದ್ದೆ ಮಾಡು."

"ನೀನೂ ನಿದ್ರಿಸಲು ಪ್ರಯತ್ನಿಸು. ಈಗ ಎರಡು ಗಂಟೆ; ಇನ್ನೂ ಬಹಳಷ್ಟು ಸಮಯವಿದೆ."

"ಎಂದೂ ನನಗೆ ಹೀಗಾಗಿರಲಿಲ್ಲ. ಇಂದೇಕೆ ಹೀಗೆ ಅರ್ಥವಾಗುತ್ತಿಲ್ಲ. ಏನೋ ವಿಚಿತ್ರ ಎನಿಸುತ್ತೆ."

ಒಳಗೆಲ್ಲಾ ರಾತ್ರಿಯ ಮಿನುಗು ದೀಪದ ಎಳೆಬೆಳಕು. ಹೊರ ಜಗತ್ತಿನಲ್ಲಿ ಚಂದ್ರ ಚಂದ್ರಿಕೆಯ ಹೊನಲು. ಇರುಳ ಶಾಂತಿಯನ್ನು ಕುಲಕುವಂತೆ ನಾಯಿಯ ಕರ್ಕಶ ದನಿಯ ಮೊಳಗು.

ಆವುದೋ ಪಕ್ಷಿಯು ಆಗೊಮ್ಮೆ ಈಗೊಮ್ಮೆ ಹರಿಬಿಡುವ ವೀತಗಾನ.... ಏತರ, ಸಂಕಟವೊ ಅದಕ್ಕೆ. ಸ್ವಲ್ಪೇ ಹೊತ್ತಿನೊಳಗಾಗಿ ಸುಶೀ ನಿದ್ದೆ ಹೋದಳು. ತನಗೆ ಮಾತ್ರ ನಿದ್ದೆ ಗಾವುದ ದೂರ. ಯಾವುದೋ ಕಾಣದ ಕೈ ಹೃದಯವನ್ನು ಹಿಸುಕುತ್ತಲೇ ಇದೆ ಜೀವ ತಲ್ಲಣಿಸುವಂತೆ.

* * *

ಬೆಳಗಿನ ಒಂಭತ್ತರ ಸಮಯ.

ರಾತ್ರಿ ನಿದ್ದೆಗೆಟ್ಟ ಕಣ್ಣುಗಳಲ್ಲಿ ಉರಿ. ಸಣ್ಣ ಉರಿ. ಹೊರಬಂದು ದಾಸವಾಳದ

ಗಿಡದ ಪಕ್ಕ ನಿಂತು ರಸ್ತೆಯ ಮೇಲೆ ಕಣ್ಣು ಹಾಯಿಸಿದರೆ ಇಬ್ಬರು ಬಿಳಿಯರು ದೇಶೀಯನೊಬ್ಬನನ್ನು ದರ ದರ ಎಳೆದಾಡಿ ಬಡಿಯುತಿದ್ದಾರೆ! ಒಂದೊಂದು ಹೊಡೆತಕ್ಕೂ ಆತ ನೋಯದೆ ಬೇಯದೆ ಉಚ್ಚರಿಸುತಿದ್ದುದು...ವಂದೇ ಮಾತರಂ!... ಎಂಬ ಶೋಭಾನೆ.

ಮೇಲಿಂದ ಮೇಲೆ ಹೊಡೆತಗಳು ಬೀಳುತಲಿದ್ದರೂ ಆತನ ಕೆಚ್ಚಳಿಯದು.

ಅಷ್ಟರಲ್ಲಿ ಇನ್ನಾರೋ ಹತ್ತಾರು ಮಂದಿ ದೇಶೀಯರು ಕೂಡಿದುದರಿಂದ ಬಿಳಿಯರು ಜೀಪ್ ಹತ್ತಿ ಜಾರಿದರು ಅಲ್ಲಿಂದ. ದೇಶೀಯನು ಮಾಡಿದ ತಪ್ಪು ಇಷ್ಟೆ... ಜೀಪು ದಾರಿಗೆಟ್ಟು ರಸ್ತೆಯ ಚರಂಡಿಗೆ ಇಳಿದಿತ್ತು. ಅದನ್ನು ಸರಿದಾರಿಗೆ ಹಚ್ಚಲು ಅವನು ನೂಕಿ ಕೈತುಂಬ ಸಹಾಯ ಮಾಡದಿದ್ದುದು. ಆತ ತೋರಿದ ಅಸಡ್ಡೆ-ಅಲಕ್ಷ್ಯಗಳಿಗೆ ದೊರೆತ ಉಂಬುಳಿ ಹೊಡೆತ-ಬಡಿತ.

ಇದು ರಾಜಕೀಯ ಧೋರಣೆಯಿಲ್ಲವಾದರೂ ಆತನ "ವಂದೇಮಾತರಂ!" ಶೋಭಾನೆಯ ಬಗ್ಗೆ ಬಿಳಿಯರ ಕಿಚ್ಚು ಕೆರಳಿತ್ತು. ವಿನಾ ಕಾರಣ ಬಿದ್ದ ಹೊಡೆತಕ್ಕೆ ಈತನ "ವಂದೇಮಾತರಂ!" ಎಂತಹ ರೋಚಕ! ಆ ದೃಶ್ಯವನ್ನು ಕಂಡ ಸುಶೀಲೆ "ಮನೋ, ನೋಡು! ಇದೀಗ ಸರಿ. ರಾಜಕೀಯಾಂದೋಳನ ಅಲ್ಪಮತಿಗೂ ಕಾಯಕಲ್ಪ ಗೊಳಿಸುತ್ತಿದೆ. ಅವರು ಎರಡು ಬಾರಿಸಿದರೆ ಇವನು ಒಂದಾದರೂ ಬಾರಿಸ ಬಹುದಾಗಿತ್ತು. ಇಷ್ಟರಮಟ್ಟಿಗೆ ಸಹನೆ ಪಡೆದುಕೊಂಡದ್ದು ವಿಶೇಷವೇ!"

"ನಿಜ. ಸುಶೀ!"

ಇಬ್ಬರೂ ಹಿಮ್ಮರಳಿ ಮೆಟ್ಟಲಿನ ಮೇಲೆ ಕುಳಿತುಕೊಂಡರು.

ಮನೋನ್ಮಣಿಯಲ್ಲಿ ಎಂದಿನ ಲವಲವಿಕೆ ಇಲ್ಲವೇ ಇಲ್ಲ. ಏನೋ ಒಂದು ಬಗೆಯ ಅಸಮಾಧಾನ. ಮತ್ತೇನೋ ಒಂದು ರೀತಿಯ ಸಂಕಟ ಇವು ಸರದಿಯ ಪ್ರಕಾರ ಅಂತರಂಗದಲ್ಲಿ ಕೈಯಾಡಿಸುತ್ತಿವೆ. ಹೇಳಲಾರಳು. ಅನುಭವಿಸಲಾರಳು. ಗೆಳತಿಯ ಕೈಯನ್ನು ಅದುಮಿ ಹಿಡಿದುಕೊಂಡು "ಸುಶೀ! ಈ ಸಲಿ ನನ್ನ ಕಳುಹಿಸು ಇನ್ನೊಮ್ಮೆ ಖಂಡಿತ ಮೂರು ದಿನ ಇರುವೆ."

"ನೀನು ತೀರಾ ಪುಕ್ಕಲು. ಇದುವರೆಗೆ ಮನೆ ಬಿಟ್ಟಿರಲಿಲ್ಲ... ಅದಕ್ಕೇ ಹೀಗೆ.."

ಅವಳು ನಗುತ್ತಿದ್ದರೆ ಇವಳಿಗೆ ಮನಸ್ಸೆಲ್ಲಾ ಮುಜುಗರ.

ಯಾರೋ ಒಬ್ಬ ಏದುಸಿರು ಬಿಡುತ್ತಾ ಓಡಿ ಬರುತ್ತಿದ್ದುದು ದೃಷ್ಟಿಗೆ ಬಿತ್ತು. ರವಿಚಂದಾನಿ ಅವನೆಡೆಗೆ ಹೋಗುತ್ತಲೂ ಬಾಲಕಿಯರು ತೋಟದ ಕಡೆ ಹೋದರು. ಹಸರು ಗಿಡದಲ್ಲೆಲ್ಲಾ ರಕ್ತವರ್ಣರಂಜಿತ ಚೆರ್ರಿ ಹಣ್ಣುಗಳು, ಮಾಗಿದ ಸೇಬಿನ

ಹಣ್ಣುಗಳು, ಲೀಚಸ್ ಹಣ್ಣುಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುವಂತಹ ಸುಂದರ ದೃಶ್ಯ.

ಇಬ್ಬರೂ ಕೈ ಕೈ ಹಿಡಿದುಕೊಂಡು ಪಾದಗಳನ್ನು ಮುದ್ದಿಸುವ ಗರಿಕೆ ಹಾಸಿನ ಸುಂದರ ಹಾದಿಯಲ್ಲಿ ಅಡ್ಡಾಡಿದರು. ಎಲ್ಲೆಡೆಯೂ ಹಸಿರು-ಹಸಿರು. ಮೈಮನಗಳನ್ನೆಲ್ಲಾ ಹಸಿರು ಉಕ್ಕಿಸುವಂತಹ ಹಸಿರು...ಹಸುರ್ಲೋಕದ ಒನಪು ವೈಯಾರಗಳ ಮಧುರ ಲೀಲೆ! ಇತ್ತ ರವಿ ಚಂದಾನಿಗೆ ಏದುಸಿರು ಬಿಡುತ್ತ ಬಂದ ವ್ಯಕ್ತಿ ಕೊಟ್ಟ ಸುದ್ದಿಯಾದರೂ ಎಂತಾದ್ದು?

ಅಂದು ರಾತ್ರಿ-ಕ್ರೂರ ಕರಾಳ ರಾತ್ರಿ?!

ಬಾಂಕೇವಾಡಿಯ ಅಂಗಡಿ ಮನೆ, ಕೊಟ್ಟಿಗೆಯಲ್ಲಿ ಹಸುಗಳು, ಮುಂಬೆಳದ ಭತ್ತದ ಬೆಳಸು ಒಮ್ಮೆಗೇ ಸಂಪೂರ್ಣ ಅಗ್ನಿಗಾಹುತಿಯಾದ ಭಯಾನಕ ಸುದ್ದಿ! ಮನೆಯಲ್ಲಿ ಸುಖ ನಿದ್ರಿತ ಇಡೀ ಸಂಸಾರ ಸ್ವರ್ಗದ ಪಾಲಾದ ವಿಷಯ ನೆರೆಹೊರೆಯವರಿಗೆ ತಿಳಿದುದು ಕೈಮಿಂಚಿದ ಮೇಲೆಯೇ!

ರವಿ ಚಂದಾನಿಯ ಮುಖಬಿಂಬ ಕಳೆಗುಂದಿ ವಿವರ್ಣವಾಯಿತು. ನೇರವಾಗಿ ಒಳಬಂದ. ಅಲಕಾ ಚಂದಾನಿ ಪತಿಯ ಪಾದ ಸಪ್ಪಳ ಕೇಳಿ ಇತ್ತ ದಿಟ್ಟ ಹೊರಳಿಸಿ, ಆತನ ಕುಂದಿದ ಮುಖ ನೋಡಿ ತಟ್ಟನೆ ಗರಬಡಿದವಳಂತೆ ಸ್ತಂಭೀಭೂತಳಾದಳು. ಅವನು ಸನಿಹ ಕೈತಂದು ವಿಷಯವನ್ನು ಮುಂದಿಟ್ಟು..ಮನೋ ಒಬ್ಬಳೇ ಉಳಿದಳಲ್ಲಾ ಮುಂದೆಗತಿಯೇನು?..

''ದೇವರೇ...! ಈಗ ಅವಳಿಗೆ ವಿಷಯ ತಿಳಿಸುವುದಾದರೂ ಹೇಗೆ?''

''ಬಹಳ ಅನ್ಯಾಯ? ಇದು ಯಾರದೋ ವಿಧ್ವಂಸಕ ಕೃತ್ಯವೇ ವಿನಾ ಆಕಸ್ಮಿಕವಲ್ಲ.''

ಹೃದಯಾಂತರಾಳದಲ್ಲಿ ಸಂಕಟ-ಸಂಕಷ್ಟದ ತುಲಾಭಾರ. ರವಿ ಚಂದಾನಿ ಮನೋನ್ಮಣಿಯನ್ನು ಕರೆಯಲು ಹೋಗಲಾರದೇ ಹೋದ ಬೆನ್ನ ಹಿಂದೆ ಕೇಳಿ ಬಂದ ಪಾದ ಸಪ್ಪಳ ಮೃತ್ಯುವಿನ ಹೆಜ್ಜೆಯ ಧ್ವನಿಯಂತೆ ಕೇಳಿಸಿತೇನೋ ಬೆಚ್ಚಿಬಿದ್ದು ನೋಡಿದಳು ಮನೋನ್ಮಣಿ. ಪ್ರೇತ ಕಳೆಯ ಚಂದಾನಿ ಅಂಕಲ್!

ಒಂದು ಕ್ಷಣ-ಒಂದೇ ಒಂದು ಕ್ಷಣ ಹುಬ್ಬೆತ್ತಿ ನೋಡಿ ತಲೆ ತಗ್ಗಿಸಿದಳು; ಒಡಲಾಳದ ಸಂಕಟ ವಿದ್ಯುತ್ ಝುರಿಯಂತೆ ದೇಹದಾದ್ಯಂತ ಹರಿದಾಡಿತು. ಹಿಮಗಾಳಿ ಬೀಸಿದಂತೆ ಮೈಯಲ್ಲಿ ಕಂಪನದ ಅಲೆ.....ಸುಶೀಲ ಗೆಳತಿಯ ಭುಜದ ಮೇಲಿಂದ ಕೈಯನ್ನು ತೆಗೆಯದೆ ಹುಬ್ಬೆತ್ತಿ ನೋಡಿ ''ಏನಣ್ಣಾ?'' ಎಂದಳು ಸ್ವಲ್ಪ ಅಚ್ಚರಿಗೊಳಗಾಗಿ.

"ಏನಿಲ್ಲ...." ಮುಂದೆ ಮಾತು ಹೊರಡದೆ ಒಂದೆರಡು ಕ್ಷಣ ತಡೆದು ಪುನಃ ಮನೋನ್ಮಣಿಯನ್ನು ಕರೆಯಲು ಬಂದೆ. ಅವರ ಮನೆಯ ಕೊಟ್ಟಿಗೆಗೆ ಬೆಂಕಿ ಬಿದ್ದಿದೆಯಂತೆ!..

"ಹ್ಞಾ! ಏನು ಅಂಕಲ್?"

"ಈಗಲೇ ಗಾಬರಿಯಾಗಬೇಡಮ್ಮಾ. ಕಷ್ಟ ಎಲ್ಲಾರಿಗೂ ಬರುತ್ತೆ. ನಿಮ್ಮ ಹಸುವಿನ ಕೊಟ್ಟಿಗೆಗೆ ಬೆಂಕಿ ಬಿದ್ದಿದೆಯಂತೆ....ನೀನು ಮನೆಗೆ ಹೋಗಬೇಕ ಹೇಗೆ?"

"ಹಸುಗಳಿಗೆ ಏನೂ ಆಗಿರಲಾರದು ಅಲ್ಲವೇ?"

ಸಂಕಟ-ಕಾತರಗಳ ಸಂಮಿಶ್ರಣವಾದ ದನಿ ಗದ್ಗದವಾಯಿತು ಕೂಡ.

"ಹೆಚ್ಚಿನ ವಿಷಯ ತಿಳಿಯದು. ಬಾ, ಹೋಗೋಣ."

"ಅಯ್ಯೋ, ದೇವರೆ! ರಾತ್ರಿಯೆಲ್ಲಾ ನಾನು ಸಂಕಟ ಪಟ್ಟದ್ದು ಇದಕ್ಕೇ ಇರಬೇಕು!"

"ಇಂತಹ ಸಂದರ್ಭದಲ್ಲಿ ಧೈರ್ಯಗೆಡಬಾರದು ಮಗೂ!"

ರವಿ ಚಂದಾನಿ ಅವಳನ್ನು ತಬ್ಬಿ ಹಿಡಿದುಕೊಂಡು ಸಂತೈಸಿದ.

ಬಾಂಕೇವಾಡಿ ಅಂಗಡಿ ಮನೆಯ ದಪ್ಪದಪ್ಪ ಗೋಡೆಗಳು ಮಾತ್ರ ಉಳಿದು ಸುಟ್ಟುಕರ್ರಗೆಕರಿಕಲಾಗಿ ಕಂಡು ಬರುವ ದೃಶ್ಯ! ಶೇಷಾವಶೇಷದಲ್ಲಿ ಹಿತ್ತಾಳೆ ತಾಮ್ರಗಳ ದೊಡ್ಡ ದೊಡ್ಡ ಪಾತ್ರೆಗಳು ಕರಗಿ ಗಟ್ಟಿಯಾದ ವಸ್ತುವಿನಾ ಮತ್ತೆಲ್ಲಾ ನಿರ್ನಾಮ. ಮನೆಯಲ್ಲಿ ಮಲಗಿದ್ದವರು ಹದಿನೈದು ಮಂದಿ. ಸಿಕ್ಕಿದ ಶವ ಹದಿನಾಲ್ಕು ಮಾತ್ರ. ಇನ್ನೊಂದು ಶವ ಅಥವಾ ವ್ಯಕ್ತಿ ಪಾರಾದುದು ಹೇಗೆ ? ಎಂಬುದೊಂದಾದರೆ ಹೊರಹೋದ ವ್ಯಕ್ತಿಯೇ ಬೆಂಕಿ ಹಚ್ಚಿರಬಹುದೇ ಎಂಬ ಪ್ರಶ್ನೆಯೂ ಏಳುತ್ತದೆ. ಪ್ರತ್ಯಕ್ಷ ದರ್ಶಿಗಳಾರೂ ಇಲ್ಲದ ಪ್ರಯುಕ್ತ ಸಮಸ್ಯೆ ಗೂಢಾತಿಗೂಢ.

ಹದಿನಾಲ್ಕು ಶವಗಳನ್ನು ತೆಗೆದು ಸಾಲಾಗಿ ಮಲಗಿಸಿದ್ದಾರೆ. ಅದರಲ್ಲಿ ಒಬ್ಬರ ಗುರುತೂ ಹತ್ತುವಂತಿಲ್ಲ. ಆ ಶವಗಳಿಗೆ ಹೊದಿಸಲು ಒಂದಿಂಚು ಬಟ್ಟೆಯೂ ಉಳಿದಿರಲಿಲ್ಲವಾದ್ದರಿಂದ ನೆರೆಹೊರೆಯವರಾರೋ ದುಪ್ಪಟಿಗಳನ್ನು ತಂದು ಹೊದಿಸಿದ್ದರು.

ಮನೋನ್ಮಣಿಗೆ ಪ್ರಜ್ಞೆಯೇ ಇಲ್ಲ.

ಸುಶೀ ಮತ್ತು ಅವಳ ತಾಯಿ ಅಲಕಳಿಗೆ ಬೇರೆ ದಾರಿ ಕಾಣದೇ ಅವಳನ್ನು ತಕ್ಷಣವೇ ಮನೆಗೆ ಸಾಗಿಸಿದರು.

ಊರಿನ ಜನಕೋಟಿಯೆಲ್ಲಾ ಎಳೆ ಸೇರಿಸಿ ಹೊಸೆದಂತೆ ಅಂಗಡಿ ಮನೆಯ

ಅಂಗಣಕ್ಕೆ ಬರುತ್ತಲೇ ಇದ್ದಾರೆ. ಪ್ರತಿಯೊಬ್ಬರ ಹೃನ್ಮನವೂ ಸೀಳಿ ಛಿದ್ರ ಛಿದ್ರವಾಗುವಂತಹ ಭಯಂಕರ ಸನ್ನಿವೇಶ! ಇಡೀ ಆಸ್ತಿ ಪಾಸ್ತಿಗೆ ಬೆಂಕಿ ತಗುಲಿದ್ದು ಆಕಸ್ಮಿಕ ಅಲ್ಲವೇ ಅಲ್ಲ. ಯಾರೋ ದುರಾತ್ಮರು ಮಾಡಿದ ಕೆಲಸ ಇದು....ಎಂಬುದು ಪ್ರತಿಯೊಬ್ಬರ ಅಭಿಪ್ರಾಯ.

ಪೋಲಿಸರು ತನಿಖೆಯ ಅಂಕ ಆರಂಭಿಸಿದ್ದಾರೆ.

ಖುದೀರಾಮನ ಒಬ್ಬಳೇ ತಂಗಿಯಾದ ನೀಲಮಣಿ ತನ್ನಿಬ್ಬರು ಗಂಡು ಮಕ್ಕಳೊಂದಿಗೆ ಗೋಳಾಡಿ ಅಳುತ್ತಿದ್ದಾಳೆ. ಮೊದಲೇ ಪತಿಯನ್ನು ಕಳೆದುಕೊಂಡು ನಿರ್ಗತಿಕಳಾಗಿದ್ದ ಅವಳು ಒಡಲ ಸಂಕಟ ತಾಳಲಾರದೆ ಅಳುತಿದ್ದ ರೀತಿ ತೋಡಿಕೊಳ್ಳುತಿದ್ದ ಸಂಕಟ ಅತ್ಯಂತ ಕರುಣಾಜನಕ. ಊರ ಮಂದಿಯಲ್ಲಿಯೂ ಕಂಬನಿ ಚೆಲ್ಲದವರಿಲ್ಲ. ಅಳು....ಅಳು. ಅಳುವಿನ ರಣಗೋಳು ವಿನಾ ಮೂಲ ಕಾರಣ ಕಂಡುಕೊಂಡವರಿಲ್ಲ. ಮನಃಭ್ರಾಂತಿಯಿಂದ ಮತಿಶೂನ್ಯ! ದೈವಶೂನ್ಯ! ಧರ್ಮಶೂನ್ಯ!

೪

ಕಾಲಧರ್ಮನ ರುದ್ರಲೀಲೆಯಲ್ಲಿ ಮೂರು ದಿನಗಳು ಕೊಚ್ಚಿ ಹೋದುವು.

ದಿನಮಾನ ಅಳಿದರೂ ದುಃಖದ ಸುಯ್ಲು ಅಳಿಯಲಿಲ್ಲ. ಉಕ್ಕಿದ ಕಣ್ಣೀರು ಆರಲಿಲ್ಲ.

ಸರಕಾರ ತನಿಖೆಯ ಸೂತ್ರ ಹಿಡಿದರೂ ಆರೋಪಿಗಳು ಪತ್ತೆಯೇ ಇಲ್ಲ. ನೆರೆಹೊರೆಯವರು ಯಾರ್‍ಯಾರ ಮೇಲೆ ಸಂಶಯ ವ್ಯಕ್ತಪಡಿಸಿದ್ದರೋ ಅವರೆಲ್ಲಾ ಸುಖವಾಗಿ ಹಾಯಾಗಿ ಓಡಾಡಿಕೊಂಡಿದ್ದಾರೆ. ಯಾರ ದಸ್ತಗಿರಿಯೂ ಆಗಲಿಲ್ಲ.

ಪ್ರಜ್ಞೆ ಬರುವುದು-ಹೋಗುವುದು-ಎಚ್ಚರವಾದಾಗ ಪರಿತಪಿಸುವುದು ಹೀಗಿತ್ತು ಮನೋನ್ಮಣಿಯ ಪರಿಸ್ಥಿತಿ. ಒಂದು ತುತ್ತು ತಿನ್ನಿಸಬೇಕಾದರೂ ಕಣ್ಣೀರಿನ ರಣ ಗೋಳು.

ರವಿ ಚಂದಾನಿ ದಂಪತಿಗಳಿಗೆ ಅನಗತ್ಯವಾದ ಸಂಕಟ. ಹಾಗೆಂದು ತಳ್ಳಿಹಾಕುವಂತಿಲ್ಲ. ತಬ್ಬಲಿ ಹುಡುಗಿಗೊಂದು ದಿಕ್ಕಾಗುವ ಚಿಂತನೆಯಿಂದಲೇ ಅವಳನ್ನು ಸಂತೈಸಿ ಧೈರ್ಯ ತುಂಬುತ್ತಿದ್ದರೂ ಹುಡುಗಿ ಚೇತರಿಸಿಕೊಳ್ಳಲಿಲ್ಲ.

ಕಾನ್ವೆಂಟಿನಿಂದ ಮದರ್ ಸಿಲ್ವಿಯಾ ಮದರ್ ಬೆಟ್ಟಿಯೊಡನೆ ಬಂದು ತಲೆಯನ್ನು ನೇವರಿಸಿ ಮುದ್ದುಗೈದು ''ಬೇಟಿ! ನೀನು ಖಂಡಿತ ಹೀಗಿರಬಾರದು ಜೀವಶ್ಶವ ವಾಗಿದೀಯೆ! ಈ ಜಗತ್ತು ವಿಶಾಲವಾಗಿದೆ. ಎಲ್ಲಾದರೂ ಬದುಕಬಹುದು. ಯಾರಿಲ್ಲದಿದ್ದರೂ ಜೀವನ ನಡೆಯುತ್ತೆ. ಮುಖ್ಯವಾಗಿ ಧೈರ್ಯವಾಗಿರು; ಎದೆಗೆಡಬೇಡ.''

''ಮದರ್! ನನ್ನ ಬದುಕಿನಿಂದ ಆಗುವುದೇನು ? ಆಂಟಿಗೆ ಒಂದು ಗುಟುಕು ವಿಷಕೊಟ್ಟು ಬಿಡಿ ಎಂದು ಅಂಗಲಾಚಿದೆ.... ಅವರು ಮನಸ್ಸು ಮಾಡುತ್ತಿಲ್ಲ. ನನಗೆ ಈ ಬದುಕು ಖಂಡಿತ ಬೇಡವಾಗಿದೆ.... ನಾನು ಬದುಕಲಾರೆ.... ನಮ್ಮವರಿಗಿಲ್ಲದ ಬದುಕು ನನಗೇಕೆ ?''

ದುಃಖ ಸಂಕಟಗಳ ಹಣಾಹಣಿಯಲ್ಲಿ ಮಾತು ಹೊರಡುವುದೂ ಕಷ್ಟವೇ. ಕೊರಗಿ ಸೊರಗಿ ಅರ್ಧವಾಗಿದ್ದಾಳೆ. ಕಪ್ಪಿಟ್ಟ ಮುಖ, ಒಣಗಿ ಶುಷ್ಕವಾದ ತುಟಿಗಳು, ಗುಳಿಬಿದ್ದ ಕಣ್ಣುಗಳು, ದೈನ್ಯವೇ ಮೂರ್ತಿಯೆತ್ತಿ ಬಂದಂತಿದ್ದ ಕರುಣಾಜನಕ ಸ್ಥಿತಿ. ಮಾತೃಕೆಯ ಕಣ್ಣುಗಳಲ್ಲಿ ಹನಿಮೂಡಿ ಧವಳ ಕಾಂತಿಯ ಮುಖಬಿಂಬ ಕೆಂಪು ತಳೆಯಿತು. ಮರುಗಳಿಗೆಯಲ್ಲಿ ತನ್ನನ್ನು ತಾನು ಸಾವರಿಸಿಕೊಂಡು ಅವಳನ್ನು ಎಬ್ಬಿಸಿ ಕೂಡಿಸಿ ಎದೆಗಪ್ಪಿಕೊಂಡು ಅನುನಯದಿಂದ ಪ್ರೀತಿಪೂರ್ವಕವಾಗಿ ಕಂಬನಿಯನ್ನು ತೀಡಿ ತಲೆಯನ್ನು ನೇವರಿಸಿ, ನುಡಿದಳು,

''ಇಗೋ, ಈ ಹಾಲನ್ನು ಕುಡಿ ಮಗೂ!''

''ಯಾವ ಸಂತೋಷಕ್ಕೆ ಅಮೃತ ಕುಡಿಯಲಿ ಮದರ್?''

''ಸಂತೋಷಕ್ಕಲ್ಲ, ದೇಹಧಾರಣೆಗೆ ಮಗೂ.''

''ಈ ದೇಹದಿಂದಲ್ಲವೇ ಸಂಕಟ ? ಇದಿಲ್ಲದಿದ್ದರೆ ಎಲ್ಲಾ ತಣ್ಣಗೆ''

''ಮಾನವ ಜನ್ಮ ವ್ಯರ್ಥವಾಗಬಾರದು ಮಗೂ!''

''ನಾನು ಈಗ ಹಾಗೆಂದು ಭಾವಿಸುವುದೇ ಇಲ್ಲ. ಇಡೀ ಕುಟುಂಬವನ್ನು ಹುಲ್ಲು ಸುಟ್ಟಂತೆ ಸುಟ್ಟರಲ್ಲಾ, ಇದರಲೆಲ್ಲಿದೆ ಮಹತ್ವ ?''

ಸೀಳಿ ವಿದೀರ್ಣವಾದ ಕಂಠದಿಂದ ಮಾತು ಹೊರಡಲಾರದೇ ಹೊರಟಾಗ ಎರಡೂ ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿದು ಹೋಯಿತು. ದುಃಖತಪ್ತ ಮುಖಬಿಂಬ ಸುಟ್ಟಂತೆ ಬಾಡಿದ್ದು ಕಣ್ಣು ತೆರೆಯಲಾರದೆ ಮುಚ್ಚಿಕೊಂಡುವು. ಕೂಡಲೂ ಶಕ್ತಿಯಿಲ್ಲ, ಮಾತಾಡಲೂ ಶಕ್ತಿಯಿಲ್ಲ. ಕಾಹಿಲೆ ಬಿದ್ದುದಕ್ಕಿಂತ ಹೆಚ್ಚಿನ ಬಳಲಿಕೆ. ದುಃಖವನ್ನೂ ದುಃಖಿತಗೊಳಿಸುವಂತಹ ಸನ್ನಿವೇಶ.

ರವಿ ಚಂದಾನಿ, ಅಲಕಾ ಚಂದಾನಿ, ಸುಶೀ, ಇನ್ನಿಬ್ಬರು ಗೆಳತಿಯರು ಮದರ್‌ಗಳು ಎಲ್ಲರೂ ಸುತ್ತುವರಿದಿದ್ದರೂ ಲೌಕಿಕ ಪ್ರಜ್ಞೆ ಇದ್ದಂತೆಯೇ ಇಲ್ಲ. ಈ ಯಾರ ತಡೆಯಿಲ್ಲದಿದ್ದರೇ....? ಭಗವಂತ ನನ್ನ ಸುತ್ತ ಮುತ್ತ ಏಕೆ ಬೇಲಿ ನಿರ್ಮಿಸಿದ ಎಂಬುದು ಅರ್ಥವಾಗದ ವಿಷಯ; ಬಗೆ ಹರಿಯದ ಸಮಸ್ಯೆ. ದುಃಖದ ಮಹಾಪೂರದಿಂದ ಯೋಚನೆಯಲೆಗಳು ಸ್ತಬ್ಧ.

''ಮಾನವ ಜನ್ಮ ಅಮೂಲ್ಯವಾದುದು. ಮುಂದಿನ ಸಾಲಿಗೆ ಈ ಉತ್ತಮೋತ್ತಮ ಜನ್ಮ ಲಭಿಸುತ್ತೆ ಎಂದುಕೊಳ್ಳಬೇಡ; ಇದನ್ನು ಅಲಕ್ಷಿಸಿದೆಯಾದರೆ ಎಂದೆಂದೂ ವಿಷಾದಿಸಬೇಕಾದ ಪ್ರಸಂಗ ಬರುತ್ತದೆ. ಈಗ ನಿನಗೆ ಅರ್ಥವಾಗುವುದಿಲ್ಲ. ದುಃಖದ ಮಂಪರ ಚಿತ್ತವನ್ನು ಮುಚ್ಚಿಬಿಟ್ಟಿದೆ. ಈಗ ಸುಧಾರಿಸಿಕೊಂಡರೆ ಮುಂದೆ ಸುಖ ಲಭಿಸುತ್ತೆ ಎಂಬುದನ್ನು ಮರೆಯಬೇಡ. ಭಗವಂತ ನಿನ್ನೊಬ್ಬಳನ್ನೇ ಉಳಿಸಿರಬೇಕಾದರೆ ಏನೋ ಉದ್ದೇಶವಿರಲೇ ಬೇಕು. ಅದನ್ನೂ ಸಹ ಅರ್ಥ ಮಾಡಿಕೊ. ಅವನ ಉದ್ದೇಶಕ್ಕೆ ನಾವು ವಿರುದ್ಧವಾಗಿ ವರ್ತಿಸಬಾರದು ಕಂಡೆಯಾ ?''

ಮದರ್ ಸಿಲ್ವಿಯಾ ಹೃದಯಾಂತರಾಳದಿಂದ ಬಲ್ಮೆಯ ತನಿರಸವನ್ನು ಹರಿಸಿದಳು.

ಸುತ್ತುವರಿದವರೆಲ್ಲಾ ಮತ್ತೆ ಮತ್ತೆ ಪುನಃ ಪುನಃ ಅದೇ ಧಾಟಿಯಲ್ಲಿ ಸಂತೈಸಿದರು.

ಆದರೆ, ಅದು ಎಲ್ಲೆಲ್ಲಿ ಯಾವ ಯಾವ ಕಡೆ ಸೋರಿ ಹೋಯಿತೋ, ಕರ್ಣಪಟಲಗಳಿಗೆ ತಾಗಲೇ ಇಲ್ಲವೇನೋ ಎಂಬಷ್ಟು ಮಂಪರ ಮನಃಬುದ್ಧಿಗಳಲ್ಲಿ ಕುಳಿತವಳು ಹಾಗೇ ಹಿಂದಕ್ಕೊರಗಿದಳು ಕತ್ತರಿಸಿದ ಬಳ್ಳಿಯಂತೆ.

ಅಂದಿನಿಂದ ಸ್ನಾನ ಕಂಡಿಲ್ಲ; ಒಂದು ಸರಿಯಾದ ಊಟ ಮಾಡಿಲ್ಲ. ಬಲವಂತದ ಉಣಿಸು ತಿನಿಸುವುದೇ ಜೀವಾಧಾರ.

ಮದರ್ ಸಿಲ್ವಿಯಾ ಅವಳನ್ನು ಪುನಃ ಎತ್ತಿ ಕುಳ್ಳಿರಿಸಿ ಒಂದು ಲೋಟ ಹಾಲನ್ನು ಕುಡಿಸಿದಳು. ಒಣಗಿದ ಗಂಟಲಲ್ಲಿ ಅದು ಇಳಿಯಬೇಕಾದರೆ ಅದೆಷ್ಟು ಹೊತ್ತು ಹಿಡಿಯಿತೋ. ಅನಂತರ ಅವಳಿಗೆ ಸ್ನಾನ ಮಾಡಿಸಿ ಮಡಿ ಬಟ್ಟೆ ಕೊಟ್ಟಳು ಸಿಲ್ವಿಯಾ.

ಹೊತ್ತು ಉರುಳಿತು. ಸಂಜೆ ಹೆಜ್ಜೆಯಿಡುತ್ತಿದೆ.

ಮದರ್ ಸಿಲ್ವಿಯಾ ಮನೋನ್ಮಣಿಗೆ ಹೇಳುವಷ್ಟು ಹೇಳಿ ತನ್ನ ತಂಡದೊಂದಿಗೆ ಕಾನ್ವೆಂಟಿಗೆ ಹೊರಟಳು. ಅವರೊಂದಿಗೆ ಇನ್ನಿಬ್ಬರು ಗೆಳತಿಯರೂ ತಮ್ಮ ತಮ್ಮ ಹಾದಿ ಹಿಡಿದರು.

ಮನೋನ್ಮಣಿಗೆ ಕಣ್ಣುಬಿಟ್ಟರೂ ಕಣ್ಣು ಮುಚ್ಚಿದರೂ ಅಂತಃಪಟಲದ ಮೇಲೆ ನಲಿಯುವುದು ಅದೊಂದೇ; ಸುಟ್ಟು ಕರಿಕಲಾದ ಘೋರಾತಿ ಘೋರ ಪ್ರಕರಣ...

* * *

ಅಭಿಜಿನ್ ಮುಹೂರ್ತ, ತಣ್ಗದಿರನ ಕದ್ದಿಂಗಳ ತನಿ ಬೆಳಕಿನ ಹರವು.

ತಂಗಾಳಿಯ ಮನಮೋಹನೀಯ ಚಾಮರಸೇವಾಕೈಂಕರ್ಯ ಮೈಮನ ಮುದ್ದಿಸುವಷ್ಟು ಹಿತ. ಅಭಿಲೇಖಿಸಬಹುದಾದಷ್ಟು ತಂಪಿನಾಗರ.

ಮನೋನ್ಮಣಿ ಹಾಸಿಗೆಯಿಂದೆದ್ದು, ಮೆಲ್ಲಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು, ದೀಪ ಹಚ್ಚದೆ ಹಿತ್ತಿಲ ಬಾಗಿಲನ್ನು ಕೈಗಳಿಂದ ತಡುಕಿ ನೋಡಿ ಸದ್ದಾಗದಷ್ಟು ಸೂಕ್ಷ್ಮವಾಗಿ ತೆರೆದು ಹೊರಬಿದ್ದಳು. ಆವುದೋ ಶಕ್ತಿ ಹೆಜ್ಜೆ ಹೆಜ್ಜೆಗೂ ಮುನ್ನೂಂಕಿ ನಡೆಸುತ್ತಿದೆ. ತಾನು ಕನಸಿನಲ್ಲಿ ಕಂಡದ್ದೇನು? ದೊಡ್ಡಪ್ಪ-ದೊಡ್ಡಮ್ಮ, ಅಪ್ಪ-ಅಮ್ಮ "ನೀನಲ್ಲಿ ಒಬ್ಬಳೇ ಇರುವುದು ಬೇಡ. ನಮ್ಮ ಜೊತೆಗೆ ಇರಬಹುದು. ಹೀಗೇ ಬಾ. ಬಂದ್ಬಿಡು. ಬಾ ಮಗಳೇ! ನಿನಗೇಕೆ ಧೂರ್ತ ಪ್ರಪಂಚದ ಅಭಿರಕ್ಷೆ? ಒಂದಲ್ಲ, ಒಂದು ದಿನ ನಮ್ಮಂತೆಯೇ ಬಾಳು ಹರಿದುಕೊಳ್ಳಬೇಕು. ಅದಕ್ಕಿಂತ ಈಗಲೇ ಹೊರಟು ಬಾ!"

ನಾಲ್ಕೂ ಮಂದಿ ಎರಡೂ ಕೈಗಳನ್ನು ನೀಡಿ ಸ್ವಾಗತಿಸುತಿದ್ದಾರೆ. ಅವರ ನೆನಪು ಹಸಿ ಇರುವಾಗಲೇ ನಾನು ಅವರನ್ನು ಸೇರಬೇಕೇ ಹೊರತು ಅನಂತರ ಏನು ಪ್ರಯೋಜನ !

ದೇಹ ಗಾಳಿಯಲ್ಲಿ ತೇಲುವಷ್ಟು ಹಗುರ. ಮನಃಚಿತ್ತಗಳಲ್ಲಿ ತನ್ನವರ ಹೊರತು ಮತ್ತೊಂದಿಲ್ಲ. ಅಂತಲೇ ಕಾಲುಗಳಿಗೆ ಆದಮ್ಯ ಶಕ್ತಿ. ಮನೆಯ ಮುಂಗಡೆಯಲ್ಲಿ ಮಲಗಿದ್ದ ನಾಯಿಗಳಿಗೆ ಆ ಕ್ಷಣವೇ ತಿಳಿಯಬೇಕೆ? ಅವು ಓಡುತ್ತಲೇ ಬಂದು ಸುತ್ತುವರಿದುವು. ಆಗಲೇ ಕೆರೆಯ ಸನಿಹಕ್ಕೆ ಬಂದಾಗಿದೆ, ಆ ನಾಯಿಗಳ ತಡೆಯಿಲ್ಲದಿದ್ದಲ್ಲಿ ಇಷ್ಟರೊಳಗಾಗಿ ಓಡುತ್ತಲೇ ಹೋಗಿ ಬೀಳಬಹುದಾಗಿತ್ತು....

ನಾಯಿಗಳ ಬೊಗಳಾಟ, ಹುಡುಗಿಯ ಪರದಾಟವನ್ನು ಕಿಟಿಕಿಯಲ್ಲಿ ತಲೆ ಹಾಕಿ ನೋಡಿದ ರವಿ ಚಂದಾನಿ ಓಡುತ್ತಲೇ ಬಂದು ತೋಳು ಹಿಡಿದುಕೊಂಡು "ಓ, ಮೈ ಕಿಡ್! ಇದೇನು ಮಾಡುತ್ತಿರುವೆ? ದೈವದತ್ತ ಶರೀರವನ್ನು ನೀನು ಬಿಸಾಡಬಾರದು. ಈಗ ನಿನ್ನನ್ನು ನೀನೇ ಅರ್ಥಮಾಡಿಕೊಳ್ಳಬೇಕು. ನೀನು ಅಷ್ಟು ಪ್ರಾಜ್ಞಳಿದ್ದೂ ಈ ಅಕಾರ್ಯ ಕೈಕೊಂಡುದು ಖಂಡಿತ ತಪ್ಪು!"

ಚಂದಾನಿಯ ದಟ್ಟಪುಷ್ಟವಾದ ಕೈಗಳು ಅಪ್ಪಿ ಹಿಡಿದಾಗ ಅವಳು ನಿಸ್ಸಹಾಯಕಿ.

ಕೆಲವೇ ಹೆಜ್ಜೆಗಳ ದೂರದಲ್ಲಿ ಈ ಥಳಥಳಿಸುವ ಕೆರೆಯ ನೀರಿನಲ್ಲಿ ಮಿನಿಮಿನುಗುವ ನಕ್ಷತ್ರಲೋಕ ಅರ್ಧಚಂದ್ರಮ ಎಲ್ಲಾ ಇದ್ದಾರೆ ಎಷ್ಟು ಸುಂದರವಾದ ಲೋಕ...? ನಾನು ಸುಖವಾಗಿ ಹೋಗಬಹುದಾಗಿತ್ತು ಆದರೆ ನನಗೆ ಈ ನಾಯಿಗಳೂ ಅಡ್ಡ ಬರಬೇಕೆ? ಎಲ್ಲರ ಬದುಕೂ ಇದ್ದಷ್ಟು ಸರಾಗ ನನ್ನದೇಕಿಲ್ಲ?

''ಓ, ಅಂಕಲ್!'' ಮುಸಿ ಮುಸಿ ಅತ್ತಳು ಮನೋನ್ಮಣಿ.

* * *

''ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಂ''

''ಪೀರ್ ಮತ್ತು ಅಬ್ದುಲ್ಲಾ ಈ ಹೀನ ಕೃತ್ಯಕ್ಕೆ ಕಾರಣರು. ಅವರು ಮೂರು ವರ್ಷ ಕೆಲಸ ಮಾಡಿದ್ದರೆ ಕೈ ತುಂಬ ಸಂಬಳ ತೆಗೆದುಕೊಂಡಿದ್ದಾರೆ. ಅದು ಊರಿಗೆ ಊರೇ ತಿಳಿದ ವಿಷಯ. ಕೆಲಸ ಬಿಡಿಸಿದ ಕಾರಣಕ್ಕಾಗಿ ದ್ವೇಷಸಾಧನೆ. ಅಂದು ನನ್ನ ಮುಂದೆಯೇ ಕೆಲಸ ಬಿಡಿಸಿದ್ದಕ್ಕೆ ರೇಗಾಡುತ್ತಿದ್ದ ಅಬ್ದುಲ್ಲಾ; ಅವರಿಗೆ ಪ್ರಚೋದನೆ ಯಿದೆ; ಅಭಿರಕ್ಷೆಯಿದೆ. ಊರೆಲ್ಲಾ ಇವರೇ ಮಾಡಿದ ಕೆಲಸ ಎಂದು ಬಹಿರಂಗವಾಗಿ ಹೇಳುತ್ತಿದ್ದರೂ ಈವರೆಗೆ ಯಾರನ್ನೂ ಅರೆಸ್ಟು ಮಾಡಲಿಲ್ಲ ಪೋಲೀಸರು. ಸುಮ್ಮನೆ ಪಂಚನಾಮೆ ತನಿಖೆಗಳ ನಾಟಕ ಆಡಿದರು. ಸರಕಾರದ ಉನ್ನತ ಕಛೇರಿಗಳು ಸಾಬರ ಅಧೀನದಲ್ಲಿವೆ. ಅಂದಮೇಲೆ ಎಲ್ಲಿಯ ನ್ಯಾಯ? ಇದನ್ನೆಲ್ಲಾ ತಿಳಿದೂ ತಿಳಿದೂ ನಮ್ಮವರು ಸುಮ್ಮನಿದ್ದಾರೆ. ಯಾರೂ ಕೇಳುವವರಿಲ್ಲ. ತಾಮ್ರ ಹಿತ್ತಾಳೆ ಗಟ್ಟಿಗಳನ್ನು ಯಾರ್‍ಯಾರೋ ಹೊತ್ತಿದ್ದಾರೆ. ಸುಟ್ಟುಳಿದ ವಸ್ತುಗಳು ಇಲ್ಲವೇ ಇಲ್ಲ. ಅಲ್ಲಿಗೊಂದು ಪೋಲೀಸ್ ಕಾವಲೂ ಇಲ್ಲ. ಅಣ್ಣ ಆ ಆಳು ಮಕ್ಕಳನ್ನು ಕೆಲಸಕ್ಕಿಟ್ಟು ಕೊಂಡಾಗಲೇ ನಾನೊಮ್ಮೆ ಹೇಳಿದ್ದೆ 'ಹಾವಿಗೆ ಹಾಲೆರೆಯುವುದು ಒಳ್ಳೆಯದಲ್ಲ' ಎಂದು. ಅಣ್ಣ ನನ್ನ ಮಾತನ್ನು ಲಕ್ಷಿಸಲಿಲ್ಲ. ಎಲ್ಲರೂ ನಮ್ಮಂತೆಯೇ ಎಂದು ಉದಾರಭಾವ ತೋರಿಸಿದಕ್ಕೆ ಆದ ಉಪಕಾರ ಇದು....''

ನೀಲಮಣಿ ಅಳುತ್ತಳುತ್ತಲೆ ಒಡಲ ಸಂಕಟವನ್ನು ತೋಡಿಕೊಂಡು ಮನೋನ್ಮಣಿಯನ್ನು ಇನ್ನಷ್ಟು ದುಃಖದ ಕೋಟೆಯಲ್ಲಿ ಬಂಧಿಸಿದಳು. ಅಜ್ಞಳಾದ ಆಕೆಗೆ ಹುಡುಗಿಯ ಹೂ ಮನವನ್ನು ಅರಿತು ನಡೆಯುವ ಶಕ್ತಿಯೂ ಇಲ್ಲ. ಧೈರ್ಯತುಂಬುವ ಜ್ಞಾನವೂ ಇಲ್ಲ.

ಆಕೆ ಕಲಿತವಳಲ್ಲ. ಶಾಲೆಗೂ ಅವಳಿಗೂ ಮೈಲಿ ಮೈಲಿ ಅಂತರ. ಅಡ್ಡಾದಿಡ್ಡಿ ಬದುಕು. ಗಂಡ ಬಿಟ್ಟುಹೋದ ಅಷ್ಟಿಷ್ಟರಲ್ಲೇ ಜೀವನ. ಮಕ್ಕಳಿಬ್ಬರೂ ಹುಟ್ಟಾ

ಪೋಲಿಗಳು. ಗೊತ್ತು ಗುರಿಯಿಲ್ಲದ ಬಾಳು ನರಕ ಸದೃಶ. ಹದ್ದುಮೀರಿದ ಮಕ್ಕಳನ್ನು ಸುಧಾರಿಸಲಾರದೆ ಕಂಬನಿಯ ಕಡಲಲ್ಲಿ ಮಳುಗೇಳುವುದರಿಂದ ಕಣ್ಣುಗಳ ರಂಗು ಮಾಸುವುದೇ ಇಲ್ಲ. ಅವಳ ಶೀರ್ಣ ಜೀರ್ಣಿತ ಶರೀರ ಮತ್ತು ಸ್ಥಿತಿಗತಿ ನರಕಕ್ಕೂ ಹೊರಗೆ.

ಅಲಕಾ ಚಂದಾನಿ ''ನೀವು ದುಃಖಿಸಿ ಮಗವನ್ನೂ ದುಃಖ ಪಡಿಸುತ್ತೀರಿ. ಇನ್ನಳುವುದರಿಂದ ಪ್ರಯೋಜನವೇನೂ ಇಲ್ಲ. ನೀವು ಮುಖ್ಯವಾಗಿ ಮಗುವಿಗೆ ಧೈರ್ಯತುಂಬಬೇಕು; ದುಃಖವನ್ನಲ್ಲ'' ಎಂದು ಹೇಳಿಕೊಂಡಳು ಕೂಡ.

ಅದು ಅಜ್ಜಳತಲೆಗೆ ಹೋಗಬೇಕಲ್ಲ.... ಅಳುತ್ತಲೇ ಹೇಳಿಕೊಂಡಳು, ''ಮನೋ ನೀನಿನ್ನು ನನ್ನ ಬಳಿಯೇ ಇದ್ದು ಬಿಡಮ್ಮಾ... ನನ್ನ ವಂಶದ ಕುಡಿ ನನಗೆ ಭಾರವಲ್ಲ. ನನ್ನ ತುತ್ತಿನಲ್ಲೇ ನಿನಗೂ ಒಂದಿಷ್ಟು ಪೂರೈಸುವೆ. ನೀನು ಅವರಿವರ ಬಳಿ ಏಕಾದರೂ ಇರಬೇಕು?''

''.......................''

''ಸಂಕೋಚ ಪಟ್ಟುಕೊಳ್ಳಬೇಡ. ನಾಳೆ ನಾಡಿದ್ದು ತಿಥಿ ಸಂಸ್ಕಾರಾದಿ ಪುಣ್ಯಕಾರ್ಯಗಳಿವೆ. ನೀನೇ ಪಿತೃಗಳಿಗೆ ಪಿಂಡಹಾಕಿ ಆತ್ಮಶಾಂತಿ ಕೋರಬೇಕು. ಒಲ್ಲೆ ಎನ್ನಬೇಡ.''

ಮನೋನ್ಮಣಿ ಬಾಗಿದ ತಲೆಯೆತ್ತಲಿಲ್ಲ. ದುಃಖದ ಮಹಾಪೂರ ಎದೆಯಾಳದಲ್ಲಿ ಧುಮುಧುಮಿಸಿತು. ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲು ಸರ್ವಸಹಸಾ ಪ್ರಯತ್ನಪಟ್ಟಳು ಅವಳು. ಹುಡುಗಿಯ ಸ್ಥಿತಿಗತಿಯನ್ನು ಗಮನಿಸಿದ ಅಲಕಾ ಚಂದಾನಿ ''ನೀವು ಇನ್ನು ಅವಳನ್ನು ಹೆಚ್ಚು ಮಾತಾಡಿಸಬೇಡಿ. ನೀವೂ ಅದೇ ವಂಶದ ಕುಡಿಯಾದ್ದರಿಂದ ನಿಮ್ಮ ಮಕ್ಕಳೊಂದಿಗೆ ತಿಥಿ ಕಾರ್ಯವನ್ನು ಕೈಕೊಳ್ಳಿರಿ. ನೀವು ಮಾಡುವುದರಿಂದ ತೊಂದರೆಯೇನೂ ಇಲ್ಲ.''

ಆ ಮಾತಿಗೆ ಸ್ವಲ್ಪ ಅಸಮಾಧಾನದಿಂದ ನುಡಿದಳು ಅವಳು ''ಹಾಗೆಂದರೆ ಹೇಗೆ?''

''ಯಾರು ಪೂರೈಸಿದರೂ ಒಂದೇ.''

''ಹಿಂದಿನ ಕುಡಿಗೂ ಇಂದಿನ ಕುಡಿಗೂ ವ್ಯತ್ಯಾಸವಿಲ್ಲ. ದಯವಿಟ್ಟು ನೀವು ಅವಳನ್ನು ಈಗ ಎಲ್ಲಿಗೂ ಕರೆಯಬೇಡಿ.''

ಆ ಮಾತು ಅವಳಿಗೆ ಸಮ್ಮತಿಯಾಗಲಿಲ್ಲ. ಮೇಲಾಗಿ, ಬಲಾತ್ಕಾರವೂ ಸಾಧ್ಯವಿಲ್ಲ. ತೀರಾ ನಿಸ್ಸಹಾಯಕತೆಯಿಂದ ಭಾರವಾದ ಹೆಜ್ಜೆಗಳನ್ನು ಎಳೆದುಕೊಳ್ಳುತ್ತ ಹೊರಟಳು

ನೀಲಮಣಿ. ಹೃದಯ ಕಲ್ಲು ಹೊತ್ತಂತೆ ಭಾರಾತಿಭಾರ. ಬಾಚಿ ಶುದ್ಧಿ ಮಾಡದ ಕೆದರು ಕೂದಲು. ಅಸ್ತವ್ಯಸ್ತವಾಗಿ ಸುತ್ತಿದ್ದ ಸೀರೆ, ರಸಹೀನವಾದ ಮುಖ, ಗುಳಿ ಬಿದ್ದ ಕಂಗಳು ಸ್ಥಿತಿಗತಿಯನ್ನು ಸಾರಿ ಹೇಳುತ್ತವೆ.

ಹಿಂದಿನಿಂದ ಅವಳನ್ನೇ ನಿಟ್ಟಿಸಿದ ನಯನದ್ವಯಗಲ್ಲಿ ಕಾರುಣ್ಯದ್ರವ್ಯ ಮಿನುಗಿತು. ಅಲಕಾ ನಿಟ್ಟುಸಿರು ಬಿಟ್ಟು. ''ಅದ್ಯಾಪಿ, ಹಿಂದೂಸ್ಥಾನದ ಜನ ಬೌದ್ಧಿಕ ದಾರಿದ್ರ್ಯ, ಆರ್ಥಿಕದಾರಿದ್ರ್ಯಗಳಿಂದ ಮಾತ್ರವಲ್ಲ; ಮಾನವೀಯ ದಾರಿದ್ರ್ಯ ದಿಂದಲೂ ನರಳುತಿದ್ದಾರೆ. ಇದು ತೀರಾ ದುರದೃಷ್ಟಕರ....'' ಎಂದುಕೊಂಡಾಗ ಹೆಂಗರುಳು ದೀರ್ಣವಿದೀರ್ಣವಾಯಿತು.

* * *

''ಬೇಟೀ!''

''ಮನೋ ಬೇಟೀ! ನೀನು ಇನ್ನೂ ಸುಧಾರಿಸಿಕೊಳ್ಳದಿರುವುದು ನಿಜಕ್ಕೂ ವಿಷಾದಕರ. ನಿನ್ನಿಂದಾಗಿ ಸುಶೀ ಕೂಡ ಶಾಲೆ ಬಿಟ್ಟಿದ್ದಾಳೆ. ಈ ದಿನ ನೀವಿಬ್ಬರೂ ಶಾಲೆಗೆ ಹೋಗಲೇಬೇಕು. ಆಯಿತೇ? ಇನ್ನೂ ಎಷ್ಟು ದಿನ ಹೀಗೆ?''

ಆ ಕಾತರಯುಕ್ತ ಮಾತುಗಳು ಎದೆಯಾಳಕ್ಕಿಳಿದುವು.

ಮನೋನ್ಮಣಿ ಎರಡೂ ಕೈಗಳಿಂದ ಮೊಣಕಾಲನ್ನು ಬಳಸಿ ಹಿಡಿದು ಶಿರೋಭಾರವನ್ನು ಮೊಣಕಾಲಮೇಲೆ ಇಳಿಸಿದ್ದು ಮಿಸುಕಾಡಲಿಲ್ಲ.

''ಇಲ್ಲಿ ಕೇಳು. ಇಂದು ಮದರ್ ಸಿಲ್ವಿಯಾ ಬರುತ್ತಾರೆ. ಅವರೊಂದಿಗೆ ನೀವಿಬ್ಬರೂ ಹೋಗಿ. ನನಗೆ ನಿನ್ನನ್ನು ಇಲ್ಲಿಟ್ಟುಕೊಳ್ಳಲು ಖಂಡಿತ ಸಮಾಧಾನವಿಲ್ಲ. ಪಕ್ಕದಲ್ಲೇ ಕೆರೆ, ಅಂದಿನ ನಿನ್ನ ಚಿತ್ರ ಕ್ಷಣಕ್ಷಣಕ್ಕೂ ಕಣ್ಣಿಗೆ ಕಟ್ಟುತ್ತದೆ. ಆದ್ದರಿಂದ ನೀನು ಕಾನ್ವೆಂಟಿನಲ್ಲಿರುವುದು ಕ್ಷೇಮ. ಅಲ್ಲಿ ಬಹಳ ಮಂದಿಯ ಸಹವಾಸ ದೊರೆಯುವುದರಿಂದ ಅಲ್ಲಿ ನೀನು ಚೇತರಿಸಿಕೊಳ್ಳುವ ಸಂಭವವಿದೆ. ಆದ್ದರಿಂದ ನೀನು ಅಲ್ಲೇ ಇದ್ದು ಓದನ್ನು ಮುಂದುವರಿಸು. ನೀನು ಸಂಪೂರ್ಣ ಮನಃಸ್ವಾಸ್ಥ್ಯ ಪಡೆದನಂತರ ಸುಶೀಯೊಂದಿಗೆ ಬರಬಹುದು. ಏನು ಹೇಳುತ್ತಿ?''

"ಅಂಕಲ್....!"

''ವಾಟ್ ಚೈಲ್ಡ್?''

''ಬೋರ್ಡಿಂಗ್‌ನಲ್ಲಿ ಎಲ್ಲಾ ಮಕ್ಕಳೂ ಖರ್ಚುವೆಚ್ಚ ಪೂರೈಸುತ್ತಾರೆ....ನಾನು?''

''ನೀನೇನೂ ಕೊಡಬೇಕಾಗಿಲ್ಲ...ಮುಂದೆ ನೀನು ಅಲ್ಲೆ ಸರ್ವಿಸ್ ಮಾಡಿದರಾಯಿತು.''

ವಿಷಯವನ್ನು ಮನದಲ್ಲೇ ಮೆಲಕು ಹಾಕಿದಳು ಮನೋ. ಸ್ತಬ್ಧವಾದ ಮನದಲೆಗಳಿಂದ ಯಾವೊಂದು ಇತ್ಯರ್ಥವೂ ಆಗಲಿಲ್ಲ. ಎದೆಯಾಳದಿಂದ ಬಿಸಿಯುಸಿರೊಂದು ಮಾತ್ರ ಹರಿದು ಬಂತು.

''ಹೆಣ್ಣು ಮಕ್ಕಳಿಗೆ ಅಭಿರಕ್ಷೆ ಇರಲೇಬೇಕು. ಮಾನಸಿಕ-ಬೌದ್ಧಿಕ ಸಂಪತ್ತಿ ಬೆಳೆಯುವ ತನಕ ಹೆಣ್ಣು ತಾನೇ ತಾನಾಗಿ ಬದುಕುವುದು ಕನಸಿನ ಗಂಟು. ಎಲ್ಲಿ ಅಬಲತೆಯೋ ಅಲ್ಲಿ ಗಂಡಾಂತರವಿದ್ದೇ ಇರುತ್ತದೆ. ಆದ್ದರಿಂದ ನಿನ್ನ ಒಳಿತಕ್ಕಾಗಿ ಮತ್ತು ನಮ್ಮ ಮನಸ್ಸಮಾಧಾನಕ್ಕಾಗಿ ನೀನು ಬೋರ್ಡಿಂಗಿನಲ್ಲಿರುವುದು ಸುಕ್ಷೇಮ.''

ಆ ದೀರ್ಘದೇಹಿ ತನ್ನೆರಡೂ ಕೈಗಳನ್ನು ಬೆನ್ನ ಹಿಂದೆ ಕಟ್ಟಿ ಅಲ್ಲಲ್ಲೇ ಪದಚಾರಣ ಮಾಡುತಿದ್ದರೆ ದೇವದಾರುವೇ ನಡೆಯುತಿದ್ದಂತೆ ಉದ್ಭಾಸವಾಯಿತು. ತನ್ನಂತಹ ಯಃಕಶ್ಚಿತಳಿಗಾಗಿ ಈ ಎಲ್ಲಾ ಮಂದಿಯೂ ಎಷ್ಟೊಂದು ಶ್ರಮ ವಹಿಸಿದ್ದಾರೆ....? ಇವರ ಮಾತನ್ನು ಅಮಾನ್ಯ ಮಾಡುವುದು ಎಷ್ಟೊಂದು ಹೀನಾಯ? ಎಷ್ಟೊಂದು ಉದ್ಧಟತನ? ಎನಿಸಿದಾಗ ದೇಹದಾದ್ಯಂತ ನಸು ಕಂಪನದ ಅಲೆ ಹರಿದಾಡಿ ಹೋಯಿತು. ಮರುಗಳಿಗೆಯಲ್ಲಿ ತನ್ನನ್ನು ತಾನು ಸುಧಾರಿಸಿಕೊಂಡು ''ಆಗಲಿ ಅಂಕಲ್!''

''ಅಚ್ಛಾ ಬೇಟ!''

ಅದೇ ಸಮಯದಲ್ಲಿ ತಲೆ ಬಾಗಿಲ ಕರೆ ಗಂಟೆ ಸದ್ದು ಮಾಡಿತು. ಟಿಂಗ್ ಟಾಂಗ್. ಟಿಂಗ್ ಟಾಂಗ್. ಟಿಂಗ್ ಟಾಂಗ್.

ರವಿ ಚಂದಾನಿ ಬಾಗಿಲು ತೆರೆದು ಮದರ್ ಸಿಲ್ವಿಯಾಳನ್ನು ಗೌರವದಿಂದ ಬರಮಾಡಿಕೊಂಡ.

''ಗುಡ್ ಮಾರ್ನಿಂಗ್ ಮದರ್!''

''ಗುಡ್ ಮಾರ್ನಿಂಗ್ ಮಿ ಚಂದಾನಿ!''

ಹಿಂದೆಯೇ ಒಳ ಹೆಜ್ಜೆಯಿಟ್ಟ ಮದರ್ ಜಾರ್ಜಿಯ ವಂದನೆ ಸಲ್ಲಿಸಿ ಪ್ರತಿವಂದನೆ ಪಡೆದಳು. ಅವರನ್ನು ಕಾಣುತ್ತಲೂ ಮನೋನ್ಮಣಿಯ ತುಟಿಗಳಲ್ಲಿ ಕಂಡು ಕಾಣದಂತಹ ನಸುನಗೆ ಮೂಡಿ ಮಾಯವಾಯಿತು. ಇಬ್ಬರೂ ಒಳಬಂದು ಮನೋನ್ಮಣಿಯನ್ನು ಕರೆದು ಬಳಿಯಲ್ಲಿ ಕುಳ್ಳಿರಿಸಿಕೊಂಡರು. ಒಳಗಡೆ ಶಾಲೆಗೆ ಹೊರಡಲು ತಯಾರಿ ನಡೆಸುತಿದ್ದ ಸುಶೀ ಹೊರಬಂದು ಮದರ್‌ಗಳಿಗೆ ವಂದಿಸಿ ''ಐದು ನಿಮಿಷದಲ್ಲೇ ಬರುವೆ.'' ಎಂದು ಕೇಳಿಕೊಂಡು ಪುನಃ ಒಳಗೋಡಿದಳು. ಅಲಕಾ ಚಂದಾನಿ ಎಲ್ಲರಿಗೂ ಕಾಫೀ ವಿನಿಯೋಗ ಮಾಡಿ ಸತ್ಕರಿಸಿದಳು. ಸ್ವಾಗತದ ಕುರುಹಾಗಿ ಎಲ್ಲರ

ಮುಖಬಿಂಬಗಳಲ್ಲೂ ಮಂದಹಾಸದ ಮಿನುಗು ಮೂಡಿದುದನ್ನು ಗಮನಿಸಿದ ಮನೋನ್ಮಣಿ ಸ್ವಲ್ಪ ಹರ್ಷಿತಳಾದಳು.

''ಇಲ್ಲಿಯವರೆಗಿನ ಕಾಲಮಾನ ಮುಗಿದ ಅಧ್ಯಾಯ. ಮುಂದಿನದನ್ನು ಮಾತ್ರ ಗಮನಿಸು ಮನೋ. ನೀನು ಮನಃಸ್ವಾಸ್ಥ್ಯ ಪಡೆದ ನಂತರ ಸುಶೀಯೊಂದಿಗೆ ಬಂದು ಹಾಯಾಗಿ ಇಲ್ಲಿ ಕಾಲ ಕಳೆ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ!'' ಎಂದು ಹಾರೈಸಿದಳು ಅಲಕಾ ಚಂದಾನಿ ತಲೆಯನ್ನು ನೇವರಿಸಿ ಗಲ್ಲವನ್ನು ಮುದ್ದಿಸುತ್ತ.

ಮನೋನ್ಮಣಿಯ ರುದ್ರಮೌನವೇ ಉತ್ತರವಾಯ್ತು. ಅಕ್ಷಿಪಟಲದ ಮೇಲೆ ಅಪ್ಪ ಅಮ್ಮ ಸುಳಿಸುಳಿದು ಮಾಯವಾದರು. ಎರಡೂ ಕಣ್ಣುಗಳನ್ನು ಮುಚ್ಚಿ ತನ್ನಲ್ಲೆ ನೋವನ್ನು ನುಂಗಿಕೊಂಡು ''ಹೊರಡಲೇ ಆಂಟಿ?'' ಎಂದಳು ಗದ್ಗದ ದನಿಯಲ್ಲಿ.

''ಆಗಲಿ ಮಗೂ!''

''ಬಿ ಬ್ರೇವ್ ಮೈ ಚೈಲ್ಡ್!''

ರವಿ ಚಂದಾನಿ ಮತ್ತು ಅಲಕಾ ಚಂದಾನಿ ಹರಸಿ ನಲ್ಮೆಯಿಂದ ಬೀಳ್ಕೊಟ್ಟರು. ಮದರ್ ಕೈ ಹಿಡಿದುಕೊಂಡು ನಡೆಯಲಾರದೇ ನಡೆದಳು ಮನೋನ್ಮಣಿ.

ಆ ದಾರಿ ಹರಿದಿರುವುದು ಬಾಂಕೀವಾಡಿಯ ತಮ್ಮ ಮನೆಯ ಮುಂದೆಯೇ. ಜೀವ ಇಲ್ಲಿಂದಲೇ ತಳಮಳಿಸಹತ್ತಿತು. ದೇಹದಾದ್ಯಂತ ಜಲ್ಲನೆ ಹರಿದಾಡುವ ಸಣ್ಣ ನಡುಕ. ಕಾಲುಗಳ ಶಕ್ತಿ ಉಡುಗಿ ದೇಹ ಕುಸಿಯುವಷ್ಟು ದೌರ್ಬಲ್ಯದ ಅನುಭವ. ಸುಟ್ಟುರಿದು ಕರಿಕಲಾದ ಇಡೀ ವಲಯ ದೃಷ್ಟಿಗೆ ಬಿತ್ತು. ನೋಡಬಾರದೆಂದು ಬಯಸಿದ್ದರೂ ಕಣ್ಣುಗಳು ವಂಚಿಸಿದುವು.... ಹರೇ ರಾಂ! ಇಲ್ಲೇ ನಮ್ಮವರೆಲ್ಲರ ಸಮಾಧಿ! ಹೇಗೆ ಜೀವಹಿಡಿಯಲಿ? ಓ....ಮದರ್!...ಬಿಕ್ಕಿದಳು ಮನೋನ್ಮಣಿ.

''ಏನು ಮಾಡೋಣ ಮಗಳೇ? ಈ ದಾರಿ ಬಿಟ್ಟರೆ ಬೇರೆ ದಾರಿಯೇ ಇಲ್ಲ. ಇನ್ನು ಸ್ವಲ್ಪ ದೂರ ನಡೆದರೆ ಈ ವಲಯದ ಗಡಿಯನ್ನು ದಾಟಿ ಬಿಡುತ್ತೇವೆ. ಸ್ವಲ್ಪ ಸೈರಿಸಿಕೊ.''

ಅಲ್ಲೇ ಅವರ ಗದ್ದೆಯ ಬದಿಯಲ್ಲಿ ಸಾಲಾಗಿನ ಹದಿನಾಲ್ಕು ಗೋರಿಗಳು... ಅವುಗಳ ಮೇಲೆ ಹೂವಿನ ಗುಚ್ಛಗಳು.... ಬಾಡಿ ಬತ್ತಿದ ಬಿಡಿ ಹೂಗಳು. ಹೂವಿನ ಹಾರ ಮುಂತಾದುವು ಕಂಡು ಬಂದವು. ಅಲ್ಲಲ್ಲಿ ಗರಿಕೆಯ ಹುಲ್ಲು ಹುಟ್ಟಿ ಜೀವನೀ ಶಕ್ತಿಯ ವಿಜಯ ಘೋಷವನ್ನು ಆಗಲೇ ಗೈದುದು ವಿಶೇಷ..ವರ್ಣರಂಜಿತ ಹೂಗಳ ಮಧ್ಯೆ ಗರಿಕೆಯ ಹುಲ್ಲು ಹರಡಿದ ಚಿತ್ತಾರ....

ಒಂದೆರಡು ಕ್ಷಣ ಕಣ್ಣುಗಳಿಗೆ ಮಂಜು ಕವಿದಂತಾಯಿತು. ಮನೋನ್ಮಣಿಗೆ ಅಲ್ಲಿಂದ ಹೆಜ್ಜೆ ತೆಗೆಯಲಾಗಲಿಲ್ಲ. ಎಷ್ಟೆಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೆ ಅಲ್ಲೇ ಕುಸಿದು ಕುಳಿತಳು.

''ಓ ಮದರ್! ನಾನು ತಾಳಲಾರೆ.''

ನೆರೆ ಹೊರೆಯವರಾರೋ ಕೆಂಪು ಕಣಗಿಲೆ ಹೂಗಳನ್ನು ತೆಗೆದುಕೊಂಡು ಇತ್ತಲೇ ಬಂದವರು ಮನೋನ್ಮಣಿಯನ್ನು ನೋಡಿ ''ಹೇಗೂ ಈ ಕಡೆ ಬಂದಿದ್ದೀಯೆ. ಸಮಾಧಿಯ ಮೇಲೆ ಹೂವಿಟ್ಟು ನಮಸ್ಕರಿಸು. ನಾನೂ ಬರುವೆ ನಿನ್ನೊಂದಿಗೆ. ಇನ್ನು ದುಃಖಿಸಿ ಮಾಡುವುದೇನು? ಮಗೂ, ಅಳಬೇಡ. ನಿಮ್ಮವರ ಆತ್ಮಶಾಂತಿಗಾಗಿ ಪ್ರಾರ್ಥಿಸು.''

ಅವರು ಬೆನ್ನು ತಟ್ಟಿ ನಲ್ಮೆಯಿಂದ ಸಂತೈಸಿ ಸಮಾಧಾನಗೊಳಿಸಿ ಅವಳನ್ನು ಕರೆದೊಯ್ದು ಎಲ್ಲಾ ಸಮಾಧಿಗಳಿಗೂ ಹೂವಿಡಿಸಿ ನಮಸ್ಕರಿಸುವಂತೆ ಸಹಕರಿಸಿ ಕರೆತಂದರು. ಬೆಂಬಳಿಯಾಗಿ ಬಂದ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿ ಮನೋನ್ಮಣಿ ಮದರ್ ಜಾರ್ಜಿಯ ಕೈ ಹಿಡಿದುಕೊಂಡು ಕಾನ್ವೆಂಟಿನ ಹಾದಿ ಹಿಡಿದಳು...ಕಾಲುಗಳ ಶಕ್ತಿ ಉಡುಗಿದಂತೆ ಮುನ್ನಡೆಯಲಾರವು. ಪ್ರಯತ್ನಿಸಿದರೂ ದುಃಖ ಆರಲಿಲ್ಲ; ಕಣ್ಣುಗಳ ಕಂಬನಿ ಹಿಂಗಲಿಲ್ಲ. ಎರಡೂ ಕಡೆ ಮದರ್‌ಗಳ ಕೈಯಾಸರೆಯಿಂದ ಎಳೆಯ ದೇಹ ಗಮ್ಯದತ್ತ ಸಾಗಿತು.

ಮನೋನ್ಮಣಿ ಶಾಲೆಯಲ್ಲಿ ಸುಶೀಯೊಂದಿಗೆ ಕುಳಿತಿದ್ದಳಾದರೂ ಗಮನ ಇನ್ನೆಲ್ಲೋ. ಕಾಂತಿವಿಹೀನ ಕಣ್ಣುಗಳ ದೃಷ್ಟಿ ಸನಿಹದಲ್ಲೆ ನೆಟ್ಟಿದ್ದು ಏನನ್ನೂ ನೋಡವು. ಮನಃಬುದ್ಧಿಗಳ ತುಮುಲ, ಕರುಳಿನ ತುಡಿತ, ಹೃದಯದ ಮಿಡಿತ ಆಲೋಚನೆ ಯಲೆಗಳಿಗೆ ಒತ್ತಿದ್ದು ಸ್ತಬ್ಧತಾ ಮುದ್ರೆ. ಇಂದು ಮೃಣಾಲಿನಿ ಟೀಚರ್ 'ಜೀವನ ಸಮಸ್ಯೆ ಮತ್ತು ವ್ಯಕ್ತಿ ವಿಕಾಸ ಅಥವಾ ಆತ್ಮವಿಕಾಸ' ಎಂಬುದರ ಬಗ್ಗೆ ಪಾರಿಭಾಷಿಕ ಶಬ್ದಗಳಿಂದ ಕೂಡಿದ ಪುಟ್ಟ ಭಾಷಣವನ್ನು ಮಾಡಿ ವಿವರಣೆ ನೀಡುತ್ತ ಒಂದು ಪ್ರಶ್ನೆ ಹಾಕಿದಳು. ''ಜೀವನಲ್ಲಿ ಎಂದಿಗೂ ಸಮಸ್ಯೆಗಳೇ ಏಳದಿಂದ್ದಂಥ ಮನುಷ್ಯನ ಆತ್ಮವಿಕಾಸ ಆಗುವುದಾದರೂ ಹೇಗೆ?''

ಆ ಪ್ರಶ್ನೆಗೆ ಜಾಗೃತವಾಯಿತು ಮನಸ್ಸು. ಮನೋನ್ಮಣಿ ಹುಬ್ಬೆತ್ತಿ ಟೀಚರ್ ಕಡೆ ನೋಡಿದಳು. ಅವಳ ದೃಷ್ಟಿಯೂ ತನ್ನ ಮೇಲೆಯೇ ನೆಟ್ಟಿದ್ದುದರಿಂದ ತನ್ನನ್ನು ಕುರಿತು ಪ್ರಶ್ನೆ ಹಾಕಿದ್ದಾಳೆ ಎಂಬುದರ ಅರಿವಾಯಿತು. ಒಡನೆ ಮನಃಚಿತ್ತಗಳು ಎಲ್ಲರ ಬಾಳನ್ನು ಹೊಕ್ಕು ನೋಡಿದುವು. ಸಮಸ್ಯೆಗಳಿಂದ ಮುಕ್ತವಾದ ಜೀವನ ಯಾರದೂ ಇಲ್ಲವೆಂಬುದು ಖಚಿತ. ಆದರೆ, ಸಮಸ್ಯೆಯ ದಿಕ್ಸೂಚಿಯನ್ನು ಯಾವ ದಿಕ್ಕಿಗೆ ತಿರುಗಿಸಿಟ್ಟರೂ ಅದು ಸುತ್ತುವರಿದು ನಿಲ್ಲುತಿದ್ದುದು ತನ್ನ ಕಡೆಗೇ.... ಒಂದೆರಡು ಕ್ಷಣ ತನ್ನನ್ನು ತಾನು ಸುಧಾರಿಸಿಕೊಳ್ಳಲು ಪ್ರಯತ್ನಿಸಿದಳೇನೋ ಅಷ್ಟರಲ್ಲಿ ಮೃಣಾಲಿನಿ ಮುಂದುವರೆದಳು ''ಕಳೆದ ಸಾಲಿನಿಂದ ಈವರೆಗಿನ ಕೇವಲ ಒಂದು ವರ್ಷದ ಜೀವನವನ್ನು ಮಾತ್ರವೇ ಸಮೀಕ್ಷಿಸೋಣ.''

''ರಾಷ್ಟ್ರ ಸ್ವಾತಂತ್ರ್ಯಾಂದೋಲನದಲ್ಲಿ-ಪ್ಲೇಗ್ ಮಾರಿಯ ಧಾಳಿಯಲ್ಲಿ. ಕಾಲರಾ ಮಾರಿಯ ಆಕ್ರಮಣದಲ್ಲಿ ದೇಶ ಅನುಭವಿಸಿದ ಕಷ್ಟನಷ್ಟ ಅಲ್ಪಸ್ವಲ್ಪವಲ್ಲ. ಇಂತಹ ಸಂದರ್ಭಗಳಲ್ಲಿ ಧೈರ್ಯಗೆಟ್ಟರೆ ದೇಶ ಮುನ್ನಡೆಯುವುದು ಹೇಗೆ? ಆದ್ದರಿಂದ ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆ ನಮಗಿರಲಿ ಎಂಬ ದಾಸರ ನೀತಿಯನ್ನು ಅನುಸರಿಸುವುದೇ ಸರಿಯಾದ ಸೂತ್ರ. ದಾಸರು ಇಂದು ನಿನ್ನೆಯವರಲ್ಲ. ಕೆಲವು ಶತಮಾನಗಳ ಹಿಂದೆಯೇ ಈ ನೀತಿ ಸಂಹಿತೆಯನ್ನು ಎಲ್ಲರಿಗೂ ಕೇಳಿಸುವಂತೆ ಇಂಪಾದ ದನಿಯಲ್ಲಿ ಹಾಡಿ ಹೋಗಿದ್ದಾರೆ. ಇಂದಿನ ನಾಗರಿಕ ಯುಗದ ನಾಗರಿಕ ಜನಾಂಗವಾದ ನಾವು ಅಂದಂದಿನ ಅಧ್ಯಾಯವನ್ನು ಅಂದಂದಿಗೆ ಮಗುಚಿಹಾಕಿ ಮುಂದಿನ ಅಧ್ಯಾಯವನ್ನು ತೆರೆಯಲು ಸಿದ್ಧರಾಗುವುದೇ ಜೀವನ. ಅದನ್ನು ಬಿಟ್ಟು ನಾವು ಇನ್ನೊಬ್ಬರ ಸಹಾಯ ನಿರೀಕ್ಷಿಸುವುದಾದರೆ ಅಸ್ವತಂತ್ರತೆಯನ್ನು ಒಪ್ಪಿ ಕೊಳ್ಳುವುದು ಖಂಡಿತ ಅಥವಾ ಆತ್ಮಹತ್ಯೆ ಮಾಡಿಕೊಂಡು ನಮ್ಮ ಸಂಕಟದಿಂದ ಪಾರಾಗೋಣ ಎನಿಸಿದರೆ ಮಾನವತೆಗೆಲ್ಲಿಯ ಮಹತ್ವ? ಗಾಂಧೀಜಿಯವರ ಆದೇಶ ಮಾಡಿ-ಮಡಿ... ಎಂಬುದು. ಹಾಗೆ ಮಾಡಿ ಮಡಿಯುವುದರಲ್ಲಿ ಮಾನವೀಯತೆಗೆ ತುಂಬ ಬೆಲೆ ಬರುತ್ತದೆ. ಸುಮ್ಮನೆ ಸತ್ತರೆ ರೋಗರುಜಿನಗಳಿಂದ ಸತ್ತಂತೆಯೇ! ಪೋಲೀಸರ ಗುಂಡಿಗೆ ಪರಂಗಿಯರ ಫಿರಂಗಿಗೆ ಎದೆಕೊಟ್ಟು ಸತ್ತರೆ ಬರುವ ಬೆಲೆ ಅಸಾಮಾನ್ಯ ಪೂಜನೀಯ....''

ಆ ನೀತಿ ಸಂಹಿತೆ ಅಂತರಾಳದಲ್ಲಿ ಕೈಯಾಡಿಸಿತು. ಮನೋನ್ಮಣಿ ಪುಸ್ತಕದ ಪುಟಗಳನ್ನು ತಿರುವಿ ಹಾಕಿದಳು. ಸ್ವಾತಂತ್ರ್ಯಾಂದೋಲನದಲ್ಲಿ ಎದೆಗೊಟ್ಟವರು ಮನಃಪಟಲದ ಮೇಲೆ ಪ್ರಭಾತ್ ಫೇರಿ ನಡೆಸಿದರು. ಆ ಕಷ್ಟ - ನಷ್ಟ - ಆ ಹೊಡೆತ

-ಬಡಿತಗಳ ದಾಂಧಲೆಯನ್ನು ಆತ್ಮವತ್ತಾಗಿ ಸಹಿಸಿದ ಪರಮ ವೀರರು ಸ್ಮೃತಿಯಲ್ಲಿ ಸುಳಿದಳಿದರು.

ಎಡಬಲದ ಗೆಳತಿಯರ ಕುಡಿನೋಟ ಇತ್ತ ಹರಿದುದನ್ನು ಗಮನಿಸಿದ ಮನಸ್ಸು ಅತ್ತಿತ್ತ ಹೊರಳಲಿಲ್ಲ. ಏಕಾಗ್ರ ಚಿತ್ತದಿಂದ ಪುಸ್ತಕದ ಹಾಳೆಯನ್ನು ತಿರುವಿಹಾಕಿದಳು. ಮಧ್ಯ ಪುಟದಲ್ಲಿ ಗಾಂಧೀಜಿಯ ಚಿತ್ರದ ಪೇಪರ್ ಕಟಿಂಗ್ ದೃಷ್ಟಿಗೆ ಬಿತ್ತು.

* * *

ಪೋಲೀಸ್ ಜೀಪೊಂದು ಕರ್ಕಶ ಸದ್ದಿನೊಡನೆ ಬಂದು ಮುಂಬಾಗಿಲ ಬಳಿ ಗಕ್ಕನೆ ನಿಂತಿತು. ಅದರಿಂದ ಇಬ್ಬರು ಪೋಲೀಸ್ ಅಧಿಕಾರಿಗಳು ಇಳಿದು ಕಾವಲುಗಾರನನ್ನು ಕೇಳಿದರು.

''ಮದರ್ ಸಿಲ್ವಿಯಾ ಇದ್ದಾರೆಯೇ?''

''ಇದ್ದಾರೆ.''

''ಅವರಿಗೆ ಡಿ.ಐ.ಜಿ. ಬಂದಿದ್ದಾರೆಂದು ತಿಳಿಸು.''

ಮದರ್ ಸಿಲ್ವಿಯಾ ಕೈಗಡಿಯಾರದ ಕಡೆ ನೋಡಿಕೊಂಡಳು. ಮುಳ್ಳು ಒಂಭತ್ತರ ಅಂಚನ್ನು ಮುಟ್ಟಿತ್ತು. ಮದರ್ ಬೆಟ್ಟಿಗೆ ಹೇಳಿಕೊಂಡು ಅತಿಥಿಗಳ ಸ್ವಾಗತದ ಕೊಠಡಿಗೆ ಹೋಗಿ ಪೋಲೀಸ್ ಅಧಿಕಾರಿಗಳನ್ನು ಬರಮಾಡಿಕೊಳ್ಳುತ್ತ ಪ್ರಸನ್ನಮುಖಿಯಾಗಿ ನಮಸ್ಕರಿಸಿದಳು, ಗುಡ್ ಮಾರ್ನಿಂಗ್!''

''ಗುಡ್ ಮಾರ್ನಿಂಗ್ ಮದರ್!''

''ಗುಡ್ ಮಾರ್ನಿಂಗ್! ಬನ್ನಿ ಕುಳಿತುಕೊಳ್ಳಿ.''

''ನಾನು ಡಿ.ಐ.ಜಿ., ಇವರು ಇನ್ಸ್‌ಪೆಕ್ಟರ್''

ಇನ್ಸ್‌ಪೆಕ್ಟರ್ ಅಭಿವಂದಿಸಿ ಕುಳಿತುಕೊಂಡ. ಡಿ.ಐ.ಜಿ. ವಿಷಯವನ್ನು ಮುಂದಿಟ್ಟ.

''ನಾನು ಬಂದುದು ಜಗತ್‌ರಾಮನ ಮಗಳು ನಿಮ್ಮಲ್ಲಿದ್ದಾಳೆಂದು ತಿಳಿದು ಹೇಳಿಕೆ ತೆಗೆದುಕೊಳ್ಳುವ ಉದ್ದಿಶ್ಯದಿಂದ. ತಾವು ಅಷ್ಟಕ್ಕೆ ಅವಕಾಶಕೊಟ್ಟರೆ ಒಳ್ಳೆಯದು.''

''ಅವಳು ಒಪ್ಪಿದರೆ ಆಗಬಹುದು, ಕೇಳಿ ನೋಡುವೆ; ನಾನು ಬಲವಂತ ಪಡಿಸಲಾರೆ.''

ಮದರ್ ಸಿಲ್ವಿಯಾ ಒಳ ಹೋದಳು.

ಮನೋನ್ಮಣಿ ಶಾಲೆಗೆ ಹೋಗಲು ತಯಾರಿ ನಡೆಸಿದ್ದಾಳೆ. ಎಲುಬಿನ

ಹಂದರವಾದ ಶರೀರ ಇತ್ತ ತಿರುಗಿದಾಗ ಕರುಳು ಚುರುಕ್ ಎನ್ನುವಷ್ಟು ಕರುಣಾಜನಕ. ಈಗೀಗ ಮಾನಸಿಕವಾಗಿ ಎಷ್ಟೋ ಸುಧಾರಿಸಿಕೊಂಡಿದ್ದರೂ ದೈಹಿಕವಾಗಿ ಸುಧಾರಿಸಿ ಕೊಳ್ಳಲಿಲ್ಲ. ಎಲುಬು ಚರ್ಮಗಳ ಗೂಡು ಪುಟ್ಟ ಶರೀರ.

''ನಿನ್ನನ್ನು ನೋಡಿದರೆ ಮನಸ್ಸು ಮಂಜಿನಂತೆ ಕರಗುತ್ತೆ. ದೈಹಿಕವಾಗಿ ನೀನು ಏನೇನೂ ಸುಧಾರಿಸಿಕೊಳ್ಳಲಿಲ್ಲ.''

''ಬಹುಶಃ ಮದರ್ ಸಿಲ್ವಿಯಾ ಆ ಮುಹೂರ್ತದಲ್ಲಿ ತಾನು ಕರೆಯಲು ಬಂದ ವಿಷಯವನ್ನೇ ಮರೆತು ಬಿಟ್ಟಿದ್ದಳೇನೋ. ಮರುಗಳಿಗೆಯಲ್ಲಿ..ನಿನ್ನ ಒಣಕಲು ಮೈಯನ್ನು ನೋಡಿದೊಡನೆ ನಿನ್ನನ್ನು ಕರೆಯಲು ಬಂದದ್ದೆ ಮರೆತುಬಿಟ್ಟೆ.''

''ಓ...ಏತಕ್ಕಾಗಿ?''

''ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿ.ಐ.ಜಿ. ಬಂದಿದ್ದಾರೆ. ನಿನ್ನ ಹೇಳಿಕೆ ತೆಗೆದುಕೊಳ್ಳಬೇಕಂತೆ.''

''ಇನ್ನು ಹೇಳಿಕೆ ತೆಗೆದುಕೊಂಡು ಮಾಡುವುದೇನಿದೆ?''

''ಅದೇನೇ ಇರಲಿ, ಅವರು ಕಾನೂನಿಗನ್ವಯವಾದ ಕ್ರಮ ಕೈಕೊಳ್ಳ ಬೇಕಷ್ಟೆ?''

ಆ ಕ್ಷಣದಲ್ಲಿ ಹೃನ್ಮನಗಳು ಮುದುಡಿದರೂ ತೋರಗೊಡದೆ ಮದರ್ ಹೆಜ್ಜೆಯನ್ನನುಸರಿಸಿ ಹೊರಟಳು...ತನ್ನವರು... ಆ ಮನೆ... ಆ ಸುಂದರವಾದ ತೋಟ ಗದ್ದೆಗಳು... ಆ ನಯನ ಬಂಧುರವಾದ ಆಕಳುಗಳು...ಕಿಲಕಿಲ ನಗೆಯ ಮಕ್ಕಳು. ಒಂದೊಂದೂ ಅಂತರಂಗದಲ್ಲಿ ಕೈಯಾಡಿಸಿದುವು. ಮನಃಪ್ರಾಣಗಳನ್ನು ಹತೋಟಿ ಯಲ್ಲಿಟ್ಟುಕೊಂಡು ಡಿ.ಐ.ಜಿ.ಯ ಎದುರು, ಮದರ್ ಪಕ್ಕದಲ್ಲಿ ಕುಳಿತುಕೊಂಡಳು ಮನೋನ್ಮಣಿ.

''ಮಗೂ, ನಮ್ಮ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಬಲ್ಲೆಯಾ?''

ಅವಳು ಮಾತಾಡದೆ ತಲೆಯಾಡಿಸಿ ಸಮ್ಮತಿ ಸೂಚಿಸಿದಳು.

''ಮಹಮದ್ ಪಾಶ ಮತ್ತು ಪರಿವಾರದವರು ನಿಮ್ಮ ಕುಟುಂಬ ವಿರೋಧಿ ಗಳಾಗಿದ್ದರು ಎಂದು ತಿಳಿದು ಬಂದಿದೆ. ಈ ವಿಚಾರವಾಗಿ ನೀನೇನು ತಿಳಿದುಕೊಂಡಿರುವೆ? ಖಂಡಿತವಾಗಿಯೂ ಸತ್ಯಾಂಶವನ್ನು ತಿಳಿಸುವೆಯಾ?''

ಕೊರಳು ಕಟ್ಟಿದುದುದರಿಂದ ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ''ಅವನು ಕಟ್ಟಾ ವಿರೋಧಿ. ಐವತ್ತು ಸಾವಿರ ರೂಪಾಯಿಗೆ ಮೋಸ ಮಾಡಿದ್ದಲ್ಲದೆ ಪೋಲೀಸಿಗೆ ರಿಪೋರ್ಟ್ ಮಾಡಿದರೆ ನಿನ್ನನ್ನು ಸುಟ್ಟುಬಿಡುವೆ ಎಂದು ಬಹಿರಂಗವಾಗಿಯೇ

ಎಚ್ಚರಿಸಿದ್ದ. ದೊಡ್ಡಪ್ಪ ಪೋಲೀಸಿಗೆ ಕಂಪ್ಲೈಂಟ್ ಕೊಟ್ಟರೋ ಇಲ್ಲವೋ ನನಗೆ ತಿಳಿಯದು.

''ಪೀರ್ ಮತ್ತು ಅಬ್ದುಲ್ಲಾ ಎಂಬ ಇಬ್ಬರು ಯುವಕರು ಗದ್ದೆ ತೋಟಗಳ ಉಸ್ತುವಾರಿಗೆ ಬರುತ್ತಿದ್ದರು. ತುಂಬಾ ಮೋಸ...ಕೆಲಸದಲ್ಲಿ, ಬೆಳೆ ಕದಿಯುವುದರಲ್ಲಿ, ಗೊಬ್ಬರ ಮುಂತಾದುವುದನ್ನು ಕದ್ದು ಮಾರುವುದರಲ್ಲಿ, ಮಾತಿಗೆ ಮಾತು ಹಚ್ಚಿ ಜಗಳವಾಡುವುದರಲ್ಲಿ ಮುಂತಾದ ಕೊಡಬಾರದ ತೊಂದರೆ ಕೊಡುತಿದ್ದುದರಿಂದ ದೊಡ್ಡಪ್ಪ ಅವರನ್ನು ಕೆಲಸದಿಂದ ವಜಾ ಮಾಡಿದರು. ಅಂದಿನಿಂದ ಅವರ ಜಿದ್ದು ಮೇರೆ ಮೀರಿತು. ಅವರೆಲ್ಲಾ ಒಂದೇ ಪರಿವಾರದವರು. ಒಗ್ಗಟ್ಟಾಗಿಯೇ ದಂಗೆ ಏಳುತ್ತಾರೆ. ಅವರು ಎಂತಹ ದೃಷ್ಕೃತ್ಯವನ್ನಾದರೂ ಮಾಡಬಲ್ಲರು. ಯಾವತ್ತೂ ನೆರೆಹೊರೆಯವರೊಡನೆ ಜಗಳ ಗಲಾಟೆ ಗದ್ದಲ ಇದ್ದದ್ದೇ. ಅವರ ದುಷ್ಟ ಸ್ವಭಾವ ನೋಡಿಯೇ ನಮ್ಮವರು ಅವರ ಸಂಬಂಧವನ್ನು ಪೂರ್ಣ ಕಡಿದುಕೊಳ್ಳಲು ಕಾರಣ.''

''ಹಾಗಾದರೆ ಅವರು ಕಾರಣವೇ ಬೆಂಕಿ ಹಚ್ಚಲು?''

''ಇದ್ದರೂ ಇರಬಹುದು...ಇತರೆ ನಮ್ಮ ನೆರೆಹೊರೆಯರೆಲ್ಲಾ ತುಂಬಾ ಸ್ನೇಹ ಸಂಬಂಧ ಉಳ್ಳವರು.... ನಮ್ಮ ಸುಖದುಃಖಗಳಲ್ಲಿ ಸಮಭಾಗಿಗಳಾಗುತ್ತಿದ್ದರು. ಅವರ್‍ಯಾರೂ ಜಿದ್ದು ಮಾಡುವವರಲ್ಲ. ಪೀರ್ ಮತ್ತು ಅಬ್ದುಲ್ಲಾರನ್ನು ಕೆಲಸದಿಂದ ತೆಗೆದನಂತರ ದಿನವೂ ಒಂದಲ್ಲ ಒಂದು ಹಿಂಸೆ ಕೊಡುತ್ತಿದ್ದರು. ಮನೆಗೆ ಕಲ್ಲು ಬೀಸುವುದು; ಗದ್ದೆ ತೋಟಗಳಿಗೆ ದನ ನುಗ್ಗಿಸುವುದು; ಬೆಳೆ ಕದಿಯುವುದು; ಹಸುಗಳಿಗೆ ವಿಷ ಊಡಿಸುವುದು, ಹೀಗೆ ನಾನಾ ಕಿರುಕುಳಕೊಟ್ಟಿದ್ದಾರೆ. ಕೊನೆಗೆ ನಿರ್ನಾಮ ಮಾಡಿಬಿಟ್ಟರು....''

ಒತ್ತರಿಸಿ ಬಂದ ದುಃಖವನ್ನು ಪ್ರಯತ್ನಪೂರ್ವಕವಾಗಿ ಅದುಮಿಹಿಡಿದಳು ಮನೋನ್ಮಣಿ. ಕಣ್ಣಾಲಿಗಳು ರಂಗು ತಳೆದು ಮುಖಬಿಂಬ ಕೆಂಪು ಕೆಂಪಾಯಿತು.

''ಸ್ವಲ್ಪ ಸಹಿಸಿಕೊ ಮಗು. ನಮ್ಮ ತೊಂದರೆಗೆ ಕ್ಷಮೆ ಇರಲಿ; ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾದರೆ ವಿಷಯವನ್ನು ಕೂಲಂಕಶವಾಗಿ ತಿಳಿಯದ ಹೊರತು ಸಾಧ್ಯವಾಗದು. ನೀನು ಚಿಕ್ಕವಳು; ದುಃಖಶಮನವಾದ ನಂತರವೇ ತಿಳಿಯೋಣವೆಂದು ಈವರೆಗೆ ಸುಮ್ಮನಿದ್ದಿದ್ದಾಯಿತು. ಇದುವರೆಗೆ ನಿಜವಾದ ಪುರಾವೆ ಸಿಗಲಿಲ್ಲ. ಅದಕ್ಕಾಗಿ..''

ಮದರ್ ಸಿಲ್ವಿಯಾ ಅವಳನ್ನು ತಬ್ಬಿ ಹಿಡಿದುಕೊಂಡು ನುಡಿದಳು.

''ಅಬ್ಬುಲ್ಲಾ ಮತ್ತು ಪೀರ್‌ರವರಿಗೆ ಮಹಮದ್ ಪಾಶನ ಪ್ರಚೋದನೆ

ಇತ್ತೆಂಬುದು ಎಲ್ಲರಿಗೂ ತಿಳಿದ ವಿಷಯ. ಅವರು ಇವರಿಗೆ ಮಾತ್ರವಲ್ಲ; ನೆರೆಹೊರೆಯವರಿಗೆಲ್ಲಾ ಹಿಂಸ್ರಕರಾಗಿದ್ದರು. ಇದನ್ನೆಲ್ಲಾ ನೆರೆ ಹೊರೆಯವರು ನಿಮಗೆ ತಿಳಿಸಿರಲೇಬೇಕಲ್ಲ?''

''...ಹೌದು, ತಿಳಿದುಬಂದಿದೆ. ಆದರೆ, ಮನೆಯಲ್ಲಿ ಅಂದು ಹದಿನೈದು ಮಂದಿ ಮಲಗಿದ್ದರೆಂದು ಗೊತ್ತಾಗಿದೆ; ಶವ ದೊರಕಿದ್ದು ಹದಿನಾಲ್ಕು ಮಾತ್ರ. ಈ ವಿಚಾರದಲ್ಲಿ ಇನ್ನೂ ನಿರ್ದಿಷ್ಟವಾದ ಕ್ರಮ ಕೈಕೊಳ್ಳಲಾಗಲಿಲ್ಲ. ಅದಕ್ಕೆ ಈ ಮಗುವಿನಿಂದ ನಿಜಾಂಶ ತಿಳಿಯಬೇಕಾಗಿದೆ... ಎಂದ ಡಿ.ಐ.ಜಿ. ಮನೋನ್ಮಣಿಯನ್ನು ಕುರಿತು ''ದಯಮಾಡಿ ಅಂದು ನಿಮ್ಮ ಮನೆಯಲ್ಲಿ ಎಷ್ಟು ಮಂದಿ ಮಲಗಿದ್ದರೆಂಬುದನ್ನು ತಿಳಿಸುವೆಯಾ?''

''ನನ್ನ ಹೊರತು ಉಳಿದವರೆಲ್ಲಾ ಅಲ್ಲಿಯೇ ಮಲಗಿದ್ದರು.''

''ಯಾರ್‍ಯಾರು?''

''ದೊಡ್ಡಪ್ಪ-ದೊಡ್ಡಮ್ಮ...'' ಬಿಕ್ಕಿದಳು ಹುಡುಗಿ.

''ಸ್ವಲ್ಪ ಸಮಾಧಾನ ತೆಗೆದುಕೋ ಮಗು.''

ಮದರ್ ಸಿಲ್ವಿಯಾ ಸಂತೈಸಿದಳು.

''ನನ್ನ ಅಪ್ಪ-ಅಮ್ಮ ಮೂವರು ತಮ್ಮಂದಿರು. ಬಲ್ಲೂರಾಂ ದೊಡ್ಡಪ್ಪ-ದೊಡ್ಡಮ್ಮ ಮತ್ತು ನಾಲ್ಕು ಮಂದಿ ಮಕ್ಕಳು. ಇಬ್ಬರು ಆಳುಗಳು.''

''ಆ ಆಳು ಮಕ್ಕಳು ದೊಡ್ಡವರೇ, ಚಿಕ್ಕವರೇ?''

''ಸುಮಾರು ಹದಿನೈದು-ಹದಿನಾರರ ವಯಸ್ಸು.''

''ಅವರುಹೇಗೆ? ಒಳ್ಳೆಯವರೋ? ಅಥವಾ....''

''ತುಂಬಾ ಒಳ್ಳೆಯವರು. ಏಳೆಂಟು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಪಾಪ...''

''ಒಳ್ಳೆಯದು ಮಗೂ, ನೀನು ಹೋಗಬಹುದು.''

ಅವಳ ಗಲ್ಲನವನ್ನು ಮುದ್ದಿಸಿ ''ಒಳ್ಳೆಯವರ ಆಶ್ರಯ ಪಡೆದಿದ್ದೀಯೆ. ಭಗವಂತ ನಿನಗೆ ಒಳ್ಳೆಯದು ಮಾಡಲಿ. ಚೆನ್ನಾಗಿ ಓದಿ ಮುಂದಕ್ಕೆ ಬಾ'' ಎಂದು ಹಾರೈಸಿದ ಡಿ.ಐ.ಜಿ.

ಇನ್ಸ್‌ಪೆಕ್ಟರನೂ ಅವಳ ಬೆನ್ನನ್ನು ನೇವರಿಸಿ ಶುಭವನ್ನು ಕೋರಿದ.

ಅವಳು ಖಿನ್ನ ಮನಸ್ಕಳಾಗಿ ಒಳ ಹೋದಳು.

ಡಿ.ಐ.ಜಿ. ಜೀಪ್ ಹತ್ತುವ ಮುನ್ನ ಮದರ್ ಮುಂದೆ ತನ್ನ ಮನದ ಸಂಶಯವನ್ನು ವ್ಯಕ್ತಪಡಿಸಿದ, ''ಮಲಗಿದ್ದು ಹದಿನೈದು ಮಂದಿ. ಶವ ದೊರೆತದ್ದು ಹದಿನಾಲ್ಕು

ಮಾತ್ರ. ಆದ್ದರಿಂದ ಅವರಲ್ಲಿ ಯಾರಾದರೊಬ್ಬ ಹೊರ ಹೋಗಿ ಬೆಂಕಿ ಹಚ್ಚಿರ ಬಹುದೇ? ಎಂಬ ಪ್ರಶ್ನೆಗೆ ಎಡೆ ಮಾಡಿಕೊಡುವುದು ಸಹಜ. ಆ ಆಳು ಮಕ್ಕಳಲ್ಲಿ ಒಬ್ಬ ಈ ದುಷ್ಕೃತ್ಯ ನಡೆಸಿರಬಹುದೇ ಎಂಬ ಯೋಚನೆ ಬರುತ್ತೆ. ಯಾವುದಕ್ಕೂ ಪುರಾವೆ ಒದಗಲಿಲ್ಲ. ಆಳು ಮಕ್ಕಳ ಕುಟುಂಬ ಕುಲಗೋತ್ರ ಎಲ್ಲಾ ಶೋಧಿಸಿದ್ದಾಯ್ತು. ಆಕಸ್ಮಿಕ ಎನ್ನುವಂತೆಯೂ ಇಲ್ಲ. ಆಕಸ್ಮಿಕವಾಗಿದ್ದಿದ್ದರೆ ಜಮೀನಿಗೋ ಮನೆಗೋ ಯಾವುದೋ ಒಂದಕ್ಕೆ ಬೆಂಕಿ ಬೀಳಬೇಕಾಗಿತ್ತು. ಇದು ದುಷ್ಕೃತ್ಯ ಎಂಬುಧಕ್ಕೆ ಒಂದೇ ಬಾರಿಗೆ ಪೂರಾ ಸುಟ್ಟಿರುವುದೇ ಸಾಕ್ಷಿ. ಪಾಪ, ಬಹಳ ಅನ್ಯಾಯ, ಹೇಗೆ ಅನುತಾಪ ವ್ಯಕ್ತಪಡಿಸಬೇಕೋ ತಿಳಿಯುತ್ತಿಲ್ಲ.''

''ಅನುತಾಪ ವ್ಯಕ್ತಪಡಿಸಿದರೆ ಆಗುವುದೇನು? ಪಾತಕರನ್ನು ಹಿಡಿದು ಮಟ್ಟಹಾಕಿ!''

ಅವರು ವಂದನೆಯನ್ನರ್ಪಿಸಿ ಹೊರಟರು.

* * *

“The mind is in its own place. It can make a hell of heaven or heaven of hell.”

ಪಾಶ್ಚಾತ್ಯ ಹಿರಿಯ ದ್ರಷ್ಟಾರನ ನುಡಿಗಟ್ಟು ಯಾವಾಗಲೂ ತಲೆಯಲ್ಲಿ ತುಂಬಿದ್ದು ನರನಾಡಿಗಳಲ್ಲಿ ಝಿಲ್ಲನೆ ಝುರಿಯಂತೆ ಹರಿದಾಡುತ್ತದೆ. ಅದರಲ್ಲಿನ ವಾಸ್ತವಾಂಶ ವಿಚಾರಶೀಲತೆಗೆ ಎಂತಹ ಅಮೋಘವಾದ ಇಂಬು? ನಮ್ಮನ್ನು ಅರ್ಥೈಸಲಾರದೆ ನಾವು ಹೆಣಗುವುದು ಸಹಜವಲ್ಲವೇ?

ಪ್ರಶ್ನೆ ಚಿತ್ತಭಿತ್ತಿಯಲ್ಲಿ ನಿಮಿರಿ ನಿಂತಿತು.

ಮನೋನ್ಮಣಿ ಕಿಟಕಿಯ ಸರಳನ್ನು ಹಿಡಿದುಕೊಂಡು ದೃಷ್ಟಿಯನ್ನು ದೂರ ದಿಗಂತದಲ್ಲಿ ನೆಟ್ಟಳು. ಪಶ್ಚಿಮ ದಿಗ್ದೇಶಾಭಿಮುಖಿಯಾದ ಅರುಣನ ಥಳಥಳಿಸುವ ಹಿರಣ್ಮಯ ಬಿಂಬದಿಂದ ದಿಗ್ದೇಶಕ್ಕೆಲ್ಲಾ ಅರುಣ ಕಾಂತಿಯ ಮನಮೋಹಕ ಮುದ್ರೆ. ರವಿ ಇಳಿ ಮುಖನಾದಷ್ಟೂ ಧರೆಯನ್ನಾವರಿಸುತ್ತದೆ ಹೊಂಗಾತಿಯ ತಿಳಿಹರವು. ಗಿಡಮರಗಳಲ್ಲಿ ಸಂಧ್ಯಾರಾಗವನ್ನು ಕೊರಳ್ತುಂಬಿ ಉಲಿಯುವ ಪಕ್ಷಿಸಂಕುಲ.

ಈ ಜಗತ್ತು ಎಷ್ಟು ಸತ್ಯ ಸುಂದರ?

ಇದರೊಳಗಿನ ನಾವು? ಸಂಸ್ಕೃತಿಯ ಹೆಸರಿನಲ್ಲಿ-ಮಾನವೀಯತೆಯ ಕಿರೀಟ ಹೊತ್ತ ನಾವು? ಈ ಮಾನವ ಜಾತಿ ನಂಜಿನ ಮುದ್ದೆಯಿಂದ ಮಾಡಲ್ಪಟ್ಟಿದೆಯೇ?

ಆದರೆ...

ಎಲ್ಲರೂ ದುಷ್ಟರಲ್ಲವಲ್ಲ? ದಾತರೂ ಇದ್ದಾರೆ. ಪೂಜ್ಯರೂ ಇದ್ದಾರೆ. ಧರ್ಮೋ ಜಯತಿ ನ ಅಧರ್ಮಃ ಎನ್ನುತ್ತದೆ ಶಾಸ್ತ್ರ. ಅದನ್ನು ನಂಬಬೇಕೋ ಬಿಡಬೇಕೋ ತಿಳಿಯುವುದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಜನ ಸಂಪೂರ್ಣ ನಿರ್ನಾಮವಾದರೆ ಹಾ! ಎಲ್ಲಿಯ ಜಯ?

ಈ ಪ್ರಶ್ನೆಯೆದ್ದಾಗ ದೇಹದಾದ್ಯಂತ ನಸು ಕಂಪನದ ಅಲೆ ಹರಿದಾಡಿತು.

''ಸ್ವಾತಂತ್ರ್ಯಾಂದೋಲನದಲ್ಲಿ, ಕಾಲರಾದ ಧಾಳಿಯಲ್ಲಿ, ಪ್ಲೇಗಿನ ಹಾವಳಿಯಲ್ಲಿ ಸತ್ತವರು ಕಡಿಮೆಯೇ?''ಅಂದು ಮೃಣಾಲಿನಿ ಟೀಚರ್ ಕೇಳಿದ ಪ್ರಶ್ನೆ ಕಿವಿಯ ಸನಿಹದಲ್ಲಿ ಸ್ಪಷ್ಟವಾಗಿ ಮೊಳಗಿತು. ''ನಿಜ...ಅವರಿಗೆಲ್ಲಾ ಮಕ್ಕಳು ಮರಿ ಇಲ್ಲವೇ? ನಾವು ಪಡೆದುಕೊಂಡು ಬಂದ ಭಾಗ್ಯಕ್ಕೆ ಯಾರೇನು ಮಾಡಿಯಾರು? ನಾನು ನತದೃಷ್ಟೆ. ನಾನು ಗತಿ ವಿಹೀನೆಯಾಗುವುದನ್ನು ವಿಧಿ ಬರೆದಿದ್ದಾನೆ. ಅಂತಲೇ.'' ಕಂಠ ಗದ್ಗದಿಸಿತು.

ಅಲ್ಲಿಗೆ ಆ ಯೋಚನೆಯನ್ನು ಬಿಟ್ಟು ಹನಿಗಣ್ಣಿಂದ ಅಸ್ತಮಾನ ಸೂರ್ಯನನ್ನು ನಿಟ್ಟಿಸಿದಳು. ಹೊಂಗಿರಣ ರಶ್ಮಿಗಳು ಯಾವ ಸಂದೇಶವನ್ನು ನೀಡಿದುವೋ. ಬೆಳ್ಳಿಯ ಗೆರೆಯಂತೆ ಮಿನುಗುತ್ತಿದ್ದ ಕಂಬನಿ ಅಲ್ಲೇ ಹಿಂಗಿದುವು.

೬

ನೀಲಮ್ಮಣಿಯ ಶೀರ್ಣತ ಶರೀರ ಆಸ್ತಮ ರೋಗದಿಂದ ನರಳುತಿದ್ದು ಇನ್ನಷ್ಟು ಶೀರ್ಣತ ಸ್ಥಿತಿಗೆ ಬಂದಾಗ ನರಳು ದನಿಯಲ್ಲಿ ರಾಮತೀರ್ಥನನ್ನು ಕರೆದು '' ಮನೋನ್ಮಣಿ ನನ್ನೊಂದಿಗಿದ್ದಿದ್ದರೆ ಸ್ವಲ್ಪ ಸಹಾಯ ಒದಗುತಿತ್ತು. ನಾನು ಏಳಲಾರೆ. ಮಾಡಲಾರೆ. ಹೊಟ್ಟೆಗೆ ಹಿಟ್ಟು ಕಾಣಿಸುವುದು ತುಂಬಾ ಕಷ್ಟ. ಕಾನ್ವೆಂಟಿಗೆ ಹೋಗಿ ನಾನು ಹೇಳಿದ್ದೇನೆಂದು ಹೇಳಿ ಕರೆದುಕೊಂಡು ಬಾ.'' ಎಂದಳು.

ರಾಮತೀರ್ಥನಿಗೆ ಅದು ಸರಿ ಎನಿಸಿ ತುಂಬಾ ಮೆಹನತ್ತಿನಿಂದ ಹೊರಟ. ಹೆಜ್ಜೆ ಹೆಜ್ಜೆಗಳಿಗೂ ಎಲ್ಲಿಲ್ಲದ ಹುರುಪು. ಅವಳು ಅಲ್ಲಿರುವುದಕ್ಕಿಂತ ನಮ್ಮಲ್ಲಿರುವುದು ಲೇಸು. ನನಗೊಳ್ಳೆ ಸಂಗಾತಿಯಾಗುವುದರೊಂದಿಗೆ ಮನೆಗೊಂದು ತೊತ್ತೂ ಆಗುತ್ತಾಳೆ ಎಂದೆಲ್ಲಾ ಭಾವಿಸಿತು ಮನಸ್ಸು.

ಅವನು ಕಾನ್ವೆಂಟ್ ಮುಟ್ಟಿದಾಗ ಮಕ್ಕಳೆಲ್ಲಾ ಶಾಲೆಗೆ ಹೋಗುವ ತರಾತುರಿಯಲ್ಲಿದ್ದರು. ಶಾಲೆಯ ಮಗ್ಗುಲಿಗೇ ಹಾಸ್ಟಲ್.

ಶಾಲೆಯ ಆವರಣ ತುಂಬಾ ದೊಡ್ಡದಾದುದರಿಂದ ಪರಕೀಯರು ಕಾವಲುಗಾರನನ್ನು ಹೇಳಿ-ಕೇಳಿ ಪ್ರವೇಶ ಪಡೆಯಬೇಕು. ಅನಂತರ ವರಾಂಡದಲ್ಲಿದ್ದ ಆಫೀಸಿನಲ್ಲಿ ಪರಿಚಯ ಪತ್ರ ಅಥವಾ ಹೇಳಿಕೆ ನೀಡಿ ಅಲ್ಲಿಗೆ ತಮಗೆ ಬೇಕಾದ ವಿದ್ಯಾರ್ಥಿನಿಯರನ್ನು ಬರಮಾಡಿಕೊಂಡು ಮಾತಾಡಿಸುವುದು ಅನುದಿನದ ಕ್ರಮ. ಅದು ವಾರಾಂತ್ಯದಲ್ಲಿ ಮಾತ್ರ.

ಕಾವಲುಗಾರ ವಾರಾಂತ್ಯವಲ್ಲವಾದುದರಿಂದ ಒಳ ಹೋಗಲು ಅನುಮತಿ ನಿರಾಕರಿಸಿದ.

ರಾಮತೀರ್ಥ ಕಿಡಿಕಿಡಿಯಾದ. ಮಾತಿಗೆಮಾತು ಬೆಳೆಯಿತು.

ಕಾವಲುಗಾರನಿಗೆ ಮುಖದ ಮೇಲೆ ಚಟೀರನೆ ಬಾರಿಸಿದ ರಾಮು. ಒಡನೆ ಕೈ ಕೈ ಮಿಲಾಯಿಸಿತು. ಗಲಾಟೆ-ಬೊಬ್ಬೆ ಕೇಳಿ ತೋಟದ ಮಾಲಿಗಳು ಕೂಡಿಕೊಂಡರು. ಅವರು ಮೂವರಾದುದರಿಂದ ರಾಮು ಹಿಂಜರಿದ.

ಮದರ್ ಸಿಲ್ವಿಯಾ ಅಲ್ಲಿಂದಲೇ ಕೂಗಿ ಹೇಳಿದಳು... ಭಾನುವಾರ ಮಾತ್ರ ಸಂದರ್ಶನ ಕ್ರಮ. ನೀವು ಭಾನುವಾರ ಬನ್ನಿ. ರಾಮು ಕೋಪ, ಸಂತಾಪಗಳಿಂದ ಬೆಂದು ಬೇವಾಗಿ ಕುದಿಯುತ್ತ ಹಿಂದಿರುಗಿದ. ವಿವರ್ಣವಾದ ಮುಖಬಿಂಬ ಒಡಲ್ಗಿಚ್ಚನ್ನು ಸಾರಿ ಹೇಳಿತು.

ಮನೆಯಲ್ಲಿ ವಿಷಯ ತಿಳಿದ ಸಿದ್ಧು ಕೋಪೋದ್ದೀಪ್ತನಾದ. ರೋಷದಿಂದ ಹಲ್ಲು ಕಡಿಯುತ್ತ ಸಿದ್ಧು ಉಚ್ಚಸ್ವರದಲ್ಲಿ ಅಂದ "ನಡೆ, ನಾವಿಬ್ಬರೂ ಹೋಗಿ ಎಳೆದುಕೊಂಡು ಬರೋಣ."

ಆ ಮಾತಿಗೆ ಮಿಡುಕಿ ಬಿದ್ದ ನೀಲಮಣಿ "ಎಲ್ಲಿಯಾದರುಂಟೇ? ತಬ್ಬಲಿ ಮಗುವಿನ ಮೇಲೆ ಪುಂಡುತನ? ಅವಳು ಸ್ವಇಚ್ಛೆಯಿಂದ ಬರಬೇಕೇ ವಿನಾ ಎಳೆ ತಂದರೆ ಕೆರೆ-ಬಾವಿ ಬಿದ್ದಾಳು! ಅಷ್ಟು ಅರ್ಥವಾಗುವುದಿಲ್ಲವೇ? ಭಾನುವಾರ ಎಂದ ಮೇಲೆ ಭಾನುವಾರವೇ ಹೋಗಿ ನೋಡಿದರೆ ಒಳ್ಳೆಯದು. ಗದರಿಸಿ ಇನ್ನಷ್ಟು ಹಿಂಸಿಸುವುದು ಬೇಡ."

ಆ ಮಾತು ಎದೆಯಾಳಕ್ಕಿಳಿಯಿತು. ಭಾನುವಾರದವರೆಗೆ ಕಾಯುವುದೆಂದರೆ ಇನ್ನೂ ನಾಲ್ಕು ದಿನಗಳ ಮಾತು. ಅಷ್ಟು ಸಹನೆಯನ್ನು ತರುವುದಾದರೂ ಎಲ್ಲಿಂದ? ಬಿಸಿ ರಕ್ತದ ಝುರಿ ದೇಹದಾದ್ಯಂತ ಜಿಲ್ಲನೆ ಹರಿದಾಡಿ ಚೋದನೆ ನೀಡಿತು

ಮನಃಪ್ರಾಣಗಳಿಗೆ. ಅವಳು ಮೊದಲಿನಂತೆ ರಸ್ತೆಯಲ್ಲಿ ಓಡಾಡುತ್ತಿದ್ದರೆ ಎಳೆತರ ಬಹುದಾಗಿತ್ತು. ಶಾಲೆಯ ಆವರಣದೊಳಗೆ ಇರುವುದರಿಂದ ಕಷ್ಟ...ಎಂದೆಲ್ಲಾ ಯೋಚನೆ ಬಂತು.

ದಿನಗಳ ಗಾಲಿ ಒಂದೊಂದಾಗಿ ಉರುಳಿದುವು. ಭಾನುವಾರವು ಬಳಿ ಸಾರಿ ಬಂತು. ಹುಡುಗರು ತುದಿಗಾಲಿಂದಲೇ ಹೊರಟರು. ತಲೆಬಾಗಿಲಲ್ಲಿ ಹತ್ತು ಗಂಟೆಯಿಂದ ಹನ್ನೆರಡು ಗಂಟೆಯವರೆಗೆ ಸಂದರ್ಶನ ಎಂದು ನೋಟೀಸ್ ಬೋರ್ಡಿನ ಮೇಲೆ ಬರೆಯಲಾಗಿತ್ತು. ಸಿದ್ಧು ಅಫೀಸಿನ ಒಳಹೊಕ್ಕು "ನಾವು ಈಗಲೇ ಮನೋನ್ಮಣಿಯನ್ನು ಕರೆದೊಯ್ಯಬೇಕು. ನಮ್ಮ ತಾಯಿಯ ದೇಹಸ್ಥಿತಿ ತುಂಬಾ ಕೆಟ್ಟಿದೆ" ಎಂದು ಹೇಳಿಕೊಂಡ.

ಸೆಕ್ರೆಟರಿ ಕೈ ಗಡಿಯಾರದ ಮೇಲೆ ದೃಷ್ಟಿ ಹೊರಳಿಸಿ "ಈಗಿನ್ನೂ ಒಂಭತ್ತು ಗಂಟೆ. ಮಕ್ಕಳು ಸ್ನಾನ ತಿಂಡಿ. ಗಡಿಬಿಡಿಯಲ್ಲಿರುತ್ತಾರೆ. ನೀವು ಸ್ವಲ್ಪ ಹೊತ್ತು ಕಾಯುವುದು ಒಳ್ಳಿತು." ವಿಷಯ ನಿರೂಪಣೆ ಸಹಜವಾದರೂ ಇಬ್ಬರಿಗೂ ಸಹನೆ ಮೀರಿತು.

"ಮನೆಯಲ್ಲಿ ಇನ್ಯಾರಿಲ್ಲ ನಾವು ಹೋಗಲೇ ಬೇಕಾಗಿದೆ."

"ನೀವು ಇಬ್ಬರೂ ಇಲ್ಲಿರುವ ಅಗತ್ಯವಿಲ್ಲ. ಒಬ್ಬರು ಹೋಗಬಹುದಲ್ಲ?"

"ಹೇಗೂ ಬಂದಿದ್ದೇವೆ. ಕರೆದುಕೊಂಡು ಹೋದರಾಯಿತು."

"ಮದರ್ ಅಪ್ಪಣೆ ಕೇಳಿ ಬರುವೆ."

ಅವನು ಒಳ ಹೋಗಿ ಕೇಳಿಕೊಂಡು ಹಿಂದಿರುಗಿ ಬದು ನುಡಿದ "ಮನೋನ್ಮಣಿ ಸ್ನಾನ ಮಾಡುತ್ತಿದ್ದಾಳೆ. ಅವಳು ಪ್ರಾತರ್ವಿಧಿಗಳನ್ನು ಮುಗಿಸಿದ ನಂತರ ಸಿಗುತ್ತಾಳೆ."

ಇಬ್ಬರೂ ಪರಸ್ಪರ ಮುಖ ಮುಖ ನೋಡಿಕೊಂಡರು. ಇಬ್ಬರೂ ತೀರಾ ಅಸಹನೆಯಿಂದ ಅಲ್ಲಲ್ಲೇ ಪದಚಾರಣ ನಡೆಸಿದರು. ಕಾನ್ವೆಂಟಿನ ಗಡಿಯಾರ ಹತ್ತು ಗಂಟೆ ಬಾರಿಸಿದನಂತರವೇ ಅನೇಕ ಮಂದಿ ಸಂದರ್ಶಕರು ಬಂದು ವರಾಂಡದಲ್ಲಿ ನೆರೆದರು. ತಂದೆ-ತಾಯಿಗಳು, ಅಣ್ಣ-ತಮ್ಮಂದಿರು ಹೀಗೆ ಹತ್ತಾರು ಮಂದಿ ಕೂಡಿದರು. ಅವರವರ ಮಕ್ಕಳು ಅಥವಾ ಆತ್ಮೀಯರು ಹೊರಬಂದು ತಮ್ಮ ತಮ್ಮ ಬಂಧುಬಳಗವನ್ನು ಕೂಡಿ ಸಂತಸದಿಂದ ಮಾತುಕತೆ ನಡೆಸಿದರು. ಕೆಲವರು ತಮ್ಮವರೊಂದಿಗೆ ಹೊರಟುಹೋದರು. ಆದರೆ, ಮನೋನ್ಮಣಿಯೆಲ್ಲಿ?

ಸಿದ್ಧು ಉರಿದುರಿದು ಕೇಳಿದ ಮನೋನ್ಮಣಿಯೆಲ್ಲಿ?

ಕೊನೆಗೂ ಮನೋನ್ಮಣಿ ಮದರ್ ಬೆಟ್ಟಿಯ ಕೈ ಹಿಡಿದುಕೊಂಡೇ ತಲೆಬಾಗಿಲಲ್ಲಿ ಕಾಣಿಸಿಕೊಂಡರೂ ಹೊಸ್ತಿಲನ್ನು ದಾಟಲಿಲ್ಲ. ಮದರ್ ಬೆನ್ನ ಮರೆಯಿಂದಲೇ ಕೇಳಿದಳು,

''ಅತ್ತೆ ಹೇಗಿದ್ದಾಳೆ?''

''ಅವಳಿಗೆ ಆರೋಗ್ಯ ಕೆಡುತ್ತಿದೆ. ನಿನ್ನ ಕರೆತರಲು ಹೇಳಿದ್ದಾಳೆ.''

''ಉಹೂ, ನಾನು ಬರೋಲ್ಲ.''

''ಹಾಗೆಂದರೇನು? ನಿನ್ನ ಕರೆದುಕೊಂಡು ಬರಲು ಕಡ್ಡಾಯವಾಗಿ ಹೇಳಿದ್ದಾಳೆ ಅಮ್ಮ!''

ಅವಳು ಒಂದು ಹೆಜ್ಜೆ ಹಿಂಜರಿಯುವುದರೊಳಗೇ ಸಿದ್ದೂ ಒಳನುಗ್ಗಿ ಅವಳ ರಟ್ಟೆಗೆ ಕೈಹಾಕಿ ಎಳೆದುಕೊಂಡ. ಅವಳು ಮದರ್ ಬೆಟ್ಟಿಯನ್ನು ಅಪ್ಪಿ ಹಿಡಿದುಕೊಂಡು ಹೋ ಎಂದು ಅತ್ತಳು. ಸಿದ್ದುವಿನ ಬೆಂಬಲವಾಗಿ ರಾಮು ಸಹ ಅವಳನ್ನು ಎಳೆದುಕೊಳ್ಳಲು ಪ್ರಯತ್ನಿಸಿದ. ಗಲಾಟೆಯಿಂದ ಅಲ್ಲಲ್ಲೇ ಓಡಾಡುತ್ತಿದ್ದ ಇತರ ಹುಡುಗಿಯರೂ ಕೆಲಸದವರೂ ಸಂದರ್ಶನಕ್ಕಾಗಿ ಬಂದ ಹೊರಗಿನವರೂ ಅಲ್ಲೇ ಮೇಳೈಸಿ ರಾಮು ಸಿದ್ಧಿರವರಿಗೆ ಛೀಮಾರಿ ಹಾಕಿ ಹುಡುಗಿಯನ್ನು ಬಿಡಿಸಿಕೊಳ್ಳುತ್ತಲೂ ಅವಳು ಒಳಹೋಗಿ ಅಡಗಿಕೊಂಡಳು. ದೇಹದಾದ್ಯಂತ ಗಡಗಡ ನಡುಗುತ್ತಿದ್ದ ಅವಳಿಗೆ ಉಸಿರಾಡಲೂ ಭಯ. ಹತ್ತಾರು ಹುಡುಗಿಯರು ಕೂಡಿ ಅವಳನ್ನು ಒಳಕೊಠಡಿಯಲ್ಲಿ ಕೂಡಿಸಿ ಒಳ ಚಿಲಕ ಹಾಕಿಕೊಂಡು ಸಂತೈಸ ತೊಡಗಿದರೂ ಉಸಿ ಮುಸಿ ಅಳುತ್ತಲೇ ಇದ್ದಾಳೆ.

ವಿಷಯ ತಿಳಿದ ಮದರ್ ಸಿಲ್ವಿಯಾ ಹೊರಬಂದು ರಾಮುವನ್ನು ಕುರಿತು ''ಹೀಗೆ ಬಲಪ್ರಯೋಗ ಸರಿಯಲ್ಲ. ಮೊದಲೇ ಅವಳು ನೊಂದು ನಲುಗಿದ ಹುಡುಗಿ. ನೀವು ದಯವಿಟ್ಟು ಬಲಾತ್ಕರಿಸದೆ ಹಿಂದಿರುಗಿ ಹೋಗಿ''ಎಂದು ವಿನಯಪೂರ್ವಕವಾಗಿ ನುಡಿದಳು.

ಸಿದ್ದು ನಾಲ್ಕು ಹೆಜ್ಜೆ ಮುಂದುವರಿದು ಜೋರಿನಿಂದ ಹೇಳಿದ ''ನಾವು ಬಾಧ್ಯಸ್ಥರಿದ್ದು ಅವಳು ನಿಮ್ಮಲ್ಲಿರುವ ಕಾರಣವಿಲ್ಲ. ಅವಳು ಚಿಕ್ಕವಳು. ಅವಳಿಗೇನು ತಿಳಿಯುತ್ತೆ? ನಾವು ಹೇಳಿದಂತೆ ಅವಳು ಕೇಳಲೇ ಬೇಕು. ಈಗ ಬರಲಾರೆ ಎಂದರೆ ನಾವು ಎಳೆದೊಯ್ಯುವುದಕ್ಕೆ ನಿಮ್ಮದೇನು ಅಡ್ಡಿ? ನೀವವಳನ್ನು ಹೊರಹಾಕಿ! ನಾನು ಒದ್ದು ಎಳೆದೊಯ್ಯುವೆ! ನೀವು ನಮ್ಮ ಮಾತಿಗೆ ಬೆಲೆಕೊಡದೆ ಹೋದರೆ ನಾವು ಬಲಾತ್ಕಾರ ಮಾಡಬೇಕಾಗುತ್ತದೆ!''

ಕೋಪೋದ್ದೀಪ್ತನಾದ ಅವನ ಉಗ್ರಸ್ಥಿತಿ ಭಯಾನಕ. ಮದರ್ ಒಮ್ಮೆ ತತ್ತರಿಸಿದರೂ ಸ್ವಲ್ಪ ಸುಧಾರಿಸಿಕೊಂಡು "ನೋಡಿ, ಅವಳಿನ್ನೂ ಸುಧಾರಿಸಿಕೊಳ್ಳುವುದರಲ್ಲಿದ್ದಾಳೆ. ಅವಳ ಕಂಬನಿ ಇನ್ನೂ ಆರಿಲ್ಲ. ನೀವು ಹೀಗೆ ಬಲಾತ್ಕರಿಸುವುದು ಖಂಡಿತ ಸರಿಯಲ್ಲ. ಅವಳು ಹೋಗಲಾರೆ ಎಂದ ಮೇಲೆ ಮುಗಿಯಿತು. ನಾನವಳನ್ನು ಖಂಡಿತ ಬಲಾತ್ಕರಿಸಲಾರೆ. ನೀವು ದಯಮಾಡಿ."

"ಉಹೂ ಸಾಧ್ಯವೇ ಇಲ್ಲ!"

ಇಬ್ಬರೂ ಒಟ್ಟಾಗಿ ಅರಚಿದರು.

ಆಫೀಸಿನ ಸಿಬ್ಬಂದಿಯೂ, ಮಾಲಿಗಳೂ ಬಿಸಿಬಿಸಿ ವಾಗ್ವಾದವನ್ನು ಕೇಳಿ ಧಾವಿಸಿ ಬಂದರು. ಮದರ್ ಮತ್ತೊಮ್ಮೆ ಕೈ ಮುಗಿದು ಕೇಳಿಕೊಂಡಳು.

"ದಯವಿಟ್ಟು ಸಿಟ್ಟು ಮಾಡದೆ ಹೊರಟುಹೋಗಿ. ನೊಂದ ಮಗುವಿಗೆ ಇನ್ನಷ್ಟು ದುಃಖ-ಸಂಕಟ ತರುವುದು ಬೇಡ. ಇಲ್ಲಿ ನಾಲ್ಕಾರು ಮಕ್ಕಳೊಂದಿಗೆ ಅವಳು ಸೇರಿ ಕಾಲಹರಣ ಮಾಡುತ್ತಿದ್ದಾಳೆ. ನಿಮ್ಮಲ್ಲಿಗೆ ಬಂದರೆ ಅವಳ ಗತಿಯೇನು? ಇದನ್ನೆಲ್ಲಾ ನೀವು ಯೋಚಿಸಬೇಕಷ್ಟೆ?"

ದೈನ್ಯಯುತ ವಾಣಿ ಅಂತರಂಗದಿಂದ ಹೊರಬಿತ್ತು.

ಕಟು ಮನಸ್ಸು ಕರಗಲಿಲ್ಲ. ಪಾಷಾಣ ಹೃದಯ ಮಣಿಯಲಿಲ್ಲ. ಆತ ಇನ್ನಷ್ಟು ಉಗ್ರನಾದ.

ಸಿಲ್ವಿಯಾ ಕೈಮುಗಿದು ಅಲ್ಲಿದ್ದ ಇತರ ಮಹನೀಯರನ್ನು ಕೇಳಿಕೊಂಡಳು.

"ದಯವಿಟ್ಟು ಇವರಿಗೆ ತಿಳಿಯ ಹೇಳಿ ಒಡಂಬಡಿಸಿರಿ."

ಆ ಕೂಡಲೇ ಅಲ್ಲಿದ್ದವರೆಲ್ಲಾ ಒಟ್ಟುಗೂಡಿ ಮುಂದಾದರೂ ರಾಮು ಸಿದ್ಧು ಮಣಿಯಲೊಲ್ಲರು. ಸಂದರ್ಶನಕ್ಕಾಗಿ ಹೊರ ಬಂದಿದ್ದ ಹುಡುಗಿಯರೆಲ್ಲಾ ಒಳಹುದುಗಿ ಎಂದೋ... ದೂರದ ಒಳ ಕಿಟಿಕಿಗಳ ಕದ ಮುಚ್ಚಿಕೊಂಡು ಸಂದಿಯಲ್ಲಿ ನಿಟ್ಟಿಸುತ್ತಿದ್ದವು ಭಯಭೀತ ಕಣ್ಣಾಲಿಗಳು.

ಅಡಿಯಿಂದ ಮುಡಿಯವರೆಗೆ ಅನಾಗರಿಕ ವೇಷಭೂಷಿತರಾದ ತರುಣರು ಕ್ರೂರ ಪಶುತ್ವಕ್ಕೆ ಉಪಮಾನ ಅಥವಾ ಅಪಮಾನ ಅಥವಾ....

ಉಚ್ಚಸ್ವರದಲ್ಲಿ ಆಂತರಂಗಿಕ ಹೊಲಸೆಲ್ಲಾ ಹೊರ ಬೀಳುತ್ತಿದ್ದರೆ ಸಹಿಸುವುದೆಂತು? ಹತ್ತಾರು ಮಂದಿ ಕೂಡಿ ಅವರನ್ನು ದಬ್ಬಿಕೊಂಡೇ ಪ್ರಾಕಾರದ ಆಚೆಗೆ ಕಳುಹಿಸಿ ಬಾಗಿಲು ಹಾಕಿ ಬೀಗ ಜಡಿದರೂ.... ಅವರು ಸುಮ್ಮನಿರಲಿಲ್ಲ; ಗಂಟಲು ಬಿರಿಯುವವರೆಗೂ ಮನಸ್ವೀ ಅರಚಿ ನಾಲಿಗೆ ತಣಿಸಿಕೊಂಡರು.

* * *

ಮನೋನ್ಮಣಿಯ ಹೃದಯ ಧಾತ್ರಿಯಲ್ಲಿ ಸಮುದ್ರದ ಅಲೆಗಳು ಅಲ್ಲೋಲ ಕಲ್ಲೋಲವಾದುವು. ಮಾನಸಿಕ ಪ್ರಪಂಚವೆಲ್ಲಾ ಭ್ರಮಂತಭ್ರಮರ. ದೃಷ್ಟಿ ಪುಸ್ತಕದ ಮೇಲೆ ಹರಿದರೂ ಮನಸ್ಸು ವಿಷಯ ಗ್ರಹಣ ಮಾಡದು. ಕಟುಚಿಂತೆಯ ಪಿಶಾಚಲೋಕ ವರ್ತುಲಗಳು ಸುತ್ತಮುತ್ತ. ಎಲ್ಲಿ ಯಾವ ಕಡೆ ತಿರುಗಿದರೂ ಅಂಟಿಕೊಳ್ಳುತ್ತವೆ ಜೇಡನ ಬಲೆಯಂತೆ.

ಶಾಲೆಗೂ ಹೋಗಲಾರಳು; ಬಿಡದಿಯಲ್ಲೂ ಇರಲಾರಳು.

ಬಾರಿ ಬಾರಿಗೂ ಆರಿ ಬರುವ ಗಂಟಲಲ್ಲಿ ಆಹಾರ ಇಳಿಯುವುದು ಕಷ್ಟವೇ. ಹುಡುಗಿಯರ ಕೂಟದಲ್ಲಿದ್ದರೂ ತಾನು ದುಃಖಿನಿ. ಈಗ ತನ್ನ ಮುಂದಿರುವುದು ಸಾವು-ಬದುಕುಗಳ ಹೋರಾಟ. ತನ್ನ ಗಮ್ಯಸ್ಥಾನ ಯಾವ ಕಡೆಗೆ? ಯಾವ ದಾರಿ ಹಿಡಿಯಲಿ? ಅದು ಹಗಲಿರುಳೂ ಕಾಡುತ್ತಿರುವ ಪ್ರಶ್ನೆ.

''ಮನೋ. ...!''

ದನಿ ಬಂದತ್ತ ನೋಟ ಹೊರಳಿತು. ಆರೆಂದೂಹಿಸುವುದರೊಳಗಾಗಿ ಪುನಃ ಕರೆ ''ಮನೋ...!''

ಅದು ಮದರ್ ಜಾರ್ಜಿಯಾ ಕರೆ. ಕೊಠಡಿ ತಕ್ಷಣ ಎದ್ದು ಹೊರಟಳು ಮನೋ. ಆ ಮಧುರ ಕರೆಯನಾದ ಕಿವಿಯಲೆಯಲ್ಲಿ ಸಣ್ಣಗೆ ಮೊರೆಯುತ್ತಲೇ ಇದೆ. ಗಂಟಾರವ ನಿಂತ ಮೇಲೆ ಮಾಡು ಮುಟ್ಟಿದ ನಾದ 'ಜೊಯ್' ಎನ್ನುವಂತೆ.

ಜಾರ್ಜಿಯ ಕೊಠಡಿ ಇರುವುದು ದೂರದಲ್ಲಿ. ಅವಳು ಕರೆದುದು ಎಲ್ಲಿಂದ? ಕಾರಿಡಾರಿನಲ್ಲಿ ನಿಂತು ಸುತ್ತಮುತ್ತ ದೃಷ್ಟಿ ಚೆಲ್ಲಿಕೊಟ್ಟಳು ಮನೋ. 'ಲಿನೆನ್ ಸ್ಟೋರ್ಸ್' ನ ಅರೆದೆರೆದ ಬಾಗಿಲಿನಿಂದ ತಲೆ ಹಾಕಿ ಹಣುಕಿದ ಜಾರ್ಜಿಯಾ ''ನಿನ್ನನ್ನೇ ಕರೆದಿದ್ದು!''

''ಕೇಳಿಸಿತು ಮದರ್! ನೀವೆಲ್ಲಿದ್ದಿರೆಂಬುದು ತಿಳಿಯದೆ ನೋಡುತಿದ್ದೆ.''

ಮಾತು ಮುಗಿಯುವುದರೊಳಗಾಗಿ ಅವಳ ಬಳಿಗೆ ಚಿಮ್ಮಿತು ಎಳೆಯ ಜೀವ. ಒಗೆದ ದುಪ್ಪಟಿಗಳು, ಹೊದ್ದಿಕೆಗಳು, ದಿಂಬಿನಚೀಲ, ಟವಲ್ಲು ಮುಂತಾದ ಬಟ್ಟೆಗಳ ಕಣಜದಲ್ಲಿ ಉಸ್ತುವಾರಿ ನಡೆಸುತ್ತಿದ್ದ ಅವಳು ''ಆಗಲೇ ನಿನ್ನ ಕರೆಯಬೇಕೆಂದಿದ್ದೆ. ಬಟ್ಟೆಗಳ ಲೆಖ್ಖದಲ್ಲಿ ತಲೆ ಕೆಟ್ಟಿತು; ಮರೆತುಬಿಟ್ಟೆ.''

ಮನೋನ್ಮಣಿ ಅವಳ ಕೆಲಸದಲ್ಲಿ ಕೂಡಿಕೊಂಡಳು. ಬಟ್ಟೆಗಳನ್ನು ವಿಂಗಡಿಸಿ ಜೋಡಿಸುವ ಕಾಯಕ. ಒಮ್ಮೊಮ್ಮೆ ಲೆಕ್ಕ ತಪ್ಪಿ ತಲೆ ಕೆಡಿಸುವುದುಂಟು. ಮನೋ ಎಣಿಸಿಕೊಟ್ಟಂತೆ ಅವಳು ಬೀರುವಿನಲ್ಲಿ ಜೋಡಿಸುತ್ತ ನುಡಿದಳು ''ಮೊನ್ನೆಯಿಂದ

ನೀನು ಇನ್ನಷ್ಟು ಭೂಮಿಗೆ ಕುಸಿದಿದ್ದಿ ಮನೋ.'' ನಾವು ಎಂದೆಂದೂ ಧೂರ್ತ ಸಮಾಜವನ್ನು ದಾಟಿ ಬದುಕುತ್ತೇವೆ ಎಂಬುದು ಕನಸಿನ ಮಾತು. ದುಷ್ಟ-ಶಿಷ್ಟರ ಗಳೆರಡೂ ಸಮಾಜದಲ್ಲಿ ಇದ್ದೇ ಇರುತ್ತವೆ. ಕೇವಲ ನಿರ್ಲಿಪ್ತತೆ ನಮ್ಮನ್ನು ಕಡೆಹಾಯಿಸಬೇಕಾದರೆ ಸಂತೆಯೊಳಗಿದ್ದು ಗದ್ದಲಕ್ಕೆ ಅಂಜಿದರಾದೀತೆ? ನನಗೊತ್ತು ನಿನ್ನ ಕಷ್ಟ ಅಗಾಧ ಎಂಬುದು. ಭಗವಂತ ನಿನಗೆ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಎರಡನ್ನೂ ಕೊಟ್ಟಿದ್ದಾನೆ. ಕಳೆದ ಕಾಲವನ್ನು ಬದಿಗೊತ್ತಿ ಮುಂಬರುವ ಕಾಲವನ್ನೆದುರಿಸಲು ಸಿದ್ಧರಾಗುವುದೇ ಜೀವನ. ನೀನು ಸಿದ್ದು-ರಾಮುರವರಿಗೆ ಹೆದರಲೇ ಬೇಡ. ನಿನಗಿಲ್ಲಿ ಶ್ರೀರಕ್ಷೆಯಿದೆ. ದೈಹಿಕ ಶಕ್ತಿ-ಆತ್ಮಬಲವೃದ್ಧಿಯಾದಂತೆ ನಿನ್ನ ಭವಿತವ್ಯದ ರೂಪುರೇಷೆಗಳು ತಾನಾಗಿಯೇ ಗರಿಗೆದರುತ್ತವೆ. ನೀನು ಹಂತಹಂತವಾಗಿ ಮೇಲೇರುತ್ತಿ. ಇದೇ ಜೀವನೀಯ ವಿಜಯ ಘೋಷಣೆ ಅಥವಾ ಗಮ್ಯಸ್ಥಾನದ ನೇರಗುರಿ....''

ಉಪದೇಶದ ಅಕ್ಷರ ಅಕ್ಷರವೂ ಅಂತಃಪುಟದ ಮೇಲೆ ಚಿನ್ನದ ಗೆರೆಯಲ್ಲಿ ಮುದ್ರೆಯೊತ್ತಿದುವು. ಮನೋನ್ಮಣಿ ವಿಚಾರಶೀಲಳಾದರೂ ಭಾವಮುಗ್ಧೆ. ಪ್ರಯತ್ನಿಸಿಯೂ ಮರುನುಡಿಯಲಾಗಲಿಲ್ಲ. ಕ್ಷಣ ಕ್ಷಣಗಳು ಸುಂದು, ಗಳಿಗೆಗಳಿಗೆಗಳು ಉರುಳಿಹೋದುವು ಗಮನಕ್ಕೆ ಬಾರದಂತೆ.

''ಕೇಳು, ಮನೋ, ನನ್ನ ಕುಟುಂಬ ದೊಡ್ಡಕುಟುಂಬ. ಎಂಟು ಮಂದಿ ಹುಟ್ಟಿದವರು. ಅವರನ್ನೆಲ್ಲಾ ತೃಣೀಕರಿಸಿ ಜನಸೇವೆಗೆ ಬಂದವಳು ನಾನು. ಯಾರು ನನ್ನನ್ನು ಬಾಳಸಂಗಾತಿಯಾಗಿ ಮಾಡಿಕೊಳ್ಳಲು ಹಂಬಲಿಸುತ್ತಿದ್ದು, ನಾನೊಲ್ಲೆನೆಂದಾಗ ಆಜನ್ಮ ಬ್ರಹ್ಮಚಾರಿಯಾಗಿರುವುದಾಗಿ ಜೀವನಪಥದಿಂದ ಸರಿದು ನಿಂತಿದ್ದಾನೋ ಅವನನ್ನೂ ತೊರೆದು ಬಂದವಳು ನಾನು, ನೀನೂ ಸಹ ಇದೇ ಭಾವವನ್ನು ಕೈಕೊಂಡರೆ ಎಲ್ಲಿಯ ವ್ಯಾಮೋಹ? ಈ ಮಕ್ಕಳು, ಈ ಮದರ್‌ಗಳು, ಈ ಸಿಸ್ಟರ್‌ಗಳು ನಮ್ಮ ಆಜೀವ ಬಂಧುಗಳಾಗುವುದಿಲ್ಲವೇ? ಈಗ ನಮ್ಮಲ್ಲಿರಬೇಕಾದುದು ಕೇವಲ ಸೇವಾಮನೋಭಾವ. ಸ್ವಂತ ಸಂಸಾರಕ್ಕಿಂತ ವಿಶ್ವ ಸಂಸಾರ ಲೇಸು. ಸ್ವಂತ ಸಂಸಾರ ಕೊಡುವಂತಹ ನೋವು ವಿಶ್ವಸಂಸಾರ ಕೊಡುವುದಿಲ್ಲ. ನಮ್ಮ ಹೃದಯ ನಿಘಂಟಿನಲ್ಲಿ ಸತ್ಯ-ಪ್ರೇಮ-ಧರ್ಮ-ನಿಷ್ಕಾಮ-ನಿರ್ಲಿಪ್ತತೆ-ಸಂಸ್ಕೃತಿ-ಮುಂತಾದ ಅಮೋಘವಾದ ಶಬ್ದಭಂಡಾರವಿದೆ. ನಿಜವಾಗಿಯೂ ಭಗವಂತ ಅವುಗಳಿಗೆ ಅರ್ಥ ಬರೆದಿದ್ದಾನೆಯೇ? ಅಥವಾ ನಾವೇ ಎಂದೆಂದೂ ಅರ್ಥೈಸಲಾರೆವೋ ಗೊತ್ತಾಗಿ ಹೇಳಲಾರೆ. ನೀನೇ ಯೋಚಿಸಿ ನೋಡು. ಮಾನವೀಯತೆ ಎಂದರೇನು? ಈಗ ನಮ್ಮ ಪರಿಸರದ

ಜನಾಂಗ ಮಾನವೀಯತೆಯ ಚೌಕಟ್ಟಿಗೆ ಒಳಪಟ್ಟಿದೆಯೇ? ಆಕಾರದಲ್ಲಿ ಮಾನವ; ಕಾರ್ಯದಲ್ಲಿ ದಾನವ. ಈವೊಂದು ಪ್ರಕಾರವನ್ನು ನಾವು ದಾಟಿ ನಮ್ಮಾಪ್ತರನ್ನೂ ದಾಟಿಸಬಲ್ಲೆವಾದರೆ ಮಾನವ ಜನ್ಮ ಸಾರ್ಥಕ...ಇಲ್ಲವಾದರೆ ಬದುಕು ವ್ಯರ್ಥ ಮನೋ... ಜೀವೋ ಜೀವಸ್ಯ ಜೀವನಂ ಎಂದಿದೆ ವೇದ. ಬಹುಶಃ ಚಲಚರಗಳಿಂದಾಗಿ ಈ ಮಾತು ಹುಟ್ಟಿತೋ ಏನೋ...ಇಂದು ಪ್ರತಿಯೊಂದು ಜೀವನ ಪ್ರಕಾರಕ್ಕೂ ಅದು ಅನ್ವಯಿಸಿದರೆ ವಿಶೇಷವಲ್ಲ. ನಾಗರಿಕತೆ ಬೆಳೆದಷ್ಟೂ ಸುಸಂಸ್ಕೃತಿ ಬೆಳೆಯಬೇಕಾದುದು ನ್ಯಾಯ, ಆಗುತ್ತಿರುವುದು ವ್ಯತಿರಿಕ್ತ. ಸ್ವಾರ್ಥ-ವಿಷಯಲೋಲುಪ್ತಿ ಇಷ್ಟಕ್ಕೆಲ್ಲಾ ಕಾರಣ. ಈವೊಂದು ಲಕ್ಷ್ಮಣ ರೇಖೆಯನ್ನು ದಾಟಿದೆವಾದರೆ.. ಯೋಚಿಸಿ ನೋಡು ಮನೋ...!

ಮನೋನ್ಮಣಿಯ ತುಟಿಗಳಲ್ಲಿ ಕಂಡೂ ಕಾಣದಂತಹ ಸರಳ ಸ್ಮಿತ ಮಿನುಗಿ ಮಾಯವಾಯಿತು. ಚಿತ್ತಭಿತ್ತಿಯಲ್ಲಿ ಮದರ್ ಸಿಲ್ವಿಯಾ ನೇತೃತ್ವದಲ್ಲಿ ಇಡೀ ಕಾನ್ವೆಂಟ್ ಪ್ರಭಾತ್‌ಫೇರಿ, ನಡೆಸಿತು.

* * *

ಜಿಲ್ಲಾ ಕಲೆಕ್ಟರ್ ಜಾನ್‌ಹೂವರ್ ಬಿಳಿದೊಗಲಿನವ. ಪೋಲೀಸ್ ಸೂಪರಿನ್‌ಟೆಂಡೆಂಟ್ ಫೋಕ್‌ಲೀ ಬಿಳಿದೊಗಲಿನವ. ಬ್ರಿಟಿಷ್ ಸರಕಾರದ ಸೂತ್ರಧಾರಿಗಳಾದ ಅವರ ನ್ಯಾಯ ತೀರ್ಮಾನ ತಮ್ಮ ಮೂಗಿನ ನೇರಕ್ಕೆ.

ಖುದೀರಾಮನ ಸಂಸಾರವನ್ನು ನಿರ್ನಾಮಗೈದ ಪ್ರಕರಣ ಅಂತಿಮವಾಗಿ ತೀರ್ಮಾನವಾದುದು ಇವರುಗಳ ಆದೇಶದ ಪ್ರಕಾರವೇ.

ಮಹಮದ್ ಪಾಶ "ಒಂದು ಲಕ್ಷ ನಲವತ್ತೈದು ಸಾವಿರ ರೂಪಾಯಿ ಖುದೀರಾಮನಿಗೆ ಸ್ನೇಹ ಸಂಬಂಧದ ಮೇಲೆ ಕರಾರು ಪತ್ರವಿಲ್ಲದೆ ಕೊಟ್ಟಿದ್ದೆ. ಈಗ ಯತ್ನವಿಲ್ಲ. ಅವರ ಸುಟ್ಟಮನೆ ಜಮೀನು ಕುರುಡು ಕಾಸಿಗೂ ಬಾಳುವುದಿಲ್ಲ. ನನಗೆ ಅದನ್ನೆ ಕೊಡಿಸಿದರೆ ಕಷ್ಟಪಟ್ಟು ಊರ್ಜಿತಗೊಳಿಸಿಕೊಳ್ಳುವೆ. ದಯಮಾಡಿ ಕರುಣಿಸಿರಿ..." ಎಂದು ನಾಲ್ಕಾರು ಮಂದಿ ವಂಚಕರ ಸಾಕ್ಷ್ಯವನ್ನೂ ಹೇಳಿಸಿದ್ದ ಸರಕಾರಕ್ಕೆ.

ಮುಸ್ಲಿಮರಿಗೆ ಪ್ರಚೋದನೆ ನೀಡುವ ಉದ್ದೇಶವಿದ್ದ ಬ್ರಿಟಿಷ್ ಸರಕಾರ 'ಅಸ್ತು' ಎಂದಿತು.

ಮಹಮದ್ ಪಾಶ ಗಗನಕ್ಕೇರಿದ.

ಹಳೆಮನೆ ಮೈಸುಟ್ಟ ವಿಕೃತಿಯನ್ನು ಕಳಚಿಹಾಕಿ ಮೈಕೊಡವಿ ಮಡಿಯುಟ್ಟಿತು. ಪೀರ್ ಮತ್ತು ಅಬ್ದುಲ್ಲ ಜಮೀನಿನ ಉಸ್ತುವಾರಿ ಕೈಕೊಂಡರು. 'ಕಾಶ್ಮೀರ್ ಸ್ಟೋರ್'

ಎಂಬ ನಾಮಧೇಯ ಹೊತ್ತ ಭವ್ಯವಾದ ಅಂಗಡಿ; ಅದರಲ್ಲಿ ಕಾಶ್ಮೀರದ ಅತ್ಯುತ್ತಮ ಸರಕುಗಳು. ಬಿರುಸಿನ ವ್ಯಾಪಾರ. ಹಿಂದಿನ ದಿನಗಳನ್ನು ಅಣಕಿಸುವಂತಹ ಭವ್ಯತೆ. ಕೊಟ್ಟಿಗೆಯಲ್ಲಿ ಸೀಮೆ ಹಸುಗಳು. ಜಮೀನಿನಲ್ಲಿ ಚಿನ್ನದ ಬೆಳಸು, ಮಹಮದ್ ಪಾಶ ಈಗ ಧನಿಕರೊಡೆಯ; ಮಾನಿಷ್ಠರಲ್ಲಿ ಮಾನಿಷ್ಠ.

ದಿನವೂ ಆ ಹಾದಿಯಲ್ಲಿಯೇ ಓಡಾಡುವ ಸುಶೀ ಆವೊಂದನ್ನೂ ಮನೋನ್ಮಣಿಯ ಮುಂದೆ ಹೇಳಿರಲಿಲ್ಲ. ತನ್ನೊಳಗೇ ನೊಂದು ನುಂಗುವುದಷ್ಟೆ... ಎಷ್ಟೋ ವೇಳೆ ಸಂಕಟ ತುಂಬಿದೊಡಲು ಕೋಡಿ ಹರಿಯುವುದುಂಟು. ಅದೆಲ್ಲಾ ತನ್ನವರಲ್ಲಿ ಮಾತ್ರ.

ಸುಶೀ ಸಂಜೆಯಲ್ಲಿ ಮನೆಯ ಹಾದಿ ತುಳಿಯುವ ಮುನ್ನ ಮನೋನ್ಮಣಿಯನ್ನು ಕಂಡಾಗ ಅವಳು ಸನಿಹಕ್ಕೆ ಬಂದು ಕೈಹಿಡಿದುಕೊಂಡು ಕೇಳಿದಳು ''ಈಗ ನಮ್ಮ ಮನೆಯಲ್ಲಿ ಮಹಮದ್ ಪಾಶ ಒಕ್ಕಲಾಗಿದ್ದಾನಂತೆ ಹೌದೇ?''

''ಹೌದು ಮನೋ, ಅದಾಗಲೇ ಹಳೆಯ ಮಾತು.''

''ಹರೇ ರಾಂ! ಇಷ್ಟು ದಿನವಾದರೂ ನೀನು ಹೇಳಲಿಲ್ಲವಲ್ಲ?''

''ಹೇಳಿ ನಿನ್ನನ್ನೇಕೆ ನೋಯಿಸಲಿ ಹೇಳು?''

ಮನೋನ್ಮಣಿ ನಿರುತ್ತರೆ. ಹೃದಯ ತಂತುಗಳು ಕಟ್ ಕಟ್ಟನೆ ತುಂಡುಗಡಿದಂತೆ ಭಾಸವಾಯಿತು.

''ಅವರು ಅಷ್ಟೇ ಅಲ್ಲ; ರಾಜ ವೈಭವದಲ್ಲಿದ್ದಾರೆ. ಅವರಿಗೆ ಒಂದಲ್ಲ ಒಂದು ದಿನ ಶಾಸ್ತಿ ಮಾಡುತ್ತಾನೆ ಭಗವಂತ. ಮಾಡಿದುಣ್ಣೋ ಮಹರಾಯ ಎಂಬ ನಾಣ್ನುಡಿ ಖಂಡಿತ ಸುಳ್ಳಾಗದು.''

ಆ ಮಾತು ಕೇಳಿ ಮನಸ್ಸು ಇನ್ನಷ್ಟು ಮುದುಡಿತು. ಒಂದೇ ಉಸಿರಿಗೆ ಕೇಳಿದಳು ಅವಳು,

''ಭಗವಂತ ನನ್ನನ್ನೇಕೆ ಇಷ್ಟು ಹೊಟ್ಟೆ ಉರಿಸುತ್ತಾನೆ ಹೇಳು?''

"ಮನೋ..."

''ಅಂದು ನನ್ನನ್ನೂ ಕರೆದುಕೊಂಡಿದ್ದಿದ್ದರೆ ಏನು ಕಷ್ಟವಾಗುತ್ತಿತ್ತು ಅವನಿಗೆ?''

''ಅದಕ್ಕುತ್ತರ ಅವನೇ ಹೇಳಬೇಕು.''

* * *

ರುಕ್ಕು ದಾಸಿ ಒಳಗಡೆ ಪದಾರ್ಪಣೆ ಮಾಡಿದೊಡನೆಯೇ ಮನೋನ್ಮಣಿಗೆ ಏನೋ ನಿರೂಪ ಬಂದಿದೆಯೆಂಬುದು ಹೊಳೆಯಿತು. ಹುಬ್ಬೇತ್ತಿ ನೋಡಿ

ದಾಗಲೇ ಅವಳು ''ದೊಡ್ಡಮ್ಮಾವರು ನಿನ್ನನ್ನು ಕರೆಯುತ್ತಿದ್ದಾರೆ'' ಎಂದಳು.

ಮನೋನ್ಮಣಿ ಆ ತಕ್ಷಣವೇ ಅಲ್ಲಿಂದ ಹೊರಟಳು. ಕಾರಿಡಾರನ್ನು ದಾಟಿ ಬಲಕ್ಕೆತಿರುಗಿದರೆ ಮೊದಲ ಕೊಠಡಿಯೇ ಮದರ್‌ಸಿಲ್ವಿಯಾಳದು. ಬಾಗಿಲ ಬಳಿನಿಂತು ಮೆಲ್ಲಗೆ-ಬಹು ಮೆಲ್ಲಗೆ ಬಾಗಿಲನ್ನು ಮಿಡಿದಳು. ಕಟ. ಕಟ. ಕಟ. ಕಟ.

''yes please!''

ಮನೋನ್ಮಣಿ ಒಳಗಡೆ ಹೋದರೆ ನೀಲಮಣಿ ತನಗಾಗಿ ಕಾದು ಕುಳಿತಿದ್ದುದು ಕಂಡುಬಂತು. ಆಕೆಯ ಮುಖ ಬತ್ತಿ ಬಾಡಿ ಜೀವಶ್ಯವದಂತೆ ತೋರುತ್ತಿದ್ದಾಳೆ. ಅವಳ ಬಳಿಗೆ ಹೋಗಲೋ ಬೇಡವೋ ಎಂಬಷ್ಟು ಭಯ. ಸಿದ್ಧು-ರಾಮು ಗಲಾಟೆ ಮಾಡಿದಂತೆ ಇವಳೂ ಮಾಡಿದರೆ....?

''ಸಂಕೋಚವೇಕೆ ಬಾಮ್ಮಾ.''

''ಬಾ ಮನೋ...'' ಸಿಲ್ವಿಯಾ ಪಕ್ಕದ ಕುರ್ಚಿಯಲ್ಲಿ ಕೂಡಿಸಿಕೊಂಡು ''ನಿನ್ನನ್ನು ನೋಡಿ ಹೋಗಲು ಬಂದಿದ್ದಾಳೆ ನಿನ್ನ ಅತ್ತೆ.''

''ಈಗ ಹೇಗಿದ್ದೀ ಮಗಳೇ?''

ಕೇಳಲಾರದೇ ಕೇಳಿದಳು ನೀಲಮಣಿ. ಮಾನಸಿಕ ತುಮುಲ-ಸಂಕೋಚಗಳು ತಟ್ಟನೆ ಮುದ್ರೆ ಒತ್ತಿದುವು ಮುಖದ ಮೇಲೆ.

''ನೀವು ಹೇಗಿದ್ದೀರಿ? ಜ್ವರ ಬಿಟ್ಟಿತೇ?''

''ನಾನು ಹೇಗಿದ್ದರೇನು? ಈ ಜನ್ಮಕ್ಕೆ ಗುಂಡು ಹಾಕಿದರೂ ಸಾಯುವುದಿಲ್ಲ ಬಿಡು.''

ತಾತ್ಸಾರ ತಾಪಾನುತಾಪಗಳ ಮಿಶ್ರಣವಾದ ದನಿ ಗದ್ಗದಿಸಿತು.

ಮನೋನ್ಮಣಿ ಮಾತಾಡದೆ ತಲೆ ಬಾಗಿದಳು.

''ಸಿದ್ಧು-ರಾಮು ಇಲ್ಲಿ ತುಂಬಾ ಗಲಾಟೆ ಮಾಡಿದರೆಂದು ತಿಳಿದು ಬಹಳ ಸಂಕಟವಾಯಿತು ಮಗಳೇ! ದುಷ್ಟ ಮಕ್ಕಳು. ಮಾತು ಕೇಳುವವರಲ್ಲ. ಅವರು ಕರೆಯಬಂದರೆ ಹೋಗಲೇಬೇಡ, ಎಂದಾದರೂ ನಾನೇ ಹೀಗೆ ಬಂದು ನೋಡುವೆ. ಇಲ್ಲೇ ಇದ್ದು ಚೆನ್ನಾಗಿ ಓದಿಕೋ, ಮಗಳೇ...''

''..........''

''ಅವರ ಗಲಾಟೆಯುನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಅವರು ಮೊದಲಿನಿಂದಲೇ ಹೀಗೆಯೇ ಎಂಬುದು ನಿನಗೂ ಗೊತ್ತು. ಅಂತಲೇ ಕ್ಷಮಿಸಿಬಿಡು.''

ನೀಲಮಣಿ ಸ್ವಲ್ಪಹೊತ್ತಿದ್ದು ತನ್ನ ಮನೆಯ ಕಡೆ ಹೊರಟಳು.

ಮೇಜಿನ ಮೇಲಿದ್ದ ಪುಷ್ಪಕರಂಡದಲ್ಲಿ ಮಘಮಘಿಸುತ್ತಿದ್ದ ಹೂಗಳಲ್ಲಿನ ಮಧುಪಾನಕ್ಕಾಗಿ ಹಾರಿ ಬಂದಿದ್ದ ನಾಲ್ಕಾರು ಭ್ರಮರಗಳು ಜೊಯ್ ಜೊಯ್ಯನೆ ಝೇಂಕರಿಸುತ್ತ ಹೊರ ಹೋಗಲು ಪ್ರಯತ್ನಿಸಿದರೆ ಬಂದ ಹಾದಿ ತಿಳಿಯುತ್ತದೆಯೇ? ಕಿಟಕಿಯಿಂದ ಕಿಟಕಿಗೆ ಹಾರಾಡುವ ಅವುಗಳು ಗಾಜಿನ ತೆರೆಯನ್ನು ದಾಟಲಾರದೆ ಅಲ್ಲೇ ಝೇಂಕರಿಸುತ್ತಿದ್ದರೆ 'ಅಯ್ಯೋ' ಎನಿಸುವಂತಹ ದೃಶ್ಯ. ಮನೋನ್ಮಣಿ ಅತ್ತ ನೋಡುತ್ತಿದ್ದು ಕಿಟಕಿಯ ಕದಗಳನ್ನು ತೆಗೆದು ಹೊರ ಹೋಗಲು ಸಹಾಯ ಮಾಡಿದಳು.

೭

ನೀಲ ನೀಲಿಮಾ ಕ್ಷೇತ್ರದಲ್ಲಿ ಪ್ರಭಾತ್ ಸೂರ್ಯನ ಉತ್ಥಾನ.

ಒಯ್ಯೊಯ್ಯನೆ ದಿಶೆಯಿಂದ ದಿಶೆಗೆ ತೀಡಿಬರುವ ಮಂದ ಮಂದಾನಿಲ. ಆಗಲೇ ದಿನಚರಿ ಆರಂಭವಾಗಿ ಎಂದೋ ಮದರ್ ಬೆಟ್ಟಿ ಅಡುಗೆ ಮನೆಯ ನಿರ್ವಹಣೆ ಒಂದು ತಿಂಗಳು ವಹಿಸಿದರೆ ಇನ್ನೊಂದು ತಿಂಗಳು ಉಗ್ರಾಣ.

ಮನೋನ್ಮಣಿ ಉಗ್ರಾಣಕ್ಕೆ ಮದರ್ ಬೆಟ್ಟಿಯೊಡನೆ ಹೋದಾಗ ಇಲಿಗಳೆರಡು ಮುಲು ಮುಲು ಓಡಾಡುವುದು ಕಂಡಿತು.

"ಮದರ್ ಇಲಿಗಳನ್ನು ನೋಡಿದಿರಾ?"

"ಪಾಷಾಣ ಇಡಬೇಕು. ಇಲ್ಲೇ ಬಿಲಮಾಡಿಕೊಂಡು ದವಸ ಧಾನ್ಯ ತಿಂದುಹಾಕುತ್ತೀವೆ."

'ಪಾಷಾಣ' ಎಂಬ ಶಬ್ದ ತಲೆಯನ್ನು ರೊಯ್ಯನೆ ಹೊಕ್ಕಿತು. ಒಂದಲ್ಲ, ಒಂದು ಸಂದರ್ಭದಲ್ಲಿ ನನ್ನಂತಹ ಅಭಾಗಿನಿಯ ಉಪಯೋಗಕ್ಕೂ ಬರುತ್ತದೆ ಎಂಬ ಯೋಚನೆ ಬಾರದಿರಲಿಲ್ಲ.

ಆದರೆ..

ಮದರ್‌ಗಳ ಅಭಿಪ್ರಾಯಕ್ಕೂ ತನ್ನ ಯೋಚನೆಗೂ ಅದೆಷ್ಟು ಅಂತರ? ಒಂದೆರಡುಗಳಿಗೆ ವಿಷಯವನ್ನು ತನ್ನಲ್ಲೇ ಮೆಲುಕು ಹಾಕಿದಳು ಮನೋನ್ಮಣಿ. ಬಾಚದ ಅಪಾರವಾದ ಅಲಕರಾಶಿ ಮುಖದ ಸುತ್ತು ಹರಡಿ ಬೆನ್ನು ಭುಜಗಳ ಮೇಲೆ ಇಳಿಬಿದ್ದು ಮುಖದ ಶೋಭೆಗೆ ಇಂಬುಕೊಟ್ಟಿತ್ತು. ದುಃಖದಿಂದ ಕಂದಿ ಕುಂದಿದ ಮುಖವಾದರೂ ಎಂತಹ ಸಲ್ಲಕ್ಷಣ?

ಮದರ್ ಬೆಟ್ಟಿ ಉಗ್ರಾಣದ ಪರಿಶೀಲನೆ-ಜೋಡಣೆ-ಶುಚಿತ್ವ ಇವುಗಳಲ್ಲಿ ಆಸಕ್ತಿ ವಹಿಸಿದ್ದುದು ಮನೋನ್ಮಣಿಗೂ ಕೈತುಂಬಾ ಕೆಲಸ ಒದಗಿಸಿತು. ಇಬ್ಬರೂ ಶುದ್ಧೀಕರಿಸಿದಾಗಲೇ ಒಳಗಡೆ ಪದಾರ್ಪಣೆ ಮಾಡಿದ ಸುಶೀ...ನಿನ್ನ ನೋಡೋಣ ವೆಂದು ಬಂದೆ... ಎಂದಳು, ಮನೋನ್ಮಣಿಗೆ.

"ಗುಡ್ ಮಾರ್ನಿಂಗ್ ಮದರ್!"

"ಗುಡ್ ಮಾರ್ನಿಂಗ್ ಡಿಯರ್!"

ಹುಡುಗಿಯರಿಬ್ಬರೂ ಹೊರ ಅಂಗಣಕ್ಕೆ ಬಂದರು. ಮೈಮನಗಳಿಗೆ ಬೆಚ್ಚನ್ನ ಮುದ್ರೆಯಿಡುವಂತಹ ಹದವಾದ ಹೊಂಬಿಸಿಲು. ಗಿಡಮರಗಳೆಲ್ಲಾ ಸುಮ ಸಮುಚ್ಚಯದಿಂದ ತುಂಬಿ ವರ್ಣವರ್ಣಾಂತವಾಗಿ ನಳ ನಳಿಸುವ ಹಸುರ್ಲೋಕ. ಹಿತಕರವಾದ ತಂಗಾಳಿ ಈ ಜಗತ್ತು ಎಷ್ಟು ಸುಂದರವೋ ಅಷ್ಟೇ ರುದ್ರಭಯಂಕರ ಅಂತರಂಗ ಕೂಗಿ ಹೇಳಿತು.

"ಶಾಲೆ ಶುರುವಾಗಲು ಇನ್ನೂ ಆರು ನಿಮಿಷಗಳಿವೆ. ಅಲ್ಲಿಯವರೆಗೆ ಉದ್ಯಾನದ ಕಡೆ ಹೋಗೋಣವೇ?"

"ಒಳ್ಳೆಯದು."

ಇಬ್ಬರೂ ಪ್ರಾಂಗಣದ ಉದ್ಯಾನಕ್ಕೆ ಹೋಗಿ ಅಡ್ಡಾಡುತ್ತಿದ್ದರೆ ಮನಃಪ್ರಾಣ ಗಳು ಹೂವಿನಷ್ಟು ಹಗುರ.

"ದೈವದತ್ತವಾದ ಯಾವೊಂದು ವಸ್ತುವಿನ ನಿರ್ಮಿತಿಯೂ ಎಷ್ಟು ಸತ್ಯ ಸುಂದರವೋ ಅದರ ವೈಶಿಷ್ಟ್ಯವನ್ನು ಅರಿತುಕೊಳ್ಳಲಾರದ ನಮ್ಮ ಬೌದ್ಧಿಕಸ್ತರವೆಲ್ಲ ವಿಷವರ್ತುಲ."

"ಹರೆ! ರಾಂ! ಶತ ಶತಮಾನಗಳ ದಾಸ್ಯ ಸಾಮಾನ್ಯವೇ? ಬುದ್ಧಿಮಾಂದ್ಯಗಳಿಂದ ಕುಗ್ಗಿಹೋಗಿದ್ದಾರೆ ನಮ್ಮ ಜನ!"

"ನಿಜ ಮನೋ...ಹೊರಜಗತ್ತಿನ ಸ್ನೇಹ ಸಂಪರ್ಕವಿಲ್ಲ. ಲೋಕದ ಪ್ರಗತಿ ನಮ್ಮ ಅರಿವಿಗೆ ಬಾರದಷ್ಟು ದೂರಾತಿದೂರ."

"ನಮ್ಮವರ ಕೈಗೆ ಆಡಳಿತ ಸೂತ್ರ ಸಿಗುವತನಕ ಹೀಗೆಯೇ."

"ಇಲ್ಲಿ ಅಡ್ಡಾಡುತ್ತಿದ್ದರೆ ಸ್ವರ್ಗಲೋಕಕ್ಕೂ ಮೀರಿದ ಶಾಂತಿ. ಚಿಂತೆ ಗಾವುದ ದೂರ. ಆದರೂ ನಿಸರ್ಗ ಸೌಂದರ್ಯವನ್ನು ಉಳಿಸಿಕೊಳ್ಳುವ -ಜೀವನ ಸತ್ಯವನ್ನು ಬೆಳೆಸಿಕೊಳ್ಳುವ ಉದಾರತೆ ನಮಗಿಲ್ಲದಿರುವುದು ಮಾನವೀಯತೆಯ ಕೊರತೆ."

ಶಾಲೆಯ ಗಂಟೆ ಬಾರಿಸಿತು. ಸತ್ಯ-ಧರ್ಮ-ನೀತಿಗಳ ಕ್ಷೇಮವನ್ನು ಹೇಳಿ... ಹೇಳಿ...

ಟಣ್, ಟಣ್, ಟಣ್, ಟಣ್, ಟಣ್, ಟಣ್, ಟಣ್.

* * *

ಅಂದು ಪಾಠ ಮುಗಿದನಂತರ ಊಟದ ಸಮಯದಲ್ಲಿ ಶಾಲೆಯಿಂದ ಚಿಗರಿಗಳಂತೆ ಹುಡುಗಿಯರೆಲ್ಲಾ ಹೊರಬಿದ್ದರು. ನಡು ನೆತ್ತಿಯ ಮೇಲೆ ಜಗಜಗಿಸುವ ಸೂರ್ಯ. ಹೊಟ್ಟೆಯಲ್ಲಿ ಉರಿಯುವ ಹಸಿವು-ಬಾಯಾರಿಕೆ.

ಊಟಕ್ಕೆ ಒಳಹೋದ ಮನೋನ್ಮಣಿ ಇನ್ನೂ ಹೊರಬಂದಿಲ್ಲ.

ಅವಳಿಗಾಗಿ ಕಾದಿದ್ದ ಸುಶೀ ಮನಸ್ಸು ಹೇಳಲೋ ಬೇಡವೋ ಎಂಬ ಸಂಕೋಚದ ಮುದ್ದೆ. ಅಷ್ಟರಲ್ಲೇ ಟೀಚರ್ ಮೃಣಾಲಿನಿ ಎದುರಾದಳು.

"ಏನು ಸುಶೀ?"

"ನೀವು ಸಿಕ್ಕಿದ್ದು ಒಳ್ಳೆಯದಾಯ್ತು ಟೀಚರ್. ನಿಮಗೊಂದು ವಿಷಯ ತಿಳಿಸುವುದುಂಟು.."

"ಏನು ಹೇಳು?"

"ಹೊರಗಡೆ ಹೋಗೋಣವೇ?"

ಸುತ್ತಮುತ್ತಲಿನ ಹುಡುಗಿಯರ ದಂಡನ್ನು ಗಮನಿಸಿ "ಬಾ ಹೋಗೋಣ."

ಇಬ್ಬರೂ ಹೂದೋಟದ ಹೆಮ್ಮರದ ತಣ್ಣೆಳಲಿಗೆ ಹೋದರು.

"ಟೀಚರ್, ಮಹಮದ್ ಪಾಶ ಏನು ಮಾಡಿದ್ದಾನೆ ಗೊತ್ತೆ?"

"ಏನು ಹೇಳು? ಏನು ಮಾಡಿದ್ದಾನೆ?"

ಸುಶೀ ಸುತ್ತಮುತ್ತ ನೋಡಿ ಹತ್ತಿರದಲ್ಲಿ ಯಾರೂ ಇಲ್ಲವೆಂಬುದನ್ನು ಗಮನಿಸಿ ಬಾಯ್ದೆರೆದಳು,

"ಮಹಮದ್ ಪಾಶ ಮನೋ ಮನೆಯವರ ಹದಿನಾಲ್ಕು ಗೋರಿಗಳನ್ನೂ ಕಿತ್ತೊಗೆದು ಉತ್ತಿ ಬೀಜ ಬಿತ್ತಿದ್ದಾನೆ!"

"ನಿಜವಾಗಿ?"

"ಹೌದು. ಮನೋಗೆ ಹೇಳಲೋ ಬೇಡವೋ? ನೆರೆಹೊರೆಯವರೆಲ್ಲಾ ಉರಿದುರಿದು ಬೀಳುತ್ತಿದ್ದಾರೆ. ಇದು ಇನ್ನೊಂದು ರಾದ್ಧಾಂತಕ್ಕೆ ದಾರಿ ಮಾಡಬಹುದು.!"

"ಅವು ಇದ್ದುದೆಲ್ಲಿ?"

''ಅವರ ಜಮೀನಲ್ಲೇ, ಊರವರೆಲ್ಲಾ ಒಗ್ಗೂಡಿ ಅವರ ಜಮೀನಿನಲ್ಲೆ ಇರಲೆಂದು ಸಾಲಾಗಿ ಸಮಾಧಿ ಮಾಡಿದ್ದರು. ಜಮೀನನ್ನ ಮೋಸದಿಂದ ಪಡೆದು ಕೊಂಡಿದ್ದಲ್ಲದೆ·ಈ ಹೀನ ಕೆಲಸ ಮಾಡಿದ್ದಾನೆ!''

''ನೀನು ಈಗಲೇ ಇದನ್ನು ಮನೋನ್ಮಣಿಗೆ ಹೇಳಬೇಡ. ಹೇಳಿದರೆ ಅದನ್ನೂ ಮನಸ್ಸಿಗೆ ಹಚ್ಚಿಕೊಂಡರೆ ಕಷ್ಟ.''

''ಬಹಳ ದುಷ್ಟಜನ. ಇದಕ್ಕೇನು ಮಾಡಬೇಕು ಹೇಳಿ?''

''ನೆರೆಹೊರೆಯವರು ಪೋಲೀಸಿಗೆ ದೂರು ಕೊಡಬೇಕು.''

''ಹಿಂದೆ ಕೊಟ್ಟಾಗ ಆದ ಪ್ರಯೋಜನ ಲೋಕಕ್ಕೆ ತಿಳಿದದ್ದು!''

''ಆಗ ಪ್ರತ್ಯಕ್ಷದರ್ಶಿಗಳಾರೂ ಇರಲಿಲ್ಲವಾದ್ದರಿಂದ ಸರಿಯಾದ ಪುರಾವೆ ಸಿಕ್ಕಲಿಲ್ಲ.''

''ರೋಗಿ ಬಯಸಿದ್ದೂ ಹಾಲೂ ಅನ್ನ; ವೈದ್ಯ ಹೇಳಿದ್ದೂ ಹಾಲೂ ಅನ್ನ!''

''ನಿಜ; ಆಗಿದ್ದೇ ಹಾಗೆ!''

ಮೃಣಾಲಿನಿ ಖಿನ್ನ ಮುಖದಿಂದ ನಿಟ್ಟುಸಿರು ಬಿಟ್ಟಳು.

* * *

ಮದರ್ ಸಿಲ್ವಿಯಾ ಅಂದಿನ ಟಪ್ಪಾಲು ನೋಡಿ ಟ್ರೇಯಲ್ಲಿಡುವುದರೊಳಗಾಗಿ ಬಾಗಿಲಲ್ಲಿ ಕಟಕಟ ಸದ್ದು,

''Yes please!'

ಬಂದವರು ನಾಲ್ಕಾರು ಹುಡುಗಿಯರು ಎಲ್ಲರ ಮುಖದ ಮೇಲೂ ಪ್ರೇತಕಳೆ.

ಸಿಲ್ವಿಯಾಳ ಆಶ್ಚರ್ಯವಿಸ್ಮಿತ ನೋಟ ಮಿಸುಕಲಿಲ್ಲ.

ಸುಶೀ ಮತ್ತು ಕಿರಣ್ ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ, ಮುಖ ಮೈಗೆ ಪೆಟ್ಟು ಬಿದ್ದು ನೆತ್ತರಕಲೆ ತೊಟ್ಟ ಬಟ್ಟೆಗಳ ಮೇಲೆ!

''ಏನಾಯ್ತು ಮಗೂ? ಏನು ಸಮಾಚಾರ? ಪೆಟ್ಟಾದುದು ಹೇಗೆ?''

ಸುಶೀ ಬೋರಿಟ್ಟು ಅತ್ತಳು....ಪ್ರಯತ್ನಿಸಿದರೂ ಮಾತು ಹೊರಡಲಿಲ್ಲ.

''ಮದರ್! ಸಿದ್ದು ಮಾಡಿದ ಕೆಲಸ ಇದು. ಇವರು ಶಾಲೆಗೆ ಬರುವಾಗ ಸಿಕ್ಕಿ ಅಟ್ಟಿಸಿಕೊಂಡು ಬಂದನಂತೆ! ಇವರು ದಿಕ್ಕೆಟ್ಟು ಓಡಿ ಬರುವಾಗ ಕಲ್ಲೆಡವಿ ಬಿದ್ದರೆ ಬಿದ್ದಲ್ಲಿಗೆ ಬಂದು ಹೊಡೆದು ಒದ್ದು ಮನಸ್ವೀ ಬೈದು ''ಮನೋನ್ಮಣಿಯನ್ನು ಅಡಗಿಸಿಟ್ಟವರೇ ನೀವು!.. ಎಂದು ದೂರಿದನಂತೆ! ಇದಕ್ಕೇನೆನ್ನೋಣ?''

ಇತರೆ ಹುಡುಗಿಯರು ಭಾವೋದ್ವೇಗದಿಂದ ವಿಷಯವನ್ನು ಬಿತ್ತರಿಸಿದರು.

ಮದರ್ ಸಿಲ್ವಿಯಾ ಇಬ್ಬರನ್ನೂ ಸಂತೈಸಿ ಗಾಯಗಳನ್ನು ತೊಳೆದು ಬ್ಯಾಂಡೇಜು ಕಟ್ಟಿ ಪ್ರಥಮ ಚಿಕಿತ್ಸೆ ನಡೆಸಿ ವಿಶ್ರಾಂತಿಗಾಗಿ ಸ್ವಲ್ಪ ಹೊತ್ತು ಕೊಠಡಿಯಲ್ಲೇ ಉಳಿಸಿಕೊಂಡಳು.

''ಓ...!ಮದರ್! ಕರಡಿ ಬೆನ್ನಟ್ಟಿ ಬಂದಂತೆ ಬಂದ! ನಮ್ಮ ಜೀವ ಹೌಹಾರಿತು.'' ಬಿಕ್ಕಿ ಬಿಕ್ಕಿ ಅತ್ತಳು ಸುಶೀ.

ಮನೋನ್ಮಣಿಗೆ ಸುದ್ದಿ ತಿಳಿದು ಓಡಿ ಬಂದರೆ ಬಟ್ಟೆಯ ಮೇಲಿನ ನೆತ್ತರಿನ ಕಲೆ; ಹಣೆ, ಮುಖದ ಮೇಲೆ ಬ್ಯಾಂಡೇಜಿನ ಕಟ್ಟು, ಮೊಣಕಾಲ ಒಡೆತ. ನೋಡಿದ ಪ್ರಥಮ ನೋಟಕ್ಕೆ ದಿಗ್ಭ್ರಮೆ ಹೊಂದಿದಂತೆ ಒಮ್ಮೆಗೇ ಮೂರ್ತಿ ಮತ್ತಾದರೂ, ಮರುಗಳಿಗೆಯಲ್ಲಿ ಗೆಳತಿಯರನ್ನು ಅಪ್ಪಿಹಿಡಿದು ಕೊಂಡು ಗಳಗಳನೆ ಅತ್ತಳು. ಇಷ್ಟುದಿನ ಪ್ರಯತ್ನ ಪೂರ್ವಕವಾಗಿ ತಡೆಹಿಡಿದ ದುಃಖ ಮೀರಿತು. ಹನಿಹನಿಯಾಗಿ ಕಂಬನಿಗಳು ಉದುರತೊಡಗಿದವು, ಒಡಲ ಸಂಕಟವೆಲ್ಲಾ ಕರಗಿ ಹನಿಯಾಗಿ ಹರಿದಂತೆ.

ಶಾಲೆಯ ಬೆಲ್ಲು ಬಾರಿಸಿತು. ಟಣ್, ಟಣ್, ಟಣ್, ಟಣ್, ಟಣ್.

ಹೋಗುವವರೆಲ್ಲಾ ಹೋದರು. ಉಳಿದವರು ಸುಶೀ, ಕಿರಣ್ ಮತ್ತು ಮನೋನ್ಮಣಿ. ಒಳಗಡೆ ಸೇರಿದರೂ ದುಃಖಭರಿತ ಎಳೆಯ ಹೃದಯಗಳು ಮುಖಾಮುಖಿಯಾದೊಡನೆಯೇ ಆನಂದ ಸ್ಫುರಣಕ್ಕೆ ಬದಲಾಗಿ ಅತೀವ ಸಂಕಟ ಸ್ಫುರಣ. ನಿಗಿನಿಗಿ ನಲಿಯುತ್ತಿರಬೇಕಾದ ವಯಸ್ಸು ಪುಟಿಪುಟಿಯಬೇಕಾದ ಮನಸ್ಸು. ವಯಸ್ಕರಂತೆ ದುಃಖಿಸುವ ಪರಿಸ್ಥಿತಿಗೆ ಬದ್ಧವಾದುವು. ಮುಂದೇನು? ಎಂಬ ಸಮಸ್ಯೆ. ಭರಿಸಲಾರದೆ ಭರಿಸುವ ಚಿಂತನೆ-ಗಂಭೀರ ಚಿಂತನೆ.

ಬಾಗಿಲ ಬಳಿ ಪಾದರಕ್ಷೆಗಳ ಸದ್ದು ಪಟ, ಪಟ, ಪಟ, ಪಟ.

ದುಃಖಭರಿತ ಜೀವಿಗಳಿಗೆ ಕೇಳಿಸಿದ್ದು ಮೃತ್ಯುವಿನ ಪಾದ ಸಪ್ಪಳದಂತೆ! ತಕ್ಷಣ ಭಯಭೀತ ನೋಟ ಅತ್ತಲೇ ಕೇಂದ್ರೀಕರಿಸಿದುವು.

ಯಾರಿರಬಹುದು?

ಹರೆ ರಾಂ! ನಾವೆಷ್ಟು ಹೆದರಿದ್ದೆವು?

ತಕ್ಷಣ ಮೂವರೂ ಎದ್ದು ನಿಂತರು.

''ಮೂವರೂ ಬನ್ನಿ ಪೋಲೀಸ್ ಸ್ಟೇಷನ್ನಿಗೆ ಹೋಗಿ ದೂರುಕೊಟ್ಟು ಬರೋಣ. ಜೀಪ್ ರೆಡಿಯಿದೆ'' ಎಂದಳು ಮದರ್ ಸಿಲ್ವಿಯಾ.

ಮೂವರೂ ಹಿಂಬಾಲಿಸಿದರು. ಮಹಾ ಮಾತೃಕೆಯ ಹೆಜ್ಜೆಹೆಜ್ಜೆಗಳನ್ನು ಅನುಸರಿಸಿ.

* * *

ಜೀಪು ಪೋಲೀಸ್ ಸ್ಟೇಷನ್ ಮುಂದೆ ನಿಂತಿತು.

ಮದರ್ ಮಕ್ಕಳೊಡನೆ ಇಳಿದು ಒಳಹೋದಳು. ವರಾಂಡದಲ್ಲಿದ್ದ ಪೋಲೀಸ್ ಗುರುತಿನ ಕಾರ್ಡನ್ನು ಈಸಿಕೊಂಡು ಹೋಗಿ ಡಿ.ಐ.ಜಿ.ಯ ಮುಂದಿಟ್ಟ. ಅದನ್ನು ನೋಡುತ್ತಲೂ ಅವರನ್ನು ಒಳಬರಮಾಡಿಕೊಳ್ಳಲು ಅಪ್ಪಣೆ ಮಾಡಿದ ಡಿ.ಐ.ಜಿ.

ಮದರ್ ಮೂವರನ್ನೂ ಕರೆದುಕೊಂಡು ಒಳಹೋಗಿ ಲಿಖಿತ ಹೇಳಿಕೆ ಕೊಟ್ಟು ವಿಷಯವನ್ನು ಮುಂದಿಟ್ಟಳು.

ಡಿ.ಐ.ಜಿ. ಸುಶೀಯನ್ನು ಕುರಿತು "ಸಿದ್ಧು ಎಲ್ಲಿ ಎದುರಾದ? ಹೇಗಾಯ್ತು ಇದು?"

"ದಾರಿಯಲ್ಲಿ ನಮ್ಮನ್ನು ಕಂಡದ್ದೇ ತಡ ಕರಡಿಯಂತೆ ಅಟ್ಟಿಸಿಕೊಂಡು ಬಂದ. ನಾನು ಕಲ್ಲೆಡವಿ ಬಿದ್ದೆ ಓಡಿಬರುವ ಆತುರದಲ್ಲಿ, ಕಿರಣ್ ನನಗಿಂತ ಸ್ವಲ್ಪ ಹಿಂದೆ ಬಿದ್ದಿದ್ದಳು. ತಕ್ಷಣ ಇಬ್ಬರೂ ಸಿಕ್ಕಿಬಿದ್ದೆವು. ಬಿದ್ದಲ್ಲೇ ಒದ್ದು ಹೊಡೆದು ರೊಚ್ಚು ತೀರಿಸಿಕೊಂಡು 'ಮನೋನ್ಮಣಿಯನ್ನು ಅಡಗಿಸಿಟ್ಟವರು ನೀವೇ ಅಲ್ಲವೇ? ಅದಕ್ಕಿದೇ ಶಾಸ್ತಿ' ಎಂದು ಕೂಗಾಡಿದ. ಅವನು ದಾಂಡಿಗ. ಒಂದೊಂದು ಪೆಟ್ಟೂ ಸಲಾಕೆ ಏಟುಗಳಂತೆ ಬಿದ್ದುವು. ನಮಗೆ ಬಹಳ ಭಯವಾಯಿತು. ನಾವಿನ್ನು ಆ ದಾರಿಯಲ್ಲಿ ಓಡಾಡುವುದು ಹೇಗೆ?"

ದುಃಖಿತ ಮಕ್ಕಳ ಕಣ್ಣುಗಳಲ್ಲಿ ಬಳಬಳ ನೀರು.

"ಅಳಬೇಡಿ ಮಕ್ಕಳೇ! ನಾನವನಿಗೆ ತಕ್ಕ ಶಿಕ್ಷೆ ಮಾಡಿಸುವೆ."

"ಅವರು ಇಬ್ಬರಿದ್ದಾರೆ ಇಬ್ಬರೂ ದುಷ್ಟರೆ!"

"ಇಂದು ಅಟ್ಟಿಸಿಕೊಂಡು ಬಂದು ಹೊಡೆದಿದ್ದು ಯಾರು?"

"ಸಿದ್ಧು...!"

"ರಾಮು ಇರಲಿಲ್ಲವೇ?"

"ಇಲ್ಲ..."

"ಅಂದಮೇಲೆ ಸಿದ್ದು ಮೇಲೆ ಮಾತ್ರ ಕ್ರಮ..."

ಡಿ.ಐ.ಜಿ. ಇನ್ನೂ ಏನೋ ಹೇಳಲು ಪ್ರಯತ್ನಿಸಿದಾಗ ಮದರ್ ಕಣ್ಣುಮಿಸುಕಿ ಹೇಳಕೂಡದೆಂಬ ಸೂಚನೆ ನೀಡಿ ಎದ್ದು ನಿಂತು "ಹೊರಡೋಣವೇ?" ಎಂದಳು ಮಕ್ಕಳಿಗೆ.

ಮಕ್ಕಳು ಮೂವರೂ ಏಳಲಾರದೆ ಎದ್ದುನಿಂತರು. ಎಳೆಯ ದನಿಗಳು ಗದ್ಗದ ಕಂಠದಿಂದ ಮೊಳಗಿದವು ''ನಮಸ್ತೇ''

''ನಮಸ್ತೇ ಮಕ್ಕಳೇ!''

''ಗುಡ್ ಮಾರ್ನಿಂಗ್ ಮದರ್! ಚಿಂತೆ ಮಾಡಬೇಡಿರಿ. ನಾನೆಲ್ಲಾ ಬಂದೋಬಸ್ತ್ ಮಾಡುವೆ.''

''ಗುಡ್ ಮಾರ್ನಿಂಗ್ ಮಿ॥ ಸಿಂಗ್! ವೆರಿ ಕೈಂಡ್ ಆಫ್ ಯೂ!''

ಮದರ್ ಮಕ್ಕಳನ್ನು ಅಪ್ಪಿ ಹಿಡಿದುಕೊಂಡೇ ಠಾಣೆಯನ್ನು ಬಿಟ್ಟು ಪ್ರಾಂಗಣವನ್ನು ದಾಟಿ ಜೀಪ್ ಹತ್ತಿದಳು. ಜೀಪು ಶಾಲೆಯ ಕಡೆ ಹೊರಟಿತು, ಬೀಸುಗಾಳಿಯನ್ನು ಭೇದಿಸಿಕೊಂಡು.

* * *

ಅಂದೇ ಸಿದ್ದು ಪೋಲೀಸ್ ಠಾಣೆಯ ಅತಿಥಿಯಾದ.

ಆ...ದ...ರೆ...

ಸಿದ್ಧುವನ್ನು ಅರೆಸ್ಟ್ ಮಾಡಿದಾಗ ರಾಮು ಊರಲ್ಲಿರಲಿಲ್ಲ. ಮನೆಗೆ ಮರಳಿದ ನಂತರ ತಿಳಿದ ವಿಷಯ ಕರುಳು ಕೋರೈಸಿತು. ಒಲೆಯ ಬಳಿ ಮೈ ಮುದುಡಿ ಕುಳಿತಿದ್ದ ನೀಲಮಣಿ ನರಳುತ್ತ ''ಸಿದ್ಧು ಎಂತಹ ಹೀನ ಕ್ರಮ ಕೈಕೊಂಡ...ನನ್ನ ಮರ್ಯಾದೆಯನ್ನು ಕಳೆಯುವುದಕ್ಕಿಂತ ನನಗೊಂದಿಷ್ಟು ವಿಷ ಕೊಟ್ಟಿದ್ದರೂ ಒಳ್ಳೆಯದಿತ್ತು. ಸತ್ ಚಿತ್ತರಾಗದೆ ಕುಚಿಂತ್ಯರಾದರೆ ಏನು ಫಲ? ಮಾನವನಾಗಿ ಜನ್ಮ ಎತ್ತಿ ಮಾನವತೆ ಇಲ್ಲದೆ ಹೋದರೆ ಏನು ಫಲ?''

''ಈ ಕ್ರಮವನ್ನು ತಪ್ಪು ಎನ್ನಲಾರೆ. ಮನೋನ್ಮಣಿಯನ್ನು ಅಂದು ಎಳೆದೊಯ್ದು ಬಚ್ಚಿಟ್ಟವರು ಈ ಕೆಟ್ಟ ಹುಡುಗಿಯರೆ!''

ರಾಮು ಹಲ್ಲುಗಳನ್ನು ಸಿಟ್ಟಿನಿಂದ ಕಟ ಕಟ ಕಡಿದ.

''ಅವಳು ಒಲ್ಲೆ ಎಂದಮೇಲೆ ಬಲಾತ್ಕರಿಸಲಾದೀತೇ? ಪಾಪ, ಅಲ್ಲಾದರೂ ಸುಖವಾಗಿರಲಿ. ಅವಳು ಇಲ್ಲಿಗೆ ಬಂದರೆ ಈ ಬಡತನವನ್ನೇ ಹಂಚಿಕೊಳ್ಳಬೇಕು. ಈ ಪಾಡು ಅವಳಿಗೇಕೆ ಹೇಳು?''

''ಅವಳು ಅಲ್ಲಿ ಕ್ರಿಶ್ಚಿಯನ್ನಳಾದರೆ ಬದುಕಿ ಏನು ಪ್ರಯೋಜನ? ಅದಕ್ಕಿಂತ ಸಾವು ಹಿತಕರ. ಅವಳೊಬ್ಬಳು ಅಂದು ಬದುಕುಳಿದುದ್ದಕ್ಕಿಂತ ಸತ್ತು ಹೋಗಿದ್ದರೆ ಒಳ್ಳೆಯದಿತ್ತು!''

''ಛೀ! ಎಂತಹ ಮಾತಾಡುತ್ತಿ! ಶಾಂತಂ ಪಾಪಂ, ಶಾಂತಂ ಪಾಪಂ.''

ಅವನು ದಡದಡನೆ ಹೊರ ನಡೆದ. ಸನಿಹಕ್ಕೈದಿದ್ದ ಮೃತ್ಯು ದೂರ ಸರಿದಂತಾಯಿತು ಆ ಸದೃಢ ಹೆಜ್ಜೆಗಳ ಸದ್ದಿನಿಂದ. ನೀಲಮಣಿಯ ಎದೆಯಾಳದಿಂದ ನಿಟ್ಟುಸಿರೊಂದು ಹೊರ ಹೊಮ್ಮಿತು...ಮಕ್ಕಳುಕಿಡುಗೇಡಿತನದಲ್ಲಿ ಅಗ್ರಗಣ್ಯರು. ಇದುವರೆವಿಗೂ ದುಡಿಮೆ ಏನೆಂಬುದನ್ನು ಕಂಡರಿಯರು. ಕೂತು ಉಂಬುವ ಭಂಡತನ. ಪೋಲಿಗಳ ಸಂಘ. ವಿದ್ಯೆ ಬುದ್ಧಿಗಳಿಂದ ದೂರಾದರೆ ಹೀಗೇ ಅಲ್ಲವೇ?

ಅಂತರಂಗ ಚಡಪಡಿಸಿತು. ಹೃದಯ ತಂತುಗಳಲ್ಲಿ ಸಂಜನಿಸಿದ ಕಣ್ಣೀರು ಶಾಂತಿವಾರಿಯಂತೆ ತಟತಟನೆ ತೊಟ್ಟಿಕ್ಕಿತು ಮುಖಬಿಂಬದಲ್ಲಿ. ಮನಸ್ಸು ಮೌನವಾಗಿ ರೋಧಿಸತೊಡಗಿ, ಶಿರೋಭಾರವನ್ನು ಎರಡೂ ಕೈ ಹಸ್ತಗಳ ಮೇಲೆ ಇಳುಹಿದ್ದಾಳೆ. ಚಿತ್ತಿಭಿತ್ತಿಯಲ್ಲಿ ಅಂದಿಂದಿನ ಜೀವಮಾನದ ಚಿತ್ರಣವೆಲ್ಲಾ ಚಲನಚಿತ್ರದಂತೆ ಸುಳಿಸುಳಿಯಿತು. ಭಗವಂತ ಈ ಗೋಳಿಗಾಗಿ ನನ್ನ ಉಳಿಸಿದನೇ? ಎಂಬ ಪ್ರಶ್ನೆ ಹೃದಯ ತಂತುಗಳನ್ನು ಗುಂಗೆ ಹುಳುವಿನಂತೆ ಕೊರೆಯುತ್ತದೆ.

ಬಾಲ್ಯವೊಂದು ಹೇಗೆ ಕಳೆಯಿತೋ...ಖುದೀರಾಮನಿಗೆ ಒಬ್ಬಳೇ ತಂಗಿಯಾಗಿ ಹುಟ್ಟಿ ಪ್ರೀತಿ ಪಾತ್ರಳಾಗಿ ಬಾಳಿದ ಆ ದಿನಗಳು ಓಹ್! ಎಂತಹ ಆಮೋದಕ? ಆಡುವ ಅರಗಿಳಿ ಸಂಸಾರ ಚಕ್ರಕ್ಕೆ ಸಿಲುಕಿದಾಗ ಕೇವಲ ಹನ್ನೊಂದರ ಬಾಲೆ. ಆಗಿನಿಂದಲೂ ಬಂದ ಬವಣೆ ಸಾಮಾನ್ಯವೇ? ಜೀವನವೆಲ್ಲಾ ಕತ್ತಲೆ-ಬೆಳಕುಗಳ ಜೋಡಣೆ...ವಿಧಿ ಅಂದಿಂದಿಗೂ ಕ್ರೂರಾತಿಕ್ರೂರವಾಗಿಯೇ ನಡೆದುಕೊಂಡಿದೆ....ಹುಟ್ಟಿದವರು ಏಳು ಮಂದಿ ಮಕ್ಕಳು...ಐದು ಮಂದಿ ಹೆಣ್ಣು ಮಕ್ಕಳನ್ನು ಸ್ವಾಹಾ ಮಾಡಿದ ದುರ್ವಿಧಿ...ಈ ಧೂರ್ತ ಮಕ್ಕಳಿಗೆ ಜೀವದಾನ ಮಾಡಿ ತಲೆಗೆ ಮುಳ್ಳಿನ ಕಿರೀಟ ಇಡುವುದಕ್ಕಿಂತ ಒಂದು ಹೆಣ್ಣು ಮಗುವಿಗೆ ಜೀವದಾನ ಮಾಡಿದ್ದಿದ್ದರೆ...? ಹಾ, ದೈವವೇ?

ನಿಟ್ಟುಸಿರೊಂದು ಅವಳಿಗರಿಯದಂತೆಯೇ ತಪ್ಪಿಸಿಕೊಂಡಿತು.

ಅವಳ ಮುರುಕು ಪೆಟ್ಟಿಗೆಯಲ್ಲಿ ಒಂದೆರಡು ಮಾಸಿದ ಸೀರೆಗಳು; ಹಲ್ಲು ಮುರಿದ ಬಾಚಣಿಗೆ; ಒಂದೆರಡು ರವಿಕೆಗಳು; ಒಂದು ಕನ್ನಡಿ; ಕುಂಕುಮದಡಬ್ಬಿ, ಅಲ್ಪಸ್ವಲ್ಪ ಪುಡಿಗಾಸು. ಇವಿಷ್ಟೇ ಅವಳ ಆಸ್ತಿ. ನಾಲ್ಕೈದು ಎಕರೆ ಜಮೀನು ಉತ್ಕೃಷ್ಟವಲ್ಲವಾದರೂ ವರ್ಷಕ್ಕಾಗುವಷ್ಟು ಕಾಳು ಕಡ್ಡಿ ಒದಗಿಸುತ್ತದೆ. ಹಳೆಯ ಒಕ್ಕಲೊಂದು ಅದರ ಉಸ್ತುವಾರಿಗೆ. ಅವರೊಂದಿಗೆ ಸರಿಸಾಟಿಯಾಗಿ ಇವಳೂ ದುಡಿಯುವುದರಿಂದ ಅನ್ನ. ಅದರ ಸಂಕಷ್ಟ ಅದಃಪತಿತರಾದ ಮಕ್ಕಳಿಗೇನು ಗೊತ್ತು? ಎಲ್ಲೆಲ್ಲೋ ಪೋಲಿ ತಿರುಗಿ ಬಂದು ಊಟ ಸರಿಯಿಲ್ಲ ಎಂದು ಅಬ್ಬರಿಸಿಯೋ ಅಥವಾ ನಾಲ್ಕಾರು ಗುದ್ದಿಯೋ ಹೋಗುವುದು ಅಂದಿಂದಿನ ವಾಡಿಕೆ. ಗಂಡ

ಇರುವಾಗಲೂ ಇದೇಗೋಳು. ಹೊಡೆತ ತಿಂದೂ ತಿಂದೂ ಮೈಯಿನ ಮೂಳೆಗಳೆಲ್ಲಾ ನಿಟಿ ನಿಟಿ ಹಾಡಿ ಗೋಳಾಡಿವೆ.

* * *

ನಡು ನೆತ್ತಿಯ ಮೇಲೆ ರಣರಣಿಸುವ ಸೂರ್ಯ.

ತಂಪನ್ನಾಶ್ರಯಿಸಿದ ಪಕ್ಷಿ ಸಂಕುಲದ ಚಿಲಿ ಪಿಲಿ ರಾಗ ಗಿಡಮರಗಳಲ್ಲಿ.

ಊಟದ ಮೇಜು ಅಣಿಯಾಗಿದೆ; ಹಸಿದ ಮಕ್ಕಳೆಲ್ಲಾ ಕೈತೊಳೆಯಲು ನಲ್ಲಿಯ ಬಳಿ ಕ್ಯೂನಲ್ಲಿದ್ದಾರೆ. ಸಾಲು ಕರಗುವ ಮುನ್ನ ಇದ್ದಕ್ಕಿದ್ದಂತೆ ತಲೆಬಾಗಿಲಲ್ಲಿ ಗಲಿಬಿಲಿ! ಶಾಲೆಯಿಂದ ಇನ್ನೂ ಒಳಬರುತ್ತಿದ್ದ ಕೆಲವು ಮಕ್ಕಳು ಒಮ್ಮೆಲೇ ಚೀರಿಕೊಳ್ಳುತ್ತ ಒಳಗೋಡಿ ಬಂದರು! ಒಬ್ಬರಿಗೊಬ್ಬರು ಡಿಕ್ಕಿ ಹೊಡೆಯುವುದನ್ನಾಗಲೀ ಎಡವಿ ಬೀಳುವುದನ್ನಾಗಲೀ ಲೆಕ್ಕಿಸದೆ ನುಗ್ಗಿ ಬಂದ ಮಕ್ಕಳಲ್ಲಿ ಭಯಭೀತಿಯ ಗಾವರ ನೋಡಿದರೆ ತೀರಾ ಭಯಂಕರ ಸುದ್ದಿ ಬರುತ್ತಿದೆ ಎಂಬುದು ಎಂತಹ ಮೂರ್ಖರಿಗಾದರೂ ತಿಳಿಯುವಂತಹ ಸನ್ನಿವೇಶ!

ಅನೇಕ ದನಿಗಳು ಒಮ್ಮೆಲೇ ಕಾತರದಿಂದ ಪ್ರಶ್ನಿಸಿದವು. ''ಏನು?... ಏನು?... ಏನಾಯಿತು? ಏಕೆ ಭಯ ಭೀತಿಯ ಗಾವರ? ಹರೇ! ರಾಂ! ಏನಿರಬಹುದು?''

ಆದರೆ, ಉತ್ತರಿಸುವ ಸಹನೆಯಾಗಲೀ, ಸಮಯವಾಗಲಿ ಇದ್ದರಷ್ಟೆ? ಮಕ್ಕಳು ಒಂದೇ ಸಮನೆ ಓಡಾಡುತ್ತಿದ್ದಾರೆ ಬೆಕ್ಕನ್ನು ಕಂಡ ಇಲಿಗಳಂತೆ!

ಮದರ್ ಸಿಲ್ವಿಯಾ ಮದರ್ ಬೆಟ್ಟಿ ಅಡಿಗೆಯ ಮಾನ್ವಿ ಮತ್ತು ಕಮಲ ತಲೆ ಬಾಗಿಲ ಕಡೆ ನುಗ್ಗಿದರು. ನೋಡೆ, ಕೈಯಲ್ಲಿ ಥಳಥಳಿಸುವ ಚೂರಿಯ ಸಹಿತ ರಾಮು!

ಹಲ್ಲುಮಟ್ಟೆ ಕಚ್ಚಿದ್ದಾನೆ! ಕಣ್ಣುಗಳು ಕೋಪದಿಂದ ಕಿಡಿಗಳನ್ನು ಕಾರುತ್ತಿವೆ! ಅಬ್ಬಾ! ರುದ್ರ ಭಯಂಕರ!

ಸಿಲ್ವಿಯಾ ಎರಡೂ ಕೈಗಳನ್ನು ಮುಗಿದು ಕೇಳಿಕೊಂಡಳು ''ತಮ್ಮಾ! ಇದು ಬರೀ ಹೆಣ್ಣು ಮಕ್ಕಳಿರುವ ಶಾಲೆ...ಇಲ್ಲಿಗೆ ಪುರುಷವರ್ಗ ಏಕಾಏಕಿ ಬರಬಾರದು. ದಯವಿಟ್ಟು ನಮ್ಮನ್ನು ಕ್ಷಮಿಸಿ ಹಿಂದಿರುಗಿ ಹೋಗು...ಕೈಮುಗಿದು ಬೇಡುವೆ..ಕೋಪಿಸಿಕೊಳ್ಳಬೇಡ''

''ನನ್ನ ತಮ್ಮನನ್ನು ಜೇಲಿಗೆ ದಬ್ಬಿದರೆ ನಾನು ಬಿಟ್ಟೇನೇ?''

''ತಲೆ ಬಾಗಿಲಲ್ಲಿದ್ದ ಅವನು ಒಳನುಗ್ಗಿದಾಗಲೇ ಜೀಪಿನ ಡ್ರೈವರ್ ಯಾವ ಮಾಯದಿಂದ ಸಮಯಕ್ಕೆ ಒದಗಿದನೋ.... ಹಿಂದಿಲಿಂದ ಅಂಗಿಯ ಕಾಲರ್ ಹಿಡಿದು ಹಿಂದಕ್ಕೆಳೆದುಕೊಂಡು ಕತ್ತಿ ಕಸಿದುಕೊಳ್ಳಲು ಕೈ ಹಾಕಿದ. ರಾಮು ಅಷ್ಟು ಸುಲಭದಲ್ಲಿ

ಬಿಟ್ಟುಕೊಟ್ಟಾನೆಯೇ? ಕೊಸರಾಡಿ ಸಿಲ್ವಿಯಾಗೆ ಕಾಲು ಜಾಡಿಸಿ ಒದ್ದು, ಬೆಟ್ಟಿಯ ಕಡೆ ಕೈಯೆಟುಕದಿದ್ದರೂ ಕೈಬೀಸಿ ಚೂರಿ ಹಾಕಿದ. ರಟ್ಟೆಯನ್ನು ಕೋರೈಸಿ ನೆತ್ತರು ಚಿಲ್ಲನೆ ಹಾರಿತು. ಅಡಿಗೆಯ ಮಾನ್ವಿ ಕಾವಲುಗಾರ ಇಬ್ಬರೂ ಓಡಿ ಬಂದರು. ಅದೇ ವೇಳೆಗೆ ಮೇಜಿನ ಮೇಲಿದ್ದ ಬಿಸಿ ಬಟ್ಟಲುಗಳನ್ನೆ ಕೆಲವು ಧೈರ್ಯವಂತ ಹುಡುಗಿಯರು ಅವನ ಕಡೆಗೆ ಎಸೆದರು. ಹಣೆಗೆ ತಾಗಿದ ಬಿಸಿ ಅಲ್ಲೆ ಫಳ್ಳನೆ ನೆತ್ತರು ಬಸಿಯಿತು. ಅದೇ, ಆಗಲೇ ಆತನ ಚೂರಿ ಕಾವಲುಗಾರನ ಕೈ ಸೇರಿತು. ಆತ ಸೆರೆಯಾಳಾದ.

ಅವನನ್ನು ಪೋಲೀಸ್ ಠಾಣೆಗೆ ಒಯ್ಯಲು ಜೀಪ್ ಬಳಸುವಂತಿರಲಿಲ್ಲ. ತುರ್ತು ಚಿಕಿತ್ಸೆಗಾಗಿ ಮದರ್ ಬೆಟ್ಟಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ಅಗತ್ಯವೇ ಹೆಚ್ಚು. ಮದರ್ ಸಿಲ್ವಿಯಾ ಪೋಲೀಸ್ ಠಾಣೆಗೆ ವಿಷಯವನ್ನು ವರದಿ ಮಾಡಿ ''ತಕ್ಷಣವೇ ಆತನನ್ನು ಆರೆಸ್ಟ್ ಮಾಡಿರಿ. ಅವನನ್ನು ಇಲ್ಲಿ ನಮ್ಮ ಆಳುಗಳ ಕಾವಲಿನಲ್ಲಿ ಇಟ್ಟಿರುವೆ. ನಾನು ಮದರ್ ಬೆಟ್ಟಿಯ ಜೊತೆ ಆಸ್ಪತ್ರೆಗೆ ಹೋಗಬೇಕಾಗಿದ್ದರೂ ಇಲ್ಲಿ ನಿಮಗಾಗಿ ಕಾದಿರುವೆ'' ಎಂದು ತುರ್ತು ಕರೆಕೊಟ್ಟಳು.

ಮದರ್ ಬೆಟ್ಟಿ ಜೊತೆ ಮದರ್‌ಜಾರ್ಜಿಯಾ ಮತ್ತು ಇಬ್ಬರು ಹಿರಿಯ ವಿದ್ಯಾರ್ಥಿನಿಯರೂ ಆಸ್ಪತ್ರೆಗೆ ಹೊರಟರು. ಚೂರಿ ಆಳವಾಗಿ ಹೊಕ್ಕುದುದರಿಂದ ಮೈಯೆಲ್ಲಾ ನೆತ್ತರ ಮಜ್ಜನ.

* * *

ಮಾನ್ವಿ ಮತ್ತು ಕಾವಲುಗಾರನ ಕಾವಲಿನಲ್ಲಿದ್ದು ರಾಮು ಅವರ ಕಣ್ತಪ್ಪಿಸಿ ಒಂದೇ ದೌಡಿಗೆ ಓಡಿ ಅಲ್ಲಿಂದ ಪಾರಾದ. ಇಬ್ಬರೂ ಹಿಂದಿಲಿಂದ ಅಟ್ಟಿಸಿಕೊಂಡು ಹೋದಗ ರಾಮು ಕಲ್ಲೊಂದನ್ನು ಎತ್ತಿಬೀಸಿ ಒಗೆದ. ಅದು ಕಾವಲುಗರನ ಹಣೆಗೆ ಬಡಿದು ಹಿಂದಕ್ಕುರುಳಿದ.

ರಾಮು ಅದನ್ನು ಕಂಡವನೇ ನಾನು ಹೇಗಿದ್ದರೂ ಪೋಲೀಸರ ಅತಿಥಿಯಾಗುವವನೇ! ಅದರೊಳಗಾಗಿ ಕಾನ್ವೆಂಟಿನ ಗತಿ ಮುಗಿಸುವುದೇ ಗುರಿ ಎಂದುಕೊಂಡು ಕಾಡುಮೇಡು ಬಿದ್ದು ಅಡಗಿಕೊಂಡ.

ಪೋಲೀಸ್ ವ್ಯಾನು ಕಾನ್ವೆಂಟಿಗೆ ಬಂದಾಗ ವಿಷಯ ತಿಳಿದು ಇತ್ತ ಬೆನ್ನಟ್ಟಿ ಬಂದರೆ ಮೂರ್ಛಿತನಾದ ಕಾವಲುಗಾರ ದೃಷ್ಟಿಗೆ ಬಿದ್ದ. ಅವನನ್ನು ಎತ್ತಿ ವ್ಯಾನಿಗೆ ಹಾಕಿಕೊಂಡು ಆಸ್ಪತ್ರೆಗೆ ಹೊರಟಿತು ಪೋಲೀಸ್ ವ್ಯಾನು.

ಕಾನ್ವೆಂಟಿನ ಒಳ ಹೊರಗೆಲ್ಲಾ ಹಾಹಾಕಾರ.

ಮಕ್ಕಳ ಕಂಬನಿ ಇನ್ನೂ ಆರಲಿಲ್ಲ. ಯಾರ ಮುಖದಲ್ಲೂ ಕಳೆಯೇ ಇಲ್ಲ.

ಮನೋನ್ಮಣಿ ಮನದಲ್ಲಿ ಎದ್ದಿರುವುದೊಂದೇ ಪ್ರಶ್ನೆ. ನಾನೇಕೆ ಬದುಕಬೇಕು? ನನ್ನಿಂದ ಎಷ್ಟೊಂದು ಜನರಿಗೆ ಕಷ್ಟ? ಎಷ್ಟೊಂದು ಮಾನಸಿಕ ಹಿಂಸೆ? ಕಾನ್ವೆಂಟಿನಲ್ಲಿ ಎಂತಹ ಶಾಂತಿ ಇತ್ತು? ಎಷ್ಟು ಸುಖ ಸಂತೋಷಗಳಿದ್ದುವು? ಈಗ ಎಲ್ಲವೂ ಗಾಳಿ ಪಾಲು. ಇದೆಲ್ಲಾ ನನ್ನಿಂದ... ಈ ಯಃಕಶ್ಚಿತಳಾದ ಹೀನ ದೀನ ಜೀವ ಬದುಕಿ ಧರ್ಮಪರರಿಗೆ ಮಾರಕವಾಗುವುದು ಖಂಡಿತ ಕೂಡದು...

ಎದೆಯ ಹಕ್ಕಿ ಒಂದೇ ಸಮನೆ ಚೀರುತ್ತಿದೆ. ಈ ಪರಿಸರದಲ್ಲಿ ಕೆರೆ ಬಾವಿ ಯಾವುದೂ ಇಲ್ಲವಲ್ಲಾ, ಈ ದೌರ್ಭಾಗ್ಯಕ್ಕೇನೆನ್ನೋಣ? ನನ್ನಂತಹ ನತದೃಷ್ಟೆ ಇನ್ನೆಲ್ಲೂ ಇಲ್ಲ ಎಂಬುದಕ್ಕೆ ಇದೇ ಸಾಕ್ಷಿ....

ಮದರ್ ಬೆಟ್ಟಿ ಆಸ್ಪತ್ರೆಯಿಂದ ಹಿಂದಿರುಗಿದಾಗ ಅವಳನ್ನು ಹೇಗೆ ನೋಡಿ ಮಾತಾಡಲಿ ಎಂಬ ಸಂಕೋಚ ಇಡೀ ಮೈ ಮನಗಳನ್ನು ಹಿಂಡಿ ಹಿಪ್ಪೆ ಮಾಡಿತ್ತು. ಅಳು...ಅಳು...ಎಷ್ಟು ಅತ್ತರೂ ಕೊನೆವರಿಯದಾ ಅಳು. ನರನಾಡಿಗಳಲ್ಲೆಲ್ಲಾ ವಿಕ್ಷೋಭೆಯ ವಿಚಿತ್ರ ಅನುಭವ. ಸಂಕಟವೊ, ಸಂಕಷ್ಟವೋ ಯಾವುದೋ ತನ್ನ ಮೇಲೆ ಪ್ರಬಲವಾದ ಪಾಶವೊಗೆದಿದೆ. ಆದರೆ, ಪ್ರಾಣವನ್ನೇಕೆ ಸೆಳೆಯದು? ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದುದುರಿಂದ ಈ ಪ್ರಾಣ ಹೋಗಬೇಕಾದರೆ ಅದು ನನ್ನಿಂದಲೇ ಎಂಬ ನಿರ್ಧಾರಕ್ಕೆ ಬಂದಿತು ಮನಸ್ಸು.

ಜೀಪ್ ಬರುತ್ತಲೂ ಬೆಟ್ಟಿಯನ್ನು ನೋಡಲು ಅವಳ ಕೊಠಡಿಗೆ ಹೋದಳು ಮನೋ. ಅವಳಿಗೆ ಮಾರ್ಫಿಯಾ ಕೊಟ್ಟಿದ್ದುದರಿಂದ ನಿದ್ದೆಯ ಮಂಪರದಲ್ಲಿದ್ದು ಸ್ವಲ್ಪ ಕಣ್ಣುಬಿಟ್ಟು ನೋಡಿ ಹಾಗೇ ಮಲಗಿದಳು.

ಮನೋನ್ಮಣಿ ಅಲ್ಲೇ ಕುಳಿತಳು. ಇನ್ನೂ ಕೆಲವು ಹುಡುಗಿಯರೂ ಇದ್ದಾರೆ.

ಮಧ್ಯಾಹ್ನ ಶಾಲೆ ತೆರೆಯಲಿಲ್ಲ.

ಕಾವಲುಗಾರನಿಗೆ ಏಟು ಬಿದ್ದ ಸುದ್ದಿ ಹರಡಿದ್ದು ಬಹಳ ಹೊತ್ತಿನ ಮೇಲೆ. ಅವನಿಗೆ ಪ್ರಜ್ಞೆ ಮರಳಲಿಲ್ಲವಾದ್ದರಿಂದ ಅವನು ಆಸ್ಪತ್ರೆಯಲ್ಲೇ ಉಳಿದಿದ್ದ. ಇಡೀ ಕಾನ್ವೆಂಟು ದುಃಖ ಸಂಕಟದಲ್ಲಿ ಮುಳುಗಿಹೋಯಿತು. ಬಿಸುಸುಯ್ಲು ಮಾಡಿನೆತ್ತರಕ್ಕೂ ಮುಟ್ಟಿತು.

ಅಂದು ಉಂಡವರೆಷ್ಟೋ ಬಿಟ್ಟವರೆಷ್ಟೋ...

೮

ಪೋಲೀಸ್ ಠಾಣೆ

ಡಿ.ಐ.ಜಿ.ಯ ಮುಂದೆ ಸಿದ್ಧ ಎದೆಯ ಮೇಲೆ ಕೈಕಟ್ಟಿಕೊಂಡು ದಿಟ್ಟಭಾವದಿಂದ ನಿಂತಿದ್ದ. ಈರ್ಷ್ಯೆ-ಕೋಪ-ಜಿದ್ದು ಮುಂತಾದ ರಜೋಗುಣಗಳ ಕ್ರೂರ ಮುದ್ರೆ ಮುಖಭಾವದಲ್ಲಿ. ಪೊದರು ಗಡ್ಡ-ಮೀಸೆ. ಕಟ್ಟಾಮುಟ್ಟಾ ಗಂಡಾಳ್ತನ. ನೋಡಿದ ಪ್ರಥಮ ನೋಟಕ್ಕೆ ಕೇಡಿ ಎಂದು ಊಹಿಸಬಹುದಾದಂತಹ ವರ್ಚಸ್ಸು.

"ನಿನ್ನ ಹೆಸರೇನಯ್ಯಾ?"

"ಸಿದ್ಧಾರ್ಥ...!"

"ಅಹಹ! ಸಿದ್ಧಾರ್ಥನ ಹೆಸರಿಗೆ ಮಸಿ ಬಳಿಯಲಿಕ್ಕೇನು ನೀನು ಹುಟ್ಟಿದ್ದು?"

"ಅದು ನಿಮ್ಮ ಅಭಿಪ್ರಾಯವಾದೀತು! ಅಂದರೆ ಅರ್ಥವಾಯಿತೇ? ಲೋಕ ನನ್ನನ್ನು ಹೀರೋ ಎನ್ನುತ್ತೆ!"

"ಓಹೋ ಬಹಳ ಶೂರ ಅಲ್ಲವೇ? ಪುಂಡು ಪೋಕರಿತನಗಳಲ್ಲಿ ಶೂರ?"

"ನಿಮ್ಮ ತೆಗಳಿಕೆಗೆ ಮಣಿಯುವವನಲ್ಲ!"

"ನೀನು ತಾಯಿಯನ್ನು ದುಡಿಯಲು ಹಚ್ಚಿ, ಹಿಂಸಿಸಿ ಮಜಾ ಮಾಡುತ್ತಿದ್ದೀ ಯಂತೆ..?"

"ಅರೆ! ದುಡಿಯಬೇಕಾದುದು ಅವಳ ಕರ್ತವ್ಯ!"

"ಶುದ್ಧ ಮೂರ್ಖ! ತಾಯಿಯನ್ನು ದೇವರಂತೆ ಕಾಣಬೇಕು ಗೊತ್ತೆ? ಇಳಿ ವಯಸ್ಸಿನ ತಾಯಿ ದುಡಿಯುವುದೆಂದರೆ ನಿನಗೆ ನಾಚಿಕೆಯಾಗದೇ?"

"ಅದೆಲ್ಲಾ ಇರಲಿ, ಈಗ ನನ್ನನ್ನು ಕರೆಸಿದ ಕಾರಣವೇನು? ಅದರ ತನಿಖೆ ಯಾಗಲಿ!"

ರೂಕ್ಷಕಂಠ ಕರ್ಕಶವಾಗಿ ಮೊಳಗಿತು.

ಇನ್ಸ್‌ಪೆಕ್ಟರ ರಕ್ತ ಕೊತ ಕೊತ ಕುದಿಯಿತು. ತನ್ನನ್ನೇ ಹೆದರಿಸುವಷ್ಟು ಅಥವಾ ಸಮೂಲವಾಗಿ ಅಲ್ಲಾಡಿಸುವಷ್ಟು ದರ್ಪ-ರೋಷಗಳಿಂದ ಕೂಡಿದ ಇವನು ಸಾಮಾನ್ಯನಲ್ಲ. ಇವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕು....ಅಂತರಂಗ ಒತ್ತಿ ಹೇಳಿತು.

"ಹೂಂ! ಈಗ ಹೇಳು! ಆ ಮಕ್ಕಳನ್ನು ಏಕೆ ಅಟ್ಟಿಸಿಕೊಂಡು ಹೋಗಿ ಹೊಡೆದೆ?"

"ಆ ದಿನ ನಾನು ನನ್ನ ಸೋದರ ಸೊಸೆಯನ್ನು ಕರೆತರಲು ಕಾನ್ವೆಂಟಿಗೆ ಹೋದರೆ ಆ ಹುಡುಗಿಯರು ಅದಕ್ಕೆ ಅಡ್ಡಿ ಬಂದರೇಕೆ? ಇವರಿಗೆ ಶಾಸ್ತಿ ಮಾಡದ ಬುದ್ಧಿ ಬರುತ್ತದೆಯೇ?"

"ಅವರಿಗೆ ಬುದ್ಧಿ ಕಲಿಸುವುದು ಅವರ ಹಿರಿಯರ ಅಥವಾ ಕಾನ್ವೆಂಟಿನ ಮದರ್‌ಗಳ ಇಚ್ಛೆಗೆ ಒಳಪಟ್ಟಿದ್ದು. ನೀನು ಏನು ಹೇಳಿ-ಕೇಳುವುದಿದ್ದರೂ ಮದರ್‌ಗಳಿಗೆ ಅಥವಾ ಹಿರಿಯರಿಗೆ ಹೇಳಿಕೊಳ್ಳಬೇಕಾಗಿತ್ತು. ಅದು ಬಿಟ್ಟು ನೀನು ಹೊಡೆದುದೇಕೆ?"

"ಅವರು ನನಗೇ ಅಪಚಾರ ಮಾಡಿದ್ದರಿಂದ ನಾನೇ ಕ್ರಮ ಕೈಕೊಂಡೆ!"

"ಇದು ತಪ್ಪು ಎಂಬುದು ನಿನಗೆ ಗೊತ್ತಿಲ್ಲವೇ?"

"ನಾನದನ್ನು ಒಪ್ಪಿಕೊಳ್ಳಲಾರೆ!"

"ಇದು ಶುದ್ಧ ತಪ್ಪು!"

"ನನಗೆ ಸರಿಯಾಗಿ ತೋರಿದ್ದನ್ನು ನಾನು ಮಾಡಿರುವೆ! ನನ್ನನ್ನು ವಿನಾಕಾರಣ ಆರೆಸ್ಟ್ ಮಾಡಿದ್ದು ನಿಮ್ಮ ತಪ್ಪು!"

"ಹಾಗೋ...?"

ದರ್ಪೋದ್ಧತ ಧ್ವನಿ ಮಾಡು ಮುಟ್ಟುವಂತೆ ಮೊಳಗಿತು.

ಪೋಲೀಸಿನವನನ್ನು ಕರೆದು ಅವನಿಗೊಪ್ಪಿಸಿ "ಇವನಿಗೆ ಚೆನ್ನಾಗಿ ಛಟಿಯೇಟು ಕೊಟ್ಟು ನ್ಯಾಯಾಂಗಕ್ಕೆ ಒಪ್ಪಿಸಿ ಬಿಡು."

ಸಿದ್ದು ಯಾರಾದರೂ ನನ್ನನ್ನು ಜಾಮೀನಿನ ಮೇಲೆ ಬಿಡಿಸಿಕೊಳ್ಳಬಲ್ಲವರಿದ್ದರೆ ಎಂಬ ಯೋಚನೆಯಲ್ಲಿ ಬಾಗಿಲ ಕಡೆ ನೋಡಿದ.

* * *

ಮದರ್ ಬೆಟ್ಟಿಯ ಗಾಯಕ್ಕೆ ನಂಜೇರಿದುದರಿಂದ ಪುನಃ ಆಸ್ಪತ್ರೆಗೆ ಸೇರಿಸಲ್ಪಟ್ಟಳು.

ಭಯ-ಭೀತಿಯ ವಾತಾವರಣ ಎಲ್ಲೆಲ್ಲೂ. ಮಕ್ಕಳು ಶಾಲೆಗೆ ಬರುವುದಕ್ಕೂ ಹೊರಗಡೆ ಓಡಾಡುವುದಕ್ಕೂ ಹೆದರುವಂತಹ ಭೀಕರ ಸನ್ನಿವೇಶ.

ಕಾಂಗ್ರೆಸ್ಸಿಗರ ಮಾಡಿ-ಮಡಿ ಧೋರಣೆಗೆ ಪ್ರತಿಕ್ರಿಯೆ ಕಾಂಗ್ರೆಸ್ಸಿಗರ ಮೇಲೆ ಮಾತ್ರವಲ್ಲ ಸಾರ್ವಜನಿಕರ ಮೇಲೂ ಬೀಳುವುದರಿಂದ ದುಷ್ಪರಿಣಾಮವೂ ಉಂಟು. ರಾಮು ಅದಕ್ಕೆ ನಿದರ್ಶನ. ಅಸಹನೆಯಿಂದ ತಹತಹಿಸುವ ಬಿಳಿಯರು ಕರಿಯರ ಮೇಲೆ ವಿಷಕಾರುವುದು ಸಹಜ. ಕಾನ್ವೆಂಟ್‌ಗಳನ್ನು ಬಿಳಿಯ ಮದರ್‌ಗಳೇ ನಡೆಸುತ್ತಿದ್ದರೂ ಅಲ್ಲಿ ಭಾರತೀಯ ಮಕ್ಕಳೊಂದಿಗೆ ತಮ್ಮ ಮಕ್ಕಳನ್ನು ಬೆರೆಸಲು ಇಷ್ಟಪಡದ ಬಿಳಿಯರು ತಮ್ಮ ತಮ್ಮ ಮಕ್ಕಳನ್ನು ಇಂಗ್ಲೆಂಡಿನಲ್ಲೇ ಬಿಟ್ಟಿದ್ದರು. ಸಾರ್ಜೆಂಟರು-ಕಲೆಕ್ಟರರು-ನ್ಯಾಯಾಧೀಶರು ಮುಂತಾದ ಹಿರಿಯ ಅಧಿಕಾರಿಗಳ

ಮುಂದೆ ಭಾರತೀಯ ಅಧಿಕಾರಿಗಳು ನಿಂತು ಮಾತಾಡುವುದು, ಹಿಂದಿರುಗುವಾಗ ಹಿಂದಹಿಂದಕ್ಕೆ ನಡೆದು ಬೆನ್ನು ತೋರದಂತೆ ಕ್ರಮಿಸುವುದು ಇಂಥಿಂಥ ದರ್ಪೋದ್ಧತ ವ್ಯವಹಾರಗಳು ಅಂದಿಂದಿಗೂ ನಡೆದದ್ದೇ. ಚಳವಳಿ ಆರಂಭವಾದಾಗಿನಿಂದ ಭಾರತೀಯರನ್ನು ಕಾಣುವುದು ನಿಕೃಷ್ಟ ದೃಷ್ಟಿಯಿಂದಲೇ.... ನಾಗರಿಕ ವಲಯಕ್ಕೆ ಕಾಲಿರಿಸಿದರಂತೂ ಮೃಗಗಳಿಗಿಂತಲೂ ಕಡೆಯಾಗಿ ಅಟ್ಟುತ್ತಿದ್ದರು.

ಇಂಥ ಪರಿಸ್ಥಿತಿಯಲ್ಲಿ ನ್ಯಾಯ ದೊರಕಿಸಿಕೊಳ್ಳುವುದು ಹಂತ ಹಂತದಲ್ಲೂ ಅನುಮಾನವೇ.

ಮದರ್ ಯೋಚಿಸಿ ಯೋಚಿಸಿ ತಲೆಕೆಡಿಸಿಕೊಂಡು ಪೋಲೀಸ್ ಠಾಣೆಗೆ ರಿಂಗ್ ಮಾಡಿದಳು.

''ಹಲೋ!''

''ಹಲೋ!''

''ಡಿ.ಐ.ಜಿ.ಯವರಿದ್ದಾರೆಯೇ?''

''ಹೌದು, ಮಾತಾಡುತ್ತಿರುವೆ!''

''ಸರ್....ಈ ಪರಿಸರದಲ್ಲಿ ವಾತಾವರಣ ತುಂಬಾ ಭಯಾನಕ. ನೀವು ರಾಮುವನ್ನು ಈವರೆಗೆ ಆರೆಸ್ಟ್ ಮಾಡಿಲ್ಲ....ಮೇಲಾಗಿ, ಮಹಮದ್ ಪಾಶ ಖುದೀರಾಮ ಜಮೀನಿನಲ್ಲಿದ್ದ ಹದಿನಾಲ್ಕು ಗೋರಿಗಳನ್ನು ಕಿತ್ತು ಬಿಸಾಡಿದ್ದು ಹಿಂದೂಗಳಲ್ಲಿ ತೀವ್ರ ಅಸಮಾಧಾನ ಮೂಡಿಸಿದೆ. ಎಂದಾದರೂ ಇದು ರೋಷ ದ್ವೇಷಗಳಲ್ಲಿ ಭುಗಿಲೇಳಬಹುದು. ಇದರ ವಿಚಾರದಲ್ಲೂ ಈವರೆವಿಗೆ ಯಾವ ಕ್ರಮ ಕೊಳ್ಳದಿರುವುದು ತುಂಬಾ ಅಪಾಯಕಾರಿ. ಇದನ್ನು ಇನ್ನೂ ಉದ್ದ ಬೆಳೆಸಲು ನಾನು ಇಷ್ಟ ಪಡಲಾರೆ. ವಿಷಯ ನಿಮಗೇ ಚೆನ್ನಾಗಿ ಗೊತ್ತು. ಸಧ್ಯ, ನಮಗಂತೂ ರಕ್ಷಣೇ ಬೇಕೇಬೇಕು. ದಯವಿಟ್ಟು....''

''ನೀವು ಲಿಖಿತ ಹೇಳಿಕೆ ಕೊಡಬೇಕು. ಮಹಮದ್ ಪಾಶನ ಬಗ್ಗೆ ನಮಗೆ ದೂರು ಬಂದಿದೆ. ಅದಿರಲಿ, ರಾಮುವಿನ ಪತ್ತೆ ತರದೂದು ನಡೆಯುತ್ತಿದೆ. ಅವನನ್ನು ಸಧ್ಯದಲ್ಲೇ ಸೆರೆ ಹಿಡಿಯುವ ಭರವಸೆ ಇದೆ.''

''ತುಂಬ ಥ್ಯಾಂಕ್ಸ್! ಇನ್ನು ಸ್ವಲ್ಪ ಹೊತ್ತಿನೊಳಗಾಗಿ ಬರುವೆ.''

''ಆಗಲಿ, ಮೇಡಂ.''

ಮದರ್ ಸಿಲ್ವಿಯಾ ಅಪ್ಲಿಕೇಶನ್ ಬರೆದುಕೊಂಡು ಜೀಪ್ ಹತ್ತಿದಳು.

* * *

ಅದೊಂದು ಸಾಧಾರಣ ದರ್ಜೆಯ ಆಸ್ಪತ್ರೆ, ಇಬ್ಬರು ವೈದ್ಯರು, ಒಬ್ಬ ವಾರ್ಡ್‌ಬಾಯ್ ಇಬ್ಬರು ನರ್ಸ್‌ಗಳು, ಒಬ್ಬ ಜವಾನ, ಇಷ್ಟು ಮಾತ್ರರಿಂದ ಜೀವಾಳ ಆಸ್ಪತ್ರೆಗೆ, ಔಷಧಿ ಒಂದಿದ್ದರೆ ಒಂದಿಲ್ಲ. ದಿನವೂ ಬರುವ ಗಾಯಾಳುಗಳು, ನ್ಯೂಮೋನಿಯಾ ರೋಗಿಗಳು ಅಥವಾ ಮಲೇರಿಯಾ ರೋಗಿಗಳು ತುಂಬಿರುವ ಆಸ್ಪತ್ರೆಯಾದರೂ ಅದರ ಸ್ಥಿತಿಗಥಿ ತೀರಾ ವಿಷಾದನೀಯ. ಸಿಬ್ಬಂದಿಯಲ್ಲಿ ಯಾರಾದರೊಬ್ಬ ರಜೆಯಲ್ಲಿ ಇದ್ದೇ ಇರುವುದರಿಂದ ಸಹಾಯಹಸ್ತಕ್ಕೂ ಕೊರತೆ. ಬ್ರಿಟಿಷ್ ಪ್ರಜೆಯಾದ ಕಲೆಕ್ಟರನಿಗೆ ಅದರ ಮೇಲೆ ತಿಲಮಾತ್ರವೂ ಲಕ್ಷ್ಯವಿಲ್ಲ. ಕ್ರಿಮಿಕೀಟಗಳಂತೆ ಮಿಜಿಮಿಜಿಗೊಳ್ಳುತ್ತಿರುವ ಈ ಜನಜಂಗುಳಿ ಸತ್ತಷ್ಟು ಸಾಯಲಿ ಎಂಬ ಆಲೋಚನೆ....ಸಾವು ನೋವು ತಿಳಿದು ಬಂದಷ್ಟೂ ಸರಾಗವಾಗಿ ಉಸಿರಾಡುತ್ತದೆ ಜೀವ. ಸಂತೋಷಿಸುತ್ತದೆ ಮನಸ್ಸು.

ಬಿಳಿಯರಿಗೆ ತಮ್ಮದೇ ಆದ ಚಿಕಿತ್ಸಾ ಘಟಕ. ಸಕಲಸೌಕರ್ಯವುಳ್ಳ ಅದಕ್ಕೆ ಬಿಳಿಯರೇ ಚಿಕಿತ್ಸಕರು. ಅಲ್ಲಿ ಭಾರತೀಯರಿಗೆ ಪ್ರವೇಶವಿಲ್ಲ. ಇನ್ನೊಂದು ವಿಶೇಷವೆಂದರೆ ಮದರ್ ಸಿಲ್ವಿಯಾ ಮದರ್ ಬೆಟ್ಟಿ ಮುಂತಾದವರು ಬಿಳಿಯಾದರೂ ಅವರಿಗೆ ಆ ಚಿಕಿತ್ಸಾ ಪೂರಕವಿಲ್ಲ. ಕರಿಯರ ಸೇವಾ ನಿರತರಾದವರು ಕರಿಯರೇ!

ಮದರ್ ಬೆಟ್ಟಿಯನ್ನು ಬಿಟ್ಟು ಕದಲದೆ ಇದ್ದ ಮನೋನ್ಮಣಿಯ ಕಣ್ಣುಗಳಲ್ಲಿ ಸದಾ ಆರದ ನೀರು. ಮ್ಲಾನವಾದ ಮುಖದಲ್ಲಿ ಗೆಲುವಿನ ಚಿನ್ಹೆ ಲವಲೇಶವೂ ಇಲ್ಲ. ನಗೆಮಾತು ಮೈಲಿಮೈಲಿ ದೂರ. ಜೀವಶ್ಯವವಾದ ಶರೀರದಲ್ಲಿ ಉಸಿರಾಡಲಾರದೇ ಉಸಿರಾಡುವ ಜೀವ. ಹೆಜ್ಜೆಹೆಜ್ಜೆಯೂ ಭಾರಾತಿಭಾರ. ಆದ್ದರಿಂದ ಅವಳ ಬಳಿಯಲ್ಲಿ ಒಬ್ಬರಲ್ಲ ಒಬ್ಬರ ಕಾವಲು.

ಭಗವಂತ ಕಷ್ಟಕೊಟ್ಟವರಿಗೇ ಕಷ್ಟಕೊಡುತ್ತಾನಲ್ಲ, ಏಕೆ? ಅದು ಅವಳ ಮುಂದಿರುವ ಪ್ರಶ್ನೆ.

ಪಟ, ಪಟ, ಪಟ, ಪಟ.

ಬಾಗಿಲಾಚೆಯ ಪಾದರಕ್ಷೆಗಳ ಸದ್ದು ಕರ್ಣಪಟಲವನ್ನು ತಾಗಿತು. ಪಟ, ಪಟ, ಪಟ, ಪಟ. ಮದರ್ ಬೆಟ್ಟಿ ಕಣ್ತೆರೆದು ಬಾಗಿಲು ಕಡೆ ನೋಡಿದಳು. ನಾಲ್ಕಾರು ಹೆಜ್ಜೆಗಳ ಮೊಳಗಿನೊಂದಿಗೆ ಡಾ॥ ಶರ್ಮ ಒಳಗಡೆ ಪದಾರ್ಪಣೆ ಮಾಡಿದ.

''ಹೇಗಿದ್ದೀರಿ ಮದರ್?''

''ನಿನ್ನೆಗಿಂತ ನೋವು ಕಡಿಮೆ.''

''ನಾಳೆಯಿಂದ ಪೂರ್ಣ ಕಡಿಮೆಯಾದೀತು ಆಸ್ಪತ್ರೆಗೆ ಬೇಕುಬೇಕಾದ ಔಷಧಗಳ ಪೂರಕವಿಲ್ಲ. ಇದ್ದುದರಲ್ಲೇ ಚಿಕಿತ್ಸೆ. ನಿಜಕ್ಕೂ ಇದು ಚಿಂತನೀಯ ಮೇಡಂ.''

ಮದರ್ ಬೆಟ್ಟಿಯ ಮುಖದ ಮೇಲೆ ತೀವ್ರ ವಿಶಾದಕಳೆ ಮೂಡಿತು.

''ಮೊದಲೇ ಬಡದೇಶ, ಈಗಣ ಅರಾಜಕತೆಯಿಂದಂತೂ ಮತ್ತೂ ಕ್ಷೋಬೆ. ಇದೆಲ್ಲ ಎಂದಿಗೆ ಸರಿಹೋಗುತ್ತೋ ದೇವರಿಗೇ ಗೊತ್ತು.''

''ಮದರ್, ನೀವು ಇದೇ ಔಷದಿ ತೆಗೆದುಕೊಳ್ಳಿ, ಇನ್ನೆರಡು ಡ್ರೆಸ್ಸಿಂಗ್ ಆಗುವವರೆಗೆ ಇಲ್ಲೇ ಇರುವುದು ಒಳ್ಳೆಯದು.''

ಮನೋನ್ಮಣಿ ಮೂಕ ಪಶುವಿನಂತೆ ತಲೆಬಾಗಿ ಮಂಚದ ಕಂಬಕ್ಕೆ ಆತು ನಿಂತಿದ್ದಾಳೆ, ನೇಣುಗಂಬಕ್ಕೇರಲಿರುವ ಅಪರಾಧಿಯಂತೆ. ಕಳಾಹೀನವಾದ ಮುಖಬಿಂಬ ಎಲುಬಿನ ಹಂದರಕ್ಕೊಂದು ಮುಳ್ಳಿನ ಕಿರೀಟ. ಹಿಂದೂಸ್ಥಾನದ ಅರ್ಥಾತ್ ಪ್ರತೀಕ.

ಡಾ॥ ಶರ್ಮ ಮನೋನ್ಮಣಿಯ ತಲೆಯಮೇಲೆ ಪ್ರೇಮಹಸ್ತವನ್ನಿಟ್ಟು ನೀನೇಕೆ ಇಷ್ಟೊಂದು ಮನೋವ್ಯಾಕುಲಳಾಗಿದ್ದೀ? ಈವರೆಗೆ ಏನೆಲ್ಲಾ ಆಗಿದೆಯೋ ಅದೆಲ್ಲಾ ನಿನ್ನ ಕಾರ್ಯವ್ಯಾಪ್ತಿಗೆ ಅಥವಾ ಶಕ್ತಿವ್ಯಾಪ್ತಿಗೆ ಮೀರಿದ್ದು. ದುರ್ವಿಧಿಯ ಪ್ರೇರಣೆಗೆ ಅಥವಾ ದುರದೃಷ್ಟಕ್ಕೆ ಯಾರೇನು ಮಾಡಬಲ್ಲರು? ನಾವು ಯಾವುದನ್ನು ಸರಿಪಡಿಸಲಾರೆವೋ ಅದನ್ನು ಸಹಿಸಲೇಬೇಕು. ಅಂದಮೇಲೆ ಕೊರಗುದೇಕೆ? Take courage my child!

ಆ ಮಾತು ಕೇಳು ಕೇಳುತ್ತಿದ್ದಂತೆ ಕಣ್ಣಂಚಿನಲ್ಲಿ ಬೆಳ್ಳಿಯ ಗೆರೆಯಂತೆ ಥಳಥಳಿಸುತ್ತಿದ್ದ ಕಣ್ಣೀರು ಕೆನ್ನೆಗಳ ಮೇಲೆ ಧಾರೆಯಾಗಿ ಇಳಿಯಿತು.

''Poor Child!''

''ನನ್ನ ಭಾಧೆಗಿಂತ ಅವಳ ದುಃಖವೇ ನನಗೆ ಹೆಚ್ಚಾಗಿದೆ.''

''ನನಗೊತ್ತು ಮೇಡಂ''

* * *

ರಾಮು ಅರೆಸ್ಟಾಗುವವರೆಗೆ ಕಾನ್ವೆಂಟಿನ ರಕ್ಷಣೆಗಾಗಿ ಪೋಲೀಸ್ ಪೇದೆಗಳನ್ನು ಆರಕ್ಷರನ್ನಾಗಿ ನಿಯಮಿಸಿದ್ದ ಡಿ.ಐ.ಜಿ.

ರಾಮುವಿನ ತಪಾಸಣೆ ನಡೆದೇ ಇತ್ತು. ಅವನು ತಲೆಮರೆಸಿಕೊಂಡ ಮೇಲೆ ಊರಿನಲ್ಲಿ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಅವನ ಮನೆಯನ್ನೂ ಪುಂಡರ ಕೂಟವನ್ನೂ

ತಪಾಸಣೆ ಮಾಡಿದ್ದಲ್ಲದೆ ಎಲ್ಲೆಡೆಯೂ ಹದ್ದಿನ ನೋಟ ಬೀರಿತ್ತು ಪೋಲೀಸ್ ಇಲಾಖೆ. ದುರಾಶಾಪೀಡಿತನಾದ ಅವನು ತೆರೆಯ ಮರೆಯಲ್ಲೇ ತನ್ನ ಕಾರ್ಯಾಗಾರವನ್ನು ರೂಪಿಸಿಕೊಂಡು ಧೂರ್ತಗೆಳೆಯರೊಡನೆ ಕೂಡಿ ನಾಡಬಾಂಬೊಂದನ್ನು ಸಂಪಾದಿಸಿದ. ಬಾಲ್ಯಮಿತ್ರ ಮಾನು ಅವನನ್ನು ಕೂಡಿದಾಗ ಮಧ್ಯರಾತ್ರಿ.

ಚಂದ್ರಮನಿಲ್ಲದ ನೀಲಾಕಾಶ.

ಕೋಟಿ ಕೋಟಿ ಕೋಟಿ ನಕ್ಷತ್ರ ಖಚಿತ ಇರುಳಾದರೂ ಎಳೆಬೆಳಕಿನ ಸುಳಿವು ಸಹ ಇಲ್ಲ. ಕಗ್ಗತ್ತಲ ಮುಸುಕಿಲ್ಲಿ ಗಿಡ ಮರ ಮನೆ ಮಠಗಳೆಲ್ಲಾ ಬರೀ ಆಕಾರ ಮಾತ್ರ. ಮಾನು ಸಣ್ಣ ಟಾರ್ಚಿನ ಸಹಾಯದಿಂದ ಗಡಿಯಾರವನ್ನು ನೋಡಿಕೊಂಡು ''ಗಂಟೆ ಹನ್ನೆರಡಾಯಿತು, ಇನ್ನು ಹೊರಡೋಣವೇ?'' ಎಂದ ಹುಬ್ಬೇರಿಸಿ.

ಪಿಸುದನಿ ಕಿವಿಯ ಸನಿಹದಲ್ಲಿಯೇ ಮೊಳಗಿತು.

''ತಾಳು...ಸ್ವಲ್ಪ ತಾಳು. ಸುಮಾರಾಗಿ ಹನ್ನೆರಡು ಗಂಟೆಯವರೆಗೆ ಬಹಳ ಮಂದಿ ಎಚ್ಚರಿರುತ್ತಾರೆ. ಒಂದು ಗಂಟೆಯ ಸಮಯಕ್ಕೆ ಎಲ್ಲರಿಗೂ ಗಾಢ ನಿದ್ರೆ, ಅದೇ ಪ್ರಶಸ್ತ ಸಮಯ!''

''ಹಾಗಾದರೆ, ಇನ್ನೂ ಒಂದು ಗಂಟೆ ತಾಳಬೇಕು...ನನಗಾಗಲೇ ನಿದ್ದೆ.''

''ನೀನೇ ಹೀಗೆಂದರೆ ನನ್ನಕತೆ ಹೇಗಿರಬೇಡ?''

''ಬಿಡು, ನಿನ್ನದೇ ಎಷ್ಟೋ ಮೇಲು. ಹಗಲೆಲ್ಲಾ ನಿದ್ದೆ ಮಾಡಿದ್ದಿ!''

''ಆದರೂ ಚಿಂತೆಯ ಗಾವರ..ಅನಿಶ್ಚಿತ ಭವಿಷ್ಯ...ನೇಣುಗಂಬದ ಉರುಳು, ಇವೆಲ್ಲಾ ತಲೆಯನ್ನು ತೂತು ಕೊರೆಯುವ ಯಂತ್ರಗಳು. ಈ ಬಾಂಬೆಸೆದು ಕಾನ್ವೆಂಟನ್ನು ಪುಡಿಪುಡಿಗೊಳಿಸಿದರೆ ನಾನು ಗುರಿಮುಟ್ಟಿದಂತೆಯೆ. ಅನಂತರ ಸಾವು ಸಂಭವಿಸಿದರೂ ವ್ಯಥೆಯಿಲ್ಲ.''

ಸ್ವಲ್ಪಹೊತ್ತು ರುದ್ರಮೌನವೇ ರಾಜ್ಯವಾಳಿತು.

ಮಾನು ಮನೆಯ ಅಟ್ಟತುಂಬಾ ಕಿರಿದು, ಮೈಮುದುಡಿ ಕುಳಿತರೂ ತಲೆಗೆ ತಾಗುತ್ತದೆ ಮಾಡು. ಆತ ಮೇಲೇರಿದನಂತರ ಏಣಿಯನ್ನು ತೆಗೆದು ಅಟ್ಟದ ಗುರುತು ಸಿಗದಂತೆ ಮಾಡಿದ್ದ ಮಾನು. ದೈಹಿಕ ಬಾಧೆ ತೀರಿದ ನಂತರ ಅವನು ಅಲ್ಲೆ. ಯಾರೋ ಕೊಟ್ಟ ಸುಳಿವಿನ ಮೇಲೆ ಪೋಲೀಸರು ಬಂದು ತಪಾಸಣೆ ನಡೆಸಿದ್ದರೂ ಆತ ಸಿಕ್ಕದೆ ಪಾರಾಗಿದ್ದು. ಅದೊಂದು ಎಲ್ಲಿಲ್ಲದ ಹೆಮ್ಮೆ.

ರಾಮು ಮೆಲ್ಲನೆ ಕೆಮ್ಮಿ ಗಂಟಲು ಸರಿಪಡಿಸಿಕೊಂಡು ''ಕಾನ್ವೆಂಟಿಗೆ ಪೋಲೀಸರ ಕಾವಲಿರುವುದರಿಂದ ನಾವು ಹಿಂದುಗಡೆ ಹೋಗಿ ಸಿಡಿಮದ್ದು ಜೋರಾಗಿ ಮನೆಯ

ಮೇಲೆ ಎಸೆದು ಮತ್ತೆ ತಪ್ಪಿಸಿಕೊಳ್ಳುವುದೆಂದರೆ ಕಷ್ಟವಲ್ಲವೇ? ಇದಕ್ಕೇನು ಮಾಡೋಣ?''

''ಹೌದು ಎತ್ತರವಾದ ಪ್ರಾಕಾರವಿದೆ. ಬಿಲ್ಡಿಂಗ್ ಇರುವುದು ಒಳಾಂತರದಲ್ಲಿ. ಇದೊಂದು ಸಾಹಸದ ಕೆಲಸವೇ ಸರಿ.''

''ಮುಂದುಗಡೆ ಗೇಟಿನಲ್ಲಿ ಕಾವಲುಗಾರ ಇರುತ್ತಾನೆ. ಒಳ ಪ್ರಾಕಾರದಲ್ಲಿ ಪೋಲೀಸರು ಗಸ್ತು ತಿರುಗುತ್ತಿರುತ್ತಾರೆ.''

''ನಾವು ಕಾಂಪೌಂಡ್ ಗೋಡೆ ಹತ್ತಿ ಒಳಕ್ಕೆಸೆಯಬೇಕು ಅಷ್ಟೆ. ಗೋಡೆಯಿಂದ ಮೆಲ್ಲಗೆ ಇಳಿಬಿಟ್ಟರೆ ಅದು ನಿಧಾನವಾಗಿ ಆಸ್ಫೋಟಿಸುತ್ತದೆ.''

''ಅಂದರೆ ಗೋಡೆಯ ಬದಿಗೇ ಬಿಡುವುದೆಂದಾಯ್ತು, ಪ್ರಕಾರದ ಗೋಡೆ ಇರುವುದು ದೂರವೇ. ಆದ್ದರಿಂದ ಬಿಲ್ಡಿಂಗ್ ಒಡೆಯುವುದು ಅಸಂಭವ. ಏನು ಮಾಡುತ್ತಿ? ಒಳಹೋಗುವುದು ಕಷ್ಟ. ಓಹೋ, ಇನ್ನೊಂದು ಮರೆತಿದ್ದೆ. ಪ್ರಾಕಾರದ ಗೋಡೆಯ ಮೇಲೆ ಗಾಜು ನೆಟ್ಟಿದ್ದಾರೆ!''

''ಹೌದು. ಈಗ ಹೇಗೆ ಇದರ ವ್ಯವಸ್ಥೆ?''

''ಸರಿಯಾದ ಉಪಾಯವಿಲ್ಲದೆ ಹೋಗುವುದು ವ್ಯರ್ಥ.''

ಸ್ವಲ್ಪಹೊತ್ತು ಮೌನದೇವತೆ ರಾಜ್ಯವಾಳಿತು, ಆಳವಾದ ಯೋಚನೆಗೆ ಇಂಬುಕೊಟ್ಟು.

''ಕಾನ್ವೆಂಟ್ ಬಲಭಾಗದ ಪಕ್ಕ ಒಂದು ಆಲದ ಮರವಿದೆಯಲ್ಲಾ, ಅದರ ಮೇಲೆ ಹತ್ತಿಕೊಂಡರೆ ?''

''ಹತ್ತಿದರೆ ಮನೆಯ ಮೇಲೆ ಎಸೆಯಬಹುದು. ಹಾಗೆ ಎಸೆದಾಕ್ಷಣ ಆಸ್ಫೋಟಿಸುತ್ತದೆ. ಪೋಲೀಸಿನವರು ಅಲ್ಲೇ ಇದ್ದಾರೆ. ನಮ್ಮ ಗತಿ ಮುಗಿಯುತ್ತದೆ.''

''ಮರದ ಕೊಂಬೆಯ ಮೇಲೆ ಹತ್ತಿ ಎಷ್ಟು ಸಾಧ್ಯವೋ ಅಷ್ಟು ದೂರ ಮುಂದೆ ಹೋಗಿ ಹಗ್ಗದಿಂದ ಇಳಿ ಬಿಡೋಣ. ಆದದ್ದಾಗಲಿ....ಅನಂತರ ಸದ್ದಿಲ್ಲದೆ ಹಿಂತಿರುಗಬಹುದು.''

''ಆಗಲಿ, ಹೊರಡು ಹಾಗಾದರೆ....''

* * *

''Man is born free, and every where he is in chains.''
ಪಾಶ್ಚಾತ್ಯ ದ್ರಷ್ಟಾರನ ವಾಕ್ಯದಲ್ಲಿ ಎಷ್ಟೊಂದು ಸತ್ವ ಅಡಗಿದೆ!

ಮೂಡಣದಲ್ಲಿ ಮುಂಬೆಳಕು ಮೂಡಿತು. ನೀಲಾಂಚಲವೆಲ್ಲಾ ಕನಕರಾಗದಿಂದ ಎಷ್ಟೊಂದು ರಮ್ಯವೋ ಅದಕ್ಕಿಂತಲೂ ಸುರಮ್ಯ ಮುಂಬೆಳಕು ತುಂಬಿ ತುಳುಕುವಿಕೆ.

ಹೊತ್ತು ಉರುಳಿತು. ರವಿ ಮನಮೋಹಕವಾದ ಮುಗಿಲ ದಿಣ್ಣೆಯನ್ನೇರಿದ.

ರಾತ್ರಿ ಪಾಳಿಯ ಪೋಲೀಸರನ್ನು ಬೆಳಗಿನ ಪಾಳಿಯ ಪೋಲೀಸರು ಬಂದು ಬಿಡುಗಡೆ ಮಾಡಿಸುವ ಸಮಯ. ಪೋಲೀಸರು ಹೊರ ಬಾಗಿಲಲ್ಲಿ ಕಾಯುತ್ತಿರುವಾಗಲೇ ದಡ ದಡ ದಡ ದಡ ದೌಡಾಯಿಸಿ ಬರುವ ಹೆಜ್ಜೆಗಳ ಸದ್ದು!

ಮೃತ್ಯುವಿನ ಪಾದ ಸಪ್ಪಳ!

ಅರೆ! ಈ ಹೊತ್ತಿನಲ್ಲಿ ಯಾರು ಓಡಿ ಬರುತ್ತಿರಬಹುದು ?

ಪೋಲೀಸರಿಬ್ಬರೂ ಪ್ರಾಕಾರದ ಬಾಗಿಲಿಗೆ ಬಂದು ಹಣಿಕಿ ನೋಡಿದರೆ ಹದಿಹರೆಯದ ಹುಡುಗರಿಬ್ಬರು ಒಂದೇ ಸಮನೆ ಓಡಿ ಬರುತ್ತಿದ್ದಾರೆ. ಏದುಸಿರು ಮೇಲೇರಿ ಬರುತ್ತಿದೆ. ಹಣೆಯ ಮೇಲೆ ತುಂತುರು ತುಂತುರಾದ ಸ್ವೇದ ಬಿಂದುಗಳು. ಆತುರ-ಕಾತರಗಳ ಛಾಯೆ ಕಣ್ಣುಗಳಲ್ಲಿ. ಯಾವುದೋ ಭಯಾನಕ ಸುದ್ದಿ ನುಗ್ಗಿ ಬರುತ್ತಿದೆಯೆಂಬುದು ಖಚಿತ....

ಓಡಿ ಬಂದ ಹುಡುಗರು ಪೋಲೀಸರ ಬಳಿಯಲ್ಲಿ ತೆಕ್ಕನೆ ನಿಂತು ''ನಿಮಗೊಂದು ವಿಶೇಷ ಸುದ್ದಿ ತಿಳಿಸಲು ಓಡಿ ಬಂದೆವು!''

''ಏನು ? ಏನು ಹೇಳಿ!''

''ನಿಮ್ಮ ಕಾನ್ವೆಂಟಿಗೆ ಬಾಂಬ್ ಹಾಕಿರುವುದು ಗೊತ್ತೆ ?''

''ಇಲ್ಲವಲ್ಲಾ!''

''ದಯವಿಟ್ಟು ಒಮ್ಮೆ ಎಲ್ಲ ಕಡೆಯೂ ಪರಿಶೀಲಿಸಿ ನೋಡಿ!''

''ನೀವು ಯಾರು ? ನಿಮ್ಮ ಹೆಸರೇನು ?''

''ನಾನು ಗೋವಿಂದ. ಕೃಷ್ಣ ಭಕ್ತರ ಮಗ'

''ಏನು ಮಾಡುತ್ತಿದ್ದಿ ?''

''ಓದುತ್ತಿರುವೆ. ಇವನು ನನ್ನ ಸ್ನೇಹಿತ. ರತನ್, ಇವನಿಗೆ ತಂದೆಯಿಲ್ಲ, ತಾಯಿಯಿದ್ದಾರೆ. ನಾವು ರಾತ್ರಿ ನಮ್ಮ ಪಕ್ಕದ ಮನೆಯಲ್ಲಿ ನನ್ನ ಇನ್ನೊಬ್ಬ ಗೆಳೆಯನನ್ನು ನೋಡಲೆಂದು ಹೋಗಿದ್ದೆವು. ಅಲ್ಲಿ ಗೆಳೆಯ ಇರಲಿಲ್ಲ. ಅದೇ ಮನೆಯಲ್ಲಿ ನಿಮಗೆ ಬೇಕಾದ ರಾಮುವನ್ನು ಅಡಗಿಸಿಟ್ಟುದು ಕಣ್ಣಿಗೆ ಬಿತ್ತು. ನನ್ನ ಗೆಳೆಯನ ಅಣ್ಣ ನಮ್ಮನ್ನು ಗದರಿಸಿಕೊಂಡುದಲ್ಲದೆ ಯಾರಿಗೂ ಸುದ್ದಿ ಬಿಡಬಾರದೆಂದು ಕಟ್ಟಪ್ಪಣೆ ಮಾಡಿದ. ನಾವಿಬ್ಬರೂ ಹಿಂದಿರುಗಿ ಬಂದು ಅವರ ಮೇಲೆ, ಕಿಟಕಿಯ ಕಿಂಡಿಯಲ್ಲಿ ಕಣ್ಣಮೇಲೆ

ಕಣ್ಣಿಟ್ಟು ನೋಡುತ್ತಿದ್ದೆವು. ರಾತ್ರಿ ಅವರು ಆಡಿದ ಮಾತುಕತೆಯಿಂದ ವಿಷಯ ತಿಳಿಯಿತು. ಅನಂತರ ಅವರು ರಾತ್ರಿ ಭಾರವಾದ ವಸ್ತುವಿನೊಂದಿಗೆ ಹೊರ ಬಿದ್ದುದನ್ನು ಕಂಡೆವು. ರಾತ್ರಿ ಅವರಾಡಿದ ಮಾತುಕತೆ ಮತ್ತು ಒಂದು ಭಾರವಾದ ವಸ್ತುವಿನೊಂದಿಗೆ ಮನೆಯಿಂದ ಸದ್ದಿಲ್ಲದೆ ಹೊರಟಿದ್ದು ಸ್ವತಃ ಕಿವಿಯಿಂದ ಕೇಳಿ, ಕಣ್ಣಿನಿಂದ ನೋಡಿ ಅರಿತ ವಿಷಯ. ನೀವು ನಿಜವೇ ಇರಲಿ, ಸುಳ್ಳೇಯಿರಲಿ ಒಮ್ಮೆ ಎಲ್ಲಾ ಕಡೆಯೂ ಹುಡುಕಿ ನೋಡುವುದು ಒಳ್ಳೆಯದು.''

ಪೋಲಿಸಿನವ ಹುಡುಗರ ಪೂರ್ತಿ ವಿಳಾಸವನ್ನು ಗುರುತು ಹಾಕಿಕೊಂಡು ಕೇಳಿದ ''ನೀವು ಅವರ ಮಾತುಕತೆ ಕೇಳಿದ್ದು ಹೇಗೆ ?''

''ರಾತ್ರಿ.... ಅವರದ್ದೂ ನಮ್ಮದೂ ಅಕ್ಕಪಕ್ಕದ ಮನೆಗಳು. ನೀವು ಈಗಿಂದೀಗಲೇ ಹೋದರೆ ಅವನನ್ನು ಹಿಡಿಯಬಹುದು.''

''ಇರಲಿ, ಮೊದಲು ಬಾಂಬಿನ ತಪಾಸಣೆಯಾಗಲಿ.''

''ನೋಡಿ, ಆಲದ ಮರದ ಮೇಲಿಂದ ಇಳಿ ಬಿಡುತ್ತೇವೆ'' ಎಂದು ಮಾತನಾಡುತ್ತಿದ್ದರು. ಮೊದಲು ಆಲದ ಮರದ ಕಡೆ ಹೋಗೋಣ.

ಆ ಕೂಡಲೆ ಪೋಲೀಸಿನವನು ಕಾನ್ವೆಂಟಿನ ಮದರ್‌ಗೆ ವಿಷಯ ತಿಳಿಸಿ ಎಲ್ಲರನ್ನೂ ಕಟ್ಟಡದಿಂದ ಹೊರ ಬರುವಂತೆ ವಿನಂತಿಸಿಕೊಂಡ. ಭಯ ಭೀತಿಯಿಂದ ಎಲ್ಲರೂ ಪ್ರಾಕಾರವನ್ನು ದಾಟಿ ಹೊರ ವಲಯಕ್ಕೆ ಧಾವಿಸಿದರು. ಯಾರ ಮುಖವನ್ನು ನೋಡಿದರೂ ಪ್ರೇತಕಳೆಯೇ. ಎಳೆಯರಂತೂ ಗಡ ಗಡ ನಡುಗುತ್ತಿದ್ದಾರೆ. ಹಿರಿಯರ ಮೈಯ್ಯಲ್ಲೂ ನಸುಕಂಪನದ ಅಲೆ. ಭಯ ಭೀತಿಯ ಗಾವರ.

ಪೋಲೀಸರು ಹಿಂಭಾಗದಲ್ಲಿ ಆಲದ ಮರದ ಕಡೆ ಹೋದರೆ ನಿಜವೆ! ಪ್ರಾಕಾರದಾಚೆ ಆಲದ ಹೆಮ್ಮರ. ಅದರ ಚಾಚು ಗೊಂಬೆಯ ಮೇಲೆ ನಡೆದು ಬಂದು ತುತ್ತ ತುದಿಯಲ್ಲಿ ನಿಂತು ಹಗ್ಗದ ಮೂಲಕ ನೆಲಕ್ಕಿಳಿಸಿದ್ದಾರೆ ನಾಡ ಬಾಂಬನ್ನು! ಇನ್ನೂ ಸಿಡಿಯದ ನಾಡ ಬಾಂಬು!!

ಕೂಡಲೇ ವಯರ್‌ಲೆಸ್ ಮೆಸ್ಸೇಜ್ ಹೋಯಿತು ಪೋಲೀಸ್ ಹೆಡ್ ಕ್ವಾಟರ್ಸ್‌ಗೆ. ಅನಂತರ ಸುದ್ದಿ ಎಲ್ಲೆಲ್ಲಿ ಹರಿದಾಡಿತೋ, ಅಲ್ಲೆಲ್ಲ ಗಲಿಬಿಲಿ. ಅತ್ತ ರಾಮು ಮತ್ತು ಆತನ ಗೆಳೆಯನನ್ನು ಕೈ ಸೆರೆಹಿಡಿದು ಠಾಣೆಗೆ ಒಯ್ದ ಸಮಯದಲ್ಲಿ, ಮಿಲಿಟರಿಯವರು ಬಾಂಬನ್ನು ಅಲ್ಲಿಂದ ತೆಗೆದು ಹೊರಗೆ ಸಾಗಿಸುತ್ತಿದ್ದಂತೆಯೇ ದುರದೃಷ್ಟವಶಾತ್ ಅದು ಆಸ್ಫೋಟಿಸಿ ಒಬ್ಬ ಸೈನಿಕನನ್ನು ಬಲಿ ತೆಗೆದುಕೊಂಡು ಕೆಲವರನ್ನು ತೀವ್ರಗಾಯಗೊಳಿಸಿತು!

* * *

ನ್ಯಾಯಾಂಗ ವಿಚಾರಣೆಗಾಗಿ ರಾಮುವನ್ನು ನ್ಯಾಯಾಲಯಕ್ಕೆ ಕರೆ ತಂದ ಪೋಲೀಸ್ ಪೇದೆ, ಅವನು ಪ್ರತಿಕ್ಷಣವೂ ಓಡಿ ಹೋಗುವ ಪ್ರಯತ್ನದಲ್ಲಿದ್ದುದನ್ನು ಕಂಡು ಅವನ ಕೈಗೆ ಕೋಳ ತೊಡಿಸಿದರೆ ಆತ ಅತ್ಯುಗ್ರನಾಗಿ ಪೋಲೀಸನ ಕೆನ್ನೆಯ ಮೇಲೆ ಜೋರಾಗಿ ಬಾರಿಸಿದ. ಆ ಪೆಟ್ಟು ಆಯಕ್ಕೆ ಬಿದ್ದು ಪೋಲೀಸನು ಪ್ರಜ್ಞೆತಪ್ಪಿ ಉರುಳಿದ.

ಮರುಕ್ಷಣದಲ್ಲೇ ಇತರ ಪೋಲೀಸರು ಸಹಾಯಕ್ಕೆ ಧಾವಿಸಿದರು.

ಅವನನ್ನು ಆಸ್ಪತ್ರೆಗೆ ಸಾಗಿಸುವಾಗಲೇ ಅವನು ಕೊನೆಯುಸಿರು ಎಳೆದ. ನ್ಯಾಯ ಪೀಠದ ಬಾಗಿಲಲ್ಲೇ ನಡೆದ ದುರಂತದಿಂದ ಎಲ್ಲರಿಗೂ ಕಸಿವಿಸಿ-ಕಳವಳ-ಸಂಕಟ.

ರಾಮು ಜೇಲಿನ ಅತಿಥಿಯಾದ.

ನೀಲಮಣಿಗೆ ವಿಷಯ ಕರ್ಣಾಕರ್ಣಿಯಾಗಿ ಮುಟ್ಟಿತು...ಅಧಃಪತಿತರಾದ ಮಕ್ಕಳು ತಂದೆಯ ದೌರ್ಜನ್ಯ-ಕೋಪತಾಪಗಳ ಪ್ರತೀಕ. ವಿದ್ಯೆ ಬುದ್ಧಿಗಳಿಂದಲೂ ದೂರ. ಒಳ್ಳೆಯ ನಡತೆಯಿಂದಲೂ ದೂರ. ಇಂಥ ಮಕ್ಕಳ ದುರ್ವ್ಯವಹಾರ ಮತ್ತು ದುಷ್ಟತನ ಬೀಸು ದೊಣ್ಣೆ ಪ್ರಹಾರ....

ಜೀವನ ಇಷ್ಟೊಂದು ಕ್ರೂರವಾದರೆ ಈ ಜೀವನವಾದರೂ ಏಕಿರಬೇಕು ? ಯಾರಿಗಾಗಿ ಈ ಬದುಕು ? ನನ್ನ ಅಣ್ಣತಮ್ಮಂದಿರಿದ್ದಾಗ ಪ್ರೀತಿ-ವಿಶ್ವಾಸಗಳಿದ್ದುವು. ಆಶ್ರಯ-ಅಭಿಲಾಷೆಗಳಿದ್ದುವು.

ಈಗ...?

ಒಡನೆ ಈಗ...? ಎಂಬ ಪ್ರಶ್ನೆ ಮನದಾಳಕ್ಕೆ ಗುಂಗೆ ಹುಳುವಿನಂತೆ ರೊಯ್ಯನೆ ಇಳಿಯಿತು. ನಾನು. ಯಾವ ದುರ್ಗಳಿಗೆಯಲ್ಲಿ ಜನ್ಮಧಾರಣೆ ಮಾಡಿದೆನೋ, ಅದಕ್ಕೇ ಈ ಗೋಳು ಇದು ಜನ್ಮಾಂತದವರೆಗೂ ಮುಗಿಯದ ಪ್ರಕರಣ.... ದುಷ್ಟಮಕ್ಕಳಿಂದ ಮನೋನ್ಮಣಿಗೂ ಆಧಾರವಾಗಲಾರೆ ನಾನು. ಅಂದಮೇಲೆ ಏಕೆ ಈ ಬದುಕು ?

ಅದು ತನ್ನ ಮುಂದಿರುವ ಪ್ರಶ್ನೆ.

ತನ್ನಂತ್ಯದ ಸಲುವಾಗಿ ತಾನು ಏನೆಲ್ಲಾ ಕ್ರಮ ಕೈಕೊಳ್ಳಬೇಕು ? ಆ ಯೋಚನೆ ಬಂದಾಗ ತನ್ನ ಪೆಟ್ಟಿಗೆಯನ್ನೆಲ್ಲಾ ತಡುಕಾಡಿ ಕಾಗದ ಪತ್ರಗಳು-ವ್ಯಾವಹಾರಿಕ ಕಡತಗಳು ಮುಂತಾದವನ್ನು ತೆಗೆದು ಓದಿಕೊಂಡರೆ ಮೈಯೆಲ್ಲಾ ಬಿಸಿಬಿಸಿ. ಅಣ್ಣತಮ್ಮಂದಿರು ಮಹಮದ್ ಪಾಶ ಮಾಡಿದ ಅನ್ಯಾಯವನ್ನು ವಿಷದೀಕರಿಸಿ ಬರೆದ ಪತ್ರ. ಒಂದುವೇಳೆ

ಅವನಿಂದ ಹಣ ದಕ್ಕಿತೆಂದರೆ ತನಗಿಷ್ಟು ಸಹಾಯ ಮಾಡುವುದಾಗಿ ಬರೆದ ಪತ್ರ. ಮಹಮದ್ ಪಾಶ ಬಹಳ ದುರ್ವ್ಯವಹಾರಕ್ಕಿಳಿದಿದ್ದಾನೆ. ಅವನ ಸ್ನೇಹ ಸಂಪೂರ್ಣ ಕಡಿದುಕೊಂಡಿದ್ದೇವೆ ಎಂದು ತಿಳಿಸಿದ ಪತ್ರ....ಅವನ್ನು ಓದುತ್ತಿದ್ದಂತೆಯೇ ಎರಡೂ ಕಣ್ಣುಗಳಲ್ಲಿ ಬಳಬಳ ನೀರು ಇಳಿದು ಹೋಯಿತು.

ಸ್ವಲ್ಪ ಹೊತ್ತು ಗಂಭೀರ ಚಿಂತನೆಯಲ್ಲಿ ಉರುಳಿತು.

ನಾನು ಇವನ್ನೆಲ್ಲಾ ಸಂಗ್ರಹಿಸಿದ್ದೂ ಸಹ ಉಪಯೋಗಿಸದೆ ಹೋದುದು ಮೂರ್ಖತನ. ಇನ್ನಾದರೂ ಇವುಗಳ ಉಪಯೋಗ ಹೊಂದಲೇಬೇಕು....! ಎಂದು ಅಂತರಂಗ ಕೂಗಿ ಹೇಳಿದಾಗ ಮನಃಪಕ್ಷಿ ಭೂತಕಾಲದ ಜೀವನ ಸ್ತರದಲ್ಲಿ ಅಂಡಲೆಯಿತು ಬೆಂಕಿ ಕಿಡಿಯಂತಹ ಪತಿಮಹರಾಯ. ಯಾವತ್ತೂ ಉರಿಗಣ್ಣು.... ರೋಷ. ಅವನು ಅಲ್ಲಿ ಬಂದರೆ ಎದೆಯಾಳದಲ್ಲಿ ತಳಮಳ. ಹಗಲೆಲ್ಲಾ ತೊತ್ತು. ರಾತ್ರಿಯೆಲ್ಲಾ ಸೊತ್ತು. ಜೀವನದ ಲಕ್ಷ್ಮಣರೇಖೆಯಲ್ಲೇ ಕಳೆಯಿತು ಕಾಲಮಾನ. ಅವನಿರುವಂದು ಕಾಂಚಾಣ ಈ ಬಳಿಯಲ್ಲಿ ಸುಳಿಯಲಿಲ್ಲ. ತವರು ಮನೆಯವರು ಕೊಟ್ಟ ಕನಕಾಭರಣ ತನ್ನ ಅಗತ್ಯಗಳಿಗಾಗಿಯೇ ಕರಗಿದುವು. ಅದೂ ಸಹ ಆತನ ಗಮನಕ್ಕೆ ಬಾರದಷ್ಟು ಗೂಢವಾಗಿ. ಇನ್ನುಳಿದುದು ಒಂದೇ ಒಂದು ಕಂಠೀಸರ ಮತ್ತು ಕೈಕಡಗಗಳು ಮಾತ್ರ. ಅವು ಯಾರ ಕಣ್ಣಿಗೂ ಬೀಳದಂತೆ ಪೆಟ್ಟಿಗೆಯ ತಳದಲ್ಲಿ ಅಡಗಿಸಿಟ್ಟಿದ್ದು ತನಗೆ ಮಾತ್ರ ತಿಳಿದ ವಿಷಯ. ಪತಿಯ ಮರಣಾನಂತರ ವ್ಯವಹಾರ ತನ್ನ ಹಸ್ತಗತವಾದುದರಿಂದ ಅವುಗಳಿಗೆ ಜೀವದಾನ. ಮುಂದೆ ಅವೇ ಆಪದ್ಧನ.

ಪೆಟ್ಟಿಗೆಯನ್ನು ಮುಚ್ಚಿದಾಗಲೇ ಹರಿಕಿಷನ್ ಬಾಗಿಲಲ್ಲಿ ಕಾಣಿಸಿಕೊಂಡ.

''ತಾಯಿ ರಾಮು ವಿಚಾರ ಕೇಳಿದರಷ್ಟೆ ?''

''ಕೇಳಿದೆ. ಏನು ಮಾಡಲಿ ಹೇಳು ? ಎಲ್ಲಾ ನನ್ನ ದೌರ್ಭಾಗ್ಯ.''

''ಇನ್ನು ಉಗ್ರ ಶಿಕ್ಷೆ ಕಾದಿರುತ್ತೆ. ಜೀವಾವಧಿ ಕೂಡಿ ಬಿಡುತ್ತಾರೆ.

ನೀವು ಈವರೆಗೆ ಪಟ್ಟಪಾಡು ವ್ಯರ್ಥವಾಯ್ತು. ಅದೇ ವ್ಯಸನ.'' ವಿಷಾದವಾಣಿ ಸಂಕಟಪೂರ್ಣವಾಗಿ ಹೊಮ್ಮಿ ಕಣ್ಣಾಲಿಗಳು ತುಂಬಿ ಬಂದುವು.

''ಹರೀ! ಇನ್ನು ಈ ಜಮೀನು ನಿನ್ನದೇ. ನಾನಿರುವ ತನಕ ಅಷ್ಟಿಷ್ಟು ಕಾಳು ಕಡ್ಡಿ ಕೊಡು. ಹಾಗೆಂದು ಪತ್ರ ಬರೆದುಕೊಡುವೆ.''

'' ನೀವು ದಾನ ಪತ್ರ ಬರೆದುಕೊಟ್ಟರೆ ನಾಳೆ ರಾಮು, ಸಿದ್ದು ಬಂದರೆ ಸುಮ್ಮನೆ ಬಿಟ್ಟಾರೆಯೇ ?''

''ದಾನ ಪತ್ರ ತೋರಿಸಿ ಕಾನೂನಿನ ಮರೆಹೋಗು!''

ಅವನು ಮೌನಗತಿಯಲ್ಲಿ ತಲೆಯಾಡಿಸಿದ. ಹೃದಯಮೃದಂಗವ್ಯಾಪ್ತಿಗೆ ಮೀರಿ ಮಿಡಿಯಿತು.

೬

'ನ ದೈವ ಬಲಂ ಸಮಸ್ತಂ ದುರ್ಬಲಂ'

ಆವುದೋ ಅಶರೀರವಾಣಿ ಕಿವಿಯ ಸನಿಹದಲ್ಲಿ ಕೂಗಿ ಕೂಗಿ ಹೇಳುತ್ತದೆ.

ದೈವಬಲ ತಪ್ಪುವಂತಹ ನನ್ನಿಂದಾದ ತಪ್ಪಾದರೂ ಏನು ? ದೈವ ನನ್ನ ಕೈಬಿಟ್ಟದ್ದಾದರೂ ಏಕೆ ? ಅಂದಿಂದಿಗೂ ಏನೆಲ್ಲಾ ಸಂಕಷ್ಟಗಳ ಸರಮಾಲೆ ? ಏತಕ್ಕಾಗಿ ಈ ಶಿಕ್ಷೆ ? ಈ ಪರಮ ಹಿಂಸೆಗೆ ಅರ್ಥವಾದರೂ ಏನು ?

ಪ್ರಶ್ನೆಗಳ ಮೇಲೆ ಪ್ರಶ್ನೆಗಳು. ಆ ಭಗವಂತ ಯಾರಿಗೂ ಉತ್ತರಿಸದಿರುವಂತೆ ತನಗೂ ಉತ್ತರಿಸಲಾರ. ಆದರೆ, ಇನ್ನೊಂದು ಪ್ರಶ್ನೆ; ಈ ಬ್ರಹ್ಮಾಂಡವೇ ಒಂದು ರಂಗಭೂಮಿ. ಸ್ತ್ರೀ ಪುರುಷರೇ ಅದರ ಪಾತ್ರಧಾರಿಗಳು. ಅಂದಮೇಲೆ ಭಗವಂತ ಯಾರು ಯಾರನ್ನು ಗಮನಿಸಲಿಕ್ಕೆ ಸಾಧ್ಯ ?

ಆ ಪ್ರಶ್ನೆ ಎದ್ದಾಗ ಮನಸ್ಸು ವಿಚಾರಶೀಲವಾಯಿತು. ಎಳೆಯ ಹೃದಯ, ಎಳೆಯ ಮನಸ್ಸು, ಎಳೆಯ ಚಿಂತನೆಗಳ ವ್ಯವಹಾರ ಕುರುಡರು ಕುರುಡರಿಗೆ ದಾರಿ ತೋರಿದಂತೆ.

ಇರಲಿ, ಈ ಜೀವನಕ್ಕೆ ರೂಪು ಕೊಡಲು-ದಾರಿದೀಪವಾಗಲು ಮದರ್‌ಗಳು ಎಷ್ಟೊಂದು ಆಸ್ತೆ ವಹಿಸಿದ್ದಾರೆ ? ಅವರ ಋಣವನ್ನು·ನಾನು ಹತ್ತು ಜನ್ಮ ಎತ್ತಿದರೂ ತೀರಿಸಲಾರೆ. ಇದನ್ನೆಲ್ಲಾ ನೆನೆಸಿಕೊಂಡರೆ ಖಂಡಿತ ಸಾಯಲು ಮನಸ್ಸು ಬರುವುದಿಲ್ಲ. ಋಣಭಾಜನಗಳಾಗುವುದಕ್ಕಿಂತ ಅವರು ನೀಡಿದ ಪ್ರೀತಿಗೆ ಪ್ರತಿ ಸೇವೆ ಸಲ್ಲಿಸಿ ಋಣಮುಕ್ತಳಾಗುವುದು ಲೇಸು.... ಆಲೋಚನೆಯ ತೇಜಿ ಓಡುವಷ್ಟು ದೂರ ಓಡಿ ಅಲ್ಲಿಗೆ ಗಕ್ಕನೆ ನಿಂತಿತು.

ಎದೆಯಾಳದಿಂದ ನೀಳವಾದ ನಿಟ್ಟುಸಿರೊಂದು ತನಗರಿಯದಂತೆಯೇ ತಪ್ಪಿಸಿಕೊಂಡಿತು. ಕೆಲವು ಕ್ಷಣ ಪಾನಮತ್ತಳಾದಂತೆ ಭಾರ ಭಾರವಾಯಿತು ತಲೆ. ಮನೋನ್ಮಣಿ ದೂರ ದಿಗಂತದಲ್ಲಿ ದೃಷ್ಟಿಯನ್ನು ಚೆಲ್ಲಿಕೊಟ್ಟಳು. ದಿಗಂತದ ಸೀಮಾ ಕ್ಷೇತ್ರದಲ್ಲಿ ಅರಳೆಯ ರಾಶಿಯೊಟ್ಟಿದಂತೆ ಮುಗಿಲ್ಮಂಜಿನ ರಾಶಿ. ಅದರ ನೇರಕ್ಕೇ

ಹಾರಾಡುವ ಕಾಮಳ್ಳಿಗಳ ಕರಿಯ ತಂಡದ ಸಣ್ಣ ಚುಕ್ಕಿ ಚುಕ್ಕಿ. ಒಯ್ಯೊಯ್ಯನೆ ತೀಡುತ್ತಾ ಬರುವ ತಂಬೆಲರ ಸುಖಸ್ಪರ್ಶ ಮೈ ಮನಗಳಿಗೆ. ಬ್ರಹ್ಮಾಂಡ ಎಷ್ಟೊಂದು ಸತ್ಯ ಸುಂದರವೋ ಅಷ್ಟೇ ಕ್ರೂರ ಅಂದರೆ ನಂಬುವುದು ಕಷ್ಟ. ಜಗತ್ತಿನ ನಿರ್ಮಾಣ ಎಲ್ಲರಿಗಾಗಿ-ಎಲ್ಲರ ಸುಖ-ಶಾಂತ ಜೀವನಕ್ಕಾಗಿ. ಆದರೆ, ನಮ್ಮವರ ವ್ಯಾಪಾರವೇನು? ರಾಷ್ಟ್ರಪ್ರೇಮಿ ಹದಿಹರೆಯದ ಜೋನ್ ಆಫ್ ಆರ್ಕಳನ್ನು ಅಮಾನುಷವಾಗಿ ಮುಗಿಸಿದವರಲ್ಲಿ ಮಾನವೀಯತೆ ಲವಲೇಶವಾದರೂ ಇತ್ತೆ ? ಇಂತಹ ಉದಾಹರಣೆಗಳು ಒಂದೇ ಎರಡೇ ? ಅಸಂಖ್ಯಾತ! ದೌರ್ಜನ್ಯಕಾರಿಗಳ ಲೀಲಾಖೇಲನ! ನೀತಿನಿಷ್ಠ-ಧರ್ಮನಿಷ್ಠ ವ್ಯಕ್ತಿಗಳಿಗೆ ಹೆಜ್ಜೆ ಹೆಜ್ಜೆಯೂ ಮಾರಕವಾಗುವುದಾದರೆ ಎಲ್ಲಿಯ ಸುಸಂಸ್ಕೃತಿ? ಏಕೆ ಹೀಗಾಯಿತು? ಈ ಕುಸಂಸ್ಕಾರ ವಿದೇಶೀಯರ ಉಂಬುಳಿಯೆಂದು ಪಾಶ್ಚಾತ್ಯರ ಕಡೆ ಬೊಟ್ಟು ಮಾಡುವ ಜನ ಇಂತಹ ಕಾನ್ವೆಂಟು ಮತ್ತು ಅತ್ಯುತ್ತಮ ಆಸ್ಪತ್ರೆ ಮತ್ತು ವೃದ್ಧಾಶ್ರಮ ಮುಂತಾದ ಸೇವಾಕ್ರಮಗಳನ್ನು ಒಮ್ಮನದಿಂದ-ಹೃತ್ಪೂರ್ವಕವಾಗಿ ಸಲ್ಲಿಸುವ ಶುದ್ಧಹೃದಯರ ಬಗ್ಗೆ ಏನು ಹೇಳುತ್ತಾರೆ? ನಾವು ಏನು ಕಲಿಯಬೇಕೋ ಅದನ್ನು ಕಲಿಯದೆ ಯಾವುದು ಕಲಿಯಬಾರದೋ ಅದನ್ನು ಕಲಿತರೆ ತಪ್ಪು ಯಾರದು ?

ವಿಚಾರಶೀಲತೆ ಬಂಡೆದ್ದಷ್ಟೂ ಭಯ-ಸಂಕಟ-ಸಂಕಷ್ಟ-ಚಿಂತೆ. ಉನ್ಮಾದಗಳು ರೆಕ್ಕೆ ಮುರಿದ ಪಕ್ಷಿಯಂತೆ ಇದ್ದಲ್ಲೇ ಪಟಪಟಿಸುತ್ತವೆ ತಲೆಗೆ ಚಿಟ್ಟುಹಿಡಿಸುವಷ್ಟು ಘೋರವಾಗಿ.

ಏಸುಸ್ವಾಮಿಯ ಮುಂದೆ ಉರಿಯುವ ಕ್ಯಾಂಡಲ್-ನ ಕ್ಷೀಣಿತ ರಶ್ಮಿಗಳು ಮನದ ಕೊಳೆಯನ್ನು ತೊಳೆಯುವುದು ಮಾತ್ರವಲ್ಲ; ಶಾಂತ-ಶೀತಲ ಶಾಂತ ಮನೋಶಾಂತತೆಯ ಆಗರವೇ ಆಗಿದೆ ಏಸುಸ್ವಾಮಿಯಂತೆ.

ಏಕಾಗ್ರತೆ ಸ್ವಾಮಿಯನ್ನು ನಿಟ್ಟಿಸಿದಳು. ಆ ಸೌಮ್ಯ ಮುಖದಲ್ಲಿ ಎಂತಹ ಮಧುರ ಭಾವನೆ ? ಸ್ವಜನರು ಆತನಿಗೆ ಕೊಟ್ಟ ದಾರುಣ ಹಿಂಸೆ. ಆತ್ಮ ಹಿಂಸೆ, ಪ್ರಾಣ ಹಿಂಸೆ ಸಾಮಾನ್ಯವೇ ? ಆತ ಮಣಿದನೇ ? ಅತ್ತನೇ ? ಎಂತಹ ಸ್ಥೈರಣೆ ಅವನಲ್ಲಿ ? ಕೋಪ-ಸಂಕಟಗಳು ಅವನ ಬಳಿಯಲ್ಲಿ ಸುಳಿಯಲಿಲ್ಲವಲ್ಲಾ ? ಅಂದಮೇಲೆ, ನಾನೇಕೆ ಸಂಕಟ ಪಡಬೇಕು? ರಾಮು-ಸಿದ್ದು ಮಾಡಿದ ಅಪಚಾರವನ್ನು ನಾನು ಸೇವೆ-ಪ್ರೀತಿಯಲ್ಲಿ ತುಂಬುವೆ....

ಎಷ್ಟೊಂದು ಅಲೆಗಳು? ಹೃದಯ ಸಮುದ್ರದ ಅಲೆಗಳಲ್ಲಿ ತೇಲಿ ಬಂದುದೇನು ? ಆನಂದ ಭಾವದ ನವನೀತ ? ಅಥವಾ ಮಧುರ ಭಾವದ ರಸಾನ್ನ ?

ಮನೋನ್ಮಣಿ ಮಂಡಿಯೂರಿ ಕುಳಿತು ಭಕ್ತಿ ಭಾವದಿಂದ ಪ್ರಾರ್ಥನೆ ಸಲ್ಲಿಸಿದಳು.

* * *

ಧೋ ಧೋ ಎಂದು ಒಂದೇಸಮನೆ ಸುರಿಯುವ ಗ್ರೀಷ್ಮ ಧಾರಾ ವರ್ಷ.

ಗುಡುಗು-ಮಿಂಚುಗಳ ಆರ್ಭಟ....ಬಿರುಗಾಳಿಯ ಭೀಷಣದಾವೇಶ! ಗಿಡಗಿಡಗಳನ್ನು ತಿರುಚಿ; ಮರಮರಗಳನ್ನು ಮುರಿದು; ಗುಡಿಸಲುಗಳನ್ನು ಹಾರಿಸಿ ; ಮನೆಗಳನ್ನು ಕೆಡವಿ ಹೂಡಿದ ರಂಪಾಟ ಸಾಮಾನ್ಯವಲ್ಲ. ಜನಜೀವನ ಇದ್ದಕ್ಕಿದ್ದಂತೆಯೇ ಅಸ್ತವ್ಯಸ್ತ. ಮಳೆ ನಿಲ್ಲುವ ಸೂಚನೆಯೇ ಇಲ್ಲ. ಎಲ್ಲಿಂದ ಎಲ್ಲಿಯವರೆಗೂ ನಿರ್ಜನ. ಕ್ರತುವಿನಲ್ಲಿ ತಮ್ಮ ಹವಿರ್ಭಾಗದ ಸಲುವಾಗಿ ಕ್ಷುದ್ರ ದೇವತೆಗಳು ಪ್ರತೀಕ್ಷಿಸುವಂತಿದೆ ಮಹಾ ಪ್ರಳಯದಾವೇಶದ ದೇವತಾವೇಶ.

ದಿನವೂ ಪ್ರಾಕಾರದ ಆಚೆ ಹಸರು ಹುಲ್ಲು ಮೇಯಲು ಬರುತ್ತಿದ್ದ ಬಿಳಿಯ ಸಾರ್ಜೆಂಟಿನ ಮುದಿ ಕುದುರೆ ಇಂದು ಮಳೆಯ ಹೊಡೆತಕ್ಕೆ ಸಿಕ್ಕಿ ತತ್ತರಿಸಿ ರಕ್ಷಣೆಗಾಗಿ ಅತ್ತಿತ್ತ ತೊಳಲಾಡುತ್ತಿದೆ. ನೆತ್ತರಾರಿದ ಮೈ-ಶಕ್ತಿಹೀನ. ಬಡಜೀವ....ಮರದಡಿಯಲ್ಲಿ ನಿಲ್ಲಲು ಪ್ರಯತ್ನಿಸಿ ಎಲ್ಲಿಯೂ ರಕ್ಷೆ ದೊರೆಯದಾಗುತ್ತಲೂ ಕಾನ್ವೆಂಟಿನ ಪ್ರಾಕಾರದ ಬಳಿ ಬಂದು ಅರಚಿಕೊಳ್ಳತೊಡಗಿತು ;ಅದರ ಅರಣ್ಯರೋದನದಿಂದ ಪೆಣ್ಮಣಿಯರ ಮನಸ್ಸು ನೊಂದು ನೀರಾಗಿ ಅದನ್ನು ಬರಮಾಡಿಕೊಳ್ಳಲು ಮುಂದಾದರೆ ಅದು ಕಡಿವಾಣವಿಲ್ಲದ ಕುದುರೆ. ಏನು ಮಾಡುತ್ತದೋ ಎಂಬ ಭಯ. ಆಳುಗಳೆಲ್ಲಾ ಅವರವರ ಮನೆಯಲ್ಲಿದ್ದುದರಿಂದ ಏನು ಮಾಡುವುದೆಂಬ ಚಿಂತೆ. ಗ್ಯಾರೇಜಿನಲ್ಲಿ ಜೀಪು ನಿಂತಿದ್ದರಿಂದ ಆಶ್ರಯಕೊಡುವುದು ಕಷ್ಟವೇ. ಆದರೆ, ಅದನ್ನು ನೋಡುನೋಡುತ್ತ ಸುಮ್ಮನಿರುವುದೆಂತು ?

ಮನೋನ್ಮಣಿ ಕೊಡೆ ತೆಗೆದುಕೊಂಡು ಪ್ರಾಕಾರದ ಬಾಗಿಲನ್ನು ತೆರೆದು "Come my Billy! come come!" ಎಂದು ಕರೆದಳೋ ಇಲ್ಲವೋ ಅದು ಕೂಡಲೇ ಹೊಂಗುತ್ತ ಅವಳ ಹಿಂದೆಯೇ ಬಂದಿತು. ಅವಳು ಮುಂಬಾಗಿಲು ಹಾಕಿಕೊಳ್ಳುವುದ ರೊಳಗಾಗಿ ಅದು ಜಗಲಿಯ ಒಳಗೇ ಬಂದುದರಿಂದ ಉಪಾಯವಿಲ್ಲದೆ "ಮದರ್! ಮದರ್!....!" ಎಂದು ಕೂಗಿಕೊಂಡಳು. ಬಾಗಿಲಲ್ಲಿ ಕಾದು ನಿಂತಿದ್ದ ಇತರ ಹುಡುಗಿಯರು ಹೆದರಿ ಒಳಗೋಡಿದರು!

ತೊಯ್ದು ನೀರಿಳಿಯುವ ಮೈ; ಚಳಿಯಿಂದ ಗಡಗಡ ನಡುಗುವ ಜೀವ; ಎಲುಬಿನ ಹಂದರ. ಒಂದು ಕಾಲದಲ್ಲಿ ಪುಷ್ಟಿಯಾಗಿದ್ದು ಧಣಿಯ ಸೇವೆಯನ್ನು ಎಷ್ಟು

ಮಾಡಿತ್ತೋ.... ವಯೋಮಾನದಿಂದ ಗತಿಹೀನತೆ, ಎಂತಹ ಪಾಷಾಣ ಹೃದಯವಾದರೂ ಮರುಗುವಷ್ಟು ಕರುಣಾಜನಕ....ಒಡೆಯ ಯಾವ ಮೋಜಿನಲ್ಲಿದ್ದಾನೋ....!

ಮದರ್ ಬರುವುದರೊಳಗಾಗಿ ಅದು ಕುಸಿದು ದೊಪ್ಪನೆ ಅಲ್ಲೇ ಬಿದ್ದುಕೊಂಡಿತು. ಮೈಗೆ ಥಂಡಿ ಹತ್ತಿದೆ. ಮೈಯೊರೆಸಿ ಮಾಲೀಸ್ ಮಾಡಿ ಬಿಸಿ ಮೂಡಿಸದ ಹೊರತು ಗತ್ಯಂತರವಿರಲಿಲ್ಲ. ಮೈಯೊರೆಸಲು ಹುಡುಗಿಯರು ತಮ್ಮ ಹಳೆಹಳೆಯ ಬಟ್ಟೆಗಳನ್ನು ತಂದರು. ಮದರ್ ಜಾರ್ಜಿಯ ಓಡಿ ಬಂದಳು.

''ಮದರ್! ನಾನು ಒಳ ಬಂದು ಕದ ಮುಚ್ಚಿಕೊಳ್ಳುವುದರೊಳಗಾಗಿ ಅದು ಒಳಗೇ ಬಂದುಬಿಟ್ಟಿತು....ನನಗೆ ಏನು ಮಾಡಲೂ ಆಗಲಿಲ್ಲ.''

''ಇರಲಿ, ಬಿಡು ಮನೊ! ಮೂಕಪ್ರಾಣಿ. ಅದು ತಾನೇ ಏನು ಹೇಳಿಕೊಳ್ಳಬಲ್ಲುದು ? ತನಗೆ ಬೇಕಾದುದು ಮಳೆಗಾಳಿಯ ರಕ್ಷಣೆ ಮಾತ್ರ. ಅಂತಲೇ ಅದು ಓಡಿ ಬಂದು ಒಳ ಹೊಕ್ಕಿದೆ. ಇಲ್ಲದಿದ್ದರೆ ಅದು ಅಲ್ಲೇ ಸಾಯಬೇಕಿತ್ತು. ಮೈ ತೊಯ್ಸಿಕೊಂಡಿದ್ದೀಯೇ; ಹೋಗಿ ಬಟ್ಟೆ ಬದಲಿಸಿಕೊ. ನಿನಗೂ ಥಂಡಿ ತಗುಲಿ ನೆಗಡಿಯಾದೀತು.''

ಆದರೂ ಅದರ ಮೈ ಒರಿಸುವುದರಲ್ಲಿ ತೊಡಗಿದ ಮನೋನ್ಮಣಿ ''ಒರೆಸಿದ ನಂತರ'' ಎಂದಷ್ಟು ನುಡಿದು ಅದರ ಆರೈಕೆಯಲ್ಲಿ ಮನವಿಟ್ಟಳು. ಅವಳೊಂದಿಗೆ ಇನ್ನೂ ಕೆಲವು ಹುಡುಗಿಯರು ಕೂಡಿಕೊಂಡರು. ಅದು ಮಲಗಿದ ತಾಣ ಚೊಂಬು ನೀರು ಹೊಯ್ದಂತೆ ಒದ್ದೆ ಮುದ್ದೆಯಾಗಿದೆ. ಅದನ್ನು ಎಬ್ಬಿಸಿ ಬೇರೆಡೆಗೆ ಮಲಗಿಸುವಂತೆಯೂ ಇಲ್ಲ. ತೀರಾ ನಡುಗುತ್ತಿರುವ ಅದರ ಕಣ್ಣುಗಳಲ್ಲಿ ಬಳಬಳ ಕಣ್ಣೀರಿನ ಧಾರೆ.

''ಪಾಪ, ವಯಸ್ಸಾದ ಮೇಲೆ ಎಲ್ಲರೂ ಇಷ್ಟೇ ಅಲ್ಲವೇ ?''

ಮೇರಿ ಮರುಕ ತೋರಿದಾಗ ಅವಳ ಕಣ್ಣುಗಳಲ್ಲೂ ಸಣ್ಣಗೆ ನೀರಾಡಿತು.

''ಜೀವ ಹಣ್ಣಾಗುವವರೆಗೂ ದುಡಿಸಿಕೊಂಡವರು ಅದರ ಕ್ಷೇಮ ನೋಡಿಕೊಳ್ಳದಿದ್ದರೆ ಹೇಗೆ ? ಮನುಷ್ಯರಾಗಿಯೂ ಕರುಣೆಯಿಲ್ಲವಲ್ಲಾ ?''

''ಜನ್ಮಕೊಟ್ಟ ತಂದೆತಾಯಿಯರನ್ನು ನಿರ್ಲಕ್ಷಿಸುವ ಜನ ಇನ್ನು ಪ್ರಾಣಿಗಳನ್ನು ಲಕ್ಷಿಸುತ್ತಾರೆಯೇ! ನಮ್ಮ ಸಂಸ್ಕೃತಿ ಏಕೆ ಇಷ್ಟು ಇಳಿಮುಖವಾಯಿತೋ ಅರ್ಥನೇ ಆಗುವುದಿಲ್ಲ. ಈಗೀಗ ಜನ ಬುದ್ಧಿವಂತರಾಗುತ್ತಿದ್ದಾರೆ; ನಾಗರಿಕತೆ ಹೆಚ್ಚುತ್ತಿದೆ ಕೂಡ. ಆದರೂ ಏಕೆ ಹೀಗೆ ?''

"ಹರೆ ರಾಂ! ನಾಗರಿಕತೆ ಹರುಡುತ್ತಿರುವುದು ವಿಮುಖವಾಗಿ ಎಂಬುದನ್ನು ನೀನರಿಯೇ ?"

ಇಬ್ಬರ ಮುಖದಲ್ಲೂ ಕಿರುನಗೆ ಮೂಡಿ ಮಾಯವಾಯಿತು.

"ಈಗ ಇದರ ಮೈ ಬಿಸಿಹತ್ತಲು ಏನು ಮಾಡೋಣ ? ಕ್ಷಿಪ್ರವಾಗಿ ಕಾವು ಮೂಡಿಸದಿದ್ದರೆ ಕಷ್ಟವೇ."

ಮದರ್‌ಜಾರ್ಜಿಯಾ ಒಳಗಡೆಯಿಂದ ಬ್ರೆಡ್ಡು ಮುಂತಾದ ಉಳಕಲು ಆಹಾರವನ್ನು ತಂದಳು. ಆ ವೇಳೆಗೆ ಮದರ್ ಸುಪೀರಿಯರ್ ಮತ್ತು ಮದರ್ ಬೆಟ್ಟಿ ಅಲ್ಲಿಗೆ ಬಂದಾಗಿತ್ತು. ಇನ್ನೂ ಕೆಲವು ಮಕ್ಕಳು ಕೂಡಿಕೊಂಡಿದ್ದರು.

ಕುದುರೆ ಆಹಾರವನ್ನು ಆಸೆ ಕಣ್ಣುಗಳಿಂದ ನೋಡಿತು. ಆದರೆ ಹಲ್ಲು-ಬಾಯಿಗಳು ಸೆಡೆತುಕೊಂಡುದುದರಿಂದ ಬಾಯಿ ತೆರೆಯಲಾಗಲಿಲ್ಲ.

"ಸ್ವಲ್ಪ ಬ್ರಾಂಡಿ ಕುಡಿಸಿದ್ದರೆ ಒಳ್ಳೆಯದಿತ್ತು. ಆದರೆ, ಕುಡಿಸುವುದು ಹೇಗೆ ?"

"ಯಾವುದಾದರೂ ಸೀಸೆಯಿಂದ ಕುಡಿಸಬಹುದು."

ಒಡನೆ ಯಾರೋ ಒಂದು ಸಣ್ಣ ಉದ್ದನೆಯ ಸೀಸೆ ತಂದರು. ಮದರ್ ಸಿಲ್ವಿಯಾ ಅದಕ್ಕೆ ನೀರು ಸೇರಿಸಿದ ಬ್ರಾಂಡಿ ತುಂಬಿ ತಂದಳು. ನಾಲ್ಕಾರು ಮಂದಿ ಅದರ ತಲೆ ಹಿಡಿದೆತ್ತಿ ಬಾಯೊಳಗೆ ಸುರಿದರು. ಅದು ನೇರವಾಗಿ ಹೊಟ್ಟೆಯೊಳಗೇ ಇಳಿಯಿತು. ಮೈನೀರು ಆರಿದುದರಿಂದ ಇನ್ನು ಚೇತರಿಸಿಕೊಳ್ಳಬಹುದೆಂಬ ಭರವಸೆ, ಎಲ್ಲರ ಮನದಲ್ಲಿ. ಮರುಗಳಿಗೆಯಲ್ಲಿ ಮಕ್ಕಳ ಬೊಗಸೆ ಕಂಗಳಲ್ಲಿ ಸಂತಸಲೀಲಾರೇಖೆ ಹರಿದಾಡಿತು.

"ಮದರ್! ಕಡಿವಾಣವಿಲ್ಲದ ಕುದುರೆ ಎದ್ದುನಿಂತರೆ ಆಚೆಗೆ ಕಳುಹಿಸುವುದು ಹೇಗೆ ?"

"ಮಾನ್ವಿ ಬಂದರೆ ಕಳುಹಿಸುತ್ತಾನೆ."

ಉದರದಲ್ಲಿ ಬ್ರಾಂಡಿ ಚೆನ್ನಾಗಿ ಕೆಲಸ ಮಾಡಿತೇನೋ.... ಅಡ್ಡ ಬಿದ್ದಿದ್ದ ಕುದುರೆ ತಲೆಯೆತ್ತಲು ಪ್ರಯಾಸ ಪಡುತಿತ್ತು. ಅವರ ಬೆನ್ನನ್ನು ಒತ್ತಿಹಿಡಿದು ಬಲಗೂಡಿಸಿದಾಗ ಕುದುರೆ ತಲೆಯೆತ್ತಿ ನೇರವಾಗಿ ಮಲಗಿಕೊಂಡಿತು.

ಮಕ್ಕಳು ಅತ್ಯಾನಂದದಿಂದ ಚಪ್ಪಾಳೆ ತಟ್ಟಿದರು. ಎಳೆದುಟಿಗಳಲ್ಲಿ ಹಸನಾದ ನಗುವಿನ ಲಹರಿಯ ಆಮೋದ....ಮಾಡು ಮುಟ್ಟುವಂತೆ ಮೊಳಗಿತು.

* * *

ಕೋರ್ಟಿನ ಕಟಕಟೆಯಲ್ಲಿ ರಾಮು.

ನ್ಯಾಯಾಧೀಶರ ಪ್ರಶ್ನೆ ''ಏನಯ್ಯಾ, ನಿನ್ನ ಹೆಸರೇನು ?''

''ರಾಮತೀರ್ಥ!''

''ನಿನ್ನ ಉದ್ಯೋಗ ?''

''ಜಮೀನಿನ ಉಸ್ತುವಾರಿ.''

''ಎಷ್ಟು ಬಿಗ ಜಮೀನಿದೆ ?''

''ತಿಳಿಯದು.''

''ಹಾಗೆಂದರೇನು? ನಿನ್ನ ಜಮೀನಿನ ವಿಸ್ತೀರ್ಣ ನಿನಗೆ ತಿಳಿಯದೇ?''

''ಪೂರ್ವಾರ್ಜಿತ ಆಸ್ತಿ. ನಾವದನ್ನು ಅಳೆಯುವ ಗೋಜಿಗೆ ಹೋಗಲಿಲ್ಲ.

''ನೀನೇಕೆ ಕಾನ್ವೆಂಟಿಗೆ ಬಾಂಬ್ ಹಾಕಿದೆ ? ಅದರ ದುಷ್ಪರಿಣಾಮವನ್ನು ನೀನು ಅರಿಯೆಯಾ ? ಏತಕ್ಕಾಗಿ ಈ ಹೀನಕ್ರಮ ಕೈಕೊಂಡೆ ?''

''ಅಲ್ಲಿ ನನ್ನ ಸೋದರ ಸೊಸೆ ಇದ್ದಾಳೆ. ಅವಳು ಮುಂದೆ ಕ್ರಿಶ್ಚಿಯನ್ ಆಗುವುದು ಬೇಡವಾಗಿತ್ತು ಅದಕ್ಕೆ....''

''ಅದಕ್ಕೋಸ್ಕರ ಕಾನ್ವೆಂಟನ್ನು ಧ್ವಂಸಗೊಳಿಸುವುದೇ ?''

''ಅದು ಹೊರೆತು ಬೇರೆ ದಾರಿಯೇ ಇರಲಿಲ್ಲ!''

''ಇದು ಅಪರಾಧ ಎಂಬುದು ತಿಳಿದಿದೆಯೇ ? ''

''ತಿಳಿದಿದೆ. ಧರ್ಮಾಧ ಕ್ರಿಶ್ಚಿಯನ್ನರನ್ನು ನಮ್ಮ ನೆಲಕ್ಕೆ ಕಾಲಿಡಲು ಅವಕಾಶಕೊಟ್ಟದ್ದು ಸರ್ಕಾರದ ತಪ್ಪು! ಇದರಿಂದ ನಮ್ಮ ಜಾತಿ-ನೀತಿ ಹಾಳಾಗುವುದು ಬೇಡ. ಇವರನ್ನು ನಮ್ಮ ದೇಶದ ಗಡಿಯಾಚೆ ಕಳುಹಿಸಬೇಕು. ಅಥವಾ ಇವರನ್ನು....''

ಅಷ್ಟಕ್ಕೆ ಮಾತು ನಿಲ್ಲಿಸಿ ತುಟಿ ಕಚ್ಚಿ, ಕಣ್ಣುಗಳಲ್ಲಿ ಕೋಪದ ಕಿಡಿ ಕಾರಿದ.

ನಿನಗೆ ಇದರಿಂದ ಕಠಿಣ ಶಿಕ್ಷೆ ಒದಗುತ್ತದೆ ಎಂಬುದರ ಅರಿವಿದೆಯೇ ?''

''ಇದೆ....ಶಿಕ್ಷೆಗಿಂತ ಒಡಲ ಸಂಕಟ ರಕ್ತವನ್ನು ಕುದಿಸುತ್ತದೆ!''

ಅವನನ್ನು ಕೋರ್ಟಿನ ಅಜ್ಞೆಯ ಮೇರೆಗೆ ಅಲ್ಲಿಂದ ಕರೆದೊಯ್ಯಲು ಬಂದ ಪೋಲೀಸಿನವನನ್ನು ಒದ್ದು ತಳ್ಳಿ ಕೂಗಿ ಹೇಳಿದ ''ನಾನು ಇಷ್ಟಕ್ಕೆ ಬಿಡುವವನಲ್ಲ ಜೈಲನ್ನೇ ದ್ವಂಸಗೊಳಿಸದಿದ್ದರೆ ಹೇಳಿ? ಯಾರ್‍ಯಾರು ಸಿಗುತ್ತಾರೋ ಅವರಿಗೆಲ್ಲಾ ನಾನೇ ಮಾರಿ! ನಾನೇ ಮೃತ್ಯು! ತಿಳಿ....!''

ಅಷ್ಟರೊಳಗಾಗಿ ಅವನನ್ನು ಎಳೆದುಕೊಂಡೇ ಹೋದರು. ಒಂದೆರಡು ಬಾರಿ ಗುದ್ದಿದ ಸದ್ದೂ ಕೇಳಿಸಿತು. ದಿಡ್. ದಿಡ್. ಅವನು ಸಿಟ್ಟಿನಿಂದ ಹೊಸ್ತಿಲು ದಾಟುವ ಮುನ್ನ ಚಪ್ಪಲಿಯನ್ನು ನ್ಯಾಯಾಧೀಶರೆಡೆಗೆ ಬೀಸಿ ಒಗೆದ!

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ....

* * *

ಲರಕ್. ಲರಕ್. ಲರಕ್. ಲರಕ್.

ಪಾದರಕ್ಷೆಗಳ ಸದ್ದು ಕರ್ಣಪಟಲಗಳಿಗೆ ತಾಗುತ್ತಲೂ ನೋಟ ಸಹಜವಾಗಿ ಇತ್ತ ಹೊರಳಿತು. ಮುಂಬರುವ ಹೆಜ್ಜೆಗಳ ಸಪ್ಪಳ ಕೇಳಿಸುತಿತ್ತೇ ವಿನಾ ವ್ಯಕ್ತಿ ಅಗೋಚರ.

"ಅದಾರೇ ಶಾಂತೀ?"

"ಮನೋ ನಿನಗಾಗಲೇ ಭಯ?"

"ಪ್ರಾಕಾರದ ಒಳಗೆ ಎಂತಹ ಭಯ?"

ಅಷ್ಟರಲ್ಲೇ ನೀಲಮಣಿ ದೃಗ್ಗೋಚರಿಸಿದಳು. ಸಾಲು ದಾಸವಾಳದ ಗಿಡಗಳ ಹಿಂದೆ ಹರಿದ ಹಾದಿಯಲ್ಲಿ ಬಂದುದು ಕಾಣದಿರಲು ಕಾರಣ.

ಮರದ ತಣ್ಣೆಳಲಲ್ಲಿ ಕುಳಿತಿದ್ದ ಹುಡುಗಿಯರು ಹುಬ್ಬೆತ್ತಿ ನೋಡಿದರು. ಜೀವಶ್ಶವದಂತೆ ನಡೆದು ಬರುತ್ತಿರುವ ಆಕೆಯಲ್ಲಿ ಜೀವ ಕಳೆಯೇ ಇಲ್ಲ...ದೇಹ ಗಾಳಿಗೆ ತೇಲಿಹೋಗುವಷ್ಟು ಬತ್ತಿ ಬಾಡಿ ಬೆಂಡಾಗಿದೆ. ಮನೋನ್ಮಣಿಗೆ ಪ್ರಯತ್ನಿಸಿದರೂ ಬಾಯಿಂದ ಮಾತು ಹೊರಡಲಿಲ್ಲ. ಒಡಲು ಸಂಕಟವೆಲ್ಲಾ ಮುಖಕ್ಕೆ ನುಗ್ಗಿ ಬಂದಂತೆ ವಿವರ್ಣವಾಯಿತು ಮುಖ ಬಿಂಬ.

ನೀಲಮಣಿ ಬರುಬರುತ್ತಲೇ ಅವಳ ಬಳಿ ಕುಸಿದು "ನನ್ನಂತಹ ಪಾಪಿ ಇನ್ನಾರಿಲ್ಲ ಮನೋ...ನಾನು ಯಾವ ದುಃಖ ಸಹಿಸಲಿ ಹೇಳು? ಮಕ್ಕಳಿಬ್ಬರೂ ಹುಟ್ಟಿದ್ದಾಗಲೇ ಸತ್ತು ಹೋಗಿದ್ದಿದ್ದರೆ ಎಷ್ಟೋ ಒಳ್ಳೆಯದಿತ್ತು. ಅಥವಾ ನಾನೇ ಹೋಗಿದ್ದರೂ ಈ ಸಂಕಷ್ಟವಿರಲಿಲ್ಲ...."' ಅವಳು ಇನ್ನೂ ಏನೇನೋ ಹೇಳುತ್ತಲೇ ಇದ್ದಾಳೆ. ಬತ್ತಿದ ಕಣ್ಣುಗಳಲ್ಲಿ ಕಂಬನಿಗಳು ಬೆಳ್ಳಿಯ ಗೆರೆಗಳಂತೆ ಹರಿದಾಡಿ ಅಲ್ಲೇ ಹಿಂಗಿತು. ಬಾಯಾರಿ ಗಂಟಲಾರಿ ಶುಷ್ಕ ತುಟಿಗಳು ಬಿರಿಯುವುದೂ ಕಷ್ಟವೇ. ಅಕಾಲ ಮುಪ್ಪು ಆವರಿಸಿ ಮುಖವೆಲ್ಲಾ ಸುಕ್ಕು ಸುಕ್ಕು. ಆರ್ದ್ರನಯನಗಳ ಶೋಕ ಛಾಯೆಯೊಂದೇ ಒಡಲ ಸಂಕಟವನ್ನು ಬಿನ್ನವಿಸಿಕೊಳ್ಳಲು ಸಾಕು.

ಮನೋನ್ಮಣಿ ಎಷ್ಟೋ ಹೊತ್ತು ಬಾಗಿದ ತಲೆಯೆತ್ತಲಿಲ್ಲ. ಮಾನಸಿಕ ತುಮುಲದಿಂದ ಹೃದಯ ಸಮುದ್ರದಲೆಗಳೆಲ್ಲಾ ಅಲ್ಲೋಲ ಕಲ್ಲೋಲ. ಎರಡೂ ಹೃದಯಗಳು ಮೌನ ಸಂಭಾಷಣೆ ನಡೆಸಿದುವು. ಕ್ಷಣ ಕ್ಷಣಗಳು ಉರುಳಿದುವು; ಗಳಿಗೆ ಗಳಿಗೆಗಳು ಕಳೆದುವು; ಮೂಕ ಮೌನ ಮತ್ತಷ್ಟು ಒಲಿಯಿತು. ನೀಲಮಣಿ ಅವಳ ತಲೆಯನ್ನು ನೇವರಿಸಿ ನೆತ್ತಿಗೆ ಮೂ ಮುತ್ತನ್ನೊತ್ತಿದಳು.

ಬಹಳ ಹೊತ್ತಿನ ನಂತರ ಅವಳೇ ಮೌನ ಮುರಿದಳು,

"ಮನೋ, ನನ್ನಲ್ಲಿರುವ ಕಾಗದ ಪತ್ರಗಳನ್ನೆಲ್ಲಾ ನಿನ್ನೆ ಪರಿಶೀಲಿಸಿದೆ. ಮಹಮದ್ ಪಾಶ ಮಾಡಿದ ಅನ್ಯಾಯ ಮೋಸದ ವಿಚಾರವನ್ನೆಲ್ಲಾ ಅಣ್ಣ ಬರೆದಿದ್ದಾರೆ. ಅವನ್ನೆಲ್ಲಾ ಇಲ್ಲಿ ಸಂಗ್ರಹಿಸಿ ತಂದಿರುವೆ. ಈಗ ನೀನಿನ್ನೂ ಚಿಕ್ಕವಳು. ನೀನಿರುವ ಸ್ಥಿತಿಯಲ್ಲಿ ಏನೂ ಮಾಡಲಾರೆ ಕೂಡ. ಇವನ್ನು ಮದರ್ ಕೈಗೆ ಕೊಟ್ಟು ಏನು ಮಾಡಬೇಕೋ ಕೇಳಿ ನೋಡುವೆ. ಇದರಿಂದ ಖಂಡಿತ ಉಪಯೋಗವಿದೆ. ಯಾರಾದರೂ ನಿಂತು ಕೇಸು ನಡೆಸಬೇಕು. ಆಗ ಅವನ ಮೋಸ-ಅನ್ಯಾಯಗಳೆಲ್ಲ ಬಯಲಾಗುತ್ತವೆ. ಕೋರ್ಟು ಅವನನ್ನು ಜೈಲಿಗೆ ಕಳುಹಿಸುತ್ತೆ. ಇನ್ನು ನನ್ನ ವಿಚಾರ ಹೀಗೆ....ನೋಡು ಈ ದುಷ್ಟ ಮಕ್ಕಳಿಗೆ ಆಸ್ತಿ ಇಡುವುದು ಇಷ್ಟವಿಲ್ಲ. ಅದಕ್ಕಾಗಿ ನನ್ನ ಜಮೀನನ್ನು ನನ್ನ ಆಳುಮಗ ಹರಿಕಿಷನ್‌ಗೆ ದಾನಪತ್ರ ಬರೆದುಕೊಟ್ಟಿರುವೆ. ನಾನಿರುವ ತನಕ ನನಗಿಷ್ಟು ಕಾಳು ಕಡ್ಡಿ ಕೊಡುತ್ತಾನೆ. ಅನಂತರ ಅವನೇ ಹಕ್ಕುದಾರ ಜಮೀನಿಗೆ...."

ಮನೋನ್ಮಣಿ ತಲೆದೂಗಿದಳು ಮಾತಾಡಲಿಲ್ಲ.

"ಬಾ, ಮದರ್ ಸಿಲ್ವಿಯಾ ಬಳಿ ಈ ರಿಕಾರ್ಡ್‌ಗಳನ್ನೆಲ್ಲಾ ಇಟ್ಟು ಹೋಗುವೆ. ನೀನೂ ಈ ವಿಷಯ ತಿಳಿದಿರುವುದು ಒಳ್ಳೆಯದು. ನೀನು ಎಂದಾದರೂ ನೋಡಿಕೊಳ್ಳಬಹುದು....ನನಗೆ ಯಾರಾದರೂ ಬಲಗೈಯಾಗಿ ನಿಲ್ಲುವವರಿದ್ದಿದ್ದರೆ ನಾನೇ ಮುಂದಿನ ವಿದ್ಯಮಾನಗಳನ್ನು ನೋಡಿಕೊಳ್ಳಬಹುದಾಗಿತ್ತು. ಹೈಕೋರ್ಟಿಗೆ ಅಪೀಲ್ ಹೋದರೆ ನನ್ನಿಂದ ಓಡಾಡುವುದು ಕಷ್ಟ. ನಾವು ಯಾರಾವರೊಬ್ಬ ವಕೀಲರಿಗೆ ವಹಿಸಿ, ನೀವೇ ಎಲ್ಲವನ್ನೂ ನೋಡಿಕೊಳ್ಳಿ ಎಂದು ಬಿಟ್ಟು ಕೊಡುವುದಾದರೂ ನಡೆದೀತು."

"ನೀವು ಏನಾದರೂ ಮಾಡಿ. ನನಗೆ ಇವೊಂದೂ ತಿಳಿಯುವುದಿಲ್ಲ."

"ಮದರ್ ಏನು ಹೇಳುತ್ತಾರೋ ಕೇಳೋಣ....."

ಮನೋನ್ಮಣಿ ಶಾಂತಿಯ ಕೈ ಹಿಡಿದುಕೊಂಡು ಏಳಲಾರದೇ ಎದ್ದಳು. ಚಿತ್ತಭಿತ್ತಿಯಲ್ಲಿ ಅಪ್ಪ-ಅಮ್ಮ ದೊಡ್ಡಮ್ಮ-ದೊಡ್ಡಪ್ಪ ಮತ್ತು ಎಲ್ಲರೂ ಸಾಲುಗಟ್ಟಿ ಫೇರಿ ನಡೆಸಿದರು.

ನೀಲಮಣಿ ಅವಳ ಭುಜದಮೇಲೆ ನಲ್ಮೆಯಿಂದ ಕೈಯಿಟ್ಟುಕೊಂಡು ಮುಂದಡಿಯಿಟ್ಟಳು. ನಿಶ್ಶಕ್ತ ಹೆಜ್ಜೆಗಳು ನಡೆಯಲಾರದೇ ನಡೆದುವು.

"ಧರ್ಮೋ ಜಯತಿ ನ ಅಧರ್ಮಃ"

ಮದರ್ ಸಿಲ್ವಿಯಾ ಮತ್ತು ಮದರ್ ಜಾರ್ಜಿಯಾ ಮಾತುಕತೆಯಲ್ಲಿ ತೊಡಗಿದ್ದುದು ಬಹುಶಃ ಇವರಿಗೆ ತಿಳಿದಿರಲಿಲ್ಲ. ಬಾಗಿಲ ಬಳಿ ಬೆರಳು ಮಿಡಿತದ ಸಣ್ಣ ಸದ್ದು ಕಟ. ಕಟ. ಕಟ. ಕಟ.

"Yes please !"

ಪರದೆ ಸರಿಸಿ ಇಣಿಕಿ ನೋಡಿದ ನೀಲಮಣಿ "ಓ, ತಿಳಿಯಲಿಲ್ಲ. ನಮ್ಮಿಂದ ತೊಂದರೆಯಾಯಿತು. ನಿಮ್ಮದಾಗಲಿ, ಮತ್ತೆ ಬರುವೆ."

"ಏನು ವಿಶೇಷವಿಲ್ಲ ಬನ್ನಿ."

ನೀಲಮಣಿ ಇಬ್ಬರು ಹುಡುಗಿಯರೊಂದಿಗೆ ಒಳಗಡೆ ಪದಾರ್ಪಣೆ ಮಾಡಿದಳು. ಅವಳ ಕೈಯಲ್ಲಿಯ ಸೂಟ್‌ಕೇಸು ನೋಡಿದಾಗ ಏನೋ ಒಂದು ಬಗೆ ಮನದಲ್ಲಿ. ಮದರ್ ಸಿಲ್ವಿಯಾ ಅವಳನ್ನು ಯಾವ ರೀತಿ ಮಾತಾಡಿಸಬೇಕೋ ಎಂಬ ಸಂಕೋಚ ಚಿತ್ ಕಲ್ಪವನ್ನು ಕದಡಿತು. ಮನಸ್ಸೆಲ್ಲಾ ಮುಜುಗರ. ಒಂದೇ ಕ್ಷಣದಲ್ಲಿ ಆ ಬಡ ತಾಯಿಯ ಮನದಳನ್ನೆಲ್ಲಾ ಅಳೆಯಿತು ಸೂಕ್ಷ್ಮ ನೋಟ. ಅವಳು ಸನಿಹ ಕೈತರಲು "ಕುಳಿತುಕೊಳ್ಳಿ" ಎಂದಳು ಅಭ್ಯಾಸ ಬಲದಿಂದ; ಎಲ್ಲರಿಗೂ ಎಲ್ಲಾ ಕಾಲದಲ್ಲೂ ಹೇಳುವಂತೆ ಸಹಜವಾಗಿ ಹೊಮ್ಮಿತು ದನಿ.

"ನೀವೂ ಕುಳಿತುಕೊಳ್ಳಿ" ಎಂದಳು ಮಕ್ಕಳಿಗೆ.

ನೀಲಮಣಿ ಸೂಟ್ ಕೇಸನ್ನು ಕಾಲಬಳಿಯಿಟ್ಟುಕೊಂಡು "ನನಗೆ ನಿಮ್ಮ.." ಎನ್ನುತಿದ್ದಾಗಲೇ ದುಃಖವುಮ್ಮಳಿಸಿ ಬಂದು ಗಳಗಳನೆ ಆಳತೊಡಗಿದಳು. ಸ್ವಲ್ಪ ಹೊತ್ತು ಯಾರ ತುಟಿಯೂ ಬಿರಿಯಲಿಲ್ಲ. ಅನಂತರ ತನ್ನನ್ನು ತಾನೇ ಹತೋಟಿ ಯಲ್ಲಿಟ್ಟುಕೊಂಡು ಕಣ್ಣುಗಳನ್ನು ತೀಡಿ ಕಂಬನಿ ಕಲೆಯನ್ನು ನಿವಾರಿಸಿಕೊಂಡು "ಐದು ಜನ ಹೆಣ್ಣುಮಕ್ಕಳನ್ನು ನಿರ್ದಯದಿಂದ ಕಿತ್ತುಕೊಂಡ ದುರ್ವಿಧಿ ಈ ಇಬ್ಬರು ಮಕ್ಕಳನ್ನೇಕೆ ಬಿಟ್ಟು ಹೋದ ಹೇಳಿ? ಈಗಲೂ ಸರಕಾರ ಇವರನ್ನು ಗಲ್ಲಿಗೇರಿಸಿದರೆ ದೇಶಕ್ಷೇಮ! ಭಗವಂತ ಆಯಸ್ಸು ನೀಡುವುದು ಧೂರ್ತರಿಗೆ. ಯೌವ್ವನ ಮದ ಇವರನ್ನು ಹಾಳು ಮಾಡುತ್ತಿದೆ. ನಾನು ಸಹಿಸಲಾರೆ... ಮದರ್! ಸಹಿಸಲಾರೆ. ಈ ಎದೆ ಏಕೆ ಒಡೆದು ಹೋಗಬಾರದು? ಹೇಳಿ, ಇಷ್ಟೊಂದು ದುಃಖ-ಸಂಕಟ-ಸಂತಾಪಗಳನ್ನು ಸಹಿಸಿಯೂ ಕೂಡಾ ಸಾವು ಬರಲಿಲ್ಲವಲ್ಲಾ; ಅದೇ ದುಃಖ ನನಗೆ..."

"ಸಾವು ಸನ್ನಿಹಿತವಾಗದೆ ಯಾರಿಗೂ ಸಾವು ಬರುವುದಿಲ್ಲ. ನೀವು ನಿಮ್ಮ ಕರ್ತವ್ಯನಿಷ್ಠೆ ಬೆಳೆಸಿಕೊಳ್ಳಿ. ಅದು ಏನಾ ಮತ್ತೊಂದು ಯೋಚನೆ ತಲೆಯಲ್ಲಿ

ಬರಬಾರದು....ಏನು ಮಾಡುವುದಕ್ಕಾಗುತ್ತೆ? ಜಗತ್ತು ದೈವನಿಯಂತ್ರಿತ. ಪ್ರತಿಯೊಂದು ಆಗು-ಹೋಗುಗಳೂ ಕಾಲ ಚಕ್ರದ ಅಧೀನ. ಆದ್ದರಿಂದಲೇ, ನಮ್ಮ ಇಚ್ಛೆಯಂತೆ ಯಾವುದೂ ನಡೆಯುವುದಿಲ್ಲ. ಅಂದಮೇಲೆ ಎಲ್ಲರೂ ಕಾಲಗತಿಗೆ ಶರಣಾಗಲೇ ಬೇಕು. ನೀವು ದುಃಖಿಸುವುದರಿಂದ ಏನಾದರೂ ಪರಿಹಾರ ಅಥವಾ ಪರಿಷ್ಕಾರ ಹೊಂದುವುದಾದರೆ ಅದೊಂದು ರೀತಿ. ಇಲ್ಲದಿದ್ದಲ್ಲಿ ಏನು ಪ್ರಯೋಜನ? ಇದನ್ನೆಲ್ಲಾ ಪ್ರಾಜ್ಞರಾದವರು ಖಂಡಿತ ಯೋಚಿಸಬೇಕು. ಯಾರೂ, ಯಾವತ್ತೂ ನಿರಾಸೆಗೆ ಬಲಿಯಾಗಬಾರದು; ನಿರಾಸೆಯಿಂದ ನರಜನ್ಮ ವ್ಯರ್ಥ. ಮನುಷ್ಯರಾಗಿ ಹುಟ್ಟಿದುದಕ್ಕೆ ಮಂಗಳ ಕಾಣಲೇಬೇಕು. ಅದೇ ನಿಮ್ಮ ಗುರಿಯಾಗಿರಲಿ. ಗುರಿಯಿಲ್ಲದೆ ಜೀವನ. ಪಶು ಜೀವನ. ನಿಮ್ಮ ಮಕ್ಕಳು ಕೆಟ್ಟರೆ ಅದು ಅವರವರ ದುಷ್ಕರ್ಮ. ಅದಕ್ಕೆ ನೀವೇಕೆ ತಲೆಕೆಡಿಸಿಕೊಳ್ಳಬೇಕು? ನಿಮ್ಮ ಕರ್ತವ್ಯವನ್ನು ನೀವು ನಿಷ್ಠೆಯಿಂದ ಪಾಲಿಸಿದುದಕ್ಕೆ ಸಂತೃಪ್ತಿ ಇರಲಿ. ನೀವು ಸಾಕಿ ಸಲಹಿ ವಿದ್ಯೆ ಬುದ್ಧಿ ಕೊಟ್ಟಿದ್ದೀರಿ; ಜನ್ಮಕೊಟ್ಟು ಪ್ರಪಂಚದ ಬೆಳಕಿಗೆ ತಂದಿದ್ದೀರಿ. ಅದನ್ನು ತಿಳಿದುಕೊಳ್ಳದೇ ಹೋದುದು ಯಾರ ತಪ್ಪು?''

...ಯಾರ ತಪ್ಪು?

೧೦

ಬಲ್ಲಿದರ ಒಡನಾಟ
ಬೆಲ್ಲವನು ಮೆದ್ದಂತೆ
ಅಲ್ಲದಹುದೆಂಬ ಅಜ್ಞಾನಿಯೊಡನಾಟ
ಕಲ್ಲು ಹಾದಂತೆ ಸರ್ವಜ್ಞ॥

ನೀಲಮಣಿ ಮಾನಸಿಕ ವಿಹಾರ ಭಾವನಾಲೋಕದಲ್ಲಿ. ಕ್ಷಣ ಕ್ಷಣಗಳು ನಿರಾತಂಕವಾಗಿ ಉರುಳಿದುವು. ಚಿತ್ತಭಿತ್ತಿಯಲ್ಲಿ ಗತಕಾಲದ ಚಿತ್ತಾರ ಚಲನ ಚಿತ್ರದಂತೆ ಸುಳಿಸುಳಿದಳಿಯಿತು. ಬೆಂಕಿ ಮನುಷ್ಯನಾದ ಪತಿಯ ಜೀವನ ಸಹಭಾಗಿತ್ವದಲ್ಲಿ ಆತನ ಕಪಿಮುಷ್ಟಿ, ಅಧಿಕಾರ ಪ್ರವೃತ್ತಿ, ಜೀವನ ಬಂಧ. ಒಂದೊಂದೂ ಚಿತ್ತಭಿತ್ತಿಯಲ್ಲಿ ಸುಳಿದಳಿದುವು. ಕಳೆದ ಕಾಲವನ್ನು ಸ್ಮರಿಸಿದರೂ ನೋವು; ಮುಂಬರುವ ಕಾಲವನ್ನು ಯೋಚಿಸಿದರೂ ನೋವು. ''ಈ ಜೀವನ ಎಷ್ಟು ಘೋರ! ಸ್ತ್ರೀಯಾಗಿ ಹುಟ್ಟುವುದಕ್ಕಿಂತ

ಪ್ರಾಣ ಜೀವನವೇ ಲೇಸು!'' ಯಾವುದೋ ಅಶರೀರವಾಣಿ ಕಿವಿಯ ಸನಿಹದಲ್ಲಿಯೇ ಕೂಗಿ ಹೇಳಿತು.

ಕೆಲವು ಸಮಯ ಮೈಮರವಟ್ಟಂತೆ, ಲಿಖಿತ ಚಿತ್ರದಂತೆ ಮೂರ್ತಿ ಮತ್ತಾದಳೇನೋ...ಹೊರಗಣ ಚಳಿಗಾಳಿ ರೊಯ್ಯನೆ ಒಳನುಗ್ಗಿದಾಗ ಅಶಕ್ತ ಶರೀರ ಚಿಲ್ಲದೆ ನಡುಗಿತು. ಜಾರಿದ ಉತ್ತರೀಯವನ್ನು ಮೈಮೇಲೆ ಎಳೆದುಕೊಂಡಳು.

ಅಂದು ಮದರ್ ಸಿಲ್ವಿಯಾ ವಾಸಂತೀ ಉತ್ತರೀಯವನ್ನು ಒತ್ತಾಯ ಪೂರ್ವಕವಾಗಿ ನೀಡಿದಾಗ ಅದರ ಬೆಲೆಕೊಟ್ಟು ತೆಗೆದುಕೊಂಡುದುದಕ್ಕೆ ಮನೋನ್ಮಣಿಯೂ ಬಹುಮಟ್ಟಿಗೆ ಕಾರಣ.

''ತೆಗೆದುಕೊಳ್ಳಿ ಅತ್ತೆ. ನಿಮ್ಮ ಬಳಿ ಒಳ್ಳೆಯ ಉತ್ತರೀಯವಿಲ್ಲ. ಚಳಿಗಾಲದಲ್ಲಿ ನಿಮ್ಮ ವೃದ್ಧ ಶರೀರಕ್ಕೆ ಇದು ಬೇಕೇ ಬೇಕು. ಅಲ್ಲದೆ ಇದರ ಕುಶಲ ಕೈಗಾರಿಕೆ ತುಂಬಾ ಚೆನ್ನಾಗಿದೆ. ಇವನ್ನೆಲ್ಲಾ ಹಾಸ್ಟಲ್ ಹುಡುಗಿಯರೇ ತಯಾರಿಸುತ್ತಾರೆ. ಇದರಿಂದ ಹಾಸ್ಟಲ್ಲಿಗೆ ಆರ್ಥಿಕ ಲಾಭವಾದರೆ ಹೆಣ್ಣುಮಕ್ಕಳಿಗೆ ವಿದ್ಯಾಲಾಭ.

ಆ ಮಾತಿಗೆ ಒಪ್ಪಿ ಐವತ್ತು ರೂಪಾಯಿಗಳಿಗೆ ಖರೀದಿಸಿದಳು. ಇದೇ ನಮೂನೆಯ ವಾಸಂತೀ ಉತ್ತರೀಯ ಅಂಗಡಿಯಲ್ಲಿ ಅರವತ್ತು-ಎಪ್ಪತ್ತು ರೂಪಾಯಿಗಳಾದರೂ ಆಗುತ್ತೆ. ಅಂದಮೇಲೆ ಕೊಂಡುಕೊಂಡದ್ದು ಎರಡು ಬಗೆಯಿಂದ ಅನುಕೂಲವೇ. ಒಂದು ಉಪಯೋಗ ದೃಷ್ಟಿ; ಇನ್ನೊಂದು ಆರ್ಥಿಕ ದೃಷ್ಟಿ; ಇವೆರಡೂ ಸ್ವಲಾಭ. ಕಾನ್ವೆಂಟಿಗೆ ಮಾತ್ರ ಲಾಭವಾಗಿಲ್ಲ.

ಯೋಚನಾಲಹರಿ ಅಲ್ಲಿಗೆ ಬಂದು ನಿಂತಾಗಲೇ ಹರಿಕಿಷನ್ ಬಾಗಿಲಲ್ಲಿ ತಲೆ ಹಾಕಿದ.

''ಅಮ್ಮಾ! ಇದೇನು ಹೀಗೆ ಕುಳಿತುಬಿಟ್ಟಿರಿ? ಬೆಳಿಗ್ಗೆ ತಿಂಡಿ ತೆಗೆದುಕೊಂಡಿರಾ ಹೇಗೆ?''

''ಈ ಸೌಭಾಗ್ಯಕ್ಕೆ ಎಲ್ಲಾ ಆಯಿತು ಬಿಡು. ಊಟ ತಿಂಡಿ ತೆಗೆದುಕೊಳ್ಳದಿದ್ದರೆ ಉದರ ಕೇಳಬೇಕಲ್ಲ?''

ಎದೆಯಾಳದಿಂದ ಹರಿದು ಬಂತು ನಿರಾಶಾಪೂರ್ಣ ಧ್ವನಿ.

''ಏನು ಮಾಡೋಣ ಅಮ್ಮಣ್ಣಿ? ಎಲ್ಲಾ ನಾವು ಪಡೆದುಕೊಂಡು ಬಂದದ್ದು. ಇರಲಿ, ಬಿಡಿ; ಈಗ ಮದರ್ ಸಿಲ್ವಿಯಾ ಏನಾದರೂ ಕ್ರಮ ಕೈಕೊಳ್ಳುತ್ತಾರೆಯೇ!''

''ಅವರಿಗೆ ಕಾಗದ ಪತ್ರಗಳನ್ನೆಲ್ಲಾ ಕೊಟ್ಟಿರುವೆ. ಮನೋನ್ಮಣಿ ಇನ್ನೂ ಚಿಕ್ಕವಳು.

ಅವರು ತಮ್ಮೆಲ್ಲಾ ಕಾರ್ಯಭಾರದೊಂದಿಗೆ ಕೋರ್ಟು ಕಛೇರಿಯಲ್ಲಿ ವ್ಯವಹಾರ ಎಂದರೆ ಸಾಮಾನ್ಯವೇ? ಯಾರೊಬ್ಬ ವಕೀಲರು ತಾವೇ ಸಂಪೂರ್ಣ ಭಾರ ಹೊರ ಬಲ್ಲವರು ಸಿಕ್ಕಿದರೆ ಆಗಬಹುದು. ವ್ಯವಹಾರ ಗೆದ್ದರೆ ಮಾತ್ರ ಫೀಜು ತೆಗೆದುಕೊಳ್ಳಲು ಒಪ್ಪಿದರೆ ವ್ಯವಹಾರ ಹೂಡುವುದು ಸರಿ. ಯಾರ ಸಹಾಯವೂ ಇಲ್ಲದೆ ಮುಂದೆ ಹೋಗುವುದು ಕಷ್ಟ. ಶವದ ಗೋರಿಗಳನ್ನು ಕಿತ್ತೆಸೆದಿರುವುದು ಅಕ್ಷಮ್ಯ ಅಪರಾಧ. ಅದರ ಬಗ್ಗೆ ನೆರೆಹೊರೆಯವರು ದೂರು ಕೊಟ್ಟಿದ್ದಾರೆ. ಅದರ ವಿಚಾರಣೆ ನಡೆಯುತ್ತಿದೆ. ಬೆಂಬಲಿಗರಿದ್ದರೂ ನಿಂತು ಹೋರಾಡುವವರಿಲ್ಲ; ಪೋಲೀಸರು ಉದಾಸೀನ ಮಾಡಿದರೆ ಕತೆ ಅಲ್ಲಿಗೇ ಮುಗಿಯುತ್ತದೆ.''

''ಅಮ್ಮಣ್ಣೀ, ರಾಷ್ಟ್ರೀಯ ವ್ಯವಹಾರ ಬೃಹದ್ ಸಮಸ್ಯೆ ಮೂಡಿಸಿರುವ ಸಂಧಿಗ್ಧ ಸಮಯ ಇದು. ಇತ್ತ ಯೋಚಿಸುವುದಕ್ಕೆ ಸಮಯವಾದರೂ ಎಲ್ಲಿ? ಇದನ್ನೆಲ್ಲಾ ಯೋಚಿಸಿದರೆ ನಾನೇ ಮನೋನ್ಮಣಿಯಿಂದ ಪರವಾನಗಿ ಪಡೆದುಕೊಂಡು ಮುಂದೆ ನಿಲ್ಲಬಾರದೇಕೆ? ಎಂಬ ಯೋಚನೆ ಬರುತ್ತೆ; ನನಗೆ ಹೆಚ್ಚು ಕಾನೂನಿನ ಪರಿಜ್ಞಾನ ಇಲ್ಲದುದರಿಂದ ಕೈಹಾಕಿ ಸೋತುಹೋದರೆ ಅನ್ಯಾಯ ಮಾಡಿದಂತಾಗುತ್ತೇನೋ, ಏನು ಮಾಡಲಿ ಹೇಳಿ?''

ಸ್ವಾಮಿನಿ ಶಿರೋಭಾರವನ್ನು ಎಡಗೈದಳದ ಮೇಲೆ ಇಳುಹಿ ಮ್ಲಾನ ಮುಖಿಯಾಗಿ ಒಂದೆರಡು ಗಳಿಗೆ ಯೋಚಿಸಿದಳು. ಮೊಟ್ಟಮೊದಲಿಗೆ ನನ್ನ ಮಕ್ಕಳು ಸರಿಯಾಗಿದ್ದಿದ್ದರೆ....? ಎಂಬ ಪ್ರಶ್ನೆ ಚಿತ್ತಭಿತ್ತಿಯಲ್ಲಿ ಮೂಡಿ ನಿಂತಿತು. ಹೋಗಲಿ, ಇವನಾದರೂ ನಿಷ್ಠೆತೋರುತ್ತಾನಲ್ಲ ಅದೇ ಸಾಕು....ಆ ಸಣ್ಣ ಸಮಾಧಾನದಿಂದ ಸ್ವಲ್ಪ ಹಗುರವಾಯಿತು ಮನಸ್ಸು.

''.ಆಗಬಹುದು. ಹಣದ ಪ್ರಶ್ನೆ ಮುಖ್ಯ.''

''ನೀವೆಂದಂತೆ ಅವರು ಜಮೀನು ಮನೆ ಗೆದ್ದುಕೊಟ್ಟರೆ ಇಂತಿಷ್ಟು ಫೀಜು ಇಲ್ಲದಿದ್ದರೆ ಇಲ್ಲ. ಆದಿಯಿಂದ ಅಂತ್ಯದವರೆಗೆ ಖರ್ಚೆಲ್ಲಾ ಅವರದೇ. ಸೋತರೇ ಕೋರ್ಟು ಖರ್ಚು ಮಾತ್ರ, ಎಂದು ಕರಾರು ಮಾಡಿಕೊಳ್ಳಬೇಕು. ಅಷ್ಟಕ್ಕೆ ಒಪ್ಪುವ ವಕೀಲರು ಸಿಕ್ಕಿದರೆ ವ್ಯವಹಾರ. ಇಲ್ಲದಿದ್ದರೆ ಇಲ್ಲ.''

* * *

''ಪ್ರಯತ್ನಿಸು. ದೈವಯತ್ನ ಹೇಗಿದೆಯೋ ಅದರಂತೆ ಆಗುತ್ತದೆ.''

ಇಂದು ಅಲಕಾ ಚಂದಾನಿ ರವಿ ಚಂದಾನಿ ಕಾನ್ವೆಂಟಿಗೆ ಬಂದಾಗ ಹೊತ್ತು ಮೇಲೇರುವುದರಲ್ಲಿತ್ತು. ಅತೀವ ಶೀತಲ ವಾತಾವರಣ. ದಟ್ಟವಾದ ಮಂಜಿನ

ತೆರೆಯಲ್ಲಿ ರವಿಕಿರಣ ಹರಿದರೂ ಶೀತಲ ಶೈತ್ಯ ಹರಿಯಲಿಲ್ಲ. ಮೈನಡುಗಿಸುವಂತಹ ಚಳಿ. ಮಕ್ಕಳಿಗೆಲ್ಲಾ ಶಾಲೆಯ ಯೋಚನೆಯಲ್ಲಿ ಬೇಗ ಬೇಗ ಪುಸ್ತಕ ಜೋಡಿಸಿ ಕೊಳ್ಳುವ ತರಾತುರಿ.

ಮನೋನ್ಮಣಿ ಪುಸ್ತಕದ ಚೀಲವನ್ನು ಹೆಗಲಿಗೆ ತಗುಲಿಸಿಕೊಂಡು ಹೊಸ್ತಿಲು ದಾಟಿದಾಗಲೇ ದೃಷ್ಟಿಗೆ ಬಿದ್ದ ರವಿಚಂದಾನಿ ಮಂಜಿನ ತರೆಯಲ್ಲಿ ಕರಗಿ ಹೋಗಿದ್ದುದ ರಿಂದ ಗುರುತು ಹತ್ತಲಿಲ್ಲವೇನೋ...ಸಮೀಪಕ್ಕೈದುತ್ತಲೂ ''ಹರೆ! ರಾಂ!! ಮಂಜು ಮುಸುಕಿನಿಂದ ಹುರುತೇ ಸಿಗಲಿಲ್ಲ. ಅಂಕಲ್! ಎಷ್ಟು ದಿನಗಳ ಮೇಲೆ ನಿಮ್ಮ ದರ್ಶನ!''

''ಮನೋ ಬೇಟಿ! ಹೇಗಿದ್ದೀ? ನಾವು ಈವರೆಗೆ ಎಕೆ ಬರಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಅನಂತರ. ಈಗ ಹೇಳು ಹೇಗಿದ್ದಿ?''

ಮನೋ ಒಂದು ಹೆಜ್ಜೆಗೆ ಕುಪ್ಪಳಿಸಿ ಎರಡೂ ಕೈಗಳಿಂದ ಅಪ್ಪಿಕೊಂಡಳು. ಹೃದಯ ನಿಗಿನಿಗಿ ನಲಿಯುವಷ್ಟು ಆನಂದದ ಹೆದ್ದೆರೆಗಳಿಂದ ತುಂಬಿ ತುಯ್ಯಾಲಾಡಿತು. ರವಿ ಚಂದಾನಿ ಪ್ರೀತ್ಯಾದರಗಳಿಂದ ಅವಳನ್ನು ಎದೆಗಪ್ಪಿ ನೆತ್ತಿಗೆ ಹೂಮುತ್ತನ್ನೊತ್ತಿದ. ಅಲಕಾ ಚಂದಾನಿ ಮುಂಬರಿದು ''ಅಂದಿನಿಂದ ನಿನ್ನ ನೋಡುವ ಆಸೆಯಲ್ಲೇ ಕಳೆದೆ ಬಿಡು. ಏನೇನೋ ಅನಿವಾರ್ಯ ಕಾರಣಗಳಿಂದ ಮನಸ್ಸು ಸೋತಿತು. ಇಂದು ಸಮಯ ಕೂಡಿ ಬಂತು.''

ನಲ್ಮೆಯಿಂದ ಗಲ್ಲವನ್ನು ಮುದ್ದಿಸಿ ಅತ್ಯಂತ ಪ್ರೀತ್ಯಾದರ ತೋರಿದಳು ಅಲಕಾ.

''ಬೇಟಿ! ಈಗ ನೆಮ್ಮದಿಯಿಂದಿದ್ದೀಯಲ್ಲವೇ?''

''ಇರಬೇಕು; ಇದ್ದೇನೆ ಅಂಕಲ್. ನಿಮ್ಮೆಲ್ಲರ ಒತ್ತಾಸೆ ನನ್ನನ್ನು ಪ್ರಪಂಚಕ್ಕೆ ಬಿಗಿದಿದೆ.''

''ಜೀವನ್ ಭದ್ರಾಣಿ ಪಶ್ಯಂತಿ ಎನ್ನುತ್ತದೆ ಗೀತೆ. ನರಜನ್ಮ ಸುಮ್ಮನೆ ಬರುತ್ತದೆಯೇ? ಎಷ್ಟು ಜನ್ಮಗಳ ಪುಣ್ಯಫಲವೋ ಇದು ದಕ್ಕಬೇಕಾದರೆ ಅಂಥ ನರಜನ್ಮವನ್ನು ನಾವಾಗಿ ಕಳೆದುಕೊಳ್ಳುವುದೇ? ಕಷ್ಟ-ಸುಖಗಳು ಎಲ್ಲರ ಜೀವನದಲ್ಲೂ ಬರುತ್ತವೆ. ಸ್ವಲ್ಪ ಹೆಚ್ಚು-ಕಡಿಮೆ ಅಷ್ಟೇ....ಬಂದುದನ್ನು ಧೈರ್ಯದಿಂದ ಎದುರಿಸು ವುದೇ ಜೀವನ. ನೀನೇ ಆಳವಾಗಿ ಯೋಚಿಸಿನೋಡು, ನಾವು ಎಲ್ಲಿದ್ದರೂ ಸೃಜನಶೀಲತೆಯಿಂದ ಉತ್ತಮ ಸಮಾಜವನ್ನು ಬೆಳೆಸಿಕೊಳ್ಳಬಹುದು. ಅದರಿಂದ ಜೀವನಕ್ಕೆ ಒಂದಲ್ಲ ಒಂದೂ ರೂಪು ಬಂದೇ ಬರುತ್ತದೆ.''

ಮ್ಲಾನಮುಖಿ ಮನೋನ್ಮಣಿ ನಿರುತ್ತರೆ. ಬಾಗಿದ ತಲೆಯನ್ನೂ ಎತ್ತಲಿಲ್ಲ. ಚಿತ್ತಭಿತ್ತಿಯಲ್ಲಿ ತನ್ನವರು ಮಾತ್ರವಲ್ಲ, ರಾಮು ಸಿದ್ದೂ ಸಹ ಸುಳಿದು ಹೋದರು. ಆ ಕ್ರೂರಿಗಳ ನೆನೆವರಿಕೆಯಿಂದ ಮೈನವಿರು ನಿಮಿರಿದುವು. ಹೃದಯ ಮೃದಂಗ ವ್ಯಾಪ್ತಿಗೆ ಮೀರಿ ಮಿಡಿಯಿತು. ದಬ. ಡಬ. ಡಬ. ಡಬ.

ಎರಡೂ ಕೈಗಳಿಂದ ಅಲಕಾ ಚಂದಾನಿಯನ್ನು ತಬ್ಬಿ ಹಿಡಿದುಕೊಂಡು ಮನೋವೇದನೆಗೆ ಸಣ್ಣ ತಡೆಗಟ್ಟೆ ಹಾಕಿದಳು. ಆದರೂ, ಮನಸ್ಸೆಲ್ಲಾ ಏನೋ ಒಂದು ರೀತಿಯ ಕಳವಳ, ಇನ್ನೇನೋ ಒಂದು ರೀತಿಯ ಮಂಜುಗರ; ಮತ್ತೇನೋ ಒಂದು ರೀತಿಯ ಭೀತಭಾವ.

ತನ್ನನ್ನು ತಾನು ಸಾವರಿಸಿಕೊಂಡರೂ ಸಣ್ಣಗೆ ನಸುಕಂಪನದ ಅಲೆ ದೇಹದಾದ್ಯಂತ ಹರಿದಾಡಿಹೋಯಿತು.

''ಸುಶೀ ಜೊತೆ ನೀನು ಮನೆಗೆ ಬರಬಹುದಾಗಿತ್ತು. ಏಕೆ ಬರಲಿಲ್ಲ?''

ಅಲಕಾ ಅಪ್ಪಿ ಹಿಡಿದು ಗಲ್ಲವನ್ನು ಮತ್ತೆ ಮತ್ತೆ ಮುದ್ದಿಸಿ ನೆತ್ತಿಗೆ ಹೂಮುತ್ತನೊತ್ತಿದಳು.

''ನಾವು ಬರಬೇಕಾದ ದಾರಿ ಗೊತ್ತಿದೆಯಲ್ಲಾ ಆಂಟಿ? ನಮ್ಮ ಮನೆ ಮುಂದೆ ನಾನು ಹೇಗೆ ಬರಲಿ ಹೇಳಿ?''

ಒಡಲ ಸಂಕಟವನ್ನೆಲ್ಲಾ ಪೂಸಿಕೊಂಡು ಹೊರಬಿತ್ತು ದನಿ.

''ಹೋಗಲಿ ಬಿಡು. ನಾವೇ ಎಂದಾದರೊಮ್ಮೆ ಬರೋಣ.''

ಸಮಾಧಾನಿಸುವ ದನಿಯಲ್ಲಿ ನುಡಿದಳು ಅಲಕಾ ಚಂದಾನಿ.

ಶಾಲೆಯ ಬೆಲ್ಲು ಬಾರಿಸಿತು. ಮಕ್ಕಳೆಲ್ಲಾ ತಮ್ಮ ತಮ್ಮ ತರಗತಿಗೆ ಹೊರಟರು,. ಮದರ್ ಸಿಲ್ವಿಯಾ ಆಫೀಸಿಗೆ ಹೋಗಿ ಬಾಗಿಲನ್ನು ಮಿಡಿದು ಕಟಕಟ ಸದ್ದು ಮಾಡಿದ ರವಿ ಚಂದಾನಿ.

''Yes please.''

ಇಬ್ಬರೂ ಒಳಹೋಗಿ ಬೆಳಗಿನ ವಂದನೆ ಸಲ್ಲಿಸಿದರು ''ಗುಡ್ ಮಾರ್ನಿಂಗ್ ಮದರ್!''

''ಗುಡ್ ಮಾರ್ನಿಂಗ್! ಚೆನ್ನಾಗಿದ್ದೀರಾ? ಬನ್ನಿ; ಬನ್ನಿ ಕುಳಿತುಕೊಳ್ಳಿ!''

ಇಬ್ಬರೂ ಕುಳಿತುಕೊಂಡ ನಂತರ ಮದರ್ ಸಿಲ್ವಿಯಾ ''ನೋಡಿ ಈವರೆವಿಗೆ ಮನೋನ್ಮಣಿಯನ್ನು ಎಷ್ಟೋ ಸುಧಾರಿಸಿಕೊಳ್ಳುವಂತೆ ಮಾಡಿರುವೆ. ಮಹಮದ್ ಪಾಶ ಗೋರಿಗಳನ್ನು ಕಿತ್ತೆಸದ ವಿಚಾರ ಅವಳಿಗೆ ತಿಳಿಯಿತು. ಇತರೆ ಮಕ್ಕಳಿಗೆ

ಯಾವೊಂದು ಸಂಕಟದ ವಿಷಯವನ್ನು ಅವಳ ಮುಂದೆ ಪ್ರಾಸ್ತಪಿಸಬಾರದೆಂದು ಕಟ್ಟಪ್ಪಣೆ ಮಾಡಿರುವೆ.''

''ಒಳ್ಳೆಯದು. ನೀವು ತುಂಬಾ ಉದಾರಿಗಳು. ಬಹಳ ಉಪಕಾರ ಮಾಡಿದ್ದೀರಿ! ನಿಮ್ಮ ಉಪಕಾರವನ್ನು ಅವಳು ಎಂದೂ ಮರೆಯಬಾರದು ಅಷ್ಟೆ.''

''ಅಷ್ಟು ಕೃತಘ್ನಳಲ್ಲ ಅವಳು'' ಎಂದ ಮದರ್ ಸಿಲ್ವಿಯಾ ಪುನಃ ''ಈ ಸಾಲಿನಲ್ಲೇ ಗಂಡು ಮಕ್ಕಳ ಶಾಲೆ ತೆರೆಯುವ ಯೋಚನೆಯಲ್ಲಿರುವೆ. ಅದಕ್ಕೆ ಚಂದಾ ಹಣ ಎತ್ತಿಕೊಡಲು ಸಹಾಯ ಮಾಡಿದರೆ ತುಂಬಾ ಉಪಕಾರವಾಗುತ್ತೆ.''

''ನೋಡೋಣ...ನನ್ನ ಕೈಯಿಂದಾದಷ್ಟು ಖಂಡಿತಾ ಮಾಡುವೆ.''

* * *

''ಸುಶೀ ಎಲ್ಲಾ ಮಕ್ಕಳೂ ಕ್ರಿಸ್‌ಮಸ್ ರಜೆಗೆ ಅವರವರ ಮನೆಗಳಿಗೆ ತೆರಳುತ್ತಾರೆ. ಅವರು ಹಿಂದಿರುಗುವವರೆಗೆ ನಾನೊಬ್ಬಳೇ! ಕಾಲಹರಣ ತುಂಬ ಕಷ್ಟ. ಏನು ಮಾಡಲಿ ಹೇಳು? ಈ ಹಿಂದೆಲ್ಲಾ ಸಣ್ಣ ಪುಟ್ಟ ರಜೆಗಳು,. ಕಾನ್ವೆಂಟಿನ ಸ್ವಚ್ಛತೆ - ಲೆಕ್ಕ - ವ್ಯವಹಾರಗಳಲ್ಲಿ ನಿಮಿಷವೂ ಕೈಬಿಡುವು ಸಿಗದಷ್ಟು ಕೆಲಸ. ಮೈಮನಗಳ ಚಕಮಕಿಯಲ್ಲಿ ದಿನಗಳೆದುದು ತಿಳಿಯಲಿಲ್ಲ. ಈ ಸಲಿ ಹೇಗೋ...''

''ಏನು ಮಾಡಲಾಗುತ್ತೆ, ಮಕ್ಕಳು ಮನೆಗೆ ಹೋಗದೆ ಉಳಿದಾರೆಯೇ? ಕೈತುಂಬಾ ಕೆಲಸ ಹಚ್ಚಿಕೊಂಡೇ ಕಾಲಹರಣ ಮಾಡು.''

''ಅದು ಹೇಗೂ ಇದ್ದೇ ಇದೆ. ಆದರೂ ಕಳವಳ. ನೀನೂ ಬರುವ ಹಾಗಿಲ್ಲ''

''ನಮ್ಮ ಬಿಲ್ಲಿ ಇದ್ದಾಳಲ್ಲ. ಅವಳಿಗೆ ಮೈವಾಲೀಷು-ತಿಂಡಿ ನೋಡಿಕೊಳ್ಳುವುದರಲ್ಲಿ ಮೈಮನಗಳು ಚಕಮಕಿಯಾಗುತ್ತವೆ.''

''ನಿಜವಾಗಿಯೂ ಕುದುರೆಯೀಗ ನಮಗೆ ಎಷ್ಟು ಹೊಂದಿಕೊಂಡಿದೆ ಅಲ್ಲವೆ? ಬೆಳಗ್ಗೆ ಮೇಯಲು ಹೋದರೆ ಸಾಯಂಕಾಲ ಕತ್ತಲಾಗುವುದರೊಳಗೆ ಶೆಡ್ಡಿಗೆ ಹಾಜರ್. ಅಡಿಗೆ ಮನೆಯ ಉಳುಕಲು-ಬಳುಕಲಿಂದಲೇ ಎಷ್ಟೊಂದು ಮೈತುಂಬಿದೆ! ಮಳೆಗಾಲ ದಲ್ಲಿ ತುಂಬಾ ಮಳೆಯಿದ್ದಾಗ ಹುಲ್ಲು ಮೇಯುವುದು ಕಷ್ಟ. ಆಗ ಏನಾಗುತ್ತೋ ನೋಡಬೇಕು.''

''ಅಂತೂ, ಅದು ಒಳ್ಳೆಯ ಸ್ಥಳಕ್ಕೆ ಬಂದು ಸೇರಿತು. ಅಂದಿನಿಂದ ಒಂದಿನವೂ ದೂರ ಹೋಗಲಿಲ್ಲ. ಹೊರಗಡೆ ಅಡ್ಡಾಡಿ ಹುಲ್ಲು ಮೇದು ತನ್ನ ಸ್ಥಳಕ್ಕೆ ಬಂದು ಮಲಗುತ್ತೆ. ಒಳ್ಳೆಯ ಬುದ್ಧಿವಂತ ಕುದುರೆ. ಅದರಿಂದ ಯಾರಿಗೂ ತೊಂದರೆಯಿಲ್ಲ.''

''ಬಾ, ಅದರ ಕಡೆ ಹೋಗಿ ಬರೋಣ.''

ಇಬ್ಬರು ಕಾರಿಡಾರನ್ನು ದಾಟಿ ಮೆಟ್ಟಿಲಿಳಿದು ಅಂಗಳಕ್ಕೆ ಕಾಲಿಟ್ಟಾಗ ಸುಂದರ ಉದ್ಯಾನವನದ ಸುಂದರ ಹಾದಿ ಬಾ ಬಾರೆಂದು ಕೈಬೀಸಿ ಕರೆಯುವಷ್ಟು ಆಕರ್ಷಕ. ಇಕ್ಕೆಲದ ಹಾದಿಗಳಲ್ಲಿ ಅರಳಿದ ಲಿಲ್ಲೀ ಹೂಗಳ ಸಮುಚ್ಚಯ, ಗಿಡ ಮರಗಳಲ್ಲಿ ಬುಲ್ ಬುಲ್ ಹಕ್ಕಿಗಳ ಸ್ವರಮೇಳ. ಈ ಜಗತ್ತು ಎಷ್ಟು ಸುಂದರವೋ, ಎಷ್ಟು ಮನೋಹರವೋ ಅಷ್ಟು ರಸಜ್ಞತೆಯನ್ನು ಮನತುಂಬಿಕೊಳ್ಳಬಲ್ಲಂತಹ ಜನ ಶೇಕಡಾ ಎಷ್ಟಿದ್ದಾರು ನಮ್ಮಲ್ಲಿ? ಬರೀ ನೋಟಕ್ಕೆ ಗಿಡ-ಮರ-ಹೂವು ಅಷ್ಟೆ. ಈ ಪ್ರಪಂಚ-ಈ ನಿಸರ್ಗ ಸೌಂದರ್ಯ ಮತ್ತು ಸೌಕರ್ಯ ರಸಸ್ವಾದನೆಗೆ ನಿಲುಕುವುದೇ ಇಲ್ಲ. ಅದಕ್ಕೇ ಕುಸಂಸ್ಕಾರ, ಕುಯುಕ್ತಿ, ಕುಚಿಂತನೆಗಳಿಗೆ ಸಾಮಾನ್ಯರ ಮನದಲ್ಲಿ ಇಂಬು. ತಿಳಿದೂ ತಿಳಿದೂ ಅಧಃಪತಿತರಾದುದರಿಂದಲ್ಲವೇ ದ್ವೇಷ ಅಸೂಯೆ ಬೆಳೆಯಲು ಕಾರಣ....

ಆಲೋಚನಾ ಭಾರದಿಂದ ನಡೆಯುವಾಗ ಮಾತು ಮೂಕಮೌನ; ದೃಶ್ಯ ದರ್ಶನೀಯ.

''ಏನಮ್ಮಾ? ಇದ್ದಕ್ಕಿದ್ದಂತೆಯೇ ಗಂಭೀರವಾಗಿ ಬಿಟ್ಟೆ?''

''ನೋಡು! ಸುಶೀ, ಪ್ರಕೃತಿಯ ನೆಲೆ ಮತ್ತು ಬೆಲೆಯನ್ನು ನಾವು ಅರಿತುಕೊಂಡಿದ್ದಿದ್ದರೆ ಅದರ ರೀತಿಯೇ ಬೇರೆ ಇರುತ್ತಿತ್ತು. ನಾವಿನ್ನೂ ಚಿಗರಿಗಿಂತ ಚಿಗರು.''

''ಬಿಡು, ಚಿಗರಿಗಿಂತ ಚಿಗರಾಗಿದ್ದಿದ್ದರೆ ನಳನಳಿಸುತಿದ್ದೆವು. ಹೊಲಸಿಗಿಂತ ಹೊಲಸು ಅನ್ನು!''

''ಆದರೆ ಎಲ್ಲರೂ ಹಾಗಿಲ್ಲ ಅದೇ ಸಮಾಧಾನ...''

ಇಬ್ಬರೂ ಕೊಟ್ಟಿಗೆಯ ಕಡೆ ಹೋದಾಗ ಕುದುರೆ ಇನ್ನೂ ಬಂದಿರಲಿಲ್ಲ. ಸೌದೆಯನ್ನು ಒಂದು ಕಡೆಗೆ ಒಟ್ಟಿ ಅದಕ್ಕೊಂದಿಷ್ಟು ಸ್ಥಳವನ್ನು ತೆರವುಮಾಡಲಾಗಿತ್ತು. ಅದನ್ನು ಕಟ್ಟುವುದಾಗಲೀ ಬಿಚ್ಚುವುದಾಗಲೀ ಇಲ್ಲವೇ ಇಲ್ಲ. ರಾತ್ರಿಗೆ ಬಾಗಿಲು ಮುಚ್ಚುವುದರಿಂದ ಅದು ಹೊರ ಬರುವಂತಿಲ್ಲ ಅಷ್ಟೆ. ಅದು ಹಳೆಯ ಯಜಮಾನನ ನೆನವರಿಕೆಯಿಲ್ಲದೆ ಹಾಯಾಗಿದ್ದುದೊಂದು ವಿಶೇಷ.

ಇವರು ಹಿಂತಿರುಗಿದ ಸಮಯದಲ್ಲೇ ಅದು ಹಿಂದಣ ಸಣ್ಣಗೇಟಿನಿಂದ ಒಳ ಹೆಜ್ಜೆಯಿಟ್ಟಿತು. ಹಿಂದಿನಂತೆ ಎಲುಬಿನ ಹಂದರವಾಗಿರದೆ ಮೈಕೈ ತುಂಬಿಕೊಂಡ ದೃಶ್ಯ ಬಲು ಆಪ್ಯಾಯಮಾನ.

* * *

ಹಿಂದಿಲಿಂಥ ದಡದಡನೆ ನಡೆದು ಬಂದ ಪಾದ ಸಪ್ಪಳವನ್ನು ಕೇಳಿ ಬೆಚ್ಚಿ ಬಿದ್ದಳು ನೀಲಮಣಿ, ಮೃತ್ಯುವಿನ ಪಾದ ಸಪ್ಪಳದಂತೆಯೇ ಕೇಳಿಸುತ್ತಿವೆ ಅವು. ದಡ. ದಡ. ದಡ. ದಡ.

ಹಿಂತಿರುಗಿ ನೋಡಿದರೆ ಸಿದ್ದು!

ಒಂದರೆಡು ಕ್ಷಣ ಎದೆಯ ಮಿಡಿತವೇ ಸ್ತಬ್ಧ!

"ಏನಪ್ಪಾ? ಹೇಗೆ ಬಂದೆ?"

ಕೇಳಲಾರದೇ ಕೇಳಿತು ನಾಲಿಗೆ.

"ನಿನಗೆ ಆರೋಗ್ಯ ತೀರಾ ಕೆಟ್ಟಿದೆ ಎಂದೆ, ಬಿಟ್ಟಿದ್ದಾರೆ...."

"ಎಷ್ಟು ದಿನ...?"

"ಅದಿರಲಿ, ಈಗ ನನಗೆ ಹಣದ ಅಗತ್ಯ ತುಂಬಾ ಇದೆ. ಕೋರ್ಟಿನಲ್ಲಿ ಕೇಸು ಹಾಕಬೇಕಾಗಿದೆ."

"ಎಲ್ಲಿಂದ ಕೊಡಲಿ ಹೇಳು?"

"ಅದೆಲ್ಲಾ ಆಗದು ಈಗಲೇ ಕೊಡು...."

"....."

"ಬೀಗ ಎಲ್ಲಿಟ್ಟಿದ್ದಿ? ಬೇಗಕೊಡು."

ತಾಯಿ ಉತ್ತರಿಸುವುದರೊಳಗಾಗಿ ಅವಸರಿಸಿದ.

"ನನ್ನಲಿಲ್ಲ...ಕೇಳಲೇಬೇಡ."

ಅವನು ಅಷ್ಟಕ್ಕೆ ಸುಮ್ಮನಾಗಲಿಲ್ಲ. ಕೆರಳಿದ ಹುಲಿಯಂತೆ ಅಬ್ಬರಿಸಿದ ಜಗಿದಾಡಿ ನೂಕಿ ಬೀಗದಕೈ ಕಸಿದುಕೊಂಡು ಪೆಟ್ಟಿಗೆಯನ್ನು ತೆರೆದ. ಅದರಲ್ಲಿದ್ದ ಹಣ ಮತ್ತು ಒಡವೆಗಳನ್ನು ತೆಗೆದುಕೊಳ್ಳುತ್ತಿದ್ದಾಗ "ಹಣ ಮಾತ್ರ ತೆಗೆದುಕೊ ಒಡವೆ ಇರಲಿ, ಆಳುಗಳಿಗೆ ಸಂಬಳ ಎಲ್ಲಿಂದ ಕೊಡಲಿ!" ಎಂದಳು ನೀಲಮಣಿ ಸಂಕಟದಿಂದ.

ಬಾಗಿಲಿಗೆ ಎದುರಾದ ಅವಳನ್ನು ತಳ್ಳಿ ಹೊಡೆದು ಗುದ್ದಿ "ಹಣ ಇಟ್ಟುಕೊಂಡು ಇಲ್ಲ ಎನ್ನಲಿಕ್ಕೆ ಹೇಗೆ ಬಾಯಿ ಬಂತು?"

ಮನಸ್ವೀ ಕಿರುಚುತ್ತ ಹಿತ್ತಲ ಕಡೆಯಿಂದ ಹೊರಬಿದ್ದ ಸಮಯದಲ್ಲೇ ನಾಲ್ಕಾರು ಪೋಲೀಸರು ಬಂದು ಮುತ್ತಿಗೆ ಹಾಕಿದರು! ಇವನೂ ಅವರೊಂದಿಗೆ ಸಾಧ್ಯವಾದಷ್ಟು ಹೋರಾಡಿದ. ಆದರೆ, ಅವರು ನಾಲ್ಕಾರು ಮಂದಿ ಇದ್ದುದರಿಂದ ಕೈ ಸಾಗದೆ ಕೆಳಗೆ ಬಿದ್ದು ನೆಲ ಕಚ್ಚಿದ. ಕೈಗೆ ಕೋಳ ಬಿಗಿದು ಅವನನ್ನು ಎಳೆದುಕೊಂಡು ಹೋದರು.

ಬಾಗಿಲಲ್ಲಿ ನಿಂತು ನೋಡುತ್ತಿದ್ದ ತಾಯಿ ಒಡವೆ ಒಯ್ದಿದ್ದಾನೆಂದು ಹೇಳಬೇಕೆನಿಸಿದರೂ ತುಟಿಗಳು ಬಿರಿಯಲಿಲ್ಲ. ಕಣ್ಣುಗಳು ತೊಯ್ದುದು ಆತನ ಕೈಸೆರೆಗಾಗಿ ಅಲ್ಲ; ತನ್ನ ದುಃಸ್ಥಿತಿಗಾಗಿ.

ನೆರೆಮನೆಯ ಬಹೆನ್ ಬಂದು ಹೇಳಿದಳು "ತಾಯಿ, ಆತ ಕೋರ್ಟಿಗೆ ಕರೆದೊಯ್ಯುತಿದ್ದ ಹಾದಿಯಲ್ಲಿ ಕೈ ತಪ್ಪಿಸಿಕೊಂಡು ಬಂದಿದ್ದನಂತೆ! ಹಿಂದೆಯೇ ಪೋಲೀಸರು ಅಟ್ಟಿಸಿಕೊಂಡು ಬಂದಿದ್ದಾರೆ!"

"......"

"ನಿನಗೆ ಈ ದುಃಸ್ಥಿತಿ ಬರಬಾರದಿತ್ತು! ನಿನ್ನನ್ನು ನೋಡಿದರೆ ನನಗೇ ಬಲು ಸಂಕಟ."

"ಈಶ್ವರೇಚ್ಛೆ!"

ನೀಲಮಣಿ ಗಗನದೆಡೆಗೆ ಕೈ ಜೋಡಿಸಿದಳು. ಮುಖಬಿಂಬ ಕಪ್ಪು ತಳೆಯಿತು.

ಅವಳು ಬಳಿಗೈತಂದು "ಹೋಗಲಿ, ಬಿಡು, ತಾಯಿ. ನೀನು ಬಂಜೆ ಅಂದುಕೊ. ನೀನು ಮಕ್ಕಳು ಮರಿಯೊಂದಿಗೆ ಸುಖವಾಗಿರಬೇಕಾದ ಕಾಲದಲ್ಲಿ ಹೀಗಾದುದು ತುಂಬಾ ವ್ಯಸನಕರ. ನಿನಗೆ ಅದೃಷ್ಟ ಚೆನ್ನಾಗಿಲ್ಲ. ಇಡೀ ಬಾಳೆಲ್ಲ ಕಹಿಯುಂಡೆ. ಎಷ್ಟೆಂದರೂ ಹೆಣ್ಣಾಗಿ ಹುಟ್ಟಬಾರದು. ನಿನ್ನ ಐದು ಜನ ಹೆಣ್ಣು ಮಕ್ಕಳು ತಣ್ಣಗೆ ಸ್ವರ್ಗದಲ್ಲಿದ್ದಾರೆ. ಈ ಬಾಳಿನ ಜಂಜಡ ಕಾಣದ ಅವರೇ ಸುಖಿ! ಅವರೇ ಪುಣ್ಯವಂತರು!"

ಆ ಕಠೋರ ಸತ್ಯ ಅಂತರಂಗವನ್ನು ತಣ್ಣಗೆ ಮುಟ್ಟಿತು. ಒಮ್ಮೇ ಸಂಕಟದ ಝುರಿ ನರನಾಡಿಗಳನ್ನು ಸೀಳುವಂತೆ ದೇಹದಾದ್ಯಂತ ಹರಿದಾಡಿತು. ದುಃಖವನ್ನೂ ದುಃಖಿತಗೊಳಿಸುವಂತೆ ಕಣ್ಣುಗಳಿಗೆ ಮಂಜು ಕವಿದು ಬಂತು. ಒಂದೆರಡು ಗಳಿಗೆ ತಡೆದು ತನ್ನನ್ನು ತಾನು ಸುಧಾರಿಸಿಕೊಂಡು ನುಡಿದಳು "ಮನುಷ್ಯರಾಗಿ ಹುಟ್ಟಿ ಮನುಷ್ಯತ್ವ ಉಳಿಯದಿದ್ದರೆ ಏನು ಫಲ? ದೇವರು ಜೀವನವನ್ನೂ ಕೊಟ್ಟ, ನರಕವನ್ನೂ ಕೊಟ್ಟ; ಆಯುಸ್ಸನ್ನೂ ಕೊಟ್ಟ. ಏನು ಮಾಡಲಿ ಹೇಳು? ನನಗೆ ಖಂಡಿತಾ ಈ ಬದುಕು ಬೇಡ.... ಅಂದರೆ ಸಾವು ಬರಬೇಕಲ್ಲ? ಮಗ ಹೇಳಿದ್ದು ನಿನ್ನನ್ನು ನೋಡುವ ಸಲುವಾಗಿ ಬಿಡುಗಡೆ ಹೊಂದಿ ಬಂದೆ ಎಂದು. ಪೋಲೀಸರ ಮೇಲೆ ಮೊಕದ್ದಮೆ ಹೂಡಬೇಕು. ಹಣಕೊಡು ಎಂದು ಕೇಳಿದ. ಹಣ ಇಲ್ಲ ಎಂದುದಕ್ಕೆ ಹೊಡೆದು ಗುದ್ದಿ ಬೀಗದ ಕೈ ಕಿತ್ತುಕೊಂಡುದುದಲ್ಲದೆ ಚಿನ್ನದ ಸರ-ಬಳೆಗಳನ್ನೂ ದೋಚಿಕೊಂಡು ಹೋಗಿ

ೋಲೀಸರಿಗೆ ಸಿಕ್ಕುಬಿದ್ದ. ಇನ್ನು ಹಣ ಚಿನ್ನ ಎರಡೂ ಪೋಲೀಸರ ಪಾಲಿಗೆ, ಈ ಲ್ಲವನ್ನೂ...ಹೋಗಲಿ ಬಿಡು. ಈ ಜೀವವನ್ನು ಸುಲಭವಾಗಿ ನೋವು-ಉರಿ-ಯ-ಯಾವುದೂ ಇಲ್ಲದೆ ತಣ್ಣಗೆ ಕೊನೆಗಾಣಿಸಬಹುದಾದ ವಿಧಾನ ಗೊತ್ತಿದ್ದರೆ ೀಳು. ಈವರೆವಿಗೆ ಭಂಗ ಬವಣೆ ಪಟ್ಟಿದ್ದಾಯ್ತು. ಸಾವು ತಣ್ಣಗೆ ಬರಲಿ ಎನಿಸುತ್ತೆ ನಗೆ.''

ಪುನಃ ಗಗನದೆಡೆಗೆ ನೋಡುತ್ತ ಶೀತಲದನಿಯಲ್ಲಿ ಕಾತರ ಪ್ರಶ್ನೆ ಹಾಕಿದಳು. ಇದಕ್ಕೇನು ಉಪಾಯ ಬಹೆನ್?''

ಬಹೆನ್ ಮೂಕಮೌನಿಯಾಗಿ ಯೋಚಿಸಿದಳು. ಹೃದಯ ಸಮುದ್ರದಲ್ಲಿ ಂಕಟದ ಅಲೆಗಳು ತುಂಬಿ ತುಯ್ಯಲಾಡಿದುವು.

ಕ್ರಿಸ್‌ಮಸ್...

* * *

ಬೆಟ್ಟದ ಮೇಲಿನ ಎತ್ತರದ ಸರಸ್ವತೀ ಆಲಯದಲ್ಲಿ ಕ್ರಿಸ್‌ಮಸ್.

ಹಬ್ಬದ ಆಚರಣೆ ಸಡಗರಕ್ಕೆ ಪೂರಕ. ಆದರೆ, ಮಕ್ಕಳೆಲ್ಲಾ ಅವರವರ ಮನೆಗಳಿಗೆ ್ರಸ್‌ಮಸ್ ರಜೆಯ ಪ್ರಯುಕ್ತ ಹೊರಟು ಹೋಗಿರುವುದರಿಂದ ಸಡಗರದ ಸೊಲ್ಲು ಂಗ್ಗಿ ಹೂರಣವಿಲ್ಲದ ಹೋಳಿಗೆ.

ಹಿರಿಯ ಮದರ್‌ಗಳು, ನಿರ್ವಹಣಾಧಿಕಾರಿಗಳು, ಗುಮಾಸ್ತರುಗಳು, ಆಳುಗಳು ೀ ಎಲ್ಲರ ಪುಟ್ಟ ಕೋಟೆಯಲ್ಲಿ ಆಕರ್ಷಣೀಯ ಜೀವಿಗಳೆಂದರೆ ಮನೋನ್ಮಣಿ-ಬಿಲ್ಲಿ-ಬೂಲಿನಾಯಿ....ಮನೋನ್ಮಣಿ ಕ್ರಿಸ್‌ಮಸ್ ಟ್ರೀ ಅಲಂಕಾರದಲ್ಲಿ ಫಾದರ್-್ರಸ್‌ಮಸ್‌ನನ್ನು ಹತ್ತಿಯಿಂದ ನಿರ್ಮಿಸಿ ಸಿಂಗರಿಸುವಲ್ಲಿ ತಾನೇ ಮುಂದು. ಆದರೆ ಾಲ ಬಳಗವಿಲ್ಲದ ಹಬ್ಬ ಎಷ್ಟೆಂದರೂ ನೀರಸವೇ. ಸುಶೀ-ಕಿರಣ್-ಶೀಲ ಇವರಿಗೆ ರುಲು ಹೇಳಿದ್ದುಂಟು. ಅವರು ಬರುವವರೆಗು ನಂಬಿಗೆಯಿಲ್ಲ. ಮಧ್ಯರಾತ್ರಿ ಚರ್ಚಿಗೆ ೋಗುವ ಸಾಧ್ಯತೆ ಈ ಸಲಿ ತುಂಬಾ ಕಡಿಮೆ. ರಾಜಕೀಯ ವೈಷಮ್ಯ, ವರ್ಗ ೖಷಮ್ಯ, ಜಾತಿ ವೈಷಮ್ಯಗಳು ಅಲ್ಲಲ್ಲಿ ದಟ್ಟವಾಗಿ ಹೊಗೆಯಾಡುತ್ತಿರುವುದರಿಂದ ರಡು ಮೈಲಿ ದೂರದ ಚರ್ಚಿಗೆ ಕಾಲ್ನಡಿಗೆಯ ಪಯಣ ಕಷ್ಟವೇ. ಜೀಪು ಹೋಗಲು ಸ್ತೆಯಿಲ್ಲ. ರಸ್ತೆಗಾಗಿ ಸರಕಾರವನ್ನು ಕೇಳಿ ಕೇಳಿ ಸೋತಿತು ಜನತೆ.

ಚರ್ಚ್ ಇರುವುದು ಗಾರಂಗಾವ್ ಗ್ರಾಮದ ಹಿಂಬದಿಯ ಬೆಟ್ಟದ ತ್ತಿಯಮೇಲೆ. ಸರಕಾರ ಮನಸ್ಸು ಮಾಡಿದರೆ ಸಾರಿಗೆ ಸೌಕರ್ಯ ಒದಗಿಸುವುದು ನೇನೂ ಕಷ್ಟವಲ್ಲ. ಗಾಥಿಕ್ ಶೈಲಿಯ ಆ ಚರ್ಚ್ ತುಂಬ ಹಳೆಯದೇ. ಅದನ್ನು

ಕಟ್ಟಿದ ವರಿಷ್ಠರು ರಸ್ತೆ ನಿರ್ಮಾಣದ ಮೊದಲೇ ಇಹಲೋಕ ಯಾತ್ರೆ ಮುಗಿಸಿದರು. ಹಗಲು ನಿದ್ದೆಯ ಸರಕಾರ ಅತ್ತ ಕಣ್ಣು ಹಾಯಿಸಲಿಲ್ಲ.

ಎತ್ತರದ ಬೆಟ್ಟ; ಹತ್ತಿ ಹೋಗುವ ಕಾಲುದಾರಿ. ಹಗಲ ಪಯಣಕ್ಕೆ ತುಂಬಾ ಮೋದಕ; ಈ ಹಿಂದೆ ಶಾಂತಿ ಸಮೃದ್ಧ ದಿನಗಳಲ್ಲಿ ಕ್ರಿಶ್ಚಿಯನ್ನರು ಮದ್ದಲೆ ತಾಳ ಬಾರಿಸಿಕೊಂಡು ಕ್ರಿಸ್ತ-ಭಜನೆಯೊಂದಿಗೆ ಬೆಟ್ಟ ಹತ್ತುತ್ತಿದ್ದರೆ ಎಂತಹ ಆನಂದಾಮೋದಕವೋ-ಈಗಣ ದುರ್ದಿನಗಳಲ್ಲಿ ಕೊಲೆ-ಸುಲಿಗೆ, ರೋಷ-ದ್ವೇಷಗಳ ಅಕಾಂಡತಾಂಡವ ಭೈರವ ನರ್ತನದಲ್ಲಿ ಹೊರ ತಲೆಹಾಕುವುದು ಆತಂಕಮಯ.

ಕಾನ್ವೆಂಟಿನ ವಾಮಾಂಗದ ಕಿಟಕಿಯಿಂದ ಅಥವಾ ಪ್ರಾಂಗಣದಿಂದ ನೋಡಿದರೆ ಆ ಗಗನ ಚುಂಬೀ ಚರ್ಚ್ ದುಷ್ಪತ್ರಾಷಿತಳಾದ ಸ್ವರ್ಗಲಕ್ಷ್ಮಿಯು ಘೂರ್ಣ ಉದ್ಭ್ರಾಂತತೆಯಿಂದ ಧರೆಗಿಳಿದು ಬಂದು ಮಂಡಿಯೂರಿ ಕುಳಿತು ಪ್ರಾರ್ಥಿಸುವಂತೆ ತೋರುವ ಭಂಗಿ ನಯನಾಕರ್ಷಕ.

"ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ"

ಹಾಗೆಂದು ಸಾರಿ ಹೇಳಿ ಹೋದ ಪರಮಾತ್ಮ ಇನ್ನೂ ಏಕೆ ಸುಮ್ಮನಿದ್ದಾನೆ? ಅದೇ ಅರ್ಥವಾಗದ ವಿಷಯ. ಬಹುಶಃ ಇನ್ನೆಂದಾದರೂ ಹುಟ್ಟಲಿದ್ದಾನೋ ಏನೋ....

ಆಲೋಚನೆಗಳ ತುಮುಲ ತಲೆಯಲ್ಲಿ ಹೂಡಿದ ಗದ್ದಲ ಅಥವಾ ಗೊಂದಲ ಸಂತೆಗೂ ಮೀರಿದ ಸಂತೆ. ಎಳೆಯ ಮನಸ್ಸು; ಎಳೆಯ ಹೃದಯ.

ಮಿಂಚು ಕಾಗದವನ್ನು ಕತ್ತರಿಸಿ ಕಟ್ಟಿದ ಹೂಹಾರ. ವರ್ಣರಂಜಿತ ದೀಪಮಾಲೆ. ಲಿಖಿತ ಚಿತ್ತಾರಗಳ ಪಶುಪಕ್ಷಿಗಳ ಹೊಂದಾಣಿಕೆ. ಮೊಗಸಾಲೆಯ ತುಂಬೆಲ್ಲಾ ಹೂದಾನಿಗಳು, ಹೂಗಿಡಗಳು ನಳನಳಿಸುತ್ತ ಹೊಸದೊಂದು ಉದ್ಯಾನವನ್ನೆ ನಿರ್ಮಿಸಿದ್ದುವು. ಅವುಗಳ ಬಳಿಯಲ್ಲಿ ಓಡಾಡಿ ಸಡಗರಿಸುವಾಗ ಓರಗೆಯವರಿಲ್ಲದುದೊಂದು ಕೊರತೆ. ಕಣ್ಣುಗಳು ಪುನಃ ಹಾದಿಯ ಕಡೆ ಹರಿದು ನಿರಾಸೆಯಿಂದ ಹಿಂಬಾಲಿಸಿದಾಗ ಮನಸ್ಸು ಮುದುಡುತ್ತದೆ.

ರಾತ್ರಿ ಕ್ರಿಸ್ತ ಭಜನೆ ನಡೆಸಿದ್ದು ಅದೇ ಮೊಗಸಾಲೆಯಲ್ಲಿ.

೧೧

"ಮನೋ....!"

"......"

"ಮನೋನ್ಮಣೀ! where are you? can't you hear me?" ಬಹುಶಃ ಆ ಮಧುರ ಕರೆ ಕರ್ಣಪಟಲವನ್ನು ತಾಗಿದ್ದಂತೂ ನಿಜ. ಅನ್ಯಮನಸ್ಕಳಾದ ಮನೋನ್ಮಣಿಯ ಕಿವಿಗೆ ಎರಡನೆಯ ಕರೆ ತಾಗಿದಾಗ ಮಿಡುಕಿ ಬಿದ್ದು ತಟ್ಟನೆ ಮದರ್ ಸಿಲ್ವಿಯಾ ಕೊಠಡಿಯತ್ತ ಧಾವಿಸಿದರೂ ಬಾಗಿಲ ಬಳಿ ನಿಂತು ಒಳಗಡೆ ಮಾತಾಡುವ ಸದ್ದು ಆಲೈಸಿ ಸಣ್ಣಗೆ ಮಿಡಿದು ಸದ್ದು ಮಾಡಿದಳು ಕಟ. ಕಟ. ಕಟ. ಕಟ.

"Yes please!"

ಮನೋನ್ಮಣಿ ಒಳಗಡೆ ಪದಾರ್ಪಣೆ ಮಾಡಿದಳು. ಪಕ್ಕದ ಕುರ್ಚಿಗಳಲ್ಲಿ ನೀಲಮಣಿ ಮತ್ತು ಹರಿಕಿಷನ್ ಕುಳಿತಿದ್ದರು.

ಮನೋನ್ಮಣಿ ಮದರ್ ಪಕ್ಕದ ಸ್ಟೂಲಿನ ಮೇಲೆ ಕುಳಿತುಕೊಳ್ಳುತ್ತಲೂ ಬೆನ್ನಿನ ಮೇಲೆ ಕೈಯಿಟ್ಟು ಮದರ್ ಸಿಲ್ವಿಯಾ ನಲ್ಮೆಯಿಂದ "ಮನೋ, ನಿಮ್ಮ ಆಸ್ತಿ-ಮನೆಯ ಮೊಕದ್ದಮೆಯ ತೀರ್ಪು ಸರಿಯಿಲ್ಲ; ಅದರ ಮೇಲೆ ಅಪೀಲ್ ಮಾಡೋಣ ಎನ್ನುತಿದ್ದಾರೆ ಇವರಿಬ್ಬರೂ. ನೀನೂ ಏನು ಹೇಳುತ್ತಿ?"

"ನನಗೆ ಆದೆಲ್ಲಾ ಏನು ತಿಳಿಯುತ್ತೆ ಮದರ್? ನೀವೇ ಏನಾದರೂ ತೀರ್ಮಾನ ಮಾಡಿರಿ. ನಿಮ್ಮ ಮಾತಿಗೆ ನಾನು ವಿರುದ್ಧ ಬರುವುದಿಲ್ಲ."

"ಆದರೂ, ನಿನ್ನ ಒಪ್ಪಿಗೆ ಬೇಕಲ್ಲ. ಒಂದು ವೇಳೆ ಕೋರ್ಟಿನಿಂದ ನಿನ್ನನ್ನು ಸಾಕ್ಷಿಯಾಗಿ ಕರೆದರೆ ವಿವರಣೆ ಕೊಡಬೇಕಾಗುತ್ತದೆ. ಅದಕ್ಕೆ ನೀನು ತಯಾರಿರ ಬೇಕು."

ಮನೋನ್ಮಣಿ ಸ್ವಲ್ಪ ಹೊತ್ತು ತಲೆಬಾಗಿ ಕುಳಿತಳು. ತಲೆಯಲ್ಲಿ ಗತಕಾಲದ ಅನೇಕ ಚಿತ್ರಣ ತರಂಗಗಳು ಪರಿಭ್ರಮಿಸಿದುವು. ಕ್ರಿಸ್‌ಮಸ್ ಉತ್ಸಾಹ ಒಮ್ಮೆಗೇ ಇಳಿದು ಹೋದಷ್ಟು ನಿರುತ್ಸಾಹ ಮನಃತರಂಗಗಳಲ್ಲಿ. ಪ್ರಯತ್ನಿಸಿದರೂ ನಾಲಿಗೆ ಹೊರಳದು. ಸ್ವಲ್ಪ ಹೊತ್ತು ಮೂಕ ಮೌನಿ.

"ಏನು ಹೇಳುತ್ತೀಯಮ್ಮಣ್ಣೀ? ಕೋರ್ಟಿನಲ್ಲಿ ದಿನವೂ ಸಾಕ್ಷಿ ಇರುವುದಿಲ್ಲ ಬಿಡು. ಎಂದಾದರೊಮ್ಮೆ ಕರೆದಾರು. ಅದೇನು ಕಷ್ಟ? ನಾನಿರುವೆ, ಆ ಅಮ್ಮಣ್ಣಿ ಇರುತ್ತಾರೆ. ಕೇಳಿದ್ದಕ್ಕೆ ಎರಡು ಮಾತು ಹೇಳಿ ಬಂದರೆ ಮುಗಿಯಿತು. ಒಂದು ವೇಳೆ ಕೇಸು ಗೆದ್ದರೆ ನಿನ್ನ ಮನೆ-ಆಸ್ತಿ ಹಿಂದಕ್ಕೆ ಬರುತ್ತೆ. ಮುಂದೆ ನೀನೇ ಅನುಭವಿಸಬಹುದು. ಒಂದು ವೇಳೆ ಸೋತರೆ ಈಗಿನಂತೆಯೇ. ಏನಾದರೂ ಆಗಲಿ, ದೇವರ ಮೇಲೆ ಭಾರಹಾಕಿ ಕೆಲಸಮಾಡೋಣ; ಫಲಾಫಲ ಭಗವಂತನಿಗೆ ಬಿಟ್ಟರಾಯಿತು"

"ಖರ್ಚು ವೆಚ್ಚ-ಓಡಾಟ ಇದೆಲ್ಲಾ ಕಷ್ಟವಲ್ಲವೇ?"

''ಅದೆಲ್ಲಾ ನಾನೇ ನೋಡಿಕೊಳ್ಳುವೆ. ನಮ್ಮ ಅಮ್ಮಣ್ಣಿಗಾಗಲೀ ನಿನಗಾಗಲೀ ಏನೂ ಕಷ್ಟಕೊಡುವುದಿಲ್ಲ'' ಎಂದ ಹರಿಕಿಷನ್.

ಅವನ ಕಂಠದಲ್ಲಿ ಸ್ಫುರಿಸಿದ ದೃಢಭಾವವನ್ನು ಗಮನಿಸಿ ಹುಬ್ಬೆತ್ತಿ ನೋಡಿದಳು. ಮನೋನ್ಮಣಿ. ಅವನು ಆಸ್ತಿಗೆ ಸಂಬಂಧ ಪಟ್ಟವನಲ್ಲ. ಆದರೂ ಮುಂದಾದುದು ಆಶ್ಚರ್ಯ ಎನಿಸಿ. ತುಟಿಗಳು ಬಿರಿಯದಿದ್ದರೂ ಕಣ್ಣುಗಳ ಭಾವ ಕೂಗಿ ಹೇಳಿತೇನೋ....

ಹರಿಕಿಷನ್ ಶ್ರದ್ಧಾಪೂರ್ವಕವಾಗಿ ಅಂದ ''ಬೇಟಿ! ನೀನು ನನ್ನನ್ನು ನಂಬುವುದಾದರೆ ಪವರ್ ಆಫ್ ಅಟಾರ್ನಿ ಕೊಡು. ಯಾರಾದರೂ ನಿಷ್ಠಾವಂತ ವಕೀಲ ಸಿಕ್ಕಿದರೆ ಕೇಸು ನಡೆಸುವೆ. ಇಲ್ಲದಿದ್ದರೆ ನಿಧಾನಿಸೋಣ. ದುಷ್ಟ ಮಹಮದ್ ಪಾಶ ಮಾಡಬಾರದ್ದೆಲ್ಲಾ ಮಾಡಿ ಮಜ ಮಾಡುತಿದ್ದಾನೆ. ನಾವು ನೋಡುತ್ತ ಸುಮ್ಮನೆ ಕೂಡುವುದು ತಪ್ಪು. ಅದಕ್ಕೆಂದೇ ಬಂದಿರುವೆ. ನೀನೇನೂ ಅಪಾರ್ಥ ಮಾಡಿ ಕೊಳ್ಳಬೇಡ.''

ನೀಲಮಣಿ ಅವನ ಮಾತನ್ನು ಸಮರ್ಥಿಸಿ ''ಹೌದು....ಬೇಟಿ! ಈ ಕೇಸು ಇಂದು ನಾಳೆಗೆ ಮುಗಿಯುವುದಿಲ್ಲ. ನಾಲ್ಕಾರು ವರ್ಷ ಆದೀತು. ಆ ಸಮಯಕ್ಕೆ ನೀನೂ ಪ್ರಾಪ್ತ ವಯಸ್ಕಳಾಗುತ್ತಿ. ಒಂದಕ್ಕೊಂದು ಸರಿಹೋಗುತ್ತೆ. ಆದರಿಂದ ನಿನಗೇನೂ ತೊಂದರೆಯಾಗದು, ಕೋರ್ಟಿನಿಂದ ಕರೆಬಂದರೆ ನಾವಿದ್ದೇವಲ್ಲ? ಅದೇನೂ ಭಯವಿಲ್ಲ.''

''ನೀವು ಏನಾದರೂ ಮಾಡಿ ಆಂಟಿ. ನಾನು ಮದರ್ ಹೇಗೆ ಹೇಳಿದರೆ ಹಾಗೆ.''

''ಹಾಗಾದರೆ ನೀನು ಪವರ್ ಆಫ್ ಅಟಾರ್ನಿ ಕೊಡುವುದು ಒಳ್ಳೆಯದು. ಅದೃಷ್ಟವಿದ್ದರೆ ಆಸ್ತಿ ಲಭ್ಯ. ಇಲ್ಲದಿದ್ದರೆ ಇಲ್ಲ. ಅಂತೂ ಕೊನೆಯ ಪ್ರಯತ್ನ.''

''ನಾನು ಪತ್ರ ಬರೆಯುವೆ. ಮದರ್ ನೋಡಿದ ನಂತರ ನೀನು ಸಹಿ ಹಾಕು.''

''ಆಗಲಿ ಭಯ್ಯಾ!''

''ಬೇಟಿ! ಮನದಲ್ಲಿ ಅಳುಕು ಬೇಡವೇ ಬೇಡ, ಹೇಗಾದರೂ ಆಗಲಿ.''

ನೀಲಮಣಿಯ ಸಲಹೆ ಮನದಾಳಕ್ಕೆ ಇಳಿಯಿತು. ತುಟಿಗಳು ಬಿರಿಯಲಾರದೇ ಬಿರಿದುವು...''ನೀವು ಹೇಳಿದ ಮೇಲೆ ನನ್ನದೇನೂ ಅಡ್ಡಿಯಿಲ್ಲ ಆಂಟೀ!''

''ಆಗಲಿ ಮಗಳೇ!''

ಹರಿಕಿಷನ್ ಪತ್ರ ಬರೆದು ಮದರ್ ಕೈಗೆ ಕೊಟ್ಟ. ಅವಳು ಓದಿ ನೋಡಿ ಒಪ್ಪಿಗೆ

ಸೂಸಿದಳು. ನೀಲಮಣಿ ಸಂಕಟಪೂರ್ವಕವಾಗಿ ವಿಷಯವನ್ನು ಸ್ವಾಗತಿಸಿದ್ದರೂ ಕಿಂಚಿತ್ತೂ ತೋರಗೊಡದೆ ತಾನೂ ಓದಿ ನೋಡಿ ಸಹಿ ಹಾಕಿ, ಅವಳಿಂದಲೂ ಹಾಕಿಸಿದಳು.

ಮದರ್ ತಲೆದೂಗಿ ''ರಾಜಕೀಯ ರಕ್ಷಣೆಯಿಲ್ಲದ ಈ ದುರ್ದಿನಗಳಲ್ಲಿ ಪರಿಸ್ಥಿತಿಯ ದುರ್ಲಾಭ ಪಡೆಯುವ ಜನರು ಕಡಿಮೆಯಿಲ್ಲ. ಅದರಿಂದಲೇ ಜೀವನ ಪರಿಸ್ಥಿತಿ ದಿನದಿನಕ್ಕೂ ಹದಗೆಡುತ್ತಿದೆ. ಅರಾಜಕತೆ ಹೋಗಿ ಶಾಂತಿ ಮೂಡುವವರೆಗೆ ತುಂಬಾ ಕಷ್ಟವೇ.''

''ಅದು ನಿಜ, ಮದರ್! ಮೇಲಾಗಿ, ಜಿನ್ನಾ ಹಿಡಿದ, ಪಟ್ಟಿನಿಂದ ಮುಸ್ಲಿಮರು ಮುಗಿಲಿಗೇರಿದ್ದಾರೆ. ಈ ಪ್ರಾಂತ್ಯದಲ್ಲಿ ಹಿಂದೂಗಳ ಸಂಖ್ಯೆ ಕಡಿಮೆ; ಪ್ರತಿಯೊಂದಕ್ಕೂ ಅಡ್ಡಗಾಲು ಹಾಕುವ ಪರಿಸ್ಥಿತಿಯಿಂದಾಗಿ ಹಿಂದಿನ ಸಾಮರಸ್ಯ ಈಗ ಇಲ್ಲವೇ ಇಲ್ಲ. ನಮ್ಮವರಿಗೆ ಹೆಜ್ಜೆ ಮುಂದಿಡುವುದೂ ಕಷ್ಟ; ಹಿಂದಿಡುವುದೂ ಕಷ್ಟ. ಹೇಗೋ ಹಾಗೆ ಸರಿದೂಗಿಸಿಕೊಳ್ಳಬೇಕು ಅಷ್ಟೆ.''

ನೀಲಮಣಿ ಮಾತಿಗೆ ಹರಿಕಿಷನ್ ದನಿಗೂಡಿಸಿದ ''ರಾಜಕೀಯ ದುರ್ಲಾಭದಿಂದಲೇ ಇಂದು ಎಲ್ಲೆಲ್ಲಿಯೂ ಗೂಂಡಾಯಿಜಂ ಕಂಡು ಬರುತ್ತಿದೆ. ನೋಡೋಣ, ಸಧ್ಯದಲ್ಲೇ ಬ್ರಿಟಿಷರಿಗೂ ಕಾಂಗ್ರೆಸ್ಸಿಗೂ ಒಪ್ಪಂದವಾದರೆ ಶಾಂತಿ ಮೂಡುತ್ತದೆ.''

''ಜಿನ್ನಾ ದಾರಿ ಬೇರೆಯಾಗಿದೆ ಅದೊಂದು ಕಷ್ಟ'' ಎನ್ನುತ್ತ ನಿಟ್ಟುಸಿರು ಬಿಟ್ಟಳು ನೀಲಮಣಿ. ಒಡಲ ಸಂಕಟ ಮುಖಬಿಂಬದ ಮೇಲೆ ಮುದ್ರೆಯೊತ್ತಿತು.

* * *

ಬಡತನ....ಬಡತನ.....ಬಡತನ.

ರಾಷ್ಟ್ರವ್ಯಾಪೀ ಬಡತನ. ಆರ್ಥಿಕ ದಾರಿದ್ರ್ಯ, ಸ್ವಾತಂತ್ರ್ಯ ದಾರಿದ್ರ್ಯ, ಬೌದ್ಧಿಕ ದಾರಿದ್ರ್ಯ, ಆರೋಗ್ಯ ದಾರಿದ್ರ್ಯ, ಉದ್ಯೋಗ ದಾರಿದ್ರ್ಯ...ಇಷ್ಟೆ ಏನು? ನಾನಾ ದಾರಿದ್ರ್ಯಗಳನ್ನು ದಾರಿದ್ರ್ಯರೇಖೆಗಿಂತ ಕೆಳಗಿಸುವ ದಾರಿದ್ರ್ಯ. ಎದೆಯನ್ನು ಕೆಟ್ಟು ಆವರಿಸಿದ್ದರೂ ಮೈಯಲ್ಲಿ ನೆತ್ತರೂ ಇಲ್ಲ; ನೆಣವೂ ಇಲ್ಲ. ಗುಡಿಸಲುಗಳಲ್ಲಿ ನೀರಿದ್ದರೆ ನುಚ್ಚಿಲ್ಲ; ನುಚ್ಚಿದ್ದರೆ ನೀರಿಲ್ಲ. ಮಹಡಿಮನೆ ಹಲವಾದರೆ ಗುಡಿಸಲುಗಳು ಸಾವಿರಾರು.

ರಾಜಕೀಯ ಆಂದೋಳನ, ಜಾತಿ-ವರ್ಗಗಳ ಆಂದೋಳನ, ಬಡತನದ ಆಂದೋಳನ, ಪಕ್ಷ-ಪ್ರತಿಪಕ್ಷಗಳ ಆಂದೋಳನ, ಪ್ರತಿಫಲ ರಾಷ್ಟ್ರವ್ಯಾಪೀ ಅಶಾಂತಿ ....ಅಶಾಂತಿ.

ಆಂದೋಳನವನ್ನು ಆಂದೋಳಿತಗೊಳಿಸುವಂತಹ ಕಾಲ.

ಅಶಾಂತಿಯನ್ನು ಆಸ್ಫೋಟಗೊಳಿಸುವಂತಹ ಮನಃಪ್ರಾಣಗಳು.

ನಾಲ್ಕು ಮಂದಿ ಎಲ್ಲಿದ್ದರೆ ಅಲ್ಲಿ ಪರಿಸ್ಥಿತಿಯ ಪ್ರಸ್ತಾಪ. ಬಸ್ಸುಗಳಲ್ಲಿ -ರೈಲುಗಳಲ್ಲಿ-ಹಾದಿ-ಬೀದಿಗಳಲ್ಲಿ ಮನೆಮನೆಗಳಲ್ಲಿ ಎಲ್ಲಿ ನೋಡಿದರೂ ಚರ್ಚಿಸಲ್ಪಡುವ ವಿಚಾರ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಕುರಿತು.

''ಕಾಂಗ್ರೆಸ್ ಈ ಸಲಿ ಪಟ್ಟು ಬಿಡದೆ ಗುರಿ ಮುಟ್ಟುವುದು ಖಂಡಿತ.''

''ಜಿನ್ನಾ ಹೇಗಾದರೂ ಇರಲಿ, ಸ್ವಾತಂತ್ರ್ಯ ದಕ್ಕಿಸದೆ ಬಿಡೆವು.''

''ಇಂಗ್ಲೀಷರ ಆಟ ಇನ್ನು ಏನೇನೂ ನಡೆಯದು.''

''ಸುಭಾಷ್ ಐ.ಎನ್.ಎ.ಕಟ್ಟಿದ್ದು ಸುಮ್ಮನೆ ಅಲ್ಲ. ಜಪಾನ್ ಚೀನಾ ನಮ್ಮ ಕಡೆಗೆ. ಇದರಿಂದ ಇಂಗ್ಲೀಷರು ಪಾಠ ಕಲಿಯಲೇಬೇಕು.''

''ಶತಮಾನಗಳಿಂದ ಸುಲಿದು ಸೂರೆಗೊಂಡ ದುಷ್ಕೃತ್ಯ ಇನ್ನು ನಿಲ್ಲಲೇ ಬೇಕು.''

''ಜಿಗಣೆ ರಕ್ತ ಹೀರಿದಂತೆ ಹೀರಿದ್ದಾರೆ. ಇವರ ನೆರಳೂ ಕೂಡ ಇತ್ತ ಸುಳಿಯದಂತೆ ಬೊಗ್ಗು ಬಡಿಯದಿದ್ದರೆ ನಾವು ಭಾರತೀಯರಲ್ಲ.''

''ಕೊಂಕಳ ಮಕ್ಕಳನ್ನು ಹೊತ್ತು ಮನೆ ಮಠಗಳನ್ನು ತೊರೆದು ದೇಶ ಸೇವೆ ಮಾಡಿದ ಹೆಂಗಳೆಯರು ಮಾನ ಮುಚ್ಚಿಕೊಳ್ಳಲು ಅರಿವೆ ಕಾಣದಂತಹ ಪರಿಸ್ಥಿತಿಯಲ್ಲಿ ತೊಳಲಿ ಬಳಲಿದ್ದು ಯಾರು ಕಾಣರು?''

''ಚಿಂದಿ ಬಟ್ಟೆಯ ಮಕ್ಕಳು ಒಪ್ಪೊತ್ತು ಗಂಜಿಯಲ್ಲಿ ಉಸಿರಾಡುತ್ತವೆ ಚಿನ್ನದಂತಹ ಭೂಮಿಯಲ್ಲಿ ಜನ್ಮಯೆತ್ತಿ ಹೊಟ್ಟೆಗಿಲ್ಲದೆ ಸಾಯುವ ಪರಿಸ್ಥಿತಿ!''

''ಈಗ ನಾವು ಸ್ವಲ್ಪ ತಗ್ಗಿದರೂ ಸಾಕು. ಬ್ರಿಟಿಷ್ ಸರಕಾರ ಜುಟ್ಟು ಹಿಡಿಯುತ್ತದೆ. ಕೊನೆಯ ನೆತ್ತರಿನ ಒಂದು ಹನಿ ಇರುವವರೆಗೂ ಹೋರಾಟ ಹೋರಾಟವೇ?''

''ಸ್ತ್ರೀ ಜನರ ಭಂಗ ಬವಣೆಗಳು ದೇವರಿಗೇ ಗೊತ್ತು. ಗುಲಾಮರಾಗಿ, ದಾಸಿಯರಾಗಿ, ತೊತ್ತಾಗಿ, ಸೊತ್ತಾಗಿ ವೈಯುಕ್ತಿಕ ಸ್ವಾತಂತ್ರ್ಯ-ಆರ್ಥಿಕ ಸ್ವಾತಂತ್ರ್ಯಗಳಿಂದ ವಂಚಿತರಾಗಿ ಪಶುಜೀವನ ನಡೆಸುವ ಕೋಟಿ ಕೋಟಿ ಸ್ತ್ರೀಜನ ದಯಾದಾರಿದ್ರ್ಯದಿಂದ ಮಣ್ಣಿನೊಂದಿಗೆ ಮಣ್ಣಾಗಿ ಸೇರುವ ಹೀನಸ್ಥಿತಿ ಇನ್ನಾದರೂ ಕಳೆದರೆ ಪುಣ್ಯ.''

''ಅಯ್ಯೋ, ಅಷ್ಟು ಮಾತ್ರ ಅರಿತವರು ಎಷ್ಟು ಮಂದಿ ಇದ್ದಾರು? ಸ್ತ್ರೀಜನ್ಮ ಎತ್ತುವುದೇ ಜೀವನದುರಂತಕ್ಕಾಗಿ ಎಂದು ಮನಃಪೂರ್ತಿ ನಂಬಿದವರೇ ಹೆಚ್ಚು. ಶೇಕಡಾ

ತೊಂಭತ್ತು ಮಂದಿ ನಂಬಿರುವುದೇ ಹೀಗೆ. ಅಂದಮೇಲೆ ಆ ಬ್ರಹ್ಮದೇವನೇ ಬರಬೇಕು ಹೆಂಗಳೆಯರ ಉದ್ಧಾರಕ್ಕೆ.''

ಹೀಗೆ ಹತ್ತೂ ಹಲವು ಪ್ರಕಾರಗಳಲ್ಲಿ ಸಾಗುತ್ತದೆ ಮಾತುಕತೆ. ಅವು ಗಾಳಿಯಲೆಗಳಲ್ಲಿ ಏರಿ ಗಗನಭೇರಿಯಾಗುವುದು ಮಾತ್ರ ಸತ್ಯ....

ಗಾರಂಗ್ ಗಿರ್ ಹಚ್ಚ ಹಸಿರು ಹೊತ್ತ ಸುಂದರವಾದ ಬೆಟ್ಟ.

ನಿಮ್ನೋನ್ನತ ಗಿರಿಶ್ರೇಣಿಯ ಸುಂದರ ವಿನ್ಯಾಸ ಬಲೂ ಮನಮೋಹಕ...ಒಮ್ಮೆ ಅತ್ತ ದೃಷ್ಟಿ ಹೊರಳಿಸಿದರೆ ಹಿಂತೆಗೆಯಲಾರದ ನಿಸರ್ಗ ಸೌಂದರ್ಯದಾ ರಾಶಿ....

ಮನೋನ್ಮಣಿ ಕಿಟಕಿಯಲ್ಲಿ ಮೊಗವಿಟ್ಟು ಎರಡು ಕಂಬಿಗಳನ್ನು ಎರಡೂ ಕೈಗಳಿಂದ ಹಿಡಿದುಕೊಂಡು ನೋಡುತ್ತಲೇ ಇದ್ದಾಳೆ. ದಿನವೂ ದೃಷ್ಟಿಗೆ ಬೀಳುವ ಸೌಂದರ್ಯವಾದರೂ ಎಂತಹ ಆಕರ್ಷಣೆ? ಎತ್ತರದ ಗಿರಿ ನೆತ್ತಿಯಮೇಲೆ ಮುಗಿಲನ್ನು ನಿತ್ಯ ಮುದ್ದಿಸುವ ಗಾಥಿಕ್ ಶೈಲಿಯ ಸುಂದರ ಚರ್ಚ್ ಯಾವ ಮಹನೀಯ ಕಟ್ಟಿದರೋ, ಸಾರಿಗೆ ಸೌಕರ್ಯವಿಲ್ಲದ ಕಾಲದಲ್ಲಿ!

ಹಿರಿಯರೊಂದಿಗೆ ವೈಷ್ಣೋದೇವಿಯ ಮತ್ತು ದುರ್ಗಾದೇವಿಯ ಬೃಹದ್ ದೇವಾಲಯಗಳಿಗೆ ಹೋಗಿ ಬಂದುದುಂಟು. ಇತರ ಹಿರಿಯ ದೇವಾಲಯಗಳಲ್ಲಿ ಪೂಜಾ ಕೈಂಕರ್ಯ ಮಾಡಿಸಿದ್ದುಂಟು. ಎಲ್ಲವೂ ಸತ್ಯ ಸುಂದರ; ಭವ್ಯ ಬಂಧುರ.

ಅವುಗಳಿಗೂ ಚರ್ಚಿಗೂ ಅಂತರವುಂಟು.

ಚರ್ಚಿಗಾಗಲೇ ಎರಡು ಬಾರಿ ಹೋಗಿ ಬಂದಿದ್ದಾಗಿದೆ. ಅಂದು ಆ ಬೆಳಗಿನ ಪಯಣ. ಬೆಟ್ಟವನ್ನು ಏರುವ ಉತ್ಸಾಹ; ಎಳೆಯರ ಪರಸ್ಪರ ಪೈಪೋಟಿ; ಕಿಲಕಿಲ ನಗುವಿನ ಲಹರಿ; ಬಾಲ ಕೋಮಲ ಬಾಲ ಚಮೂಗಳ ಒಡನಾಟ; ತುಂಟತನ-ಕಿರುಹಾಸ್ಯ....ಹಾ, ಎಂತಹ ರೋಮ ಹರ್ಷಕ....!

ಅರವತ್ತರ ಹರೆಯದ ಮದರ್ ಸಿಲ್ವಿಯಾ ಸ್ವಲ್ಪವೂ ಕುಗ್ಗದೆ ಬೆಟ್ಟ ಹತ್ತಿದ ರೀತಿ. ಮದರ್‌ಗಳು, ಫಾದರ್‌ಗಳು, ಬ್ರದರ್‌ಗಳು, ಸಿಸ್ಟರ್‌ಗಳು ಕೂಡಿದ ಆ ಕೂಟ ಸ್ವಚ್ಛ ಮನೋಹರ. ಸರಸ ಸಂಭಾಷಣೆ. ಆತ್ಮೀಯ ಗೆಳೆತನ. ಒಮ್ಮನ-ಒಮ್ಮತ-ಒಗ್ಗಟ್ಟು....

ಅಪ್ರಬುದ್ಧ ಬುದ್ಧಿ; ಅಪ್ರಬುದ್ಧ ಮನ ಅಳೆಯುವಷ್ಟು ಳಿಯಿತು:

ಆ ಬೆಟ್ಟದ ಮೇಲೆ ಮನಸ್ವೀ ಮುಟ್ಟಬಹುದಾಗಿದ್ದ ಮುಗಿಲು ಮಂಜು; ಘನೀಕರಿಸಿದ ನೀರ್ಗಲ್ಲುಗಳು; ಮುಗ್ಧಮತಿಗೆ-ಮುಗ್ಧಭಾವಕ್ಕೆ ಕಲ್ಲುಸಕ್ಕರೆಗಿಂತ ಸವಿಯಾದ ಸವಿ.

ಏಸು ಸ್ವಾಮಿ ಶಿಲುಬೆಗೇರಿದ ದಾರುಣ ದೃಶ್ಯ...ಎತ್ತರದ ವೇದಿಕೆಯ ಮೇಲೆ

ಬೃಹದ್ ಮೂರ್ತಿ....ಅದೇ ತಾನೇ ಸಿಲುಬೆಗೇರಿದೆಯೋ ಎಂಬಂತಹ ಜೀವಂತ ಕಳೆ....ಚೆಲ್ಲಿದ ನೆತ್ತರಿನ ಕೆಂಪು....ಜೋಲುಮುಖ...ಎಲ್ಲವೂ ಸಂಕಟಕಾರಕ ದೃಶ್ಯಮಾನ.

ಇನ್ನೊಂದೆಡೆ ಮೇರಿ ಹಸುಳೆ ಏಸುವನ್ನು ಎತ್ತಿಕೊಂಡ ಅತ್ಯಂತ ಸೌದರ್ಯಮಯಿ ಮೂರ್ತಿ. ಮನಸೆಳೆಯುವಂತಹ ಕರುಣಾಮಯಿ... ಪ್ರೇಮಮಯಿ. ಅವಳಿಗೆ ಎಂತಹ ಘೋರ ಸಂಕಟ ಒದಗಿ ಬಂತು?

ಈ ಪ್ರಪಂಚ ಇಷ್ಟೆ....?

ಬೆಟ್ಟದ ಬಲ ಭಾಗದಲ್ಲಿ ತೇಲುತಿದ್ದ ಬೃಹದ್ ಮುಗಿಲೊಂದು ಮುಂಬರಿದು ಬಂದು ಚರ್ಚನ್ನು ಮುಸುಗಿ ಮುದ್ದಿಡುವಂತೆ ಆಕ್ರಮಿಸಿತು. ಬೆಟ್ಟದ ಮೇಲಿನ ಮುಗಿಲಿನ ಮುಗುಟ ಸರ್ವಸುಂದರವಾಗಿದ್ದರೂ ಚರ್ಚನ್ನು ನುಂಗಿದ್ದು ವಿಷಾದನೀಯ.

ಮನೋನ್ಮಣಿ ಅಲ್ಲಿಂದ ಒಳ ಬಂದಳು. ಇಂದು ಕಾನ್ವೆಂಟಿಗೆ ಹಿಂದಿರುಗ ಲಿರುವ ಮಕ್ಕಳಿಗಾಗಿ ಕೊಠಡಿಗಳ ಸುವ್ಯವಸ್ಥೆಯನ್ನು ಒಮ್ಮೆ ಪರಿಶೀಲಿಸಿ ಬಂದ ಮದರ್ ಬೆಟ್ಟಿ,

''ಇನ್ನು ನಿನ್ನ ಬೇಸರ ಹರಿಯುತ್ತೆ ಅಲ್ಲವೇ?'' ಎಂದಳು ಸರಸದ ಭಂಗಿಯಲ್ಲಿ.

''ಹೌದು ಮದರ್.''

ಮುಗುಳು ನಕ್ಕಳು ಮನೋನ್ಮಣಿ. ಎರಡೂ ಕೆನ್ನೆಗಳಲ್ಲಿ ಗುಳಿಗಳು ಮೂಡಿದುವು.

ಸಾಲಾದ ಮಂಚಗಳು ಎರಡೂ ಕಡೆಗೆ. ಒಟ್ಟು ಹದಿನಾರು ಮಂಚಗಳುಳ್ಳ ಉದ್ದನೆಯ ಕೊಠಡಿ. ಕಾರಿಡಾರಿನ ಮುಗ್ಗುಲಿಗೇ ಇರುವುದರಿಂದ ಅಲ್ಲಿ ಓಡಾಡುವವರ ಹೆಜ್ಜೆಗಳ ಪಟತ್ಕಾರ ಸದಾ ಕಿವಿಗಳ ಮೇಲೆ ಬೀಳುತ್ತಿರುತ್ತದೆ. ಪ್ರಾಂಗಣಕ್ಕೆದುರಾಗಿ ಸಾಲು ಕಿಟಕಿಗಳು. ಒಳಗಿಂದಲೇ ಉದ್ಯಾನದ ಸೌಂದರ್ಯವನ್ನು ಸವಿಯಬಹುದು ಕೂಡ. ಜೊತೆಗಾತಿಯರೆಲ್ಲಾ ರಜೆಯಮೇಲೆ ಹೋದಾಗಿನಿಂದ ಮದರ್‌ಗಳ ಕೊಠಡಿಯಲ್ಲೇ ವಾಸ ಮಾಡಿದ್ದರೂ ಗೆಳತಿಯರಿಗಾಗಿ ಹಾತೊರೆಯುತಿತ್ತು, ಎಳೆಯ ಜೀವ. ಸಂಜೆಯೊಳಗಾಗಿ ಹುಡುಗಿಯರು ಸಾಲ್ಗಟ್ಟಿ ಆಗಮಿಸಿದರು; ಎಳೆದುಟಿಗಳಲ್ಲಿ ಚೆಲುವಿನ ಹೂನಗೆಯನ್ನು ಚೆಲುತ್ತ ಬರುತ್ತಿದ್ದರೆ ನೋಡುವುದೇ ಒಂದು ಆನಂದ. ಮನೋನ್ಮಣಿ ವರಾಂಡದಲ್ಲಿ ನಿಂತು ಸುಹಾಸಕ್ಕೆ ಪ್ರತಿಹಾಸ ಸೂಸಿ ಸ್ವಾಗತಿಸಿದಳು, ಪುಟ್ಟ ಹೃದಯದ ತುಂಬಾ ಹರ್ಷದ ಹೊನಲನ್ನು ಸೂಸಿ.

* * *

ಬಿಲ್ಲಿ ಮಕ್ಕಳಿಗೊಂದು ಆಟದ ಸಂಗಾತಿ. ಕಡಿವಾಣವಿಲ್ಲದಿದ್ದರೂ ಅದರಿಂದ ಯಾರಿಗೂ ತೊಂದರೆಯಿಲ್ಲ. ಪ್ರಾಯದ ಹುರುಪಿಲ್ಲದಿದ್ದರೂ ವೃದ್ಧಾಪ್ಯದ ಸೋಲಿಲ್ಲ. ಹೊಟ್ಟೆ ತುಂಬಾ ಹುಲ್ಲು ಮೇದು ಅಡಿಗೆ ಮನೆಯ ಉಳುಕಲು ಉಂಡು ಮೈತುಂಬಿಕೊಂಡಿದ್ದು ನೋಡುವವರ ಕಣ್ಣಿಗೆ ಹಬ್ಬ. ತನ್ನ ಸಹಪಾಟಿಗಳಿಲ್ಲವೆಂಬ ಕೊರತೆ ಅಥವಾ ಬೇಸರವಿಲ್ಲ ಅದಕ್ಕೆ. ಬೆಳಗಾಗೆದ್ದು ಹೊರಟರೆ ಮಧ್ಯಾಹ್ನದ ಹೊತ್ತಿಗೆ ಒಮ್ಮೊಮ್ಮೆ ಹಿಮ್ಮರಳುವುದುಂಟು. ಕೆಲಮೊಮ್ಮೆ ಸಂಜೆಗೇ ಅದರ ಹಿಂಪಯಣ. ಮಧ್ಯೆ ಮಧ್ಯೆ ಮರಗಳ ನೆರಳಲ್ಲಿ ಮೆಲಕು ಹಾಕುತ್ತ ವಿಶ್ರಮಿಸಿಕೊಳ್ಳುವ, ಕೆನಕೆನೆದು ಹರ್ಷಸೂಸುವ; ಹಿಂಗಾಲುಗಳನ್ನೆತ್ತಿ ಜಾಡಿಸಿ ನಾಟ್ಯ ಭಂಗಿಯಲ್ಲಿ ಜಿಗಿಯುವ ಅದರ ಆನಂದ ಪೂತ ಜೀವನ ಮಕ್ಕಳಿಗೆ ಮಹದಾನಂದ. ಹತ್ತಿರ ಹೋಗಿ ಮುಟ್ಟಿ ಮೈ ಮಾಲೀಷು ಮಾಡುವ ಧೈರ್ಯವಿಲ್ಲದಿದ್ದರೂ ದೂರದಿಂದಲೇ ನೋಡಿ ನಲಿಯುವ ಹುಮ್ಮಸ್ಸು-ಹುರುಪು. ದೂರದಿಂದಲೇ "ಬಿಲ್ಲಿ ಬಿಲ್ಲಿ" ಎಂದು ಕರೆದಾಗ ಅದು ಬಾಲ ಎತ್ತಿ ಜಗಿದಾಡುತ್ತ ಮಕ್ಕಳ ಕಡೆಗೆ ನುಗ್ಗಿ ಬಂದರೆ ಮಕ್ಕಳೆಲ್ಲಾ ದಿಕ್ಕು ದಿಶೆಗೆ ಪರಾರಿ.

ಅದರಿಂದಾಗಿ ಅದರ ಹೆಸರು ಹಿಡಿದು ಕರೆಯುವುದೆಂದರೆ ಕಾಂಪೌಂಡ್ ಗೋಡೆಯ ಹಿಂದಿನಿಂದ ಮಾತ್ರ. ಗೋಡೆಯ ಮೇಲೆ ಅದು ಕತ್ತು ಚಾಚಿದರೆ ಹಣ್ಣು-ಬ್ರೆಡ್ಡುಗಳನ್ನು ಕೊಟ್ಟು ಹಣೆಯನ್ನು ತಟ್ಟಿ ಮುದ್ದಿಸುವುದು ಹಿತ. ಆದರೂ ಕೈ ಕಚ್ಚುತ್ತೇನೊ ಎಂಬ ಭಯ ಇದ್ದದ್ದೇ. ಆದರೂ ಅದರ ಮೇಲೆ ಎಲ್ಲಿಲ್ಲದ ಪ್ರೀತಿ-ವ್ಯಾಮೋಹ; ದೂರದಿಂದ ನೋಡುವುದರಲ್ಲೂ ಸಂತೃಪ್ತಿ.

ಇಂದು ಹರಿಕಿಷನ್ ಆಗಮಿಸಿದಾಗ ತುಂತುರು ತುಂತುರು ಮಳೆ.

ಅವನ ಕೂದಲು ಗಡ್ಡ ಮೀಸೆಯ ಮೇಲೆಲ್ಲಾ ತುಂತುರು ತುಂತುರು ಹನಿ.

ಆ ಅಪೂರ್ವ ಚಿತ್ತಾರ ಮಕ್ಕಳ ಮೊಗದಲ್ಲಿ ಹೂನಗೆಯ ಮುಮ್ಮಳೆ ಕರೆಸಿತು.

"ಭಯ್ಯಾ ನೀನಿಂದು ನಿಜಕ್ಕೂ ಬಲು ಚೆಂದ! ಕರಿಯ ಕೂದಲು ಮೇಲೆ ಮುತ್ತಿನ ಹನಿ! ಒಮ್ಮೆ ಕನ್ನಡಿಯಲ್ಲಿ ನೋಡಿಕೊ!"

ಅವನು ನಕ್ಕುಬಿಟ್ಟ.

"ಖಂಡಿತಾ! ಮನೋ ಹೇಳುವುದು ಸುಳ್ಳಲ್ಲ!"

"ಅಚ್ಛಾ!"

ವರಾಂಡದಲ್ಲಿದ್ದ ಮಕ್ಕಳ ಗುಂಪೆಲ್ಲಾ ಹಣಿಕಿ ನೋಡಿ ಪುನ ಹೂನಗೆ ಹರಿಸಿತು.

ಅವನು ಕರವಸ್ತ್ರದಿಂದ ಮುಖ ತಲೆಯನ್ನು ಒರಿಸಿಕೊಂಡು ಕೇಳಿದ,

''ಮದರ್ ಸಿಲ್ವಿಯಾ ಇದ್ದಾರೆಯೇ?''

''ಇದ್ದಾರೆ.''

ಅವನು ಕಾರಿಡಾರನ್ನು ದಾಟಿ ಅವಳ ಕೊಠಡಿಯತ್ತ ಹೆಜ್ಜೆ ಹಾಕಿದ. ಉದ್ಯಾನದಂಚನ್ನು ದಾಟಿ ನಾಲ್ಕಾರು ಮೆಟ್ಟಿಲೇರಿದರೆ ಜಗಲಿಯ ಮೂಲೆಯಲ್ಲಿ ಅವಳ ಕೊಠಡಿ. ಜಗಲಿಯ ಅಡ್ಡಗೋಡೆಗೆ ಕಬ್ಬಿಣದ ಬೇಲಿ. ಕಟ್ಟಡ ಕಟ್ಟಿದ ರೀತಿ ಸುಭದ್ರ ಸುಂದರ.

ಬಾಗಿಲ ಬಳಿ ಕಟ ಕಟ ಸದ್ದು ಮಾಡಿದ.

''Yes please.''

ಹರಿಕಿಷನ್ ಒಳಬಂದ. ನೋಡುತಿದ್ದ ಕಾಗದ ಪತ್ರವನ್ನು ಮುಗಿಸಿ ಸಹಿ ಹಾಕಿದ ನಂತರ ''ಏನಪ್ಪಾ? ಏನಾಯಿತು ನಿಮ್ಮ ವ್ಯವಹಾರ ಚಿಂತನೆ ?''

''ನಾನು ನಾಲ್ಕಾರು ಮಂದಿ ವಕೀಲರನ್ನು ನೋಡಿ, ಈ ವಿದ್ಯಮಾನವನ್ನೆಲ್ಲಾ ಆದ್ಯಂತ ವಿವರಿಸಿದೆ. ಅನೇಕರು ಕಾಸಿಲ್ಲದೆ ಹೊಣೆ ಹೊರಲು ಮುಂದಾಗಲಿಲ್ಲ. ಒಬ್ಬರು ಮಾತ್ರ ಒಪ್ಪಿಕೊಂಡಿದ್ದಾರೆ. ಸ್ಟಾಂಪು ಮತ್ತು ಇತರೆ ಖರ್ಚಿಗಾಗಿ ಸಧ್ಯ ಒಂದು ಸಾವಿರ ರೂಪಾಯಿ ಕೊಡು. ಅನಂತರ ಕೇಸು ಮುಗಿಯುವವರೆಗೆ ನೀನು ಏನೂ ಕೊಡಲೇಬೇಡ. ಕೇಸು ಗೆದ್ದು ಮೊದಲ ಬೆಳೆ ಕೈಗೆ ಬಂದಮೇಲೆ ಮೂರು ಸಾವಿರ ರೂಪಾಯಿ ಕೊಡಲೇಬೇಕು. ಅಂದರೆ ನಿಮ್ಮ ಸ್ಥಿತಿಗತಿ ನೋಡಿಕೊಂಡು ತೀರ್ಮಾನ ಮಾಡಬಹುದು ಎಂದು ಹೇಳಿದ್ದಾರೆ. ಅದರ ಪ್ರಕಾರ ಕರಾರು ಮಾಡಿಕೊಂಡು ಒಂದು ಸಾವಿರ ರೂಪಾಯಿ ಕೊಟ್ಟು ಬಂದಿರುವೆ. ಇದೋ ಈ ಕರಾರು ನೋಡಿ.''

ಮದರ್‌ಸಿಲ್ವಿಯಾ ಆ ಕರಾರು ಪತ್ರವನ್ನು ನೋಡಿ ತಲೆದೂಗಿ ''ಆಗಲಿ, ಹುಡುಗಿ ಅದೃಷ್ಟವಿದ್ದಂತೆ ಆಗುತ್ತೆ. ಅವಳಿಗೂ ಈ ಕರಾರು ಪತ್ರ ತೋರಿಸು. ಅವಳೂ ನೋಡಿಕೊಳ್ಳಲಿ.''

''ಪೋಲೀಸಿಗೆ ನೆರೆಹೊರೆಯವರು ಕೊಟ್ಟ ದೂರಿನ ಮೇಲೆ ಗೋರಿಗಳನ್ನು ಕಿತ್ತೆಸೆದ ಪ್ರಸಂಗದಲ್ಲಿ ಅವನನ್ನು ಅರೆಸ್ಟ್ ಮಾಡಿ ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಅದು ಒಂದು ದೊಡ್ಡ ಅಪರಾಧವೇ. ಅದಕ್ಕೂ ಸಹ ಗಂಭಿರ ಶಿಕ್ಷೆ ಆಗಲೇ ಬೇಕು.''

''ರಾಜಕೀಯ ಪರಿಸ್ಥಿತಿಯಿಂದ ಇವೆಲ್ಲಾ ಅಗಣ್ಯವಾದರೂ ಆಗಬಹುದು. ಆದರೂ, ಕಾದು ನೋಡೋಣ''

''ದೇವರಿದ್ದಾನೆ''

* * *

ಢಣ್. ಢಣ್. ಢಣ್. ಢಣ್. ಢಣ್......!

ಚರ್ಚಿನ ಘಂಟಾರವ ಸ್ವರ್ಗದಿಂದಿಳಿತಂದ ದಯಾರಸನೆಯಂತೆ ಗಾರಂಗ್ ಾವ್ ಪ್ರದೇಶವನ್ನು ದಾಟಿ ಅಲೆಅಲೆಯಾಗಿ ಮನಃತರಂಗಗಳನ್ನು ಮುಟ್ಟಿದಾಗ ಆದ ಅನುಭವ ಅನನ್ಯ ಮಧುರ.

ಶಾಂತಿ ಮತ್ತು ಮನೋ ಆ ಚರ್ಚಿನತ್ತ ನಿಟ್ಟಿಸಿದರು. ಮಂಜಿನ ಮುಗುಟ ಹೊತ್ತ ಬೆಟ್ಟದ ಮೇಲೆ ಚರ್ಚ್ ಅದೃಶ್ಯ....ಆ ಬೆಟ್ಟ, ಆ ಮುಗಿಲು, ಆ ಚರ್ಚ್; ಒಂದಕ್ಕೊಂದು ಹೊಂದಿಕೊಂಡು ಬಂದ ಸಾಮರಸ್ಯ ಜೀವನ ಇಂದು ನಿನ್ನೆಯದಲ್ಲ. ಮೂರು ಶತಮಾನಗಳ ಭವ್ಯ ಇತಿಹಾಸವುಳ್ಳ ಚರ್ಚ್ ಮಳೆಗಾಳಿಗಳನ್ನು ಎದುರಿಸಿ ದೃಢವಾಗಿ ನಿಂತು ಸಾರುತ್ತಿರುವ ಶಾಂತಿ ಸಂದೇಶ ಗಂಟೆ ಬಾರಿಸುವುದರ ಮೂಲಕ ಕೃಸ್ಮನಗಳನ್ನು ಮುಟ್ಟುತ್ತದೆ. ಅದು ಸರ್ವ ಹಿತಕ್ಕಾಗಿ....ಸೃಜನ ಶೀಲತೆಗಾಗಿ......

ಇಂದು ಶಾಲೆಗೆ ಬಿಡುವು. ಪಕ್ಕದ ಖಾಲಿ ನಿವೇಶನದಲ್ಲಿ ಬಾಲಕರ ಶಾಲೆಗಾಗಿ ಟ್ಟಡ ಏಳುತಿತ್ತು. ಪರಿಸರದಲ್ಲೆಲ್ಲಾ ಕಲ್ಲು, ಮಣ್ಣು, ಮರಳು, ಇಟ್ಟಿಗೆಗಳ ರಾಶಿರಾಶಿ. ಲಸಗಾರರು ಕೆಲಸ ಮಾಡುತ್ತಿದ್ದಾರೆ. ಕಟ್ಟಡ ದಿನೇ ದಿನೇ ಏಳುತ್ತಿದೆ. ಹತ್ತೂ ಜನಗಳ ಸಹಾಯದಿಂದ ಮತ್ತು ಮದರ್ ಸಿಲ್ವಿಯಾ ತಾಯ್ನಾಡಾದ ಫ್ರೆಂಚ್ ದೇಶದ ಬಂಧುಗಳ ಕೊಡುಗೈಯಿಂದ ಕಟ್ಟಡದ ಪೂರೈಕೆ ಮತ್ತು ಆರೈಕೆ. ಕಟ್ಟಡ ದಿನದಿನಕ್ಕೂ ಏರುತಿದ್ದಷ್ಟು ಸಂತಸ ಮದರ್ ಸಿಲ್ವಿಯಾಳಿಗೆ. ಆಸೆ ಆಕಾಶದಷ್ಟು; ಸಾಧನೆ ಸಾಸುವೆಯಷ್ಟು. ಅದರಲ್ಲೂ ಹಿಡಿದ ಕೆಲಸ ಕೈಗೂಡಿದುದು ಅವರ್ಣನೀಯ ಆನಂದ. ನೂರಾರು ಮಕ್ಕಳು ಕಲಿಯಲಿದ್ದಾರೆಂದರೆ ಎಂತಹ ಜೀವಾಳವೂ....ಆ ಕಲಕಲರವ, ಆ ಕಿಲುಕುಲು ನಗೆ, ಗದ್ದಲ-ಗಲಾಟೆ ಪ್ರತಿ ಹುಲ್ಲುಕಣೆಗೂ ಜೀವರಸ ತುಂಬುವ ವೈಖರಿ.

ಆ ದಿನಗಳು ಸ್ಮರಣೆಯ ಹಾದಿಯಲ್ಲಿ ಸುಳಿದರೆ ಮೈಮನ ಪುಳಕಗೊಂಡು ಜೀವನ ಸಾರ್ಥಕತೆಯ ಸಂಕಲ್ಪಭಾವ ಮನದಲ್ಲಿ. ಬಡದೇಶದ ದಲಿತ ಮಕ್ಕಳ ಸೇವೆಯು ಸಲ್ಲಿಕೆ ಕಿಂಚಿತ್ತಾದರೂ ಸರಿಯೆ, ಅದೊಂದು ಸಣ್ಣ ಸಮಾಧಾನ ಮನಸ್ಸಿಗೆ.

ಇಂದು ರವಿವಾರ. ಶಾಲೆಗೆ ಬಿಡುವು. ಹಿತಕರವಾದ ವಾತಾವರಣ. ಎಲ್ಲಾ ಬೋರ್ಡಿಂಗ್ ಮಕ್ಕಳೊಂದಿಗೆ ಚರ್ಚಿಗೆ ಪಯಣಿಸುವ ಯೋಜನೆ. ಪ್ರತಿವಾರವೂ ಹೋಗಿ ಬರುತ್ತಿದ್ದುದು ಗಾರಂಗಾವ್-ನಲ್ಲಿನ ಸೇಂಟ್ ಪ್ಯಾಟ್ರಿಕ್ ಚರ್ಚಿಗೆ. ಒಂದು ಶತಮಾನದಷ್ಟು ಹಳೆಯದಾದರೂ ನೂತನ ಶೈಲಿಯಲ್ಲಿ ನಿರ್ಮಿತ. ಬೆಟ್ಟದ ಮೇಲಿನ ಗಾಥಿಕ್ ಶೈಲಿಯ ಚರ್ಚ್-ನ ಇತಿಹಾಸ ತೀರಾ ಕಲ್ಪನೆ. ನಿರ್ಮಾಣ-ನಿರ್ಮಾತೃಗಳು

ಊಹೆಗೆ ನಿಲುಕದ ವಸ್ತುಗಳು; ಕಾಲಮಾನವೂ ಅನಿರ್ಣೀತ. ಲೋಕದ ಇತರೇ ಗಾಥಿಕ್ ಶೈಲಿಯ ಚರ್ಚುಗಳಂತೆಯೇ ಸುವಿಶಾಲ ಮತ್ತು ಸುಭದ್ರ.

ಗಾರಂಗಾವ್ ಪ್ರದೇಶದವರೆಗೆ ವ್ಯಾನು ಜೀಪುಗಳಲ್ಲಿ ಪಯಣ. ಆನಂತರ ಬೆಟ್ಟ ಏರುವಿಕೆ ಕಾಲ್ನಡಿಗೆಯಲ್ಲಿ. ಬೆಟ್ಟ ಹೆಚ್ಚು ಕಡಿದಾಗಿಲ್ಲದಿದ್ದರೂ ಪಯಣ ದುರ್ಬಲರಿಗೆ ಆಯಾಸಕರವೇ.

ಒಂದು ವ್ಯಾನು ಒಂದು ಜೀಪು ಹೊರಟದ್ದು ಬೆಳಗಿನ ತಣ್ಣನೆಯ ವಾತಾವರಣದಲ್ಲಿ. ಬೋರ್ಡಿಂಗ್ ಮಕ್ಕಳಿಗೆಲ್ಲಾ ಬೆಟ್ಟವೇರುವ ಉತ್ಸಾಹ ಕೊನೆಗಾಣದ ಉತ್ಸಾಹ. ಯಾವು ಯಾವುದೋ ಹಾಡುಗಳು ಕೊರಳು ತುಂಬಿ ಹರಿಯುತ್ತಿದ್ದರೆ ತಂಗಾಳಿಯ ಶೃತಿ, ಎಲೆಗಳ ಮರ್ಮರ ಶೃತಿ, ಪಕ್ಷಿ ಗೊರಳ ಚಿಲಿಪಿಲಿ ಶೃತಿ ಸಾನುರಾಗದಿಂದ ಮಿಡಿದು ಒತ್ತಾಸೆ ನೀಡುತ್ತಿದ್ದುವು. ಪ್ರತಿ ಹಾಡಿಗೂ ಹಿರಿಯರ ಚಪ್ಪಾಳೆಯ ಪ್ರೋತ್ಸಾಹ, ಆನಂದ ಲಹರಿಯ ಉತ್ಸಾಹ ಸಮಯಸ್ಫೂರ್ತಿಗೆ ಸಲ್ಲುವ ಮಹದೌಷಧ.

೧೨

ಫಾದರ್ ಮೈಕೇಲ್ ಬಂದೇ ಬರುತ್ತಾರೆಂಬ ಸುದ್ದಿ.

ರಾಜಕೀಯ ಆಂದೋಳನದ ಫಲವಾಗಿ ಅಂಚೆ ಇಲಾಖೆಯ ಕಾರ್ಯಗಳು ಸ್ಥಗಿತ. ಕಾಗದ ಪತ್ರಗಳು ಬಂದರೆ ಉಂಟು;ಇಲ್ಲದಿದ್ದರೆ ಇಲ್ಲ. ಫಾದರ್ ಮೈಕೇಲ್ ಅಂದೇ ಬರುವುದಾಗಿ ಬರೆದಿದ್ದರೂ ಬರುವ ದಿನವನ್ನು ಮುಂದಿನ ಪತ್ರದಲ್ಲಿ ಖಚಿತವಾಗಿ ತಿಳಿಸುವೆ ಎಂದು ಬರೆದಿದ್ದ. ಆ ಮುಂದಿನ ಪತ್ರ ಮಾತ್ರ ಬರಲಿಲ್ಲ. ಅದಕ್ಕಾಗಿ ಅಂಚೆ ಇಲಾಖೆಯಲ್ಲಿಯೂ ತಪಾಸಣೆ ನಡೆಸಿದ್ದಾಯ್ತು. ಪತ್ರ ನಾಪತ್ತೆಯಾದರೂ ಇಂದು ನಾಳೆ ಬಂದೇ ಬರುತ್ತಾರೆಂಬ ನಂಬಿಕೆ. ಗಾರಂಗಾವ್-ನಲ್ಲಿ ಜೀಪ್ ಇಟ್ಟುಕೊಂಡು ಯಾರಾದರೂ ಕಾದಿರುತ್ತಿದ್ದರು ಕಾನ್ವೆಂಟಿನ ಪರವಾಗಿ.

ಕಟ್ಟಡ ಕಟ್ಟಾಣಿಕೆ ಪೂರೈಕೆಯ ಹಂತದಲ್ಲಿತ್ತು. ಈ ಸಾಲಿನಲ್ಲೇ ಶಾಲೆಯ ಆರಂಭ. ಬೇಕು ಬೇಕಾದ ಪರಿಕರಣಗಳೂ ತಯಾರಾಗುತ್ತಿವೆ. ಶಿಕ್ಷಕ-ಶಿಕ್ಷಕಿಯರೂ ಸಾಲುಗಟ್ಟಿ ನಿಂತಿದ್ದಾರೆ. ಬೇಸಿಗೆ ರಜೆ ಕಳೆದನಂತರ ಶಾಲೆ ಆರಂಭ.

ಫೈನಲ್ ಪರೀಕ್ಷೆ ಮುಗಿದು ಮಕ್ಕಳೆಲ್ಲಾ ಊರಿಗೆ ಪಯಣಿಸಿದ್ದುದರಿಂದ ಶಾಲೆಯ ಆವರಣವೆಲ್ಲಾ ಬಣಬಣ. ಈಗ ಮನೋನ್ಮಣಿಯ ಸಮಯ ಕಳೆಯುವುದು

ಮದರ್‌ಗಳ ಕಾರ್ಯಯೋಜನೆಯಲ್ಲಿ ಮತ್ತು ಅಡುಗೆ ಮನೆಯ ಕಾರ್ಯ ನಿರ್ವಹಣೆಯಲ್ಲಿ.

ಕಾವಲುಗಾರ ಒಳಗಡೆ ಬಂದು ಚೀಟಿಯನ್ನು ಮದರ್-ಗೆ ನೀಡಿದರೆ ಆ ಗುರುತಿನ ಚೀಟಿ ಫಾದರ್ ಮೈಕೆಲ್-ನದೇ.

ಅರೆ! ಏನಾಶ್ಚರ್ಯ! ಜೀಪ್ ಏನಾಯಿತು? ಕರೆತರಲು ಹೋದವರು ಎಲ್ಲಿ?

ಅತ್ಯಾಶ್ಚರ್ಯ ವಿಸ್ಮಿತಳಾಗಿ ಹೊರ ಬಾಗಿಲಿಗೆ ಧಾವಿಸಿದಳು ಸಿಲ್ವಿಯಾ. ಫಾದರ್ ಮೈಕೇಲ್ ಬಂದುದು ಕಾಲ್ನಡಿಗೆಯಲ್ಲಿ.

''ಗುಡ್ ಮಾರ್ನಿಂಗ್ ಫಾದರ್!''

''ಗುಡ್ ಮಾರ್ನಿಂಗ್ ಮದರ್!''

ಇಬ್ಬರೂ ಅತ್ಯಂತ ಹಾರ್ದಿಕವಾಗಿ ಪರಸ್ಪರ ಹಸ್ತಲಾಘವ ನೀಡಿದರು.

''ಫಾದರ್! ನಿಮಗಾಗಿ ಗಾರಂಗಾವ್-ಗೆ ಜೀಪು ಹೋಗಿದೆ. ನೀವು ನಡೆದು ಬಂದಿದ್ದೀರಿ.....ನಿಮ್ಮನ್ನು ಕರೆತಂದವರಾರು ? ಇದರರ್ಥವೇನು?''

''ಯಾರಾದರೂ ಕಾದಿರಬಹುದೆಂದು ನನಗೂ ಅನಿಸಿತ್ತು. ಆ ಜೀಪ್ ಎಲ್ಲಿತ್ತೋ... ನಾನೆಲ್ಲಿದ್ದೆನೋ.....ನಮನಮಗೆ ಸಂಪರ್ಕ ಒದಗಲೇ ಇಲ್ಲ. ನಾನು ಯಾರನ್ನೋ ಕೇಳಿಕೊಂಡು ಹಾದಿಯ ಗುರ್ತು ಹಾಕಿಕೊಂಡು ನಡೆದೇ ಬಂದೆ. ಎಲ್ಲೂ ಹಾದಿ ತಪ್ಪಲಿಲ್ಲ.''

ಮದರ್ ಸಿಲ್ವಿಯಾ ಸುಖದುಃಖಗಳಲ್ಲಿ ಮಿಂದು ದಣಿದು ಬಂದ ಅತಿಥಿಗೆ ಆತಿಥ್ಯ ನೀಡಿ ಉಪಚರಿಸಿದಳು. ಆನಂತರ ಶಾಲೆ, ಹಾಸ್ಟಲ್ ಮತ್ತು ಹೊಸದಾಗಿ ಕಟ್ಟುತ್ತಿರುವ ಕಟ್ಟಡ ಎಲ್ಲವನ್ನೂ ಸುತ್ತು ಹಾಕಿ ಬಂದು ಕುಳಿತುಕೊಂಡರು. ಮನೋನ್ಮಣಿಯನ್ನು ಬರಮಾಡಿಕೊಂಡು ಅವಳ ವಿಚಾರವನ್ನು ತಿಳಿಸಿ ''ಇಂಥ ದುರ್ದೈವಿ ಮಕ್ಕಳಿಗೆ ಆಧಾರವಾಗುವುದು ತುಂಬಾ ಉಪಕಾರ ಕಾರ್ಯ. ಅಷ್ಟೇ ಅಲ್ಲ; ವಿದ್ಯಾಹೀನ, ಬುದ್ಧಿಹೀನ ಜನವನ್ನು ಮೇಲೆತ್ತುವುದರಲ್ಲಿ ಖಂಡಿತಾ ಆತ್ಮ ಸಂತೋಷವಿದೆ. ಅದಕ್ಕನುಗುಣವಾಗಿ ನಾವು ಬಯಸಿದಷ್ಟು ಹಣಸಹಾಯವೂ ಕೂಡಿ ಪ್ರೋತ್ಸಾಹ ದೊರಕಿದೆ. ಇನ್ನು ನಮ್ಮ ಕರ್ತವ್ಯ ಭಾರ ಮಾತ್ರ.....''

ಫಾದರ್ ತಲೆದೂಗಿ ಅಂದ ''ಎಲ್ಲೆಲ್ಲಿ ದುರ್ಬಲ ಜನಾಂಗ ಇದೆಯೋ ಅಲ್ಲೆಲ್ಲಾ ಬುದ್ಧಿವಂತಿಕೆಯ ನೆರವು ನೀಡಲೇಬೇಕು. ಅದು ಮಾನವೀಯ ಧರ್ಮ.''

''ಭಾರತದ ಸಂಸ್ಕೃತಿ ನೋಡಿದರೆ ಹಿರಿದಾದುದು. ಆಚಾರ-ವಿಚಾರಗಳು

ಅರ್ಥಹೀನ. ವೇದ-ಸಂಸ್ಕೃತಿ ಇವು ಎಲ್ಲರಿಗಾಗಿ ಅಲ್ಲ. ಕೇವಲ ಕೆಲವೇ ಜನರ ಸೊತ್ತು ಎನಿಸುತ್ತದೆ.''

''ಅಂದರೆ...?''

''ಶೇಕಡಾ ತೊಂಭತ್ತುಮಂದಿ ಅವಿದ್ಯಾವಂತರು. ವಿದ್ಯೆಯಿಲ್ಲದಿದ್ದರೆ ಹೋಗಲಿ, ಬುದ್ಧಿಯೂ ಇಲ್ಲ; ಜ್ಞಾನಚಕ್ಷು ತೆರೆಯದಿರುವುದರಿಂದ ಜೀವ ಜಡಕ್ಕಿಂತ ಜಡ. ಹಸಿದ ಹೊಟ್ಟೆಹೊತ್ತು ಬೀಡಿ ಕುಡಿಯುವುದು, ಜುಟ್ಟಿಗೆ ಹೂ ಮುಡಿಯುವುದು, ನೆತ್ತಿಗೆ ಎಣ್ಣೆ ಒತ್ತುವುದು, ಮಕ್ಕಳಿಗೆ ಬಟ್ಟೆಯಿಲ್ಲದಿದ್ದರೂ ಐಷಾರಾಮದ ಕುಡಿತ, ಆಲಸ್ಯ, ಭವಿಷ್ಯದ ಬಗ್ಗೆ ನಿಷ್ಕಾಳಜಿ, ಅಂಧಾನುಕರಣೆ, ಸಿನಿಮಾ-ಜೂಜು ಮುಂತಾದ ಕಡೆ ಆರ್ಥಿಕ ಅಪವ್ಯಯ, ಅವೈಚಾರಿಕತೆಯ ಭೀಷಣ ನೃತ್ಯ, ಯಾವೊಂದನ್ನು ವಿವಿಧ ದೃಷ್ಟಿಕೋನದಿಂದ ಪರಿಶೀಲಿಸದೆ ಅಪ್ಪ ನೆಟ್ಟ ಆಲದ ಮರಕ್ಕೆ ಜೋತು ಬೀಳುವ ಪ್ರವೃತ್ತಿ ಇಂಥಿಂಥ ವಿಚಾರಗಳನ್ನೆಲ್ಲಾ ಪಟ್ಟಿ ಮಾಡುತ್ತಾ ಹೋದರೆ ಕೊನೆಗೊಳ್ಳುವುದೇ ಇಲ್ಲ. ವಿಜ್ಞಾನ ಇನ್ನೂ ಮೊಳಕೆಯೊಡೆಯಲಿಲ್ಲ. ಇಂಗ್ಲೀಷರು ಕೆಲವು ಶಾಲಾ ಕಾಲೇಜುಗಳನ್ನು ತೆರೆದು, ಕಾನೂನುಕಟ್ಟಳೆಗಳನ್ನು ಜಾರಿಗೆ ತಂದಿರಬಹುದು. ಈ ಬೃಹದ್ ರಾಷ್ಟ್ರಕ್ಕೆ ಅದು ಸಾಸಿವೆಯಷ್ಟೂ ಸಲ್ಲಿಸದು.

ಈ ರಾಷ್ಟ್ರದಲ್ಲಿ ಮುನಿ ಋಷಿಗಳ ಪಡೆಯೇ ಇದೆ. ಮಕ್ಕಳ ಫಲ ನೀಡುವ ವನ ಮರಗಳುಂಟು; ರೋಗ ನಿವಾರಕ ಚರಿತ್ರಾರ್ಹ ದೇವರುಂಟು; ಕಳೆದುಕೊಂಡುದನ್ನು ದೊರಕಿಸಿಕೊಡುವ ಚೌಡಿ ಮುಂತಾದ ದೆಯ್ಯಗಳುಂಟು. ದೇವರಿಗೆಷ್ಟು ಪ್ರಾಶಸ್ತ್ಯವೋ ಅಷ್ಟೇ ದೆಯ್ಯಗಳಿಗೂ ಪ್ರಾಶಸ್ತ್ಯವಿದೆ. ಅವುಗಳಿಗೆ ಕೋಳಿ ಕುರಿಗಳ ಬಲಿಯೂ ಉಂಟು; ಕಾಡು ಕಲ್ಲುಗಳೂ, ಹೆಮ್ಮರಗಳೂ ದೆಯ್ಯಗಳ ಬನಗಳೆನಿಸುತ್ತವೆ. ವೈಚಾರಿಕತೆಯೊಂದೇ ಇಲ್ಲಿ ಅರ್ಥಹೀನ..... ಪರಿಸ್ಥಿತಿ ಹೀಗಿರುವುದರಿಂದ ರಾಷ್ಟ್ರಪ್ರಗತಿ ಅಷ್ಟು ಸುಲಭವಲ್ಲ.''

ವಿಷಾದವಾಣಿ ಕೊರಳು ತುಂಬಿ ಹರಿದಾಗ ಮುಖಬಿಂಬ ಬಾಡಿ ವಿವರ್ಣವಾಯಿತು.

''ಇಷ್ಟು ದೀರ್ಘಕಾಲ ಆಳಿದ ಇಂಗ್ಲೀಷರು ಏನು ಮಾಡುತ್ತಿದ್ದರು ?''

''ಅದಕ್ಕೆ ಅವರೇ ಉತ್ತರ ಹೇಳಬೇಕು.''

''ಬಿಡು; ಇಂಗ್ಲೀಷರು ಕುತಂತ್ರಿಗಳು. ಅವರೆಂದೂ ಮಾನವ ಮಿತ್ರರಾಗಲಾರರು.''

''ಅದಕ್ಕೇ ಈ ಆಂದೋಳನ. ಯೂರೋಪಿನಲ್ಲಿ ಇಂಗ್ಲೀಷರಷ್ಟು ಸ್ವಾರ್ಥಪರರು ಎಲ್ಲಿಯೂ ಇಲ್ಲ.''

''ಅವರ ನೆರೆಯವರೇ ಆದ ಜರ್ಮನರಿಗೂ ಅವರನ್ನು ಕಂಡರಾಗದು. ನಾವು ಫ್ರೆಂಚರೂ ದ್ವೇಷಿಸುವುದು ಅವರ ಕುತಂತ್ರಿತನಕ್ಕೇ.''

''ಇಲ್ಲಿ ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರ್ಯ ಮತ್ತೊಂದು ಮಗದೊಂದು ಯಾವುದೂ ಇಲ್ಲ. ಆ ಜಡಮ್ಮೈಗಿಷ್ಟು ಆಭರಣ ಹೇರಿ ನಾಲ್ಕು ಗೋಡೆಯೊಳಗೆ ಬಂಧಿಸಿಡುತ್ತಾರೆ. ಜನ್ಮಜನ್ಮಜನ್ಮಾನಂತರದ ಈ ನೋವು-ಹಿಂಸೆಗಳನ್ನು ಹೆಣ್ಣು ಆನಂದಮಯಿಯಾಗಿ ಅನುಭೋಗಿಸುತ್ತಾಳೆ, ಪುರುಷ ಪ್ರಧಾನವಾದ ದೇಶ. ಪುರುಷರ ಅಧಿಕಾರ ದಂಡಕ್ಕೆ ಸ್ತ್ರೀ ಶರಣು. ವಿಧವೆ ಮತ್ತು ಸದವೆಯರ ರೀತಿನೀತಿ ಭಿನ್ನಭಿನ್ನ. ಶಾಸ್ತ್ರ ಸೂತ್ರಗಳ ಸಂಕೋಲೆ ವಿಪರೀತ. ವಿದ್ಯಾವಂತ ಮಹಿಳೆಯರೂ ಇದಕ್ಕೆ ಬದ್ಧ. ಸ್ತ್ರೀ ಜೀವನ ನಿಜಕ್ಕೂ ಕರುಣಾಜನಕ. ನಮ್ಮ ಸ್ವಾತಂತ್ರ್ಯಜೀವನ ನೋಡಿದರೆ ಇವರಿಗೆ ಆಶ್ಚರ್ಯ. ನಾವು ಆ ದೇಶದಿಂದ ಈ ದೇಶಕ್ಕೆ ಬಂದು ಧೈರ್ಯ ಮತ್ತು ಸಾಹಸದಿಂದ ಈ ಸೇವಾಕಾರ್ಯ ಕೈಕೊಂಡಿರುವುದು ತುಂಬಾ ವಿಶೇಷ... ಆಶ್ಚರ್ಯವಿಶೇಷ! ಡಾ॥ ಆ್ಯನಿಬೆಸೆಂಟ್, ಸಿಸ್ಟರ್ ನಿವೇದಿತ ಇವರಂಥ ಪ್ರಚಂಡ ಮಹಿಳಾಮಣಿಯರ ಸೇವೆ ಯಾವೊಂದು ಹುಲ್ಲುಕಣೆಗೂ ಮುಟ್ಟಲಿಲ್ಲವೇನೋ ಎಂಬಷ್ಟು ಜಡ ಚರಿತ್ರೆ ಇವರದು.''

''Poor Ladies!''

ಇಬ್ಬರೂ ಮಂದಸ್ಮಿತರಾದರು.

* * *

ಫ್ರೆಂಚ್ ಸಂಜಾತ ಫಾದರ್ ಮೈಕೇಲ್‌ಗೆ ಅಲ್ಲಿರುವ ಕಾಲಾವಧಿಯಲ್ಲಿ ಭಾರತದಾದ್ಯಂತ ಪ್ರವಾಸ ಹೋಗಿ ಬರುವ ಯೋಚನೆ. ಆದರೆ ರಾಜಕೀಯ ಆಂದೋಳನ ಅದಕ್ಕೆ ಅಡ್ಡಗಾಲು. ಹೋಗುವುದೋ ಬಿಡುವುದೋ ಎಂಬ ಸಮಸ್ಯೆ. ಮದರ್ ತಲೆಯಲ್ಲಿ ಅದೇ ವಿಚಾರವನ್ನು ತುಂಬಿಕೊಂಡು ತನ್ನಲ್ಲೇ ಸಾಕಷ್ಟು ವಿಮರ್ಶೆ ಮಾಡಿ ಫಾದರ್‌ನನ್ನು ಕುರಿತು ''ಈಗಣ ಪರಿಸ್ಥಿತಿಯಲ್ಲಿ ಪ್ರವಾಸ ಸರಿಯಲ್ಲ. ನಿಮ್ಮನ್ನು ಇಂಗ್ಲೀಷನೆಂದು ಯಾರಾದರೂ ಜಿದ್ದು ತೀರಿಸಿಕೊಂಡಾರು. ಇನ್ನೊಮ್ಮೆ ಬಂದಾಗ ಪ್ರವಾಸ ಮಾಡಬಹುದು. ನಾನು ಪ್ರವಾಸ ಮಾಡಿದಾಗ ಪರಿಸ್ಥಿತಿ ಶಾಂತವಾಗಿತ್ತು. ಆಗ ಸಾಧ್ಯವಾದ ಮಟ್ಟಿಗೆ ರಾಜ್ಯಗಳ ಮುಖ್ಯ ನಗರಗಳು, ಹಳ್ಳಿಗಳು, ದೇವಾಲಯಗಳು ಮುಂತಾದ ದರ್ಶನೀಯ ಸ್ಥಳಗಳನ್ನು ಸಂದರ್ಶಿಸಿರುವೆ. ದೃಶ್ಯಮಾನ ಸೌಂದರ್ಯ ಮನವನ್ನು ಆಕರ್ಷಿಸುವುದು ಸತ್ಯ. ಆದರೆ ಅತೀವ ಬಡತನ ಹೃದಯವಿದ್ರಾವಕ. ಅಸಂಖ್ಯ ಜನಕೋಟಿ ಕ್ರಿಮಿಕೀಟಗಳಂತೆ ಮಿಜಿಗುಡಿಯುವ ರೀತಿ ಅತ್ಯಂತ

ಕರುಣಾಜನಕ. ಅಂತಲೇ ಕಿಂಚಿತ್ ಸೇವೆ ಸಲ್ಲಿಸುವ ಸಲುವಾಗಿ ನಾನು ಇಲ್ಲಿ ನೆಲೆಯನ್ನು ಕಂಡುಕೊಂಡೆ.''

''ನೀನು ಖಂಡಿತ ಇದರಲ್ಲಿ ಯಶಸ್ವಿಯಾಗುವೆ.''

ಅವಳು ನಕ್ಕು ಬಿಟ್ಟಳು.

''ಅದೇಕೆ ನಗುತ್ತಿ?''

''ಇಲ್ಲಿನ ಸಮಸ್ಯೆ ಅಗಾಧ....ನನ್ನ ಸಾಧನೆ ತೃಣಸಮಾನ. ಅದರಿಂದ ಏನಾದೀತು? ಎಂಬುದರ ಮನವರಿಕೆಯಾಗಿದೆ. ಇಂಥ ಸಂಸ್ಥೆಗಳು ರಾಷ್ಟ್ರವ್ಯಾಪಿಯಾದರೆ ಸೇವೆ ಸಫಲ. ನೋಡೋಣ ಮುಂದೆ ಏನಾಗುತ್ತೋ?''

''ದೇವರು ದೊಡ್ಡವನು! ಮುಂದೆ ದಾರಿ ತೋರಿಸಿಯೇ ತೋರಿಸುತ್ತಾನೆ.''

ಅದು ನಿಜ ಎಂಬಂತೆ ತಲೆದೂಗಿದಳು ಮದರ್.

ಪೋಸ್ಟಿನವ ಒಂದು ಟೆಲಿಗ್ರಾಮ್ ತಂದುಕೊಟ್ಟ. ಒಡೆದು ನೋಡಿದರೆ ಪ್ಯಾರಿಸ್‌ನಿಂದ ಬಂದ ಅದು ಶ್ರೀಮತಿ ಪಾಲಿಲಾರೆನ್ಸ್ ಮತ್ತು ಶ್ರೀಮತಿ ಎಲಿಜಾ ಡಾನ್‌ಮೋರೆ ಬರುವುದಾಗಿ ಸುದ್ದಿ ತಂದಿತ್ತು. ಪಾಲಿಲಾರೆನ್ಸ್ ತನ್ನ ನೆರೆಹೊರೆಯವಳು. ಪ್ಯಾರಿಸ್‌ನಲ್ಲಿದ್ದಾಗ, ಎಲಿಜಾ ಡಾನ್ ಮೋರೆ ತನ್ನ ಕಾಲೇಜ್ ಸಹಪಾಠಿ. ಆಕೆ ಸ್ವಿಡ್ಜರ್ಲೆಂಡಿನವಳು. ಇಬ್ಬರೂ ಇಲ್ಲಿನ ಸೇಂಟ್ ಮೇರಿ ಕಾನ್ವೆಂಟಿಗಾಗಿ ಕೈತುಂಬಾ ಸಹಾಯಮಾಡಿದವರು.

ಕಾನ್ವೆಂಟಿನ ಪ್ರಗತಿಯನ್ನು ನೋಡುವ ಸಲುವಾಗಿಯೇ ಬರುತ್ತಿದ್ದಾರೆ. ಅವರಿಬ್ಬರ ಆಗಮನ ವಾರ್ತೆ ತುಂಬಾ ಸಂತಸ ತಂದಿತು. ಟೆಲಿಗ್ರಾಮನ್ನು ಫಾದರ್ ಕೈಗಿಟ್ಟಳು ಸಿಲ್ವಿಯಾ ಅತ್ಯಾನಂದ ಪ್ರಸನ್ನತೆಯಿಂದ.

''ಅವರಿಬ್ಬರೂ ಕಳೆದ ಸಾಲಿನಲ್ಲೇ ಬರಬೇಕಿತ್ತು. ಆಗ ಅನಿವಾರ್ಯ ಕಾರಣಗಳಿಂದ ಬರಲಿಲ್ಲ. ಈ ಸಲ ಬರುತ್ತಿರುವುದು ತುಂಬಾ ಸಂತೋಷದ ವಿಷಯ''

ದನಿ ಕೊರಳುತುಂಬಿ ಹರಿದಾಗ ಮುಖಬಿಂಬ ಅರಳಿದ ಮಂದಾರವಾಯಿತು.

''ಓ ಮಿಸೆಸ್ ಪಾಲಿ! ಮಿಸೆಸ್ ಎಲಿಜಾ! ಇಬ್ಬರೂ ನಿಜವಾಗಿಯೂ ಈ ಸ್ಥಳ ಇಷ್ಟಪಡುವುದು ಮಾತ್ರವಲ್ಲ; ನಿನ್ನ ಜಾಣ್ಮೆಯನ್ನೂ ಮೆಚ್ಚಿಕೊಳ್ಳುತ್ತಾರೆ. ನಿನಗೆ ಶಹಭಾಸ್‌ಗಿರಿ ಲಭಿಸುತ್ತೆ!''

ಮದರ್ ಸಿಲ್ವಿಯಾ ದೊಡ್ಡದನಿಯಲ್ಲಿ ನಕ್ಕು ಬಿಟ್ಟಳು.

''ಈಗಲೇ ಜೀಪು ಕಳುಹಿಸುವೆ. ಅಂದು ನಿಮಗೆ ಆದ ಹಾಗೆ ಆಗುವುದು ಬೇಡ.''

ಮದರ್ ಆ ಕೂಡಲೇ ಕಾವಲುಗಾರನಿಗೆ ಹೇಳಿ ಡ್ರೈವರನ್ನು ಬರಮಾಡಿಕೊಂಡು ಗಾರಂಗಾವ್ ನಗರಕ್ಕೆ ಜೀಪ್ ಕಳುಹಿಸಿಕೊಟ್ಟಳು. ಕಾಶ್ಮೀರದಿಂದ ಬಸ್ಸು ಅಲ್ಲಿಗೆ ಬರುವುದು ಮಧ್ಯಾಹ್ನವಾದರೂ ಮುಂಜಾಗ್ರತೆಯ ಫಲವಾಗಿ ಆಗಲೇ ಹೊರಟಿತು ಜೀಪ್. ಮದರ್ ಬೆಟ್ಟಿ ಬರಲಿರುವ ಹೊಸ ಅತಿಥಿಗಳಿಗಾಗಿ ಕೊಠಡಿಗಳ ಸ್ವಚ್ಛತೆಯನ್ನು ಕೈಕೊಂಡಳು. ಆ ಕಾರ್ಯದಲ್ಲಿ ಮನೋನ್ಮಣಿಗೆ ಆದ್ಯಪಾಲು. ಮೇಜುಕುರ್ಚಿಗಳ ಓರಣ; ಶೌಚಾಲಯದಿಂದ ಹಿಡಿದು ಪತ್ರಿಕಾಲಯದವರೆಗೂ ಮೈಕೊಡವಿ ಮಡಿಯುಟ್ಟಿತು ಅತಿಥಿಗೃಹ. ಸಾಲಾಗಿನ ಆರು ಕೊಠಡಿಗೂ ಮದರ್-ಗಳಿಗೇ ಮೀಸಲು. ಇಂದು ಮದರ್ ಬೆಟ್ಟಿ, ಮದರ್ ಜಾರ್ಜಿಯಾ ಇಬ್ಬರೂ ಒಂದೇ ಕೊಠಡಿ ಹಿಡಿದು ಇನ್ನೊಂದು ಕೊಠಡಿಯನ್ನು ಅತಿಥಿಗಳಿಗಾಗಿ ತೆರವು ಮಾಡಿದುದರಿಂದ ಸ್ಥಳದ ಪೂರೈಕೆ ಕಷ್ಟವಾಗಲಿಲ್ಲ.

ಮಧ್ಯಾಹ್ನದ ಊಟ ಮುಗಿದನಂತರ ಬಿಸಿ ಬಿಸಿ ಕಾಫಿ ಆಗಮಿಸಿತು. ಕಾಫಿಯನ್ನು ಗುಟುಕು ಗುಟುಕಾಗಿ ಹೀರುತ್ತ ಫಾದರ್ ''ನಮ್ಮವರು ನಗರಗಳನ್ನು ಕಟ್ಟಿದ್ದು ಉತ್ತಮ ವಿನ್ಯಾಸ ಮತ್ತು ದೃಢವಾದ ತಳಹದಿಯ ಮೇಲೆ. ಆದ್ದರಿಂದಲೇ ನಗರಗಳ ಬೆಳವಣಿಗೆ ಸಮಗ್ರಸುಂದರ. ಇಲ್ಲಿಯವರು ಕಲಿಯಬೇಕಾದುದು ತುಂಬಾ ಇದೆ.''

''ರಾಷ್ಟ್ರದ ಪ್ರಗತಿಗೆ ಪೂರಕವಾದ ಜನಶಕ್ತಿಯ ಅಂಶಅಂಶವೂ ಶ್ರದ್ಧಾತ್ಮಕ ವಾಗಿರುವುದು ಅತ್ಯಗತ್ಯ. ಜರ್ಮನಿಯ ಮಹಿಳೆ ನಿಗದಿತ ವೇಳೆಗಿಂತ ಮುಂಚಿತವಾಗಿ ಕಾರ್ಖಾನೆಯಿಂದ ಹಿಂದಿರುಗುವ ಮಕ್ಕಳನ್ನು ಹಿಂದಕ್ಕಟ್ಟುವಷ್ಟು ಚತುರೆ. ಸುಮಾರಾಗಿ ಐರೋಪ್ಯರಿಗೆ ಇತರರೊಂದಿಗೆ ಮಾತಾಡಲು ವೇಳೆ ಇರುವುದಿಲ್ಲ. ಬಸ್ಸು-ಟ್ರಾಮುಗಳಲ್ಲಿ ಪಯಣಿಸುವಾಗ ಪುಸ್ತಕ-ಪತ್ರಿಕೆಗಳನ್ನು ಓದಲು ಸಮಯ. ನಮ್ಮಲ್ಲಿ ವೇಳೆಗೆ ಎಷ್ಟು ಮಹತ್ವವಿದೆಯೋ ಅದರ ಒಂದಂಶ ಇವರಲ್ಲಿಲ್ಲ ಈ ಎಲ್ಲದರ ನಿವಾರಣೆ ಎಂದರೆ ಅತ್ಯುತ್ತಮ ವಿದ್ಯಾಭ್ಯಾಸ ಬೇಕು. ಕುಡಿತ-ಜೂಜು-ಅಶ್ಲೀಲ ಸಾಹಿತ್ಯ ಇವು ಜನಮನವನ್ನು ಹಾಳು ಮಾಡುತ್ತವೆ. ಸಂಸ್ಕೃತಿಯ ಮಟ್ಟ ಇಳಿಯಲು ಇಂತಹ ದುರಾಚಾರ ಕಾರಣ. ಸರಿಯಾದ ವಿದ್ಯೆ ಇಲ್ಲದಿರುವುದರಿಂದ ಹೆಜ್ಜೆ ಹೆಜ್ಜೆಯೂ ಅವನತಿಯ ಕಡೆಗೆ. ಇದನ್ನೆಲ್ಲಾ ಗಾಂಧೀಜಿ ಎಷ್ಟೆಷ್ಟು ಬಾರಿ ಸಾರಿ ಹೇಳಿಲ್ಲ....? ಅದನ್ನು ಕೇಳಿಸಿಕೊಳ್ಳುವ ಕಿವಿಗಳು ಕಿವುಡು ಎನಿಸುತ್ತೆ ನನಗೆ.''

ಫಾದರ್ ಯೋಚನಾಭಾರದಿಂದ ಸುಮ್ಮನಾದ. ದೃಷ್ಟಿಪಥದಲ್ಲಿ ಸೊತ್ತಾಗಿ, ತೊತ್ತಾಗಿ, ಅನಾಗರಿಕರಾಗಿ ಅಜ್ಞಾನದ ಪೆಡಂಭೂತಗಳಾಗಿ, ಅರ್ಥಹೀನ ಶಾಸ್ತ್ರದಲ್ಲಿ ಸಿಕ್ಕಿ, ವ್ಯರ್ಥ ಜೀವನದಲ್ಲಿ ನರಳಿ ಮಣ್ಣಿನೊಂದಿಗೆ ಮಣ್ಣಾಗಿ ಬೆರೆವ ಹೆಂಗಳೆಯರ

ಸಾಲು ಸಾಗಿಹೋಯಿತು..... ಇನ್ನೂ ಸಾಗುತ್ತಲೇ ಇದೆ. ಹಾ! ನಮ್ಮವರೆಲ್ಲಿ ? ಇವರೆಲ್ಲಿ?

ಕಾನ್ವೆಂಟಿನ ಆವರಣವನ್ನು ದೊಡ್ಡ ಸದ್ದಿನೊಡನೆ ಪ್ರವೇಶಿಸಿ ಮುಂಬಾಗಿಲಲ್ಲಿ ಜೀಪ್ ನಿಂತಾಗ ಮಧ್ಯಾಹ್ನ ಎರಡರ ಸಮಯ.

ಅದರಿಂದ ಮೊದಲು ಇಳಿದವಳು ಶ್ರೀಮತಿ ಎಲಿಜಾ ಡಾನ್ ಮೋರೆ. ಅನಂತರ ಶ್ರೀಮತಿ ಪಾಲಿ ಲಾರೆನ್ಸ್. ಆ ಪ್ರಾಂತ್ಯದ ಸುಂದರ ಪರಿಸರದಲ್ಲಿ ಹರಿದು ಬಂದ ಜೀಪಿನಿಂದಲೇ ನಿಸರ್ಗ ಸೌಂದರ್ಯವನ್ನೂ, ತಮ್ಮದೇ ಆದ ವಿಶಿಷ್ಟವೈಖರಿಯ ಜನರಾಶಿಯನ್ನೂ ಕಂಡು ಆನಂದಿತರಾಗಿ, ಮದರ್ ಸಿಲ್ವಿಯಾಳ ಕೈ ಕುಲುಕುತ್ತ ''ನೀನು ಆರಿಸಿಕೊಂಡಿರುವ ಸ್ಥಳ ಭೂಸ್ವರ್ಗ!''ಎಂದರು.

ಸ್ವಾಗತಿಸಲು ಮುಂದಾಗಿದ್ದ ಫಾದರ್ ಮೈಕೇಲ್ ಇಬ್ಬರಿಗೂ ಹಸ್ತಲಾಘವ ನೀಡಿದ. ಎಲ್ಲರೂ ದಿವಾನಖಾನೆಯಲ್ಲಿ ಸುಖಾಸೀನರಾದರು. ಫಾದರ್ ತಾನು ಪರಸ್ಥಳ. ಪರಭಾಷೆಗಳ ಅರಿವಿಲ್ಲದಿದ್ದರೂ ಹಾದಿ ಹುಡುಕಿಕೊಂಡು ಬಂದ ಬಗೆಯನ್ನು ಬಣ್ಣಿಸಿದ.

ಎಲ್ಲರಿಗೂ ಅದೊಂದು ತಮಾಷೆಯ ವಿಷಯವಾಯಿತು.

ಮದರ್ ಬೆಟ್ಟಿ, ಮದರ್ ಜಾರ್ಜಿಯಾರವರ ಪರಿಚಯವಾದನಂತರ ಊಟ ಸ್ವಲ್ಪಹೊತ್ತು ವಿಶ್ರಾಂತಿ. ಅನಂತರ ಚಹಪಾನ.

ಮದರ್ ಸಿಲ್ವಿಯಾ ಎಲ್ಲರನ್ನೂ ಕೂಡಿಕೊಂಡು ಕಾನ್ವೆಂಟಿನ ಭಾಗವಿಭಾಗಗಳಿಗೆ ಭೇಟಿಕೊಟ್ಟನಂತರ ಹೊಸದಾಗಿ ಕಟ್ಟುತ್ತಿರುವ ಶಾಲೆಯ ಕಟ್ಟಡದ ಕಡೆಗೆ ಕರೆದೊಯ್ದಳು.

ಕಟ್ಟಡದ ವಿಸ್ತೀರ್ಣ ಶಾಲೆಯ ಬೆಳವಣಿಗೆ ಪರಿಸರ ಮತ್ತು ವಾತಾವರಣದ ಸಮೀಕ್ಷೆಯಿಂದ ಹುಗ್ಗಿ ಉಂಡಷ್ಟು ಹಿತ ಅತಿಥಿಗಳಿಗೆ.

''ನಾನು ಶಾಲಾ ದಿನಗಳಲ್ಲೇ ಕಂಡ ಕನಸು ಈಗ ನನಸು.... ಈ ನನಸು ಪೂರ್ಣವಾಗಬೇಕಾದರೆ ಈ ಮುಗ್ಧಜನಾಂಗ ಕಣ್ದೆರೆಯಬೇಕು. ಮುಖ್ಯವಾಗಿ ಹೆಂಗಳೆಯರ ಮನೋವಿಕಾಸವಾಗಿ ಬೌದ್ಧಿಕ ಶಕ್ತಿ ಅರಳಿದರೆ, ತಮ್ಮ ತಮ್ಮ ಭಂಗ ಬವಣೆಗಳನ್ನು ಅಲ್ಪಸ್ವಲ್ಪವಾದರೂ ಪರಿಹರಿಸಿಕೊಳ್ಳಬಲ್ಲರು. ತಮ್ಮ 'ಇರುವಿಕೆ' ಜನ್ಮಜನ್ಮಾಂತರಕ್ಕೂ ಸಾಕ್ಷಿ ಅಥವಾ ಮಾದರಿ ಎಂದೇ ತಿಳಿದಿದ್ದಾರೆ. ಈಗಿನದಕ್ಕಿಂತಲೂ ಉತ್ತಮ ಮಜಲು ಅಥವಾ ನಾಗರಿಕತೆ ಇದೆ ಎಂಬುದರ ಅರಿವು ಇಲ್ಲವೇ ಇಲ್ಲ. ಈ ದೀನ ದುಃಖಿಯರನ್ನು ಕಂಡರೆ ದುಃಖವಾಗುತ್ತದೆ. ಕೇವಲ ತೋತ್ಯಾಗಿ ಮಕ್ಕಳನ್ನು

ಹೆರುವ ಯಂತ್ರವಾಗಿ ತಮ್ಮ ಅಮೂಲ್ಯವಾದ ಜೀವಮಾನ ಮತ್ತು ಕಾಲಮಾನ ಎರಡಕ್ಕೂ ಇವರು ಮಾಡುವುದು ಅವಮಾನವೇ. ಜೀವನಮೌಲ್ಯವಾಗಲೀ ಕಾಲ ಮೌಲ್ಯವಾಗಲೀ ತಿಳಿಯುವುದು ಈ ಜನ್ಮದ ಮಾತಿರಲಿ, ಮುಂದಿನ ಜನ್ಮದಲ್ಲಿಯೂ ತಿಳಿಯಲಾರರು ಕೂಡ. ಇದು ತುಂಬಾ ವ್ಯಸನಕರ. ನಮ್ಮ ಕಿಂಚಿತ್ ಸೇವೆ ಇವರ ಕೂದಲನ್ನು ಕೊಂಕಿಸಲಾರದೇನೋ ಎನಿಸುತ್ತದೆ ನನಗೆ. ಆದರೂ ಇದೊಂದು ಅಳಿಲ ಮಳಲ ಸೇವೆ.''

''ನಾವು ಸೇವೆ ಆರಂಭಿಸಬೇಕಾದುದು ಇಂತಹ ಕಡೆಯಿಂದಲೇ'' ತಲೆದೂಗಿದ ಫಾದರ್.

''ಹೌದು. ಹೌದು. ಜ್ಞಾನಿಗಳಿಗೆ ಬೋಧಿಸುವುದೇನು ಕಷ್ಟ? ಇಂತಹವರ ಸೇವೆಯೊಂದು ನಿಜವಾದ ಸೇವೆ!'' ಹುಬ್ಬೇರಿಸಿದಳು ಪಾಲಿ ಲಾರೆನ್ಸ್.

''ಇದರ ಹುರುಳು ಬಲ್ಲವರೇ ಬಲ್ಲರು; ಎಲ್ಲರಿಗೂ ಏನು ತಿಳಿದೀತು?'' ಎಲಿಜಾ ಡಾನ್ ಮೋರೆಯ ಪ್ರಶ್ನೆ.

''ಎಲ್ಲರ ಮುಖದಲ್ಲೂ ಸುಖದುಃಖಗಳ ಕಳೆ ಬೆಳಗಿತ್ತು.

೧೩

ಅನಾಥೋ ದೈವ ರಕ್ಷಕಃ

ಹೊತ್ತು ಕ್ಷಣ ಕ್ಷಣ ಪ್ರತಿಕ್ಷಣ ಕರಗಿ ರವಿ ಇಳಿಮುಖಿಯಾದರೂ ನೆತ್ತಿ ಸುಡುವ ಬಿಸಿಲು. ದಿಲೀಪ್ ಕೈ ಗಡಿಯಾರದ ಕಡೆ ದೃಷ್ಟಿ ಹೊರಳಿಸಿದ. ಎರಡರ ಅಂಚನ್ನು ದಾಟ್ಟುತಿತ್ತು ಮುಳ್ಳು. ನಾವು ಸ್ವಲ್ಪ ನಿಧಾನಿಸಿ ಹೊರಟಿದ್ದರೆ ಒಳ್ಳೆಯದಿತ್ತು, ಅವಸರಪಟ್ಟು ತಪ್ಪು ಮಾಡಿದೆ ಎನಿಸದಿರಲಿಲ್ಲ ಮನದಲ್ಲಿ. ನಿಮ್ನೋನ್ನತ ಪ್ರದೇಶ ಅಂಕು ಡೊಂಕಿನ ಹಾದಿ. ಸಣ್ಣ ಪುಟ್ಟ ಗುಡ್ಡಗಾಡುಗಳ ಉಬ್ಬುತಗ್ಗು. ಹಸುರುಗರಿಕೆಯ ಹಾಸು ಅರ್ಧ ಒಣಗಿದ್ದರೂ ವರ್ಣಪೂರ್ಣ ಮಾಸಿರದ ವಿರೂಪು. ಆಗೊಮ್ಮೆ ಈಗೊಮ್ಮೆ ತಂಗಾಳಿ ತೀಡುವುದರಿಂದ ಎಷ್ಟೋಹಿತ.

''ಬಹಳ ದಿನಗಳ ಹಿಂದೆ ನೋಡಿದ ಹಾದಿ...ಆಗ ಮರೆತು ಹೋಗಿದೆ. ನಿನಗೂ..''

''ಅಂಕಲ್! ನನಗಂತೂ ಏನೇನೂ ತಿಳಿಯದು.''

"ಯಾರನ್ನಾದರೂ ಕೇಳಿದರೆ ಹೇಳುತ್ತಾರೆ...."

ಅದೇ ಸಮಯಕ್ಕೆ ಎದುರಾಗಿ ಬಂದ ರೈತನನ್ನು ಕುರಿತು ಕೇಳಿದ ದಿಲೀಪ್,

"ಬಾಂಕೇವಾಡಿ ಎಸ್ಟೇಟ್ ಇಲ್ಲಿಂದ ಎಷ್ಟು ದೂರ?"

"ಇನ್ನೂ ಎರಡು ಮೈಲಿಯಾಗುತ್ತೆ.."

"ಮುಂದೆ ಎಲ್ಲಾದರೂ ತಿರುಗಿ ಕೊಳ್ಳುವುದುಂಟೇ?"

"ಇನ್ನು ಒಂದೂ ಕಾಲು ಮೈಲಿಯಷ್ಟು ನೇರವಾಗಿ ಹೋದಮೇಲೆ ಒಂದು ಕೂಡು ದಾರಿಯಿದೆ. ಅದರಲ್ಲಿ ಬಲಕ್ಕೆ ತಿರುಗಿದ ನಂತರ ಅರ್ಧ ಮೈಲಿ ಹೋದ ಮೇಲೆ ಎಡಕ್ಕೆ ತಿರುಗಿ. ಅದೇ ಬಾಂಕೇ ಎಸ್ಟೇಟ್ ಹಾದಿ."

"ವಂದನೆಗಳು!"

"ವಂದನೆಗಳು."

ದಿಲೀಪ್ ಹುಡುಗನ ಕೈಹಿಡಿದುಕೊಂಡು ನಡೆಸುತ್ತ ಮುನ್ನಡೆದ. ಮುಂದಿನ ಎರಡು ಮೈಲಿಯ ಹಾದಿ ಬಯಲು ಪ್ರದೇಶದಲ್ಲಿಯೇ ಸಾಗಿದ್ದರೂ ಹಾದಿಯಂಚಿನ ಹೆಮ್ಮರಗಳು ಅಲ್ಲಲ್ಲಿ ನೆರಳು ನೀಡುತ್ತಿದ್ದುದರಿಂದ ನೆರಳು ಬಿಸಿಲುಗಳ ಹವೆಯ ಬೆಚ್ಚನ್ನ ಸ್ವಾಂತನ, ತನುಮನಗಳಿಗೆ.

"ಆಯಾಸವಾಯಿತೇ ದತ್ತೂ?"

"ಇಲ್ಲ ಅಂಕಲ್!"

"ತುಂಬಾ ಬೆವರುತಿದ್ದೀಯೆ...ಮುಖ ಒರಸಿಕೊ. ಸ್ವಲ್ಪ ಹೊತ್ತು ಆ ಮರದಡಿಯಲ್ಲಿ ಕುಳಿತುಕೊಳ್ಳೋಣ."

ಬಾಲಕ ಕರವಸ್ತ್ರದಿಂದ ಮುಖ ಒರಸಿಕೊಂಡ. ಇಬ್ಬರೂ ಮರದ ನೆರಳಲ್ಲಿ ಕುಳಿತು ವಿಶ್ರಮಿಸಿದರು. ಹಣ್ಣೆಲೆ-ಪುಷ್ಪರೇಣು-ಪುಷ್ಪಪರಾಗಗಳು ಉದುರಿದ್ದುವು ನೆಲದ ಮೇಲೆ ವಿಚಿತ್ರ ರಂಗೋಲಿಯಂತೆ. ದತ್ತು ಹೂವಿನೆಸಳನ್ನು ಕೈಯಿಂದ ತೆಗೆದುಕೊಂಡು ಮೂಸಿನೋಡಿ "ಅಂಕಲ್! ಉದುರಿದ್ದರೂ ಎಂತಹ ಸುವಾಸನೆ?" ಎಂದ. ಆಚ್ಚರ್ಯ ಭರಿತ ನಯನಗಳು ವಿಸ್ಫಾರಿತವಾದುವು.

"ಕಾಶ್ಮೀರ್ ಕಣಿವೆಯ ಹೂಗಳು ತುಂಬಾ ಸುವಾಸನೆ. ಹೂವಿನ ಕಾಲದಲ್ಲಿ ಈ ಪ್ರಾಂತ್ಯವೆಲ್ಲಾ ಘಮಘಮ. ತಂಪಿನಾಗರವಾದ ಈ ಪ್ರಾಂತ್ಯ ಸುರಸುಂದರವಾದ ಪುಷ್ಪಕೋಟಿಗೆ ಆಗರ."

"ನೀವು ಈಚೆಗೆ ಇಲ್ಲಿಗೆ ಬಂದಿದ್ದಿರಾ?"

"ನಾಲ್ಕಾರು ವರ್ಷಗಳಿಂದ ಈಚೆಗೆ ಬರಲಿಲ್ಲ. ಅದರ ಮೊದಲು ವರ್ಷಕ್ಕೊಮ್ಮೆ

ರಜಾ ದಿನಗಳಲ್ಲಿ ಬರುತ್ತಿದ್ದೆ. ಕೆಲಸ ಹಿಡಿದಮೇಲೆ ಬರುವುದೆಲ್ಲಿ?''

ತಣ್ಣನೆಯ ತಂಗಾಳಿ ಸುಯ್ಯನೆ ಸುಳಿಯುತ್ತ ಬಂದು ಮೈಮನಗಳನ್ನು ಮುದ್ದಿಟ್ಟು ಹೋಯಿತು. ಗಿಡಗಳ ತಂಪನ್ನಾಶ್ರಯಿಸಿದ ಗುಬ್ಬಿ, ಪಿಕಳಾರ, ಟಿಟ್ಟಭ, ಮೈನಾ, ಕಾಮಳ್ಳಿ, ಕೋಗಿಲೆ ಮುಂತಾದ ಪಕ್ಷಿ ಸಂಕುಲ ರಾಗಾನುರಾಗಗಳಿಂದ ಕೊರಳಿ ದನಿಯನ್ನು ಹರಿಯ ಬಿಡುತ್ತಿವೆ. ರಾಗವೂ ಚೆಂದ; ರಾಗಾನುರಾಗವೂ ಚೆಂದ; ರಾಗಾರುಣತಾನವೂ ಚೆಂದ.

ಅಲ್ಲಿಂದಲ್ಲೇ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತ ರೆಕ್ಕೆಯೊದರಿ ಹಾಡುವ ಅವನ್ನೆ ಕೊರಳೆತ್ತಿ ನೋಡಿದ ದತ್ತು. ಒಡಲು ಬಿರಿಯುವಷ್ಟು ಹಣ್ಣು ಹಂಪಲ ಸುಖಭೋಜನ ಗೈದ ಅವುಗಳ ಆಮೋದ ಹೃನ್ಮನಗಳನ್ನು ರಮಿಸುವುದು ಸತ್ಯ ಸಮಾಚಾರ.

ಹೊತ್ತು ನಿರಾತಂಕವಾಗಿ ಉರುಳಿತು. ದಣಿವು ಕಳೆದ ಬಳಿಕ ಇಬ್ಬರೂ ಎದ್ದು ಹೊರಟರು. ಅಂಕುಡೊಂಕಿನ ಕಾಲು ಹಾದಿ. ಮಳೆಯಲ್ಲಿ ಮಣ್ಣು ತೊಳೆದು ಹೋಗಿ ಬೆಣಚುಕಲ್ಲು-ದುಂಡುಗಲ್ಲುಗಳೇ ಉಳಿದಿವೆ. ದುಂಡುಗಲ್ಲು ಉರುಳುವುದರಿಂದ ಮುಗ್ಗರಿಸಿ ಬೀಳುವ ಅಪಾಯ ತಪ್ಪಿದ್ದಲ್ಲ. ಅದರಿಂದ ದಿಲೀಪ್ ಹುಡುಗನ ಕೈ ಬಿಡಲಿಲ್ಲ.

ಇನ್ನು ಏರುಮುಖವಾಗಿ ಹರಿದ ಹಾದಿ. ಹುಡುಗನಿಗೆ ಆಯಾಸ ಸಹಜ. ಪದೇ ಪದೇ ಅವನ ಮುಖಭಾವವನ್ನು ಗಮನಿಸುತ್ತಿದ್ದ ದಿಲೀಪ್.

''ಏನೂ ಪರವಾಯಿಲ್ಲ ಅಂಕಲ್! ಇನ್ನು ಹೆಚ್ಚು ದೂರವಿಲ್ಲ ತಾನೇ?''

''ಇದ್ದಿರಲಾರದು.''

''ನಡೆಯಿರಿ ನಿಧಾನವಾಗಿ ಹೋಗೋಣ.''

ಹಿರಿಯನ ಕೈಯಾಶ್ರದೊಂದಿಗೆ ಕಿರಿಯ ಮುಂದೆ ಮುಂದೆ ನಡೆದ. ಹೆಜ್ಜೆ ಹೆಜ್ಜೆಗೂ ಸಾಗಿತು ಹಾದಿ. ಇನ್ನೂ....ಇನ್ನೂ....

ಹಾದಿ ಕಳೆದು ಮನೆಯ ಮೆಟ್ಟಲೇರಿದಾಗ ಬಾಲಕ ನಿಜಕ್ಕೂ ಏದುಸಿರು ಬಿಡುತಿದ್ದ.

ದೊಡ್ಡ ನಾಯಿಗಳೆರಡು ತಕ್ಕನೆ ನುಗ್ಗಿ ಬಂದುವು ಬೌವ್ ಬೌವ್ ಬೌವ್‌ವುವುವೂವೂ!

ಇಬ್ಬರೂ ತಕ್ಷಣ ಹತ್ತು ಹೆಜ್ಜೆ ಹಿಮ್ಮೆಟ್ಟಿದರು. ಆದರೂ ಅವು ನುಗ್ಗಿ ಬರುತ್ತಲೇ ಇವೆ!

ಜಗಲಿಯಲ್ಲಿ ಕುಳಿತಿದ್ದ ಸ್ವಾಮಿನಿ ತಕ್ಷಣ ಧಾವಿಸಿ ಬಂದು ನಾಯಿಗಳನ್ನು ಗದರಿಸಿ ಹಿಮ್ಮೆಟ್ಟಿಸಿದರೂ ಅವು ಬೊಗಳುವುದನ್ನು ನಿಲ್ಲಿಸಲಿಲ್ಲ. ಸುತ್ತಮುತ್ತೂ ಸುತ್ತಾಡಿ ಅಡ್ಡಗಟ್ಟುತ್ತಲೇ ಇವೆ. ಸ್ವಾಮಿನಿ ತನ್ನ ರಕ್ಷಣೆ ನೀಡಿ ಇಬ್ಬರನ್ನೂ ಒಳ ಬರ ಮಾಡಿಕೊಂಡು ಕೆಲಸದಾಳಿಗೆ ಹೇಳಿ ನಾಯಿಗಳನ್ನು ಕಟ್ಟಿಸಿದಳು.

''ನಿಮಗೆ ನನ್ನ ಪರಿಚಯವಿಲ್ಲ. ನನ್ನನ್ನು ದಿಲೀಪ್ ಎಂದು ಕರೆಯುತ್ತಾರೆ. ನಾವು ಈ ದಿನ ಹೈದರಾಬಾದಿನಿಂದ ಬಂದೆವು'' ಎಂದ ಹಿರಿಯ ವ್ಯಕ್ತಿ.

''ಬನ್ನಿ, ಕುಳಿತುಕೊಳ್ಳಿ'' ಸ್ವಾಗತಿಸಿದಳು ಸ್ವಾಮಿನಿ.

''ಅಂಕಲ್ ಡಾ|| ದಿಲೀಪ್!''

''ಓ! ನಿನ್ನ ಅಂಕಲ್ ಡಾಕ್ಟರೇ! ತುಂಬಾ ಸಂತೋಷ ಮಗೂ! ನೀನು ಏನು ಕಲಿಯುತಿದ್ದಿ?''

ಹುಡುಗತಲೆಯಾಡಿಸಿದ''ಸಧ್ಯ ಏನೂ ಕಲಿಯುತ್ತಿಲ್ಲ. ಮುಂದೆ ಕಲಿಯುವೆ.''

''ನಿನ್ನ ಹೆಸರೇನು?''

''ದತ್ತಾ...ದತ್ತಾರಾಂ!''

''ನಡೆದು ಬಂದು ಆಯಾಸವಾಯಿತೇ? ನಮ್ಮ ಸ್ಥಳ ಎತ್ತರ ಪ್ರದೇಶ. ಹತ್ತಿ ಬರಬೇಕು.''

''ಸ್ವಲ್ಪ....'' ಹುಡುಗ ಮುಗುಳು ನಕ್ಕ.

ಡಾ|| ದಿಲೀಪ್ ಅವನ ಬೆನ್ನಿನ ಮೇಲೆ ಕೈಯಿಟ್ಟು ಹೇಳಿದ ''ದತ್ತೂ ಆಯಾಸ ಪಟ್ಟಿರುವುದು ನಿಜ. ಒಂದು ವರ್ಷದಿಂದ ಆಸ್ಪತ್ರೆಯಲ್ಲಿದ್ದು ಇದೀಗ ಚೇತರಿಸಿ ಕೊಂಡಿದ್ದಾನೆ. ಮಾನಸಿಕ ಮತ್ತು ದೈಹಿಕ ಆಘಾತಕ್ಕೊಳಗಾದ ದುರ್ದೈವಿ!''

''ಓ! ಪಾಪ, ಸಣ್ಣ ಬಾಲಕ' ಎಂದ ಅವಳು.ಒಂದೆರಡು ಗಳಿಗೆ ನಿಧಾನಿಸಿ ಪುನಃ ''ನಿಮ್ಮನ್ನು ಈ ಹಿಂದೆ ನೋಡಿದ ಜ್ಞಾಪಕವಿಲ್ಲ, ನಿಮ್ಮ ಪೂರ್ಣಪರಿಚಯ ಮಾಡಿಕೊಟ್ಟರೆ ಒಳ್ಳೆಯದು.''

''ನಾನು ಡಾ|| ದಿಲೀಪ್, ಹೈದರಾಬಾದಿನಲ್ಲಿ ಸರಕಾರಿ ಆಸ್ಪತ್ರೆಯ ಮಾನಸಿಕ ವಿಭಾಗದಲ್ಲಿ ಡಾಕ್ಟರ್. ನನ್ನ ವಿದ್ಯಾರ್ಥಿ ದೆಶೆಯಲ್ಲಿ ಈ ಪ್ರಾಂತ್ಯಕ್ಕೆ ರಜೆ ದಿನಗಳಲ್ಲಿ ಬಂದು ಹೋಗುತ್ತಿದ್ದೆ. ಇಲ್ಲಿ ನಮ್ಮ ಬಂಧು ವರ್ಗದವರಿದ್ದಾರೆ. ಅದು ನಾಲ್ಕಾರು ವರ್ಷಗಳಷ್ಟು ಹಳೆಯ ಸಮಾಚಾರ. ಈಗ ಈ ದತ್ತೂಗೋಸ್ಕರ ಬರಬೇಕಾಯಿತು ಬಂದೆ.''

''ಅಂದರೆ....?''

“ಇವನು ಖುದೀ ರಾಮರ ತಮ್ಮ ಬಲ್ಲೂರಾಮರ ಮಗ...!”

“ನಿಜವಾಗಿ....?”

“ಹೌದು!”

“ಇದು ತುಂಬಾ ಆಶ್ಚರ್ಯಕರ! ಇವನೊಬ್ಬ ಉಳಿದುದು ಹೇಗೆ?”

“ಇವನನ್ನೇ ಕೇಳಿ, ಹೇಳುತ್ತಾನೆ.”

“ಮಗೂ! ನೀ ನಿಜವಾಗಿಯೂ ಬಲ್ಲೂರಾಮರ ಮಗನೇ?”

“ಹೌದು, ಅಮ್ಮಾಜಿ!”

“ಇದುವರೆಗೂ ನಿನ್ನ ಸುದ್ದಿ ಯಾರ ಬಾಯಿಯಲ್ಲೂ ಕೇಳಲಿಲ್ಲವಲ್ಲಾ, ನೀನು ಗಂಡಾಂತರದಿಂದ ಪಾರಾದುದು ಹೇಗೆ?”

ಹುಡುಗ ಒಣಗಿದ ತುಟಿಗಳನ್ನು ನಾಲಿಗೆಯಿಂದ ಒರಿಸಿಕೊಂಡು ಯಾಂತ್ರಿಕವಾಗಿ ನುಡಿದ, “ಅಂದು, ಎಲ್ಲರೂ ಮಲಗಿದ್ದು ತುಂಬ ಹೊತ್ತಾಗಿ. ಮಧ್ಯರಾತ್ರಿ ಕಳೆದನಂತರ ನನಗೆ ಅರೆಬರೆ ಎಚ್ಚರ....ಹೊರಗಡೆ ಚಟಪಟ ಸದ್ದು ಕೇಳಿಸಿತು. ಎದ್ದು ಬಾಗಿಲು ತೆರೆದು ಹೊರಬಿದ್ದೆ. ಬಾಗಿಲೇ ಉರಿಯುತಿದ್ದುದರಿಂದ ನನ್ನ ಭುಜ, ಕತ್ತು, ಬೆನ್ನು ಸುಟ್ಟಿತು. ಜೋರಾಗಿ ಜಗಲಿಯನ್ನು ಒಂದೇ ನೆಗೆತಕ್ಕೆ ದಾಟಿ ಹೊರಕ್ಕೆ ಜಿಗಿದೆ. ನನಗೆ ಸರಿಯಾಗಿ ಎಚ್ಚರವಾಗಿದ್ದಿದ್ದರೆ ಎಲ್ಲರನ್ನೂ ಎಬ್ಬಿಸಬಹುದಾಗಿತ್ತು. ಏನು ಸದ್ದು ನೋಡೋಣವೆಂದು ಹೊರಬಂದ ತಕ್ಷಣದಲ್ಲೆ ಮನೆಯ ಮೂರೂ ಸುತ್ತೂ ಧಗಧಗ ಉರಿಯುತಿತ್ತು ಬೆಂಕಿ. ಮನೆಯ ಸುತ್ತೂ ಕಟ್ಟಿದ್ದ ಚಾಪೆಗಳಿಗೆ ಪೀರ್ ಮತ್ತು ಅಬ್ದುಲ್ಲಾ ಬೆಂಕಿ ಹಚ್ಚುತಿದ್ದರು! ಬೆಂಕಿಯಲೆಗಳ ಬೆಳಕಿನಲ್ಲಿ ಅವರಿಬ್ಬರನ್ನೂ ಸ್ಪಷ್ಟ ಕಂಡೆ! ಸುಟ್ಟು ಮೈ ಉರಿಯುತಿದ್ದುದು ಗಮನಕ್ಕೆ ಬಾರದಷ್ಟು ವಿವಶತೆ. ನಾನು ಒಮ್ಮೆಗೇ ಡಂಗಾಗಿ ಹೋದೆ. ಮನೆ ಉರಿಯುತ್ತಿದೆ! ನಮ್ಮವರೆಲ್ಲಾ ಒಳಗಿದ್ದಾರೆ! ನಾನು ಹೆದರಿ ಚೀರಿದೆ. ಅವರಲೊಬ್ಬ ಅಟ್ಟಿಸಿಕೊಂಡು ಬಂದ. ನಾನು ಭಯಭೀತಿಯಿಂದ ಕಾಡು ಮೇಡು ಬಿದ್ದು ಓಡಿದೆ. ಅವನು ಹಿಂದಿರುಗಿ ಹೋದ. ನಾನು ದಿಕ್ಕೆಟ್ಟು ಓಡಿದೆ. ಓಡಿಓಡಿ ಸೋತು ಕುಸಿದು ಬಿದ್ದೆ. ನಮ್ಮವರ ದಹನ, ಆಕಾಶದೆತ್ತರಕ್ಕೂ ಏರುತ್ತಿದ್ದ ಹೊಗೆ, ಬೆಂಕಿಯಲೆ. ಚೀತ್ಕಾರ ನನ್ನ ಧೃತಿಗೆಡಿಸಿತು. ಸುಟ್ಟುಹೋದ ಮುಖ-ಕತ್ತು-ಭುಜ ಉರಿಯುತಿತ್ತು. ಉರಿ, ಉರಿ-ತಾಳಲಾಗದ ಉರಿ. ಭಯ-ದುಃಖಗಳ ಅತೀವ ಒತ್ತಡ. ಮನೆ ಸುಟ್ಟು ಹೋದುದರ ಅರಿವು ನನ್ನನ್ನು ಧಿಗ್ಮೂಡನನ್ನಾಗಿಸಿತು. ಅಳುತ್ತ ಹಿಂದಕ್ಕುರುಳಿದೆ. ಅನಂತರ ಏನಾಯಿತೋ ನನಗೆ ತಿಳಿಯದು. ನನಗೆ ಎಚ್ಚರಿಕೆಯಾದಾಗ ಯಾವುದೋ ಆಸ್ಪತ್ರೆಯಲ್ಲಿದ್ದೆ. ಒಂದು

ಕಾಲು ಮುರಿದಿತ್ತು. ಇನ್ನೊಂದು ತುಂಬಾ ಪೆಟ್ಟಾಗಿತ್ತು ಆ ನೋವು-ನರಳಾಟಗಳಲ್ಲಿ ಹಿಂದಿನ ನೆನಪು ಉಳಿಯಲಿಲ್ಲ. ಆ ಮುಂದಿನದು ಅಂಕಲ್‌ಗೆ ಗೊತ್ತು...."

ಡಾ॥ ದಿಲೀಪ್ ಅವನ ಬೆನ್ನಿನ ಮೇಲೆ ಕೈಯಿಟ್ಟು ನುಡಿದ "ಇವನು ಪ್ರಜ್ಞೆತಪ್ಪಿ ಬಿದ್ದಾಗ ಯಾವುದೋ ವಾಹನ ಕಾಲುಗಳ ಮೇಲೆ ಹರಿದು ಹೋಗಿದೆ. ಕಂಡವರಾರೋ ಆಸ್ಪತ್ರೆಗೆ ಸೇರಿಸಿ ಉಪಕರಿಸಿದ್ದಾರೆ. ಒಮ್ಮೆ ಹಾಕಿದ ಪ್ಲಾಸ್ಟರ್ ಸರಿಹೋಗದೆ, ಎರಡನೆಯಬಾರಿ ತೆಗೆದು ಆಪರೇಶನ್ ಮಾಡಿ ಕಾಲು ಕೂಡಿಸಿದ್ದಾರೆ. ಅದೆಲ್ಲಾ ಗುಣವಾಗಲು ಆರೇಳು ತಿಂಗಳು ತೆಗೆದುಕೊಂಡಿದೆ. ಅಲ್ಲಿಯವರೆಗೂ ತನ್ನವರ ಅರಿವು ಮೂಡಿರಲಿಲ್ಲ. ಮಾನಸಿಕ ಆಘಾತದಿಂದ ಹಳೆಯದನ್ನು ಸಂಪೂರ್ಣ ಮರೆತಿದ್ದ. ಬುದ್ಧಿಯೂ ಮಂದವಾಗಿತ್ತು. ಆದ್ದರಿಂದ ಮಾನಸಿಕ ಆಸ್ಪತ್ರೆಗೆ ಕಳುಹಿಸಿದರು, ನಾನಲ್ಲಿನ ಡಾಕ್ಟರು.

"ನಾನು ರಜೆದಿನಗಳಲ್ಲಿ ಇಲ್ಲಿಗೆ ಬಂದಾಗ ಖುದೀರಾಮರ ಮನೆಯ ಅಂಗಳದಲ್ಲಿ ಸಂಜೆ ಹೊತ್ತು ಇತರ ಹುಡುಗರೊಂದಿಗೆ ಆಟಕ್ಕೆ ಸೇರುತಿದ್ದೆ. ಆಗ ಇವನನ್ನು ನೋಡಿದ್ದೆ. ಬಹುಶಃ ಆಗ ಆರೇಳು ವರ್ಷದ ಹುಡುಗ. ಪತ್ರಿಕಾ ಸುದ್ದಿ ಮತ್ತು ಹೋಗಿಬರುವವರಿಂದ ಇಲ್ಲಿ ನಡೆದ ವಿದ್ಯಮಾನ ನನಗೆ ತಿಳಿದಿತ್ತು. ಮುಖಚರ್ಯೆ ಮತ್ತು ಸುಟ್ಟಗಾಯಗಳಿಂದ ಈ ಮಗು ಅವರದೇ ಎಂಬುದು ದೃಢಪಟ್ಟಿತು. ಅನುಕ್ರಮವಾಗಿ ಹಿಂದಿನ ನೆನಪು ಮೂಡಿಸಲು ನಾನು ಶ್ರಮಿಸಿದೆ. ದೈಹಿಕಶಕ್ತಿ ಮತ್ತು ಮಾನಸಿಕ ಆರೋಗ್ಯ ಮೂಡಿಸುವ ಚಿಕಿತ್ಸೆ ಕೈಕೊಂಡೆ. ಕ್ರಮಕ್ರಮೇಣ ಹಿಂದಿನ ನೆನಪು ಮರುಕಳಿಸಿತು. ಅವನು ಪೂರ್ತಿ ಇಲ್ಲಿಯ ವಿಷಯ ನೆನಪಿಸಿಕೊಳ್ಳಲು ಸಮರ್ಥನಾದುದು ಈಚೆಗೆ ಆದ್ದರಿಂದ ನಾನೇ ಇಲ್ಲಿಗೆ ಕರೆತಂದೆ...ಮುಂದಿನದು ನಿರ್ಧರಿಸಬೇಕಾಗಿದೆ."

* * *

ರವಿಚಂದಾನಿ ಡಾಕ್ಟರ ಪರಿಯಚ ಮಾಡಿಕೊಂಡು ವಿಷಯ ತಿಳಿದು ಬಾಲಕನನ್ನು ಆಶ್ಚರ್ಯದಿಂದ ನಿಟ್ಟಿಸಿ ನೋಡುತ್ತ "ನಿಜವಾಗಿಯೂ ಈ ಮಗು....?"

"ಹೌದು, ಬಲ್ಲೂರಾಮರ ಮಗ ದತ್ತಾರಾಂ!'

ಅವನ ತಲೆಯನ್ನು ನೇವರಿಸಿ ಮುದ್ದುಗೈದು "ವಂಶಕ್ಕೊಂದು ಕುಡಿಯಾಗಿ ನೀನಾದರೂ ಬದುಕಿದೆಯಲ್ಲಾ, ದೇವರು ನಿನಗೆ ತುಂಬ ಆಯಸ್ಸು ಕೊಡಲಿ!" ಎಂದು ಶುಭ ಹಾರೈಸಿದ.

ಸ್ವಾಮಿನಿ ಪ್ರೀತ್ಯಾದರದಿಂದ ನುಡಿದಳು "ನಿನಗೊಬ್ಬ ಅಕ್ಕ ಇದ್ದಾಳೆ ಗೊತ್ತೇ?"

''ಓ...ಗೊತ್ತು!'' ಎಂದು ಸ್ವಲ್ಪ ಯೋಚಿಸಿ ನುಡಿದ ದತ್ತೂ ''ಆ ದಿನ ಮನೋನ್ಮಣಿ ನಿಮ್ಮ ಮನೆಯಲ್ಲಿ ಉಳಿದಿದ್ದಳು ಅಲ್ಲವೇ?''

''ಹೌದು ಮಗೂ!''

ದಿಲೀಪ್ ಅಂದ ''ಈವರೆಗೆ ಅದು ನೆನಪಿಗೆ ಬಂದಿರಲಿಲ್ಲ. ಈಗ ನೀವು ಸುದ್ದಿ ಎತ್ತಿದ ಮೇಲೆ ನೆನಪಿಸಿಕೊಂಡ. ಹೀಗೆಯೇ ಒಂದೊಂದಾಗಿ ನೆನಪು... ಈಗ ಮನೋನ್ಮಣಿ ಎಲ್ಲಿದ್ದಾಳೆ?''

''ಪಾಪ, ಬಹಳ ನೊಂದಿದ್ದಾಳೆ. ಈಗ ಇವನನ್ನು ನೋಡಿದರೆ ಎಷ್ಟು ಸಂತೋಷ ಪಡುತ್ತಾಳೋ. ಒಳ್ಳೆಯ ಕುಟುಂಬ ...ಒಳ್ಳೆಯ ಹುಡುಗಿ, ತುಂಬಾ ಅನ್ಯಾಯವಾಯಿತು.''

''ಈಗ ಎಲ್ಲಿದ್ದಾಳೆ...?''

''ಡಾಕ್ಟರ್, ಅವಳು ಕಾನ್ವೆಂಟಿನ ಬೋರ್ಡಿಂಗಿನಲ್ಲಿದ್ದಾಳೆ'' ಎಂದು ಅವಳ ದುಃಖಭರಿತ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಸಿದ ಅಲಕಚಂದಾನಿ ''ಈಶ್ವರೇಚ್ಛೆ!'' ಎಂದು ನಿಟ್ಟುಸಿರು ಬಿಟ್ಟಳು.

ಡಾ॥ ದಿಲೀಪ್ ಅಂದಿಂದಿನ ವಿಷಯವನ್ನೆಲ್ಲಾ ಮನದಲ್ಲೇ ಮೆಲಕು ಹಾಕಿದ. ಮನೋನ್ಮಣಿ ಚಿತ್ತವತ್ತಾಗಿ ಮನದಲೆಯಲ್ಲಿ ಮೂಡಿನಿಂತಳು. ಆ ಆಟದ ಕೂಟ ಮನವನ್ನು ಗತಕಾಲಕ್ಕೆ ಬಿಗಿಯಿತು.

''ಡಾಕ್ಟರ್ ಜಗತ್‌ರಾಮನಿಗೆ ಮಗಳು, ಬಲ್ಲೂರಾಮನಿಗೆ ಮಗ ವಂಶಪೂರಕವಾಗಿ ಉಳಿದಿದ್ದಾರೆ. ಭಗವಂತ ಪರೋಕ್ಷವಾಗಿ ಹೇಗೆ ಸಹಾಯ ಮಾಡುತ್ತಾನೆ ಎಂಬುದಕ್ಕೆ ಇದೇ ಉದಾಹರಣೆ. ಇವನ ಸೋದರತ್ತೆ ಮಹಮ್ಮದನ ಮೇಲೆ ಕೋರ್ಟಿನಲ್ಲಿ ದಾವೆ ಹೂಡಿದ್ದಾಳೆ. ಸರಿಯಾದ ಸಾಕ್ಷಿ ಪುರಾವೆ ಒದಗಿದರೆ ಕೇಸು ಗೆಲ್ಲಬಹುದು; ಈ ಅನಾಥ ಮಕ್ಕಳಿಗೊಂದು ದಿಕ್ಕಾಗುತ್ತೆ.''

''ಮಹಮ್ಮದ್‌ಪಾಶನ ವಿಷಯವೆಲ್ಲಾ ನನಗೆ ಗೊತ್ತು. ಆತ ನನಗೆ ದೂರದ ಸಂಬಂಧಿಯೇ. ಆದರೂ ಪರವಾಯಿಲ್ಲ. ಕೋರ್ಟಿನಲ್ಲಿ ನಾನು ಸಾಕಷ್ಟು ಸಾಕ್ಷಿ-ಪುರಾವೆಗಳನ್ನು ಒದಗಿಸಲು ಸಿದ್ಧ. ನಾನು ಜಾತಿಗಾಗಿ ಮರುಗವನಲ್ಲ. ದೇವರು-ಧರ್ಮಕ್ಕಾಗಿ ಹೋರಾಡುವವನು. ಸಾಕ್ಷಿ ಪಟ್ಟಿಯಲ್ಲಿ ನನ್ನನ್ನು ಸೇರಿಸಿಬಿಡಿ. ಮಹಮದ್‌ಪಾಶನನ್ನು ಜೇಲಿಗೆ ಕಳಿಸದಿದ್ದರೆ ಕೇಳಿ!'' ಅರಳುಗಣ್ಣುಗಳಲ್ಲಿ ಕಾಂತಿಯ ಮಿಂಚು ಫಳಫಳನೆ ಮಿನುಗಿತು. ಗಂಭೀರ ದನಿಯಲ್ಲಿ ಧರ್ಮನಿಷ್ಠೆ-ದೇಶನಿಷ್ಠೆ ಉಕ್ಕಿಹರಿಯುತ್ತಿದ್ದಂತೆ ಭಾವೋತ್ಕರ್ಷತೆಯಿಂದ ನಿಶ್ಚಲಭಂಗಿ ತಾಳಿದ ಡಾ॥ ದಿಲೀಪ್.

ರವಿ ಚಂದಾನಿ ದಂಪತಿಗಳು ಡಾ|| ದಿಲೀಪನ ಸಹಕಾರ ಮತ್ತು ಧರ್ಮಪ್ರಜ್ಞೆಯನ್ನು ಕಂಡು ನಿಜಕ್ಕೂ ಸಂತುಷ್ಟರಾದರು. ಅವನನ್ನು ಯಾವ ರೀತಿ ಅಭಿನಂದಿಸಬೇಕೋ ತಿಳಿಯಲಿಲ್ಲ "Thank you" ಎಂದರು ಮಾತ್ರ.

"ಇಲ್ಲಿಗೆ ರಜೆ ದಿನಗಳಲ್ಲಿ ನೀವು ಏತಕ್ಕಾಗಿ ಬರುತಿದ್ದಿರಿ?"

ರವಿ ಚಂದಾನಿಯ ಪ್ರಶ್ನೆಗೆ ಡಾ|| ದಿಲೀಪ್ ಉತ್ತರಿಸಿದ "ಬಾಂಕೇ ವಾಡಿಯಲ್ಲಿ ನನ್ನ ಅಕ್ಕ ಇದ್ದಾಳೆ. ರಜೆ ದಿನಗಳಲ್ಲಿ ಇಲ್ಲಿಗೆ ಬಂದು ಹೋಗಲು ಕಾರಣ ಅಕ್ಕ..ಅವಳ ಮಕ್ಕಳು ಮತ್ತು ಈ ಹುಡುಗರು ಕೂಡಿ ಓದಿದವರು. ಅವರಿಂದಾಗಿ ನನಗೆ ಇವರ ಪರಿಚಯ."

"ಓಹೋ....ಸರಿ, ಸರಿ."

"ಇಲ್ಲಿಂದ ಕಾನ್ವೆಂಟು ಎಷ್ಟು ದೂರ ?"

"ಡಾಕ್ಟರ್! ಸುಮಾರು ಮೂರು ಮೈಲಿಯ ಮೇಲಾಗುತ್ತೆ. ಬೆಳಿಗ್ಗೆ ಎಂಟು ಗಂಟೆಗೆ ಬಾಂಕೇವಾಡಿಯ ಮೂಲಕ ಬಸ್ಸು ಧಾರಿಯಾವರೆಗೆ ಹೋಗುತ್ತೆ. ಅದೇ ಬಸ್ಸು ಸಂಜೆ ಐದು ಗಂಟೆಗೆ ಹಿಂದಿರುಗುತ್ತೆ. ನಡುವೆ ಇನ್ನಾವ ಬಸ್ಸುಗಳಿಲ್ಲ. ಹೆದ್ದಾರಿಗೆ ಇಲ್ಲಿಂದ ಒಂದು ಮೈಲಿ ನಡೆಯಬೇಕು....ಬಾಂಕೇವಾಡಿಯಿಂದ ಕಾನ್ವೆಂಟಿಗೆ ಒಂದು ಮೈಲಿ. ರಸ್ತೆಗಳಿಲ್ಲ; ವಾಹನ ಸೌಕರ್ಯವೂ ಇಲ್ಲ. ಕಾಲ್ನಡಿಗೆಯಲ್ಲಿಯೇ ಶಾಲೆಗೆ ಹೋಗಬೇಕು. ಮಕ್ಕಳು. ಪರಿಸರದವರಿಗೆ ತೊಂದರೆ ಇಲ್ಲ;ದೂರದವರಿಗೆ ತೊಂದರೆ."

ಅಲಕಾ ಚಂದಾನಿ ವಿವರಿಸಿದುದನ್ನು ದತ್ತು ಗಮನಿಸಿದ. ಚಿತ್ತಭಿತ್ತಿಯಲ್ಲಿ ಅಂದಿನ ದಿನಗಳು ಚಲನ ಚಿತ್ರದಂತೆ ಸುಳಿದಳಿದುವು.

ರವಿ ಚಂದಾನಿ ಬಾಲಕನ ಮುಖಭಾವದಲ್ಲಿ ಮುದ್ರೆಯೊತ್ತಿದ ಅಂತರ್ನಿಹಿತ ಯೋಚನಾ ತರಂಗಿಣಿಯ ನಾಟ್ಯ ವೈಖರಿಯನ್ನು ಕಂಡುಂಡು "ಪಾಪ....! ಏನಾಗಿ ಹೋಯಿತು!"ಎಂದುಕೊಂಡ. ಮನಸ್ಸು ಮರ್ಮರ ಮರುಗಿತು. ಹೃತ್ಸಾಗರದಲ್ಲಿ ಇನ್ನೆಂತಹ ಆಂದೋಳನವೋ....

"ನಾವು ಕಾನ್ವೆಂಟಿಗೆ ಯಾವಾಗ ಹೋಗೋಣ ?"

"ಬೆಳಗಿನ ಬಸ್ಸು ಹೊರಟು ಹೋಗಿದೆ. ಇನ್ನು ನಾಳೆ ಬೆಳಿಗ್ಗೆ ಬಸ್ಸು ಹಿಡಿಯಬೇಕು. ಇಲ್ಲದಿದ್ದರೆ ಇಲ್ಲಿಂದ ಕಾನ್ವೆಂಟಿನವರೆಗೂ ನಡೆಯಬೇಕು. ಹುಡುಗ ಬಳಲಿದ್ದಾನೆ. ನಾಳೆ ಹೋಗುವುದು ಒಳ್ಳೆಯದು."

"ರವಿ ಚಂದಾನಿಯ ಸಲಹೆಯನ್ನು ಅನುಮೋದಿಸಿ ನುಡಿದಳು ಅಲಕಾ

ಚಂದಾನಿ ''ಹೌದು ಡಾಕ್ಟರ್! ನೀವು ನಾಳೆ ಹೊರಡುವುದೇ ಸರಿ. ಈ ಈವೊತ್ತು ಹೋಗಲಾರಿರಿ.''

''ಇಲ್ಲಿಂದ ಟೆಲಿಫೋನೂ ಇಲ್ಲವೆನಿಸುತ್ತೆ.''

''ಇಲ್ಲ....ಇಲ್ಲ. ಇಲ್ಲಿಗೆ ಇನ್ನೂ ಆ ಸೌಕರ್ಯ ಬಂದಿಲ್ಲ. ಅದೆಲ್ಲಾ ಒದಗಬೇಕಾದರೆ ಇನ್ಯಾವ ಕಾಲವೋ....''

''ಇವನನ್ನು ಇಲ್ಲಿ ಬಿಟ್ಟು ನಾನೊಬ್ಬನೇ ಹೋದರೆ ಮನೋನ್ಮಣಿಯನ್ನು ನೋಡುವಂತಿಲ್ಲ. ದತ್ತೂ ನೀನೇನು ಹೇಳುತ್ತಿ ?''

''ನಾನು ನಿಮ್ಮೊಂದಿಗೆ ಬರುವೆ ಅಂಕಲ್!''ಗೋಗರೆಯಿತು ದನಿ.

ದಿಲೀಪ್ ಸುಮ್ಮನಾದ. ಮನೋನ್ಮಣಿ ಚಿತ್ತಭಿತ್ತಿಯಲ್ಲಿ ಸುಳಿದಳಿದಳು....ಎಷ್ಟು ದೊಡ್ಡ ಕುಟುಂಬ ಏನಾಗಿಹೋಯಿತು ? ಈ ದ್ವೇಷ-ಮೋಸಗಳಿಗೆ ಎಂದಾದರೂ ಕೊನೆಯುಂಟೇ ? ಮನುಷ್ಯನಾಗಿ ಹುಟ್ಟಿ ಮಾನವೀಯತೆಯನ್ನು ಅರಿತುಕೊಳ್ಳದಿದ್ದರೆ ಹೇಗೆ ? ಇದಕ್ಕೆ ಕೊನೆಯೆಂದಿಗೆ ? ....ಎಂದಿಗೆ ?? ಎಂದಿಗೆ ??

ಡಾ॥ ದಿಲೀಪ್ ಒಂದು ಗಳಿಗೆ ಯೋಚಿಸಿದ....ಇಲ್ಲಿ ಉಳಿಯುವುದೆಂದರೆ ಸಮಯ ಹಾಳು. ಅಷ್ಟು ದೂರ ನಡೆಯುವುದೂ ದತ್ತುವಿಂದ ಸಾಧ್ಯವಾಗದು. ಅದೇ ನೇರಕ್ಕೆ ನಮ್ಮಿಂದ ಇವರಿಗೆ ತೊಂದರೆ. ಏನು ಮಾಡಲಿ ? ಪ್ರಶ್ನೆ ಚಿತ್ತಭಿತ್ತಿಯಲ್ಲಿ ನಿಮಿರಿ ನಿಂತಿತು. ಕೆಲವು ಕ್ಷಣ ಅನಿಶ್ಚತೆಯಲ್ಲಿ ಉರುಳಿದುವೇನೋ....ದೃಷ್ಟಿ ಬಾಲಕನ ಮೇಲೆ ಹೊರಳಿತು. ಆಗ ಅವನು ಆತುರ ಕಾತರ ಭಾವದಿಂದ ಮನದಳಲನ್ನು ತೋಡಿಕೊಂಡ ''ನಾನು ಮನೋನ್ಮಣಿಯನ್ನು ನೋಡುವೆ.''

''ಮಗೂ, ಈಗಾಗಲೇ ಶಾಲೆ ಬಿಡುವ ಹೊತ್ತು. ಇಷ್ಟರಲ್ಲೇ ಸುಶೀ ಬರುತ್ತಾಳೆ. ನಾವು ಈಗ ಹೊರಡುವಂತಿಲ್ಲ. ಬೆಳಿಗ್ಗೆ ಬಸ್ಸು ಸಿಗುತ್ತೆ. ನಾವೂ ಬರಬಹುದು. ಮದರ್ ಕಂಡು ಮುಂದಿನ ವಿದ್ಯಮಾನದ ಬಗ್ಗೆ ಮಾತಾಡಲು ಅನುಕೂಲ....''

ಅಲಕಾ ಚಂದಾನಿಯ ಮಾತು ಮನದಾಳಕ್ಕಿಳಿಯಿತು. ಹಾಗೇ ಯೋಚನಾಶೀಲನಾದ. ಪುಟ್ಟಪುಟ್ಟ ಕಣ್ಣುಗಳಲ್ಲಿ ಆಶಾಭಾವ ತುಳುತುಳುಕಿ ಹಿಂಗಿತು.

ರವಿ ಚಂದಾನಿ ಬಾಲಕನ ಗಲ್ಲ ಹಿಡಿದು ಮುದ್ದಿಸಿ ಕೇಳಿದ ''ನೀನು ನಮ್ಮಲ್ಲೇ ಇದ್ದು ಇಲ್ಲಿಂದ ಶಾಲೆಗೆ ಹೋಗಿ ಬರುವುದಾದರೆ ಸಂತೋಷ. ಇಲ್ಲಿಂದ ಸುಶೀ ಒಬ್ಬಳೇ ಹೋಗುತ್ತಾಳೆ. ಅವಳೊಂದಿಗೆ ಹೋಗಿ ಬರಬಹುದು. ನಮಗೂ ಗಂಡು ಮಕ್ಕಳಿಲ್ಲ. ನೀನು ನಮ್ಮ ಕಷ್ಟಸುಖಗಳಿಗೆ ಹೊಂದಿಕೊಳ್ಳಬಲ್ಲೆಯಾದರೆ ಮುಂದೆ ನಿನಗೂ ಅನುಕೂಲ; ನನಗೂ ಅನುಕೂಲ. ಏನು ಮಾಡುತ್ತಿ ಹೇಳು ?''

"........."

"ಹೇಳು ಮಗೂ."

ದತ್ತೂ ತಲೆಬಾಗಿದ. ಮೌನ ಮುದ್ರೆಯೇ ಉತ್ತರವಾಯಿತು.

ಸುಶೀ ಶಾಲೆಯಿಂದ ಬಂದವಳೇ ದೃಷ್ಟಿಯನ್ನು ಅತಿಥಿಗಳ ಕಡೆ ಹೊರಳಿಸಿದಳು. ಇಬ್ಬರದೂ ಪರಿಚಿತ ಮುಖ. ಯಾರೆಂಬುದು ಮಾತ್ರ ಸ್ಪಷ್ಟ ತಿಳಿಯದು.

ದಿಲೀಪ್ ನಗು ಮುಖದಿಂದ ಕೇಳಿದ "ನಾವು ಯಾರೆಂಬುದು ತಿಳಿಯಿತೇ ಸುಶೀ...."

ಸುಪರಿಚಿತ ಧ್ವನಿ....ಯಾರಿರಬಹುದು ?

ದತ್ತು ನಗುಮುಖದಿಂದ ನೋಡುತ್ತಿದ್ದರೆ ಅವಳು ಕಕ್ಕಾಬಿಕ್ಕಿ. ಮಿಳ್ ಮಿಳ್ಳನೆ ನಿಟ್ಟಿಸಿದುವು ಕಣ್ಣುಗಳು. ಆದರೂ ಅವಳು ನಿರುತ್ತರೆ.

ಯಾರ ತುಟಿಯೂ ಬಿರಿಯಲಿಲ್ಲ; ಎಲ್ಲರಿಗೂ ಕಾದುನೋಡುವ ಅಭಿಲಾಷೆ ಎಲ್ಲರಕಣ್ಮನಗಳು ಇಬ್ಬರ ಮೇಲೂ ಕೇಂದ್ರಿಕೃತ....ಆನಂದಾಮೋದದ ದಿಬ್ಬಣದಲ್ಲಿ ಸಡಗರ.

ಸ್ವಲ್ಪಹೊತ್ತು ಮೌನಗತಿಯಲ್ಲಿ ಉರುಳಿಹೋದರೂ ಎಲ್ಲರ ಮುಖದಲ್ಲೂ ಮಂದಹಾಸದ ಮುಗುಳ್ನಗು. ಸುಶೀ ಎಲ್ಲರ ಮುಖವನ್ನೂ ಒಮ್ಮೆ ನಿಟ್ಟಿಸಿ ನೋಡಿ ಊಹಿಸಲಾರದೆ ನೋಟವನ್ನು ದತ್ತುವಿನ ಕಡೆ ಹೊರಳಿಸಿ ನೋಡಿ "ನೀನು....ನೀನು ದತ್ತೂ....ದತ್ತಾರಾಂ! ಹೌದೇ?....ನಿಜವಾಗಿಯೂ ಹೌದೇ?"

ಪ್ರಶ್ನೆಯಲ್ಲಿ ಆತುರ-ಕಾತರ, ಕಷ್ಟ-ಸುಖಗಳ ನೆರೆಯುಕ್ಕಿ ಬಂತು. ಆವೇಗಾತಿಶಯದ ದನಿ ಮತ್ತೊಮ್ಮೆ ಹರಿಯಿತು "ಹೌದೇ?"

ದತ್ತು "ಹೌದು"ಎಂಬಂತೆ ತಲೆಯಾಡಿಸಿದ. ತುಟಿಗಳ ಮುಗುಳ್ನಗು ಮಾಸಲಿಲ್ಲ. "ಅಯ್ಯೋ, ನಾವೆಲ್ಲಾ ಎಷ್ಟು ಕೂಡಿ ಆಡಿದ್ದೇವೆ ? ಆದರೂ ಗುರುತು ಸಿಗಲಿಲ್ಲವಲ್ಲಾ ?" ಎಂದು ಓಡಿ ಬಂದು ಅಪ್ಪಿಕೊಂಡಳು ಸುಶೀ. ಮೈಯಲ್ಲಿ ಸುಖ ಸಂತೋಷಗಳ ಹೊನಲು ಜರ್‍ರನೆ ಹರಿದಾಡಿ ಮೈ ಪುಳಕಿತವಾಯಿತು. ಅವನೂ ಪುಳಕಿತನಾದ. ಸಂಕೋಚ ಪ್ರವೃತ್ತಿಯೂ ಹೆಡೆಯೆತ್ತಿತ್ತು. ಸಣ್ಣಗೆ ಮುದುಡಿ ಕೊಂಡ.

ಡಾ॥ ದಿಲೀಪ್ "ದತ್ತೂ ಸಂಕೋಚ ಪಡಬಾರದು. ನಿನಗೆ ಇವರೆಲ್ಲಾ ಪರಿಚಯ ತಾನೆ ?"

".........."

ಡಾ॥ ದಿಲೀಪ್ ಅವನನ್ನು ಸಂತೈಸುತ್ತ ಮನಸ್ಸಿಗೆ ಧೈರ್ಯ ತುಂಬಿ, ರವಿ ಚಂದಾನಿಯನ್ನು ಕುರಿತು "ಮೊಟ್ಟ ಮೊದಲಿಗೆ ನನ್ನನ್ನು ಗುರುತಿಸಿದಾಗ ತಾನು ಇಂತಹವನು ಎಂದು ಅರಿತಾಗ ತನ್ನವರ ಗತಿ ನೆನಪಿಗೆ ಬಂದಾಗ ಅವನ ಸ್ಥಿತಿ ಸೂಕ್ಷ್ಮಾತಿಸೂಕ್ಷ್ಮ ನನ್ನ ಕೊಠಡಿಯಲ್ಲೇ ಇಟ್ಟುಕೊಂಡಿದ್ದುದರಿಂದ ನಾನು ಅಂತಹ ಭಾವಾತಿರೇಕದ ಸಂದರ್ಭದಲ್ಲಿ ಮನಸ್ಸಿಗೆ ಅಘಾತವಾಗದಂತೆ ನೋಡಿಕೊಂಡಿರುವೆ. ಸುಮಾರು ಆರೇಳು ತಿಂಗಳು ತನ್ನ ಅರಿವಿರಲಿಲ್ಲ. ಕಾಲು ಮೊದಲಬಾರಿಗೆ ಸರಿಯಾಗಿ ಕೂಡದೆ ಡೊಂಕಾದುದರಿಂದ ಎರಡನೆಯ ಬಾರಿ ಆಪರೇಷನ್ ಮಾಡಿ ಕೂಡಿಸುವ ಪ್ರಸಂಗದಿಂದ ಹಣ್ಣಾಗಿದ್ದಾನೆ. ಆವರೆಗೆ ಅವನಿಗೆ ಜ್ಞಾನೋದಯವಾಗದುದು ಒಳ್ಳೆಯದೇ ಆಯಿತು. ನಮ್ಮಲ್ಲಿಗೆ ಬಂದು ಒಂದೆರಡು ತಿಂಗಳನಂತರ ಜ್ಞಾಪಕ ಶಕ್ತಿ ಬೆಳೆಯಿತು. ನಿಧಾನವಾಗಿ ಒಂದೊಂದನ್ನು ಜ್ಞಾಪಿಸಿಕೊಳ್ಳತೊಡಗಿದ...."

"ದೇವರು ದೊಡ್ಡವನು!"

* * *

ವೈಶಾಖ ಪೂರ್ಣಿಮಾ. ಪೂರ್ಣ ಚಂದ್ರಬಿಂಬ ಚೆಲ್ಲಿ ಸೂಸಿದ ಬೆಳುದಿಂಗಳ ಧಾರೆ.

ಕಿಟಕಿಯಲ್ಲಿ ನೋಡುತ್ತಿದ್ದರೆ ಹೊರ ಹೋಗಿ ಗಾಳಿಗಡ್ಡಾಡೋಣವೇ ಎಂಬಷ್ಟು ಹಿತ. ಆದರೆ, ಭೀತ ಭೀತ ಪರಿಸ್ಥಿತಿ. ಹೊರ ತಲೆ ಹಾಕುವುದು ಕಷ್ಟ. ಎಲ್ಲೆಲ್ಲೂ ಗೂಂಡಾಯಿಜಂ ಪ್ರಭಾವ. ಬಿಳಿಯರ ಧೂರ್ತತನ-ದಬ್ಬಾಳಿಕೆ-ಕಂಡಕಂಡಲ್ಲಿ ಹೊಡೆತ-ಲಾಠೀ ಪ್ರಹಾರ. ತಿರಸ್ಕಾರ-ಅನೀತಿ-ಅನ್ಯಾಯ-ಅನಾದರಣೆ ಇಂತಹ ಆಡಳಿತೆಯ ದುರ್ಲಾಭ ಪಡೆದ ವರ್ಗಗಳು ನಡೆಸುವ ಭೀಕರ ಅನಾಹುತ, ದರೋಡೆ, ಕೊಲೆ, ಸುಲಿಗೆಗಳಿಂದ ಹೆದರಿ ಹೈರಾಣಾದ ದುರ್ಬಲ ಸ್ತ್ರೀಜನಕ್ಕೆ ರಕ್ಷಣೆಯಾಗಲೀ, ಅಭಯ ಹಸ್ತವಾಗಲೀ ಇಲ್ಲವೇ ಇಲ್ಲ. ಹಿಂದೆ-ಮುಂದೆ ಕದ ಮುಚ್ಚಿಕೊಂಡು ಜೀವ ಭಯದಿಂದ ಉಸಿರಾಡುವ ಪರಿಸ್ಥಿತಿಯಲ್ಲಿ ಬೆಳುದಿಂಗಳ ತಂಪು-ಸೊಂಪು-ಕಂಪು ಪ್ರತಿಯೊಂದು ಇಂದು ಗಗನ ಕುಸುಮ. ಇರುಳಿನ ತಂಪಿಗಿಂತ ಹಗಲಿನ ಸುಡು ಬಿಸಿಲೇ ಉತ್ತಮ; ಹೊರ ಪ್ರಪಂಚದಲ್ಲಿ ಅಲ್ಪಸ್ವಲ್ಪ ಉಸಿರಾಡಬಹುದು.

ಕಾವು-ತಂಪು, ತಂಪು-ಕಾವು. ತಂಪನ್ನು ಬಯಸಿ ಹೊರ ಹೆಜ್ಜೆಯಿಟ್ಟರೆ ಕಾವು ಖಂಡಿತ.

ನೀಲಮಣಿ ಕಣ್ಮುಚ್ಚಿ ತನ್ನ ನೋವನ್ನು ತಾನೇ ನುಂಗಿ ಮೈ ತುಂಬಾ ಹೊದ್ದು ಮಲಗಿದಳು. ಕಿಟಕಿಯಲ್ಲಿ ತೂರಿದ ಬೆಳುದಿಂಗಳಿಂದ ಒಳಗೆಲ್ಲಾ ಬೆಳ್ಳನೆ ಬೆಳಕು....

ಕಣ್ಮುಚ್ಚಿಕೊಂಡರೂ ನಿದ್ದೆ ಬಾರದು. ಮಾನಸ ಪಕ್ಷಿ ಜೀವಮಾನದ ಗೊಂಡಾರಣ್ಯದಲ್ಲಿ ಅಡ್ಡಾಡಿ ಸುಖ ದುಃಖಗಳ ಗಣಿಯಾಯಿತು....ಗಳಿಗೆ ಗಳಿಗೆಗಳೂ ತಾಸು ತಾಸುಗಳೂ ಉರುಳಿ ಹೋದುವು. ನಿದ್ದೆ ಈ ಬಳಿಯಲ್ಲಿ ಸುಳಿಯದು. ಆಗಿನಿಂದಲೂ ದಿಂಬು ತೊಯ್ಯುತ್ತಲೇ ಇದೆ. ಬದುಕು ಎಲ್ಲಾ ರೀತಿಯಲ್ಲೂ ಹಿಂಸ್ರಕ. ಭಗವಂತ ಏಕಿಷ್ಟು ನಿರ್ದಯಿ....'' ಅದೇ ಅರ್ಥವಾಗದ ವಿಷಯ.

ಬೆಳಗಿನ ಝಾವದಲ್ಲಿ ತಂಗಾಳಿ ತಣ್ಣಗೆ ತೀಡಿದ ಮೇಲೆ ನಿದ್ದೆಯ ಮಂಪರ ಕಣ್ಣಿಗೆ.

....ಬಾಂಕೇವಾಡಿಯ ಮನೆಯಲ್ಲಿ ಎಲ್ಲರಿದ್ದಾರೆ! ಖುದೀರಾಂ ಎಲ್ಲರನ್ನೂ ಸುತ್ತಮುತ್ತ ಕೂರಿಸಿಕೊಂಡು ಹೇಳುತ್ತಿದ್ದಾನೆ. ಈಗಣ ಪರಿಸ್ಥಿತಿಯಲ್ಲಿ ಬದುಕು ಕಷ್ಟವೇ. ಆದರೇನು? ನಾವು ಸೋಲಲೇ ಬಾರದು! ನಮ್ಮ ವ್ಯವಹಾರ ಮುಂದೆಯೂ ಹೀಗೇಯೇ ನಡೆಯಬೇಕು. ಮುಂದೆ ದತ್ತೂರಾಂ ಈ ಮನೆಗೆ ಯಜಮಾನ. ನನ್ನ ಮುದ್ದಿನ ಮಗಳು ಮನೋನ್ಮಣಿ ವೈದ್ಯಕೀಯ ಕಲಿತು ಈ ಪ್ರಾಂತ್ಯದ ಬಡಜನರಿಗೆ ಆಧಾರವಾಗಲೇ ಬೇಕು. ನೀಲಾ-ನೀನು ಇಲ್ಲಿಗೇ ಬಂದುಬಿಡು. ನಿನ್ನ ಆಸ್ತಿ-ಮನೆ ಹರಿಕಿಷನ್‌ಗೆ ಬಿಟ್ಟು ಈ ಮನೆ-ಈ ಮಕ್ಕಳನ್ನು ನೋಡಿಕೋ....!

ಒಂದು ಕಡೆ ದತ್ತೂರಾಂ ಇನ್ನೊಂದು ಕಡೆ ಮನೋನ್ಮಣಿಯನ್ನು ತಬ್ಬಿ ಹಿಡಿದಿದ್ದಾನೆ ಖುದೀರಾಂ. ಆ ಮುಖಭಾಗದಲ್ಲಿ ಎಂತಹ ಪ್ರಸನ್ನತೆ....? ಎಂತಹ ರಾಗಭಾವೋತ್ಕರ್ಷತೆ? ಹಾ....!

''ಅಮ್ಮಣ್ಣೀ....ಅಮ್ಮಣ್ಣೀ!''

ತಟ್ಟನೆ ಕಣ್ತೆರೆದಳು ನೀಲಮಣಿ. ಆಗಲೇ ಬೆಳ್ಳಂಬೆಳಗಾಗಿದೆ. ಹರಿಕಿಷನ್ ಕಿಟಕಿಯ ಬಳಿಯಲ್ಲಿ ನಿಂತು ಕರೆಯುತ್ತಿದ್ದಾನೆ ''ಅಮ್ಮಣ್ಣೀ!....ಅಮ್ಮಣ್ಣೀ!''

''ಏನಪ್ಪಾ ಹರೀ?''

''ನೀವು ಎಂದೂ ಹೀಗೆ ಮಲಗಿದ್ದೇ ಇಲ್ಲ. ನನಗೆ ಸ್ವಲ್ಪ ಗಾಬರಿಯಾಯ್ತು ಅದಕ್ಕೇ....''

''ಓ....! ರಾತ್ರಿ ನಿದ್ದೆ ಬರುವುದೇ ಇಲ್ಲ. ಇಂದು, ಬೆಳಗಿನ ಝಾವ ನಿದ್ದೆ ಬಂದಿತು. ಅದರಲ್ಲಿ ಎಂತಹ ಕನಸು ಕಂಡೆ ಗೊತ್ತಾ? ಬಾಂಕೇವಾಡಿಯ ಮನೆಯಲ್ಲಿ ಎಲ್ಲರೂ ಇದ್ದುದನ್ನು ಕಂಡೆ. ಖುದೀರಾಂ ಮನೋನ್ಮಣಿ ಮತ್ತು ದತ್ತೂರಾಂ-ನನ್ನು ತಬ್ಬಿ ಹಿಡಿದುಕೊಂಡು ಎಷ್ಟೊಂದು ಆಸ್ಥೆಯಿಂದ ಮಾತಾಡಿದ....ಅಹಹ! ಇನ್ನೊಮ್ಮೆ ಅದೇ ಕನಸು ಬೀಳುವುದಾದರೆ ದಿನವೆಲ್ಲಾ ಮಲಗಿಯೇನು!''

"ಪಾಪ, ಎಲ್ಲರೂ ಎಲ್ಲೆಲ್ಲಿ ಆತ್ಮಶಾಂತಿ ಇಲ್ಲದೆ ಅಲೆಯುತ್ತಿದ್ದಾರೋ ಅಮ್ಮಣ್ಣಿ! ಬಾಳು ತುಂಬದೆ ಹೋದವರು. ನಾವೇ ಅವರ ಆತ್ಮಶಾಂತಿಗಾಗಿ ಪ್ರಾರ್ಥಿಸಬೇಕು. ಅಮ್ಮಣ್ಣೀ! ಮುಖ ತೊಳೆಯಿರಿ. ಇಂದು ಜಮೀನಿನ ಸುತ್ತೂ ಬೇಲಿ ಹಾಕುವೆ. ಅದಕ್ಕೆ ಗೂಟ ಕಡಿದಿಟ್ಟಿರುವೆ. ತಂತಿ ಕೊಳ್ಳಬೇಕು. ನಾನು ಮುಂಚಿತವಾಗಿ ಹೊರಡುವೆ; ಅಂಗಡಿ ಸಾಲಿಗೆ. ನಿಮಗೆ ಹೇಳುವುದಕ್ಕಾಗಿಯೇ ಬಂದೆ. ಅಷ್ಟೇ ತಾಯಿ, ಇನ್ನೇನಿಲ್ಲ"

"ಆಗಲಿ, ಹೋಗಿ ಬಾಪ್ಪ!"

ಅವನು ಹೊರಟ. ಲರಕ್ ಲರಕ್ ಪಾದರಕ್ಷೆಗಳ ಸದ್ದು ಅಂಗಣ ದಾಟುವವರೆಗೂ ಕೇಳಿಸಿತು.

ನೀಲಮಣಿ ಪೂರ್ವ ದಿಗಂತದಲ್ಲಿ ಮುಂಬೆಳಕು ತುಳುಕುವುದನ್ನೇ ನೋಡಿದಳು.

೧೪

ಮದರ್ ಸಿಲ್ವಿಯಾಳ ಆಫೀಸ್.

ಗೋಡೆಯ ಬದಿಯ ಮೇಜಿನ ಮೇಲೆ ಅಲಂಕರಿಸಿದ ಪುಷ್ಪಕುಂಡ. ಸ್ಟಾಂಡಿನ ಮೇಲೆ ಬೀರುವಿನಲ್ಲಿ ಅತ್ಯಂತ ಅಲಂಕಾರಿಕವಾದ ಹಿತ್ತಾಳೆ ಮತ್ತು ತಾಮ್ರಗಳ ಸುಂದರ ಕಲಾಕೃತಿಗಳು. ಹರವಾದ ಎಣ್ಣೆಯೊರೆದಂತಹ ನಯುವಾದ ಮೇಜು. ಮುಂದೆ ನಾಲ್ಕಾರು ಕುರ್ಚಿಗಳು ಮದರ್ ಜಾರ್ಜಿಯಾ ಮದರ್ ಬೆಟ್ಟಿ ಸಹ ಇದ್ದಾರೆ.

ಮಾತುಕತೆಗೆ ವಿಷಯ ಪ್ರಸ್ತುತ ಪರಿಸ್ಥಿತಿ. ಇಂಗ್ಲೀಷರು ಇನ್ನು ಅಧಿಕಾರವನ್ನು ಬಿಟ್ಟುಕೊಡಲೇಬೇಕೆಂಬುದನ್ನರಿತು ಅತಿವರ್ತನೆಗೆ ಇಳಿದ ದಾರಣ ಪ್ರಸಂಗ.

"ಇಷ್ಟು ದಿನ ಎರಡೂ ಕೈಗಳಿಂದ ದೋಚಿದ್ದು ಸಾಲದೆ ಈಗೇಕೆ ಒಡಲ ಕಿಚ್ಚು ತೋರಿಸುತ್ತಿದ್ದಾರೆ ? ಇದಂತೂ ಅಸಹನೀಯವಾದ ವಿಚಾರ."

ಮದರ್ ಸಿಲ್ವಿಯಾ ವಿಚಾರಧಾರೆಗೆ ಮದರ್ ಬೆಟ್ಟಿಯ ಪ್ರತಿಕ್ರಿಯೆ.

"ತಮ್ಮ ವಾಸದ ಮನೆಗಳನ್ನು ವಿಕೃತಗೊಳಿಸಿದ್ದಾರಂತೆ! ಉದ್ಯಾನ ವನವನ್ನು ನಿರ್ಲಕ್ಷಿಸಿ ಒಣಗಿಸಿದ್ದಾರಂತೆ! ಇನ್ನು ಕೆಲವರು ಬೆಂಕಿ ಹಚ್ಚಿ ಸುಟ್ಟಿದ್ದಾರಂತೆ! ಎಂತಹ ಹೇಯಕೃತ್ಯ ? ಹೂಗಿಡಗಳನ್ನು ನಾಶಪಡಿಸಲು ಮನಸ್ಸು ಹೇಗೆ ಬಂತು ?"

"ಆತ್ಮಶ್ರೀ ಏದೂರರಾದರೆ ಆಗುವುದೇ ಹೀಗೆ. ಇವರು ಇಲ್ಲಿಂದ ನಿರ್ಗಮಿಸಲು ಒಂದೆರಡು ತಿಂಗಳಾದರೂ ಬೇಕು. ಅಲ್ಲಿಯ ತನಕ ಹೇಗೆ ಶ್ರೀಹೀನವಾದ ಮನೆಗಳಲ್ಲಿ ವಾಸಿಸುತ್ತಾರೋ...."

“ಅದೇ ವಿಶೇಷ...”

ಮೂವರ ಮುಖದಲ್ಲೂ ತಿರಸ್ಕಾರದ ನಗೆ ಮೂಡಿತು.

ಬಾಗಿಲ ಬಳಿ ಕಟ. ಕಟ. ಕಟ. ಕಟ. ಸದ್ದು.

ಕಟ. ಕಟ. ಕಟ. ಕಟ.

“Yes please!”

ಬಾಗಿಲನ್ನು ತಳ್ಳಿ ಒಳ ಬಂದವರು ನೀಲಮಣಿ ಮತ್ತು ಹರಿಕಿಷನ್. ಹಿಂದೆಯೇ ಮನೋನ್ಮಣಿಯೂ ಒಳಗಡೆ ಪದಾರ್ಪಣೆ ಮಾಡಿದಳು.

“ಪ್ರಣಾಮ್....ಪ್ರಣಾಮ್ ಮದರ್!”

“ಪ್ರಣಾಮ್! ಬನ್ನಿ ಕುಳಿತುಕೊಳ್ಳಿ!”

ಆ ಇಬ್ಬರೂ ಎದುರಿನ ಕುರ್ಚಿಗಳಲ್ಲಿ ಮಂಡಿಸಿದರು. ಮನೋನ್ಮಣಿ ಮದರ್ ಕುರ್ಚಿಯ ಹಿಂದೆ ಮೈ ಆತು ನಿಂತುಕೊಂಡಳು.

ಹರಿಕಿಷನ್ ನಮಸ್ಕರಿಸಿ ಕಳಕಳಿಯ ದನಿಯಲ್ಲಿ ಬಿತ್ತರಿಸಿದ,

“ನಾವು ಬರುವ ದಾರಿಯಲ್ಲಿ ಬಿಳಿಯನೊಬ್ಬ ಕೂಲಿಯಾಳಿಗೆ ಹಿಗ್ಗಾಮುಗ್ಗಾ ಬಡಿಯುತ್ತಿದ್ದ. ನಾನು ಬಿಡಿಸಿಕೊಳ್ಳಲು ಹೋದರೆ ವಿನಾಕಾರಣ ತನ್ನ ಬೂಟುಕಾಲಿಂದ ಹೊಟ್ಟೆಗೆ ಒದ್ದು ಬಿಟ್ಟ. ಅಬ್ಬಾ! ಎಂಥ ನೋವಾಯಿತು ಗೊತ್ತೇ ? ಅಲ್ಲೇ ಹೊಟ್ಟೆ ಹಿಡಿದುಕೊಂಡು ಸ್ವಲ್ಪ ಹೊತ್ತು ಕುಳಿತು ಸುಧಾರಿಸಿಕೊಂಡೆ. ಮನದಲ್ಲಿ ಮಡದಿ ಮಕ್ಕಳು ಸುಳಿದು ಹೋದರು. ಆದರೂ ಅವನನ್ನು ಮುಗಿಸಿ ಬಿಡುವಷ್ಟು ಸಿಟ್ಟು ಬಂತು. ನಾನು ಇಳಿವಯಸ್ಸಿನವ ಶಕ್ತಿಕುಂದಿದ ಕಾಲ. ಅವನು ತಿಂದ ತಿಂದು ಕೊಬ್ಬಿದ ಹುಡುಗ. ಎರಡೇಟು ಬಿಟ್ಟರೆ ನನ್ನ ಗತಿ ಮುಗಿಯುತ್ತೆ. ಮೊದಲೇ ನಮ್ಮವರ ಗತಿ ಅತಂತ್ರ ಇನ್ನು ನಾನೂ ಹೋಗಿ ಬಿಟ್ಟರೆ ದೇವರೇ ಗತಿ.... ಅಷ್ಟರಲ್ಲೇ ಅಮ್ಮಣ್ಣಿ ಬೇರೆ ಅಳಲು ಶುರು ಮಾಡಿದಳು. ನಾನು ಅವನ ತಂಟೆಗೆ ಹೋಗದೆ ಈ ಕಡೆ ದಾರಿ ಹಿಡಿದೆ.”

“ಕೊನೆಗೆ ಆ ಕೂಲಿಯವನೇನಾದ ?”

“ಬಿಳಿಯ ನನ್ನ ಕಡೆ ತಿರುಗಿದಾಗ ಅವನು ಎದ್ದು ಬಿದ್ದು ಓಡಿಹೋದ.”

“ಪಾಪ, ಅಂತೂ ಬದುಕಿದ.”

“ಈಚೀಚೆಗೆ ಇವರ ಉಪಟಳ ತಡೆಯುವುದೇ ಕಷ್ಟ. ರೊಚ್ಚುರೋಷ ಮಿತಿ ಮೀರುತ್ತಿದೆ.”

“ಸರಿ, ಬಿಡು; ಪರಿಸ್ಥಿತಿ ಹಣ್ಣಾಗಿದೆ. ಹೋಗಲೇಬೇಕು, ಹೋಗುತ್ತಾರೆ.”

ಸಿಲ್ವಿಯಾಳ ಪ್ರತಿಕ್ರಿಯೆ ಎಲ್ಲರಿಗೂ ಹಿಡಿಸಿತು. ನೀಲಮಣಿ ನೊಂದು ನುಡಿದಳು,

''ಮಾನವ ಮಾನವರಿಗೆ ಮಾಡಿದಂತಹ ಅನ್ಯಾಯ ಪ್ರಾಣಿಲೋಕಕ್ಕೂ ನಾಚಿಕೆ ತರುವಂತಹದು. ಬುದ್ಧಿಯಿದ್ದೂ, ತಿಳಿವಳಿಕೆಯಿದ್ದೂ ಆಗುತ್ತಿರುವ ಅನ್ಯಾಯ ಅಕ್ಷಮ್ಯ ಅಪರಾಧ.''

''ಇದನ್ನು ಜಗತ್ತು ಸಹಿಸಿಕೊಂಡಿರುವುದೂ ವಿಶೇಷವೇ.'' ಮುಖದಲ್ಲಿ ಸಣ್ಣ ತಿರಸ್ಕಾರದ ನಗೆ ಮೂಡಿ ಮಾಯವಾಯಿತು.

''ಎಲ್ಲರೂ ಹೀಗೆಯೇ ಇರುವುದರಿಂದ ಸಹಿಸುವ ಪ್ರಶ್ನೆಯೇ ಏಳುವುದಿಲ್ಲ'' ಎಲ್ಲರ ಮುಖದಮೇಲೂ ವಿಷಾದ ಕಳೆ ಬೆಳಗಿತು.

''ಮುಂದಿನ ತಿಂಗಳ ಹದಿನೈದರಂದು ನಮ್ಮ ಕೇಸು ವಿಚಾರಣೆಗೆ ಬರುತ್ತೆ. ನಮ್ಮ ಸಾಕ್ಷಿಗಳು ನಿಷ್ಠಾವಂತರು. ಇದುವರೆಗಿನ ಇಡೀ ಚರಿತ್ರೆಯನ್ನೇ ಸೋಸಿ ಬಿಡಲು ಸಿದ್ಧ. ಮನೋನ್ಮಣಿಯನ್ನೂ ಕರೆಯಬಹುದು. ಅದಕ್ಕೆ ಮೊದಲೇ ತಿಳಿಸಿರೋಣವೆಂದು ಬಂದೆ ಮದರ್'' ಎಂದ ಹರಿಕಿಷನ್.

''ಆದೀತು, ನೋಡೋಣ. ದೇವರು ದೊಡ್ಡವನು.''

* * *

ಬಾಲಕರ ಶಾಲಾಕಟ್ಟಡ ಕೊನೆಯ ಹಂತದಲ್ಲಿತ್ತು. ಕೆಲಸ ಭರದಿಂದ ಸಾಗುತ್ತಿದೆ. ಈ ಸಾಲಿನಲ್ಲಿ ಶಾಲಾರಂಭ ಕಾರ್ಯಕ್ರಮ. ಒಳಾಂತರದ ಬಣ್ಣ ಮುಂತಾದ ನಯಗಾರಿಕೆ ಮತ್ತು ಒಳಚರಂಡಿಯ ಮೇಲೆ ಮುಚ್ಚುವಿಕೆ ಮಾತ್ರ ನಡೆಯಬೇಕಾದ ಕೆಲಸ. ಉಳಿದ ಇಟ್ಟಿಗೆ-ಗಾರೆ-ಹೆಂಚುಗಳು ಔಟ್‌ಹೌಸ್ ಕಟ್ಟುವ ಯೋಜನೆಗೆ ಮತ್ತು ಪ್ರಾಕಾರದ ಗೋಡೆಗೆ ಪೂರೈಸುವಷ್ಟೇ ಉಳಿದುದು ಸಮಾಧಾನ.

ಮದರ್ ಸಿಲ್ವಿಯಾ ಕಟ್ಟಡದ ಪರಿಶೀಲನೆಯಲ್ಲಿದ್ದಾಗ ಮಕ್ಕಳೆಲ್ಲಾ ಅಂಗಳದಲ್ಲಿ ತಮ್ಮ ನೆಚ್ಚಿನ ಕುದುರೆ ಬಿಲ್ಲಿಯೊಂದಿಗೆ ಆಟವಾಡುತ್ತ ಹುಲ್ಲು-ಸೊಪ್ಪುಗಳನ್ನು ತಂದು ಕೊಡುತ್ತಿದ್ದರು. ಅದು ಯಾರಿಗೂ ತೊಂದರೆ ಮಾಡುತ್ತಿರಲಿಲ್ಲವಾದರೂ ಮಕ್ಕಳಿಗೆ ಅಕಸ್ಮಾತ್ ತೊಂದರೆಯಾದೀತೆಂದು ಹಗಲು ಕಡಿವಾಣ ತೊಡಿಸುತ್ತಿದ್ದ ಮಾಲಿ. ಬಯಲ ತುಂಬಾ ಓಡಾಡುತ್ತ ಹಿಂಗಾಲೆತ್ತಿ ಜಾಡಿಸಿ ಜಿಗಿದು ಕುಣಿವಂತೆ ಓಡಾಡಿದರೆ ಮಕ್ಕಳಿಗೆ ನಗುವೋ ನಗು. ಮನಮೈಗಳೆಲ್ಲಾ ನಲಿಯುವಷ್ಟು ಪುಳಕಿತ.

ಕುದುರೆ ಮತ್ತು ಮಕ್ಕಳ ಅನುಬಂಧವನ್ನು ಅತ್ಯಾನಂದದಿಂದ ವೀಕ್ಷಿಸಿದಳು ಮದರ್ ಸಿಲ್ವಿಯಾ. ಮಾನ್ವಿ, ಹಣೆಗೆ ಮಣಿಸರ ಕಟ್ಟಿದರೆ ಮಾಲಿ ಗೆಜ್ಜೆಸರವನ್ನು ಕಟ್ಟಿ

ಮುದ್ದಿನಿಂದ ಸಿಂಗರಿಸಿದ್ದ. ಅದರ ಮಿಂಚು ಮೈಗೆ ಒಪ್ಪುವಂತಹ ಸಣ್ಣ ಸಿಂಗರ.

''ಮದರ್! ಈ ಬಿಲ್ಲಿ ಬಹಳ ಉಪಾಯಗಾತಿ! ದಿನವೂ ಕಿಟಕಿಯಲ್ಲಿ ಬಾಯಿಡುತ್ತೆ ಬ್ರೆಡ್ಡು-ಏನಾದರೂ ಹಣ್ಣು ಕೊಡುವವರೆಗೆ ಹೋಗುವುದೇ ಇಲ್ಲ! ಕೆನೆಯುತ್ತ ನಿಂತೇ ಬಿಡುತ್ತಾಳೆ!''

ಕಿರಣ್ ಕೂಗಿ ಹೇಳಿದಾಗ ಅನೇಕ ಕಂಠಗಳು ಒಮ್ಮೆಲೇ ಮೊಳಗಿದುವು ''ಹೌದು ಮದರ್! ಯಾವುದಾದರೊಂದು ಕಿಟಕಿಯಲ್ಲಿ ಬಾಯಿಯೊಡ್ಡುತ್ತಿರುತ್ತದೆ! ಅದಕ್ಕೊತ್ತು ತಿಂಡಿ ಸಿಗುತ್ತೆ ಎಂದು! ಚಾಕಲೇಟ್ ಕೊಟ್ಟರೂ ತಿನ್ನುತ್ತೆ!''

''ಮೊನ್ನೆ ಮಾನ್ವಿಯ ಹಿಂದೆಯೇ ಅಡುಗೆಯ ಮನೆಗೆ ನುಗ್ಗಿಬಿಟ್ಟಿತ್ತು! ಕಡೆಗೆ ಅವನು ಬ್ರೆಡ್ಡು ಕೊಡಲೇ ಬೇಕಾಯಿತು!''

''ಅದು ತುಂಬಾ ಸೀಸೀ ಮಾಡಬಲ್ಲದು!''

ಎಲ್ಲಾ ಮಕ್ಕಳೂ ನಗತೊಡಗಿದರು. ಮದರ್ ಸಿಲ್ವಿಯಾ ತನ್ನ ದನಿಯನ್ನೂ ಹರಿಯಬಿಟ್ಟಳು. ಆನಂದ-ಪ್ರೀತಿಗಳ ಸಂಮಿಶ್ರಣ ಭಾವ ಎಲ್ಲರ ಮುಖದಲ್ಲೂ.

ಗಾರೆ ಕೆಲಸದವ ತನ್ನ ಅನುಭವ ಮುಂದಿಟ್ಟ ''ಮೊನ್ನೆ ನಾನು ಊಟದ ತಟ್ಟೆಯನ್ನು ಮುಂದಿಟ್ಟುಕೊಂಡು ನೀರಿನ ತಂಬಿಗೆಗಾಗಿ ಅತ್ತ ತಿರುಗಿದಾಗ ಎರಡೇ ನಿಮಿಷದಲ್ಲಿ ಊಟ ಮುಗಿಸಿ ಬಿಟ್ಟಿತು! ಅದರಿಂದ ನನಗೆ ಉಪವಾಸ.

ಮಕ್ಕಳೆಲ್ಲಾ 'ಹೋ' ಎಂದು ನಕ್ಕರು.

ಬಿಲ್ಲಿ ಮಕ್ಕಳ ಕೂಟದಿಂದ ಹೊರಬಿದ್ದು ಪ್ರಾಕಾರದಾಚೆ ಹುಲ್ಲು ಮೇಯತೊಡಗಿತು.

ಮಕ್ಕಳ ಗಮನ ಆಟದಲ್ಲಿ ಹರಿದು ಬಗೆಬಗೆಯ ಲೀಲಾ ಖೇಲನ ಸಾಗಿತು. ಮದರ್ ಸಿಲ್ವಿಯಾ ಇನ್ನೂ ಕೆಲಸದ ಮೇಲ್ವಿಚಾರಣೆ ನಡೆಸಿದ್ದಾಳೆ.

ಹೊತ್ತು ತಂಗಿತು. ಕೆಲಸಗಾರರು ಕೈಕಾಲು ತೊಳೆದುಕೊಂಡರು. ಮೇಸ್ತ್ರಿ ಮದರ್ ಸಿಲ್ವಿಯಾಳೊಂದಿಗೆ ಮಾತುಕತೆಯಲ್ಲಿ ನಿರತನಾಗಿದ್ದ.

ಇನ್ನು ಕೆಲವೇ ದಿನಗಳಲ್ಲಿ ಎಲ್ಲಾ ಕೆಲಸ ಮುಗಿದು ನಿರ್ಮಲವಾಗುವ ಕನಸಿನ ನನಸಿಂದ ಹೃದಯ ಹೂವಿನಷ್ಟು ಹಗುರ.

ಮದರ್ ಜಾರ್ಜಿಯಾ ಮದರ್ ಬೆಟ್ಟಿ ಅಲ್ಲಿಗೆ ಬಂದರು.

''ಕಟ್ಟಡ ಮುಗಿಯುವುದರೊಳಗಾಗಿ ಎಲ್ಲಾ ಫರ್ನಿಚರ್ ತಯಾರಾಗುತ್ತೆ ಮದರ್!'' ಸಂತಸದಿಂದ ಹುಬ್ಬೇರಿಸಿ ನುಡಿದಳು ಬೆಟ್ಟಿ.

"ಹೌದು....ಹೌದು!"

ಮೇಸ್ತ್ರಿ ತಲೆದೂಗಿ ಒಪ್ಪಿಗೆ ಸೂಸಿದ.

ಬಿಲ್ಲಿ ಅಲ್ಲಲ್ಲೇ ಜಗಿದಾಡುತ್ತ ಪಾಯಕ್ಕಾಗಿ ಅಗೆದ ಮಣ್ಣಿನ ರಾಶಿಯ ಮೇಲೆ ಹತ್ತಿ ಕಾಲಿಂದ ಮಣ್ಣು ಗೋರಿ ಉಚ್ಚಸ್ವರದಲ್ಲಿ ಕೆನೆಯಿತು. ಮಸುಗಪ್ಪುಗವಿಯುತ್ತಿದೆ. ಇನ್ನು ಕೊಟ್ಟಿಗೆಗೆ ಹೋಗುವ ಹೊತ್ತು. ಆವ ಹುರುಪು-ಮೋದಗಳ ಅಮಲೋ ಅಲ್ಲಿಂದ ಬಿಲ್ಲಿ ಕೊಟ್ಟಿಗೆಗೆ ಧಾವಿಸುವ ಬದಲು ಒಳ ಚರಂಡಿಗಾಗಿ ತೆಗೆದ ಕಂದಕದ ಕಡೆಗೆ ಜಗಿದಾಗ ಮಣ್ಣು ಜಾರಿ ಒಳಗಡೆ ಬಿದ್ದು ದೊಡ್ಡ ದನಿಯಲ್ಲಿ ಅರಚಿಕೊಂಡಿತು! ಇಕ್ಕಟ್ಟಿನ ಆಳವಾದ ಚರಂಡಿಯಲ್ಲಿ ಬಿದ್ದ ಮುದ್ದಿನ ಕುದುರೆಯನ್ನು ನೋಡಿ ಇಡೀ ಕಾನ್ವೆಂಟಿನ ಜನ ಮರ್ಮರ ಮರುಗಿ ಕಂಬನಿ ಮಿಡಿಯಿತು, ಅತ್ಯಂತ ಅಸಹಾಯಕತೆಯಿಂದ.

ಆದರೂ ಒಂದೂ ಕೊನೆಯ ಪ್ರಯತ್ನ....

ಕೆಲವರು ದಪ್ಪನೆಯ ಹಗ್ಗ ತಂದು ಹೊಟ್ಟೆಯಡಿ ತೂರಿಸಿ ಮೇಲಕ್ಕೆಳೆಯುವ ಸಾಹಸ ಮಾಡಿದರೆ ಕಿಂಚಿತ್ತಾದರೂ ಸಾಧ್ಯವಾಯಿತೇ ? ಉಹೂಂ.... ಸುತ್ತಮುತ್ತ ನಿಂತು ಮರ್ಮರ ಮರುಗಿ ಕಂಬನಿಗರೆಯುವುದರ ಹೊರತು ಏನೂ ಸಾಧ್ಯವಾಗಲಿಲ್ಲ.

"ಅಯ್ಯೋ, ದಿನಾ ಇಲ್ಲೇ ಜಗಿದಾಡುತ್ತಿತ್ತಲ್ಲ ಮದರ್!"

"ಸುಖವಾಗಿ ಬೆಳೆದು ದುರ್ಮರಣಕ್ಕೀಡಾಯಿತೇ ?"

ಆ ಗೋಳು, ಆ ಕಣ್ಣೀರು, ಆ ಮರುಕದ ಧ್ವನಿಗಳ ಮರ್ಮರ.

ಕುದುರೆಯ ಮರಣಾಂತಕ ಹಿಂಸೆ....ಕೂಗು-ಗೋಳು....ನೋಡಿದರೆ ಒಮ್ಮೆ ಪ್ರಾಣ ಹೋದರೆ ಸಾಕು ಎಂಬ ಕರುಳ ಕರುಣೆಯ ಕರೆ.

"ಯಾರಾದರೂ ಅದರ ತಲೆಗೊಂದು ಗುಂಡುಹಾಕಿ ಸಾಯುವಂತೆ ಮಾಡಿ" ಎಂದು ಕೇಳಿಕೊಂಡಳು ಮದರ್ ಸಿಲ್ವಿಯಾ.

ಆ ಮಾತು ಕೇಳಿ ಮಕ್ಕಳೆಲ್ಲಾ ಅಳುಅಳುತ್ತಲೇ ಕೊಠಡಿಗಳಲ್ಲಿ ಸೇರಿಕೊಂಡು ಕದ ಮುಚ್ಚಿಕೊಂಡರು, ಕಣ್ಣೀರಿನ ಕಡಲು ಹರಿದು ಹೋಯಿತು.

* * *

ಹರಿಕಿಷನ್ ಆಗಮಿಸಿದಾಗ ಪ್ರಾಕಾರದ ಬಾಗಿಲಲ್ಲಿ ಕಾದಿದ್ದ ಕಾವಲುಗಾರ ಕೇಳಿದ "ರಾಮು-ಸಿದ್ದು ಕತೆ ಏನಾಯಿತು ?"

"ಕೇಸು ನಡೆಯುತ್ತಿದೆ. ಬಹುಶಃ ಗಲ್ಲೋ ಜೀವಾವಧಿಯೋ ಆಗಬಹುದು, ಹೋಗಲಿ, ಕೇಡಿಗಳಿಂದ ಕೇಡು ತಪ್ಪುತ್ತೆ!"

"ನಾನು ಹಾರೈಸುವುದು ಅದನ್ನೇ....!"

"ದೇವರಿದ್ದಾನೆ"

ಹರಿಕಿಷನ್ ಒಳಗಡೆ ಬಂದ. ಮದರ್ ಸಿಲ್ವಿಯಾ ಕೊಠಡಿಯ ಕದ ಮುಚ್ಚಿತ್ತು. ಹೊರಗಡೆ ಕಾರಿಡಾರಿನಲ್ಲಿ ಅಲ್ಲಲ್ಲೇ ಅಡ್ಡಾಡಿದ. ಆ ಕಾನ್ವೆಂಟು, ಅಲ್ಲಿಯ ವಾತಾವರಣ, ಇಡೀ ವಲಯಕ್ಕೆ ಒಂದೇ ಆದ ಸರಸ್ವತೀ ಆಲಯ. ಸುತ್ತಮುತ್ತ ಹೆಮ್ಮರಗಳು. ಕಂಪು ಸೂಸುವ ಸುಮ ಸಮುಚ್ಚಯ. ಹಸರುಕ್ಕುವ ಸಸ್ಯಕೋಟಿ....

ಹರಿಕಿಷನ್ ಮನಕಾನಂದ ತುಂಬಿಕೊಳ್ಳುತ್ತ ಅಡ್ಡಾಡಿದ. ಮದರ್ ಸಿಲ್ವಿಯಾ ಆರಿಸಿಕೊಂಡಿರುವ ತಾಣವಾದರೂ ಎಂತಾದ್ದು? ಸ್ವರ್ಗಲಕ್ಷ್ಮಿಯ ಆವಾಸಸ್ಥಾನ. ಭಾರತೀಯ ಶ್ರೀಮುಡಿ....

ಅರ್ಧತಾಸು ಸದ್ದಿಲ್ಲದೆ ಉರುಳಿತು.

ಮದರ್ ಸಿಲ್ವಿಯಾ ಕದ ತೆರೆದು ಹೊರ ಬಂದಳು. ಮುಖದಲ್ಲಿ ಕಳೆಯೇ ಇಲ್ಲ. ತುಟಿಗಳು ಬಿರಿಯಲಾರದೇ ಬಿರಿದುವು.

"ಏನಪ್ಪಾ, ಹರಿಕಿಷನ್?"

"ಏಕೆ ತಾಯಿ ? ಮೈ ಚೆನ್ನಾಗಿಲ್ಲವೇ ? ಏನೋ ಒಂದು ಬಗೆಯಾಗಿದ್ದೀರಿ ?"

"ಮೈಗೇನೂ ಇಲ್ಲ. ಮನಸ್ಸಿಗೆ ತೀವ್ರ ಆಘಾತ."

"ಏನಾಯ್ತು ತಾಯಿ ?"

ದನಿಯಲ್ಲಿ ಆತುರ-ಕಾತುರಗಳು ಸ್ಫುರಿಸಿದುವು.

"ನಿನ್ನೆ ರಾತ್ರಿ ಒಂದು ಅನಾಹುತ. ನಮ್ಮಲ್ಲಿದ್ದ ಕುದುರೆ ಒಳ ಚರಂಡಿಯ ಕಂದಕಕ್ಕೆ ಬಿದ್ದು ಎತ್ತಲಾಗಲಿಲ್ಲ. ಅದರ ಗೋಳನ್ನು ನೋಡಲಾರದೇ ಸಾಯಿಸುವಂತಹ ಸಂಕಟಕ್ಕೆ ಸಿಕ್ಕಿದೆ. ಬಿಲ್ಲಿ ನಮ್ಮಲ್ಲಿ ಮಗುವಿಗಿಂತಲೂ ಮಗುವಾಗಿತ್ತು. ಎಲ್ಲರೂ ಪ್ರೀತಿಸಿದ್ದಕ್ಕೆ ಪ್ರತಿಯಾಗಿ ದುಃಖ ಕೊಟ್ಟು ಹೋಯಿತು!"

"ಅಯ್ಯೋ, ತುಂಬಾ ಅನ್ಯಾಯ."

"....."

"ಇಲ್ಲಿ ಬಹಳ ಸುಖವಾಗಿತ್ತು. ಮಕ್ಕಳಿಗೆ ಪ್ರೀತಿಯ ವಸ್ತುವಾಗಿ ಅಚ್ಚು ಮೆಚ್ಚಿನದಾಗಿ ಓಡಾಡಿಕೊಂಡಿತ್ತು. ಹೀಗಾದುದು ತೀರಾ ವಿಷಾದಕರ....!"

ಸ್ವಲ್ಪಹೊತ್ತು ಮೌನಮುದ್ರೆಯಲ್ಲಿ ಉರುಳಿತು.

"ತಾಯಿ, ನಿನ್ನೆ ನಮ್ಮ ಬಾಂಕೇವಾಡಿಯ ಕೇಸು ಹಿಯರಿಂಗಿಗೆ ಬಂದಿತ್ತು. ಖುದೀರಾಮರು ಮತ್ತು ಜಗತ್ರಾಮರು ಅಮ್ಮಣ್ಣಿಗೆ ಬರೆದ ಕಾಗದಗಳ ನಕಲುಗಳನ್ನು

ಹಾಜರು ಪಡಿಸಿದೆ. ಅಮ್ಮಣ್ಣಿಯೂ ಸಾಕ್ಷಿಗಳಲ್ಲೊಬ್ಬರು. ನಿನ್ನೆ ಬೆಳಿಗ್ಗೆ ಹೊತ್ತಿಗೇ ಗಾರಂಗಾವ್-ಗೆ ಹೋಗಿ ನಮ್ಮ ವಕೀಲರನ್ನು ನೋಡಿ ವಿಷಯವನ್ನು ಚರ್ಚಿಸಿ ಒಪ್ಪಂದ ಮಾಡಿಕೊಂಡು, ಸಾಕ್ಷಿ ಹೇಳಿ ಕೋರ್ಟು ಎದ್ದನಂತರ ಹಿಂದಿರುಗಿದೆವು. ವಕೀಲರು ಕೇಸು ಗೆದ್ದು ಕೊಡುವುದಾಗಿ ತುಂಬಾ ಭರವಸೆ ಕೊಡುತ್ತಾರೆ. ಭಗವಂತನ ಇಚ್ಛೆ ಏನಿದೆಯೋ ನೋಡಬೇಕು. ಮುಂದೆ ಮನೋನ್ಮಣಿಯನ್ನು ಸಾಕ್ಷಿಗೆ ಕರೆಯಬಹುದು. ಈ ಸಲ ಕರೆಯಲಿಲ್ಲ.''

''ಈಗ ಸುಧಾರಿಸಿದ್ದಾಳೆ ಪರವಾಯಿಲ್ಲ.''

''ಮಗು ಸರಿಯಾಗಿ ಸಾಕ್ಷಿ ಹೇಳಿದರೆ ಕೇಸಿಗೆ ಭುಜಬಲ ಬರುತ್ತದೆ. ಹಿಂದಿನ ನ್ಯಾಯಾಧೀಶರು ತುಂಬಾ ಕಠಿಣ ಸ್ವಭಾವದ ವ್ಯಕ್ತಿ. ಈಗಿನವ ಹಾಗಿಲ್ಲ. ಧರ್ಮಕರ್ಮ ಇದ್ದವನು. ಸ್ವಲ್ಪ ತಾಳ್ಮೆಯಿದೆ ಕೂಡ. ಅವಸರದಿಂದ ಕೆಲಸ ಕೆಡಿಸುವವನಲ್ಲ. ಕೇಸನ್ನು ಹೈಕೋರ್ಟಿಗೆ ವರ್ಗಾಯಿಸಲು ಕೇಳಿಕೊಳ್ಳೋಣವೇ ?''

''ಅದು ಒಳ್ಳೆಯದು. ಸ್ಥಳೀಕರು ಪ್ರಭಾವ ಬೀರಬಹುದು ಅಥವಾ ಆಮಿಷ ತೋರಬಹುದು. ಅಪೀಲ್ ಮಾಡಿನೋಡು.''

''ನೆರೆಯವರಾದ ಮುನೀಶ್ವರ್ ಸ್ವಲ್ಪ ಮನಸ್ಸು ಮಾಡಿದರೆ ಸಾಕ್ಷಿ ಹೇಳಬಹುದು. ಅವರನ್ನು ಎರಡು ಸಲ ಹೋಗಿ ಕಂಡೆ. ಸಾಕ್ಷ್ಯ ಒಪ್ಪಿಕೊಂಡರೆ ಕೋರ್ಟಿಗೆ ಅಲೆಯಬೇಕಾಗುತ್ತದೆಂದು ಒಪ್ಪುವುದೇ ಇಲ್ಲ. ಮಹಮದ್ ಪಾಶ ಕೇಸು ಹಾಕಿದಾಗಲೇ ಇವರು ಮುಂದೆ ನಿಂತಿದ್ದರೆ ಕೇಸು ಅವನಂತೆ ಆಗುತ್ತಿರಲಿಲ್ಲ. ಆಗಲೂ ನೆರೆಹೊರೆಯವರು ಹೆದರಿದರು.''

''ಮಹಮದ್ ಪಾಶ ಮಹಾಧೂರ್ತ! ಅದರಿಂದ ಹೆದರುವುದೂ ಸಹಜ. ಅವನು ದ್ವೇಷ ಕಟ್ಟಿದ ಅಂದರೆ ಖುದೀರಾಮರಿಗಾದ ಗತಿಯೇ ಯಾರಿಗಾದರೂ ಆದೀತು!''

''ನಿನಗಾ ಭಯ ಇಲ್ಲವೇ ?''

''ಮದರ್..... ಜೀವಭಯವಿಲ್ಲ; ಆದದ್ದಾಗಲಿ ಎಂಬ ಯಮಧೈರ್ಯದಿಂದ ಮುಂದೆ ನಿಂತಿರುವೆ. ಅವನು ಎಂದಾದರೂ ಸೇಡು ತೀರಿಸದೆ ಬಿಡುವುದಿಲ್ಲ. ಮಹಾ ವಿಷ ಸರ್ಪ! ಎಲ್ಲರೂ ಹೆದರಿ ಬಿಟ್ಟರೆ ಮುಂದೆ ಅವನೇ ಪುಂಡರ ಗುರು! ನಾವು ಮುಂದೆ ಪುಂಡಾಟಿಕೆ ತಡೆಯುವುದೆಂತು ?''

ಮದರ್ ಯೋಚನಾಕ್ರಾಂತಳಾದಳು.

''ಮದರ್! ಈತನ ಮುಂಬೆಳವಣಿಗೆಗೆ ನಾವು ಅವಕಾಶಕೊಟ್ಟರೆ ಇವನೇ

ನಮಗೆ ಮೃತ್ಯು! ಇದನ್ನೆಲ್ಲಾ ಗಮನಿಸಿಯೇ ನಾನು ಮುಂದೆ ನಿಂತದ್ದು. ಕೇಸನ್ನು ಅವನು ಗೆದ್ದರಂತೂ ನಮಗೆ ಸಂಕಷ್ಟ ತಪ್ಪಿದ್ದಲ್ಲ. ಆದರೂ ಧೈರ್ಯ ಮಾಡಿರುವೆ.''

''Wish you good luck!''

''Thank you Mother!''

ಗಂಟೆ ಬಾರಿಸಿತು ಗೋಡೆಯ ಮೇಲಿನ ಬಿಗ್ ಬೆನ್ ಗಡಿಯಾರ. ಢಣ್. ಢಣ್. ಢಣ್. ಢಣ್. ಢಣ್. ಢಣ್. ಢಣ್. ಢಣ್. ಢಣ್.

ಒಂಭತ್ತು ಗಂಟೆ!

ಶಾಲೆಯ ಮಕ್ಕಳೆಲ್ಲಾ ಗರಿಗರಿಯಾದ ಸಮವಸ್ತ್ರ ತೊಟ್ಟು ನೀಲಿ ಚಿಟ್ಟೆಗಳಂತೆ ತಮ್ಮ ತಮ್ಮ ತರಗತಿಗಳನ್ನು ಹೊಕ್ಕರು. ಮಾತಿನ ಮರ್ಮರ ಹೊಸ್ತಿಲು ದಾಟಿದೊಡನೆಯೇ ತಟ್ಟನೆ ನಿಂತಿತು. ಟೀಚರ್‌ಗಳು ಒಳಹೊಕ್ಕೊಡನೆಯೇ ಹಲವು ದನಿಗಳು ಏಕ ರೀತಿಯಲ್ಲಿ ಮೊಳಗಿದುವು.

''ನಮಸ್ಕಾರ ಮೇಡಂ!''

ಮದರ್ ಸಿಲ್ವಿಯಾ ಆಫೀಸಿನ ಕಡೆ ಹೊರಟಳು. ಆಫೀಸಿನ ಸಿಬ್ಬಂದಿ ಆಗಲೇ ಕೆಲಸದಲ್ಲಿ ನಿರತರಾಗಿದ್ದಾರೆ. ಮದರ್ ಒಳಗಡೆ ಪದಾರ್ಪಣೆ ಮಾಡುತ್ತಲೂ ಎಲ್ಲರೂ ಎದ್ದು ನಿಂತು,

''Good morning Mother!''

''Good morning to every body!''

* * *

ಮದರ್ ಪ್ರಸನ್ನ ಮುಖದಿಂದ ತನ್ನ ಮೇಜಿನ ಮುಂದೆ ಕುಳಿತಳೋ ಇಲ್ಲವೋ ಅಷ್ಟರಲ್ಲೇ ರವಿ ಚಂದಾನಿ, ಅಲಕಾ ಚಂದಾನಿ ಒಳಗಡೆ ಪದಾರ್ಪಣೆ ಮಾಡಿ ಬೆಳಗಿನ ವಂದನೆಯನ್ನು ಅರ್ಪಿಸಿದರು. ಪ್ರತಿವಂದನೆಯನ್ನು ಸಲ್ಲಿಸಿದ ಮದರ್ ಸಿಲ್ವಿಯಾ ಆದರದಿಂದ ಸ್ವಾಗತಿಸಿದಳು.

''ಬನ್ನಿ....ಬನ್ನಿ!''

''ನಾವೊಂದು ವಿಶೇಷ ಸುದ್ದಿಯನ್ನು ತಂದಿದ್ದೇವೆ ನಿಮಗೆ!''

''ಏನು ಹೇಳಿ ?''

ಆಫೀಸಿನ ಸಿಬ್ಬಂದಿಯ ದೃಷ್ಟಿ ಇತ್ತಲೇ ಕೇಂದ್ರೀಕೃತವಾಯಿತು. ಕಣ್ಮನಗಳಲ್ಲಿ ಎಲ್ಲಿಲ್ಲದ ಕುತೂಹಲ. ಏನಿರಬಹುದು ? ಅದು ಎಲ್ಲರ ಮನದ ಪ್ರಶ್ನೆ.

ಡಾ॥ದಿಲೀಪನ ಕೈ ಹಿಡಿದುಕೊಂಡು ದತ್ತೂ ಒಳ ಹೆಜ್ಜೆಯಿಟ್ಟ. ಮುಖಬಿಂಬ

ಭಾವೋದ್ವೇಗದಿಂದ ಕೆಂಪು ಕೆಂಪು. ಒಮ್ಮೆ ಆಶ್ಚರ್ಯ ಕುತೂಹಲ ದೃಷ್ಟಿ ಸುತ್ತಲೂ ಹರಿದು ಹಿಮ್ಮರಳಿತು. ಎಲ್ಲರೂ ಮೇಜಿನ ಬಳಿ ಮಂಡಿಸಿದರು.

''ಇವರು ಡಾ॥ದಿಲೀಪ್ ಮದರ್!'' ಪರಿಚಯಿಸಿದ ರವಿ ಚಂದಾನಿ.

''ಮದರ್! ಈ ಬಾಲಕ ಮನೋನ್ಮಣಿಯ ಚಿಕ್ಕಪ್ಪ ಬಲ್ಲೂರಾಮನ ಮಗ ದತ್ತಾರಾಂ!''

''ಅರರೆ! ನಿಜವಾಗಿ ? ಇವನು ಸಿಕ್ಕಿದ್ದು ಹೇಗೆ ? ಎಂತಹ ಆಶ್ಚರ್ಯ!''

ಆ ಕೂಡಲೇ ಮದರ್ ಅವನನ್ನೇ ಆಶ್ಚರ್ಯಚಕಿತಳಾಗಿ ನಿಟ್ಟಿಸಿದಳು. ''ಮದರ್ ದೈವರಕ್ಷೆ ಹೇಗಿದೆ ನೋಡಿ. ಅಂದು ಶವ ಸಿಕ್ಕಿದ್ದು ಹದಿನಾಲ್ಕು ಮಾತ್ರ. ಅಲ್ಲಿಂದ ತಪ್ಪಿಸಿಕೊಂಡವನು ಇವನೇ! ಒಳಗಿದ್ದ ಆಳು ಹೊರಹೋಗಿ ಬೆಂಕಿ ಹಚ್ಚಿದ್ದಾನೆ ಎಂಬ ಊಹಾಪೋಹವಿತ್ತು. ಬೆಂಕಿ ಹಚ್ಚಿದವ ಮನೆಯ ಆಳಲ್ಲ. ಪೀರ್ ಮತ್ತು ಅಬ್ದುಲ್ಲಾ. ಅದನ್ನು ದತ್ತು ಸ್ವಂತ ಕಣ್ಣಿಂದ ನೋಡಿದ್ದಾನೆ. ಇವನು ಬದುಕಿದ್ದೊಂದೇ ಅದ್ಭುತ ಪವಾಡ. ಇವನನ್ನು ಕಾಪಾಡಿ ಕರೆತಂದವರು ಇವರು ಡಾ॥ ದಿಲೀಪ್!''

ಅನಂತರ ಸಂಕ್ಷಿಪ್ತವಾಗಿ ಅವನ ಸ್ಥಿತಿಗತಿಯನ್ನು ಅರುಹಿದ ಡಾ॥ ದಿಲೀಪ್.

ದತ್ತೂ ಮನಸ್ಸೆಲ್ಲಾ ಶಾಲೆ ಮತ್ತು ಪರಿಸರದ ಮೇಲೆ.

''ಈಗ ಮನೋನ್ಮಣಿಯನ್ನು ಕರೆಸುವೆ.''

ಮದರ್ ಜವಾನನನ್ನು ತರಗತಿಗೆ ಕರೆಯಲು ಕಳುಹಿಸಿ ಹೇಳಿದಳು

''ನೀನು ಈ ಶಾಲೆಗೆ ಎಂದಾದರೂ ಬಂದಿದ್ದೆಯಾ ?''

''ಸರಿಯಾಗಿ ಜ್ಞಾಪಕವಿಲ್ಲ. ಬಹುಶಃ ಬಂದಿದ್ದರೂ ಇರಬಹುದು.''

''ನೀನು ಶಾಲೆಗೆ ಹೋಗುತ್ತಿದ್ದೆಯಾ ?''

''ಹೌದು''

''ಯಾವ ಶಾಲೆ ಗೊತ್ತಿದೆಯೇ ?''

''ಇಲ್ಲ....''

''ಬಹುಶಃ ಗಾರಂಗಾವ್‌ನಲ್ಲಿ ಓದಿರಬಹುದು.''

''ಹೌದು ಅಂಕಲ್! ಅಲ್ಲಿಯೇ ಓದಿದ್ದು!''ಮೆಲ್ಲಗೆ ತಲೆದೂಗಿದ ದತ್ತು.

''ಎಲ್ಲಿಯ ತನಕ ಓದಿದ್ದಿ?''

''ನೆನಪಿಲ್ಲ...'' ತಲೆ ಬಾಗಿದ ಹುಡುಗ.

ಅಷ್ಟರೊಳಗಾಗಿ ಸುಶೀ ಜೊತೆಗೆ ಓಡಿ ಬಂದಳು ಮನೋನ್ಮಣಿ. ಬಿರುಗಾಳಿಯನ್ನೂ ಮೀರಿಸುವ ಹುರುಪು ಹೆಜ್ಜೆಗಳಲ್ಲಿ.

"ಮದರ್ ಎಲ್ಲಿದಾನೆ ದತ್ತೂ ?"

ದತ್ತು ಎದ್ದು ನಿಂತು ಅವಳನ್ನೇ ನೋಡಿದ. ಆ ಮಹೂರ್ತದಲ್ಲಿ ಎಲ್ಲೋ ನಿರ್ಲಕ್ಷಿತ ಶೋಡಷಕಳೆ ಒದಗಿ ಬಂದಷ್ಟು ಹೊಳಪು ಕಣ್ಣುಗಳಲ್ಲಿ.

"ಅಯ್ಯೋ, ನನ್ನ ದತ್ತೂ! ಇದುವರೆಗೆ ಎಲ್ಲಿದ್ದೆ ?"

ಒಮ್ಮೆಲೇ ಬಿಗಿದಪ್ಪಿ ಮುದ್ದಾಡಿ "ದತ್ತೂ, ದತ್ತೂ, ದತ್ತೂ!" ಎಂದು ಚೀರಿದಳು. ಸುಖದುಃಖಗಳ ಒತ್ತಡದಿಂದ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು. ಅಕ್ಕನ ಪ್ರೇಮಾಲಾಪದಿಂದ ದತ್ತು ಪುಳಕಿತನಾದ. ಆವುದೋ ಹೊಸಜಗತ್ತಿಗೆ ಜಿಗಿದಷ್ಟು ಹುರುಪು ಮೈಯಲ್ಲಿ. ಆತ್ಮಸ್ಫೂರ್ತಿಯ ಬೆಳಕು ಕಣ್ಣುಗಳಲ್ಲಿ.

ಎಲ್ಲರ ಹೃದಯಗಳೂ ಸಾನಂದದಿಂದ ಮಿಡಿದವು.

"ಮನೋ ಬೇಟಿ ಇವರು ನಿನಗೆ ಗೊತ್ತೇ ನೋಡು!"

ರವಿ ಚಂದಾನಿ ಡಾ॥ ದಿಲೀಪ್ ಕಡೆ ಕೈ ತೋರಿದ.

ಮನೋನ್ಮಣಿ ಇನ್ನೂ ತಮ್ಮನ ಭ್ರಮೆಯಲ್ಲಿಯೇ ಇದ್ದಾಳೆ. ಅವನನ್ನು ಕ್ಷಣವೂ ಬಿಡಲಾರಳು. ಅದೇ ಅವನಿಗೆ ಲಜ್ಜೆ-ಸಂತೋಷ-ಸಂಕಟಗಳನ್ನು ಒಂದೇ ಬಾರಿಗೆ ತಲೆಯಲ್ಲಿ ಮುಸುಗಿದುವೇನೊ....

ಮತ್ತೆ ಕೇಳಿದ ರವಿ ಚಂದಾನಿ "ಮನೋ ಬೇಟಿ! ಇವರನ್ನು ನೋಡು!"

ಅವಳು ಕತ್ತೆತ್ತಿ ದಿಲೀಪ್ ಕಡೆ ನೋಡಿದಳು. ನಾಲ್ಕೈದು ವರ್ಷಗಳ ಹಿಂದೆ ನೋಡಿದ ಮಸುಕು ಮಸುಕಾದ ನೆನಪು. ಯಾರೆಂಬುದು ಸ್ಪಷ್ಟ ತಿಳಿಯದು. ಸುಮ್ಮನೆ ಮಿಕಿಮಿಕಿ ನೋಡಿದಳು.

ಡಾ॥ ದಿಲೀಪ್ ಮುಗುಳು ನಕ್ಕ.

"ನೀವು....ನೀವು!" ಅಷ್ಟಕ್ಕೇ ಸುಮ್ಮನಾದಳು ಅವಳು. ನೆಟ್ಟ ನೋಟ ನೋಡಿಯೇ ನೋಡಿತು, ಹೃದಯಗಳು ಸಾನಂದದಿಂದ ಸ್ಪಂದಿಸಿದುವು.

"ದಿಲೀಪ್ ಗೊತ್ತಿಲ್ಲವೇ ನಿನಗೆ ? ನಿಮ್ಮೊಂದಿಗೆ ನಾನು ನಜೀರ್ ಆಡುತ್ತಿರಲಿಲ್ಲವೇ ?"

"ಓ....! ಸರಿ, ಸರಿ!"

"ಅದೇ ದಿಲೀಪ್ ನಾನು! ಈಗ ಜ್ಞಾಪಕವಾಯಿತೇ ?"

ಇಬ್ಬರ ನೋಟಗಳೂ ಆನಂದದಿಂದ ಸಂಧಿಸಿದುವು.

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧. ಜೀವನಗಂಗಾ
೨. ಡಾ॥ ಅಘೋರ
೩. ಡಾ॥ ಕಮಲೇಶ್
೪. ವಂದೇ ಮಾತರಂ
೫. ಅನಂತಾನಂತದೆಡೆಗೆ
೬. ಮನೋನ್ಮಣಿ
೭. ಸಂತ್ರಾಸಿನಿ
೮. ಆಸೆಯ ಸುಳಿಯಲ್ಲಿ
೯. ಪದ್ಮಾಲಯ
೧೦. ಶ್ರದ್ಧಾಲಯ
೧೧. ಕಮಲಾನಿ ಕಥಾ

(ಕಥಾ ಸಂಕಲನ)

೧೨. ಬಹುರತ್ನಾವಸುಂಧರಾ
೧೩. ರತ್ನಗರ್ಭಾವಸುಂಧರಾ
೧೪. ಸುಧಾಮಣಿ
೧೫. ರಮಣೀಮಣಿ
೧೬. ಲಿಯೋನಾ
೧೭, ಶ್ರೀಮುಖಿ
೧೮. ಶ್ರೀಹರ್ಷಲಾ
೧೯. ವೈಶಾಖೀಪರ್ವ
೨೦. ಫಾಲ್ಗುಣೀಪರ್ವ
೨೧, ಮಣಿಮೇಖಲಾ
೨೨, ಮಣಿಕರ್ಣಿಕಾ

(ಕವಿತಾ ಸಂಕಲನ)

೨೩, ಪೂಜಾವಸಾನ ಸಮಯೇ....!
೨೪, ಧ್ಯಾನಾವಸಾನ ಸಮಯೇ....!
೨೫, ಗಗನ ಕುಸುಮ
೨೬, ಜೀವನ ಕುಸುಮ
೨೭, ಚಂಪಕರಾಜಿ
೨೮, ಬಕುಳ ರಾಜಿ
೨೯, ಕಸ್ತೂರಿ ಮಾಲಿಕಾ
೩೦. ಮಂದಾರ ಮಾಲಿಕಾ
೩೧. ವಿಜಯ ಗಾಥಾ
೩೨. ಗಾನ ತೀರ್ಥ
೩೩. ನಾದ ಬಿಂದು
೩೪. ಕಾವ್ಯಾನಂದ ನಂದಿನಿ
೩೫. ಭಾವಾನಂದ ನಂದಿನಿ
೩೬. ಸಂಗೀತ ಪುಷ್ಪಾಂಜಲಿ
೩೭, ಆತ್ಮ ಗೀತಾಂಜಲಿ

(ಸಂಜೀವನ ಕಾವ್ಯ)

೩೮. ಮಂಗಳ ಭಾರತಿ
೩೯. ಕಲ್ಯಾಣ ಭಾರತಿ
೪೦. ಉತ್ತರೋತ್ತರಣಿ
೪೧. ರಾಗಾನುರಾಗಿಣಿ
೪೨. ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೩. ಪುಣ್ಯಾಭಿಸಾರ
೪೪. ಪುಣ್ಯಪಯೋನಿಧಿ

(ಸಾನೆಟ್‌ಗಳು)

೪೫. ತರಂಗಿಣಿ

(ಗದ್ಯಕಾವ್ಯ)

೪೬, ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೭, ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೮, ದೂರ ದೇಶದಲ್ಲಿ
೪೯, ಬೆಳದಿಂಗಳ ರಾತ್ರಿ
೫೦, ರಂಗನ ಸಾಹಸ
೫೧. ಓಹಿಯೋಜ ಸರೋವರ
೫೨, ಕೌಶಿಕನ ಗೊಂಬೆ
೫೩, ವಿಶೇಷ ಸುದ್ದಿ
೫೪, ಕಲ್ಯಾಣಿ ರಾಗಿಣಿ

(ಮಹಾಕಾವ್ಯ)

೫೫, ಶ್ರೀ ವಿವೇಕಾನಂದ ವಿಜಯಂ